ಬುಧವಾರ, ಜೂನ್ 2, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 153 | ಪುಟ 14

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ
ಜಗತ್ತಿನಾದ್ಯಂತ ಇರುವ ಕಂಪ್ಯೂಟರ್‌ಗಳನ್ನು ಬೆಸೆಯುವುದು ಈ ಆಪ್ಟಿಕಲ್ ಕೇಬಲ್‌ಗಳು. ಇವು ಮನುಷ್ಯನ ಕೂದಲಿನಷ್ಟು ದಪ್ಪವಿರುವ ಶುದ್ಧವಾದ ಗಾಜಿನ ಕೊಳವೆಗಳು.

ಕಪ್ಪು ಶಿಲೀಂಧ್ರ ಸೋಂಕು: ರಾಜ್ಯದ 51 ಮಂದಿ ಮರಣ 10

ಆಳ-ಅಗಲ ಒಕ್ಕೂಟದೊಳಗೆ ತಿಕ್ಕಾಟ
ಆಲಾಪನ್‌ಗೆ ಮತ್ತೊಂದು ನೋಟಿಸ್ 5

ಸೆನ್ಸೆಕ್ಸ್	ನಿಫ್ಟಿ	₹/$
51,934 ▼	15,574 ▼	72.90 ▼

12ನೇ ತರಗತಿಗೆ ಪರೀಕ್ಷೆ ಇಲ್ಲ

ಸಿಬಿಎಸ್‌ಇ ಫಲಿತಾಂಶಕ್ಕೆ ಪರ್ಯಾಯ ಮಾನದಂಡ: ಪ್ರಧಾನಿ ನೇತೃತ್ವದ ಸಭೆಯಲ್ಲಿ ನಿರ್ಧಾರ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೇಂದ್ರೀಯ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯ (ಸಿಬಿಎಸ್‌ಇ) 12ನೇ ತರಗತಿಯ ಈ ವರ್ಷದ ಪರೀಕ್ಷೆಗಳನ್ನು ರದ್ದು ಮಾಡಲು ಕೇಂದ್ರ ಸರ್ಕಾರವು ಮಂಗಳವಾರ ನಿರ್ಧರಿಸಿದೆ. ಕೋವಿಡ್–19 ಸಾಂಕ್ರಾಮಿಕ ತೀವ್ರವಾಗಿರುವ ಕಾರಣ ಈ ತೀರ್ಮಾನಕ್ಕೆ ಬರಲಾಗಿದೆ.

‘ಕೋವಿಡ್‌ನಿಂದಾಗಿ ದೇಶದಲ್ಲಿ ಅನಿಶ್ಚಿತ ಸ್ಥಿತಿ ಇದೆ. ಹಾಗಾಗಿ, ಸಂಬಂಧಪಟ್ಟವರಿಂದ ಪಡೆದ ಮಾಹಿತಿ ಪ್ರಕಾರ ಸಿಬಿಎಸ್‌ಇ 12ನೇ ತರಗತಿ ಪರೀಕ್ಷೆಗಳನ್ನು ರದ್ದುಪಡಿಸಲು ತೀರ್ಮಾನಿಸಲಾಗಿದೆ’ ಎಂದು ಪ್ರಧಾನಿ ಕಾರ್ಯಾಲಯದ ಪ್ರಕಟಣೆ ತಿಳಿಸಿದೆ. ಪ್ರಧಾನಿ ನರೇಂದ್ರ ಮೋದಿ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಈ ನಿರ್ಧಾರಕ್ಕೆ ಬರಲಾಗಿದೆ.

12ನೇ ತರಗತಿ ವಿದ್ಯಾರ್ಥಿಗಳ ಫಲಿತಾಂಶ ಪ್ರಕಟಿಸುವುದಕ್ಕೆ ಬೇಕಾದ ಕ್ರಮಗಳನ್ನು ಸಿಬಿಎಸ್‌ಇ ಕೈಗೊಳ್ಳಲಿದೆ. ನ್ಯಾಯಯುತವಾಗಿ, ಸಮಯ ಮಿತಿಯೊಳಗೆ ಅತ್ಯಂತ ಸ್ಪಷ್ಟವಾಗಿ ವ್ಯಾಖ್ಯಾನಿಸಲಾದ ಮಾನದಂಡಗಳ ಅನ್ವಯ ಫಲಿತಾಂಶ ಸಿದ್ಧಪಡಿಸಬೇಕು ಎಂದು ಪ್ರಧಾನಿಯು ಸಿಬಿಎಸ್‌ಇಗೆ ಸೂಚಿಸಿದ್ದಾರೆ.

‘ಒತ್ತಡದಿಂದ ಕೂಡಿದ ಈಗಿನ ಸನ್ನಿವೇಶದಲ್ಲಿ ವಿದ್ಯಾರ್ಥಿಗಳು ಪರೀಕ್ಷೆ ಬರೆಯುವಂತೆ ಬಲವಂತ ಮಾಡುವುದು ಸರಿಯಲ್ಲ’ ಎಂದು ಪ್ರಧಾನಿ ಸಭೆಯಲ್ಲಿ ಹೇಳಿದ್ದಾರೆ.

ಕೆಲವು ವಿದ್ಯಾರ್ಥಿಗಳು ಪರೀಕ್ಷೆ ಬರೆಯಲು ಬಯಸಿದರೆ ಅಂಥವರಿಗೆ ಪರೀಕ್ಷೆ ಬರೆಯಲು ಅವಕಾಶ ಕೊಡಲು ನಿರ್ಧರಿಸಲಾಗಿದೆ. ಪರಿಸ್ಥಿತಿಯು ಪರೀಕ್ಷೆ ನಡೆಸಲು ಪೂರಕವಾದಾಗ ಈ ಪರೀಕ್ಷೆ ನಡೆಯಲಿದೆ.

12ನೇ ತರಗತಿಯ ಪರೀಕ್ಷೆ ನಡೆಸುವ ವಿಚಾರದಲ್ಲಿ ರಾಜ್ಯಗಳ ಜತೆಗೆ ಕೇಂದ್ರವು ಮೇ 23ರಂದು ಸಮಾಲೋಚನೆ ನಡೆಸಿತ್ತು. ಕೆಲವು ವಿಷಯಗಳಿಗೆ ಅಲ್ಪ ಅವಧಿಯ ಪರೀಕ್ಷೆ ನಡೆಸಬೇಕು ಎಂದು ಸಭೆಯಲ್ಲಿ ಸಹಮತ ಮೂಡಿತ್ತು.

ವಿದ್ಯಾರ್ಥಿಗಳು ಮತ್ತು ಹೆತ್ತವರ ಒಂದು ವರ್ಗದಿಂದ ಪರೀಕ್ಷೆ ರದ್ದು ಮಾಡಬೇಕು ಎಂಬ ಒತ್ತಾಯ ಕೇಳಿ ಬಂದಿತ್ತು. ವಿದ್ಯಾರ್ಥಿಗಳ ಒಂದು ಗುಂಪು ಪರೀಕ್ಷೆ ರದ್ದು ಮಾಡುವಂತೆ ಕೋರಿ ಸುಪ್ರೀಂ ಕೋರ್ಟ್‌ಗೂ ಅರ್ಜಿ ಸಲ್ಲಿಸಿತ್ತು.

ಐಸಿಎಸ್‌ಇ ಪರೀಕ್ಷೆ ರದ್ದು: ಐಸಿಎಸ್‌ಇ 12ನೇ ತರಗತಿಯ ಈ ವರ್ಷದ ಪರೀಕ್ಷೆಯನ್ನೂ ರದ್ದು ಮಾಡಲಾಗಿದೆ ಎಂದು ಐಸಿಎಸ್‌ಇ ಕಾರ್ಯದರ್ಶಿ ಜೆರಿ ಆರಾಥೂನ್ ತಿಳಿಸಿದ್ದಾರೆ.

ಮಾನದಂಡ ಇನ್ನೂ ಸಿದ್ಧವಿಲ್ಲ

ಸಾಂದರ್ಭಿಕ ಚಿತ್ರ

ವಿದ್ಯಾರ್ಥಿಗಳ ಮೌಲ್ಯಮಾಪನದ ಪರ್ಯಾಯ ಮಾನದಂಡವು ಇನ್ನೂ ಸಿದ್ಧವಾಗಿಲ್ಲ. 10ನೇ ತರಗತಿಯ ವಿದ್ಯಾರ್ಥಿಗಳ ಮೌಲ್ಯಮಾಪನಕ್ಕೆ ಬಳಸಿದ ಮಾನದಂಡಗಳ ಮಾದರಿಯನ್ನೇ ಅನುಸರಿಸುವ ಸಾಧ್ಯತೆ ಇದೆ. ಇಡೀ ವರ್ಷ ನಡೆದ ಪರೀಕ್ಷೆಗಳಲ್ಲಿ 10ನೇ ತರಗತಿಯ ವಿದ್ಯಾರ್ಥಿಗಳ ಸಾಧನೆಯನ್ನು ಮೌಲ್ಯಮಾಪನಕ್ಕೆ ಪರಿಗಣಿಸಲಾಗಿತ್ತು.

10ನೇ ತರಗತಿ ವಿದ್ಯಾರ್ಥಿಗಳಿಗೆ ಆಂತರಿಕ ಮೌಲ್ಯಮಾಪನವಾಗಿ 20 ಅಂಕಗಳನ್ನು ನಿಗದಿ ಮಾಡಲಾಗಿತ್ತು. ವರ್ಷವಿಡೀ ನಡೆದ ವಿವಿಧ ಪರೀಕ್ಷೆಗಳಿಗೆ ಉಳಿದ 80 ಅಂಕಗಳನ್ನು ನಿಗದಿ ಮಾಡಲಾಗಿತ್ತು.

ಪೂರ್ಣ ರದ್ದತಿ ಇದೇ ಮೊದಲು

ಸಿಬಿಎಸ್‌ಇ ಪರೀಕ್ಷೆಗಳನ್ನು ಸಂಪೂರ್ಣವಾಗಿ ರದ್ದು ಮಾಡಿದ್ದು ಇದೇ ಮೊದಲು. ಕಳೆದ ವರ್ಷ ಕೋವಿಡ್ ಹರಡುವಿಕೆ ತಡೆಗೆ ದೇಶದಾದ್ಯಂತ ಲಾಕ್‌ಡೌನ್ ಘೋಷಣೆ ಆದಾಗ ಸಿಬಿಎಸ್‌ಇ 12ನೇ ತರಗತಿಯ ಹಲವು ಪರೀಕ್ಷೆಗಳು ಆಗಿದ್ದವು. ಉಳಿದ ಪರೀಕ್ಷೆಗಳನ್ನು ರದ್ದು ಮಾಡಲಾಗಿತ್ತು.

‘ದ್ವಿತೀಯ ಪಿಯು ಪರೀಕ್ಷೆ: ಶೀಘ್ರ ತೀರ್ಮಾನ’

ಬೆಂಗಳೂರು: ‘ಸಿಬಿಎಸ್‌ಇ 12ನೇ ತರಗತಿ ಪರೀಕ್ಷೆಗಳನ್ನು ರದ್ದುಪಡಿಸಲು ಕೇಂದ್ರ ಸರ್ಕಾರ ನಿರ್ಧರಿಸಿರುವುದರಿಂದ, ರಾಜ್ಯದಲ್ಲಿಯೂ ಪರಿಸ್ಥಿತಿ ಅವಲೋಕಿಸಿ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆ ಕುರಿತು ಶೀಘ್ರ ತೀರ್ಮಾನ ಪ್ರಕಟಿಸಲಾಗುವುದು’ ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಎಸ್. ಸುರೇಶ್ ಕುಮಾರ್ ತಿಳಿಸಿದ್ದಾರೆ. ‘ರಾಜ್ಯ ಪಠ್ಯಕ್ರಮ ಅನುಸರಿಸಿ ಓದುತ್ತಿರುವ ವಿದ್ಯಾರ್ಥಿಗಳ ಶೈಕ್ಷಣಿಕ ಸ್ಥಿತಿಗತಿ, ಮೌಲ್ಯಮಾಪನದ ಅವಶ್ಯಕತೆ ಕುರಿತಂತೆ ಈಗಾಗಲೇ ವ್ಯಕ್ತವಾಗಿರುವ ಅಭಿಪ್ರಾಯಗಳ ಬಗ್ಗೆ ವಿಸ್ತೃತವಾಗಿ ಚರ್ಚಿಸಿ, ವಿದ್ಯಾರ್ಥಿಗಳ ಆರೋಗ್ಯ ಹಾಗೂ ಭವಿಷ್ಯದ ಹಿತದೃಷ್ಟಿಯಿಂದ ಸೂಕ್ತ ತೀರ್ಮಾನ ತೆಗೆದುಕೊಳ್ಳಲಾಗುವುದು’ ಎಂದು ಅವರು ಹೇಳಿದ್ದಾರೆ.

ರಾಜ್ಯದಲ್ಲಿ 24ರಿಂದ ಆರಂಭವಾಗಬೇಕಿದ್ದ ದ್ವಿತೀಯ ಪಿಯು ಪರೀಕ್ಷೆಗಳನ್ನು ಈಗಾಗಲೇ ಮುಂದೂಡಲಾಗಿದೆ. ದ್ವಿತೀಯ ಪಿಯು ಪರೀಕ್ಷೆಗಳ ನಂತರ ನಡೆಸಲು ಉದ್ದೇಶಿಸಿದ್ದ ಪ್ರಥಮ ಪಿಯು ಪರೀಕ್ಷೆಗಳನ್ನು ರದ್ದುಪಡಿಸಿ, ಮುಂದಿನ ತರಗತಿಗೆ ತೇರ್ಗಡೆ ಮಾಡಲು ತೀರ್ಮಾನಿಸಿದೆ.

ಹವಾಮಾನ ಇಲಾಖೆ ಮುನ್ಸೂಚನೆ

ಈ ಬಾರಿ ಮುಂಗಾರು ಉತ್ತಮ

ನವದೆಹಲಿ (ಪಿಟಿಐ): ಈ ಭಾರಿ ದೇಶದಾದ್ಯಂತ ಮುಂಗಾರು ಮಳೆಯು ವಾಡಿಕೆಯಷ್ಟು ಸುರಿಯಲಿದೆ. ಕೆಲವೆಡೆ ಮಾತ್ರ ವಾಡಿಕೆಗಿಂತ ಕಡಿಮೆ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ತನ್ನ ಮುಂಗಾರು ಮುನ್ಸೂಚನೆಯಲ್ಲಿ ಹೇಳಿದೆ. ಆದರೆ, ಕರ್ನಾಟಕ ಮತ್ತು ಕೇರಳದ ಕೆಲವು ಪ್ರದೇಶಗಳಲ್ಲಿ ವಾಡಿಕೆಗಿಂತ ಕಡಿಮೆ ಮಳೆಯಾಗುವ ಸಾಧ್ಯತೆ ಶೇ 35-45ರಷ್ಟಿದೆ ಎಂದು ಹವಾಮಾನ ಇಲಾಖೆ ಹೇಳಿದೆ.

50 ವರ್ಷಗಳ ದೀರ್ಘಾವಧಿ ಸರಾಸರಿಗೆ ಹೋಲಿಸಿದರೆ ಈ ಬಾರಿ ದಕ್ಷಿಣ, ಉತ್ತರ ಮತ್ತು ವಾಯವ್ಯ ಭಾರತದಲ್ಲಿ ವಾಡಿಕೆಯಷ್ಟು ಮಳೆಯಾಗಲಿದೆ. ಮಧ್ಯ ಭಾರತದಲ್ಲಿ ವಾಡಿಕೆಗಿಂತಲೂ ಹೆಚ್ಚು ಮಳೆಯಾಗಲಿದೆ. ಈಶಾನ್ಯ ಭಾರತದಲ್ಲಿ ವಾಡಿಕೆಗಿಂತ ಸ್ವಲ್ಪ ಕಡಿಮೆ ಮಳೆಯಾಗಲಿದೆ. ಆದರೆ ಎಲ್ಲಿಯೂ ಮಳೆಯ ತೀವ್ರ ಕೊರತೆ ಇರುವುದಿಲ್ಲ ಎಂದು ಹವಾಮಾನ ಇಲಾಖೆ ಹೇಳಿದೆ. ಹವಾಮಾನ ಇಲಾಖೆ ಬಿಡುಗಡೆ ಮಾಡಿರುವ 2021ರ ದೀರ್ಘಾವಧಿ ಮುಂಗಾರು ಮುನ್ಸೂಚನೆಯಲ್ಲಿ ಈ ಮಾಹಿತಿ ಇದೆ.

‘ಜೂನ್‌ನಿಂದ ಸೆಪ್ಟೆಂಬರ್ ವರೆಗೆ ದೀರ್ಘಾವಧಿ ಸರಾಸರಿಯ ಶೇ 101ರಷ್ಟು ಮಳೆಯಾಗಲಿದೆ ಎಂದು ನಿರೀಕ್ಷಿಸಲಾಗಿದೆ. ಇದರಲ್ಲಿ ಶೇ 4ರಷ್ಟು ವ್ಯತ್ಯಾಸವಾಗುವ ಸಾಧ್ಯತೆ ಇದೆ. ಒಟ್ಟಾರೆ ಮುಂಗಾರಿನಲ್ಲಿ ದೇಶದಾದ್ಯಂತ ವಾಡಿಕೆಯಷ್ಟು ಮಳೆಯಾಗುವ ಕಾರಣ ಕೃಷಿ ಕ್ಷೇತ್ರಕ್ಕೆ ಅನುಕೂಲವಾಗಲಿದೆ ಎಂದು ನಿರೀಕ್ಷಿಸಲಾಗಿದೆ’ ಎಂದು ಹವಾಮಾನ ಇಲಾಖೆ ಮಹಾ ನಿರ್ದೇಶಕ ಮೃತ್ಯುಂಜಯ ಮಹಾಪಾತ್ರ ಅವರು ಹೇಳಿದ್ದಾರೆ.

‘ವಾಡಿಕೆಗಿಂತ ಹೆಚ್ಚು ಮಳೆಯಾಗುವ ಸಾಧ್ಯತೆ ಶೇ 22ರಷ್ಟಿದ್ದರೆ, ವಾಡಿಕೆಗಿಂತ ಅತಿಹೆಚ್ಚು ಮಳೆಯಾಗುವ ಸಾಧ್ಯತೆ ಶೇ 12ರಷ್ಟಿದೆ. ವಾಡಿಕೆಗಿಂತ ಕಡಿಮೆ ಮಳೆಯಾಗುವ ಸಾಧ್ಯತೆ ಶೇ 18ರಷ್ಟಿದ್ದರೆ, ವಾಡಿಕೆಯಷ್ಟು ಮಳೆಯಾಗುವ ಸಾಧ್ಯತೆಯ ಪ್ರಮಾಣ ಶೇ 40ರಷ್ಟಿದೆ’ ಎಂದು ಮಹಾಪಾತ್ರ ಅವರು ಹೇಳಿದ್ದಾರೆ.

‘ಉತ್ತರ, ವಾಯವ್ಯ, ಮಧ್ಯ ಭಾರತ ಮತ್ತು ದಕ್ಷಿಣ ಭಾರತದ ಪೂರ್ವದ ರಾಜ್ಯಗಳ ಆಯ್ದ ಪ್ರದೇಶಗಳಲ್ಲಿ ವಾಡಿಕೆಯಷ್ಟು ಮಳೆಯಾಗಲಿದೆ. ಉಳಿಕೆ ಪ್ರದೇಶಗಳಲ್ಲಿ ವಾಡಿಕೆಗಿಂತ ಹೆಚ್ಚು ಮಳೆಯಾಗಲಿದೆ. ಈಶಾನ್ಯ ಭಾರತದ ಎಲ್ಲೆಡೆ, ಉತ್ತರ ಭಾರತದ ಕೆಲವೆಡೆ ಮತ್ತು ದಕ್ಷಿಣ ಭಾರತದ ಪಶ್ಚಿಮದ ರಾಜ್ಯಗಳಲ್ಲಿ ವಾಡಿಕೆಗಿಂತ ಕಡಿಮೆ ಮಳೆಯಾಗಲಿದೆ’ ಎಂದು ಅವರು ಮಾಹಿತಿ ನೀಡಿದ್ದಾರೆ.

ದೇಶದಾದ್ಯಂತ ಮುಂಗಾರಿನಲ್ಲಿ ಉತ್ತಮ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆಯು ತನ್ನ ಈ ಹಿಂದಿನ ಮುನ್ಸೂಚನೆಯಲ್ಲಿ ಮಾಹಿತಿ ನೀಡಿತ್ತು. ಹೀಗಾಗಿ ದೇಶದ ಹಲವು ರಾಜ್ಯಗಳಲ್ಲಿ ಮುಂಗಾರು ಬೇಸಾಯದ ಚಟುವಟಿಕೆಗಳು ಆರಂಭವಾಗಿವೆ. ಉತ್ತಮ ಮಳೆಯ ಮುನ್ಸೂಚನೆ ಇರುವ ಕಾರಣ, ಈ ಭಾರಿ ಕೃಷಿ ಉತ್ಪನ್ನಗಳ ಆವಕ ಏರಿಕೆಯಾಗುವ ನಿರೀಕ್ಷೆ ಇದೆ ಎಂದು ತಜ್ಞರು ಹೇಳಿದ್ದಾರೆ.

ದೇಶದಾದ್ಯಂತ ಸರಾಸರಿ ಮಳೆ



- ಸರಾಸರಿಯ ಶೇ 90-96ರಷ್ಟು ಮಳೆಯನ್ನು ಸರಾಸರಿಗಿಂತ ಕಡಿಮೆ ಮಳೆ ಎಂದು ಪರಿಗಣಿಸಲಾಗುತ್ತದೆ
- ಸರಾಸರಿಯ ಶೇ 96-104ರಷ್ಟು ಮಳೆಯನ್ನು ಸರಾಸರಿ ಮಳೆ ಎಂದು ಪರಿಗಣಿಸಲಾಗುತ್ತದೆ
- ಸರಾಸರಿಯ ಶೇ 104-110ರಷ್ಟು ಮಳೆಯನ್ನು ಸರಾಸರಿಗಿಂತ ಹೆಚ್ಚು ಮಳೆ ಎಂದು ಪರಿಗಣಿಸಲಾಗುತ್ತದೆ

ಉತ್ತರ ಮತ್ತು ವಾಯವ್ಯ ಭಾರತ; ಸರಾಸರಿ ಮಳೆ
ಸರಾಸರಿಯ ಶೇ 93ರಿಂದ ಶೇ 108ರಷ್ಟು ಮಳೆಯಾಗಲಿದೆ

ಮಧ್ಯ ಭಾರತ; ಸರಾಸರಿಗಿಂತ ಹೆಚ್ಚು ಮಳೆ
ಸರಾಸರಿಯ ಶೇ 106ಕ್ಕಿಂತ ಹೆಚ್ಚು ಮಳೆಯಾಗಲಿದೆ

ಈಶಾನ್ಯ ಭಾರತ; ಸರಾಸರಿಗಿಂತ ಕಡಿಮೆ ಮಳೆ
ಸರಾಸರಿಯ ಶೇ 95ಕ್ಕಿಂತ ಕಡಿಮೆ ಮಳೆಯಾಗಲಿದೆ

ದಕ್ಷಿಣ ಭಾರತ ; ಸರಾಸರಿ ಮಳೆ
ಸರಾಸರಿಯ ಶೇ 93ರಿಂದ ಶೇ 107ರಷ್ಟು ಮಳೆಯಾಗಲಿದೆ

ಮುಖ್ಯಾಂಶಗಳು

- ಕರ್ನಾಟಕ, ಕೇರಳದ ಕೆಲವು ಪ್ರದೇಶಗಳಲ್ಲಿ ವಾಡಿಕೆಗಿಂತ ಕಡಿಮೆ ಮಳೆ ಸಾಧ್ಯತೆ
- ಮಧ್ಯ ಭಾರತದಲ್ಲಿ ವಾಡಿಕೆಗಿಂತ ಹೆಚ್ಚು ಮಳೆ ಸಾಧ್ಯತೆ
- ಕೃಷಿ ಕ್ಷೇತ್ರಕ್ಕೆ ಅನುಕೂಲವಾಗುವ ನಿರೀಕ್ಷೆ

ಒಳ ಪುಟಗಳು

ಹೊಲದಲ್ಲೇ ಉಳಿದ ಹಣ್ಣು, ತರಕಾರಿ 6

ರಾಜ್ಯ ಕೋವಿಡ್ ಅಂಕಿ–ಅಂಶ

26,18,735 ▲	ಒಟ್ಟು ಸೋಂಕಿತರು (25,67,449 ನಿನ್ನೆಯ ವಿವರ)
2,98,299 ▼	ಸಕ್ರಿಯ ಪ್ರಕರಣಗಳು
22,90,861 ▲	ಗುಣಮುಖರಾದವರು
29,554 ▲	ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	14,304	▼
ಗುಣಮುಖ	29,271	▼
ಸಾವು	464	▲

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಪ್ರಿಯ ವಿದ್ಯಾರ್ಥಿಗಳೇ, ಕೋವಿಡ್‌ನಿಂದಾಗಿ ಈ ವರ್ಷ ತರಗತಿಗಳಿಗೆ ಖುದ್ದಾಗಿ ಹಾಜರಾಗಲು ನಿಮಗೆ ಸಾಧ್ಯವಾಗದಿರಬಹುದು. ಎಸ್ಸೆಸ್ಸೆಲ್ಸಿ-ಪಿಯುಸಿ ಪರೀಕ್ಷೆ ಬರೆಯುವ ನಿಮಗಾಗಿ ಅನುಭವಿ ಶಿಕ್ಷಕರು ನೀಡಿರುವ ಮಾರ್ಗದರ್ಶನ ದಿಕ್ಸೂಚಿಯಲ್ಲಿ..

ಪುಟ–7

ಕೇಂದ್ರ, ರಾಜ್ಯ ಸರ್ಕಾರಗಳಿಗೆ ಮಾನವ ಹಕ್ಕುಗಳ ಆಯೋಗದ ಸಲಹೆ

‘ಬಡವರಿಗೆ ಉದ್ಯೋಗ ಕೊಡಿ’

ಪ್ರಜಾವಾಣಿ ವಾರ್ತೆ

ನವದೆಹಲಿ: ಕೋವಿಡ್ ಎರಡನೇ ಅಲೆಯ ಕಾರಣಕ್ಕೆ ಹೇರಿದ್ದ ಲಾಕ್‌ಡೌನ್‌ನಿಂದಾಗಿ ಅನೌಪಚಾರಿಕ ಮತ್ತು ಅಸಂಘಟಿತ ವಲಯದಲ್ಲಿ ಭಾರಿ ಪ್ರಮಾಣದಲ್ಲಿ ಉದ್ಯೋಗ ನಷ್ಟವಾಗಿದೆ. ಸಂಕಷ್ಟದಲ್ಲಿರುವವರಿಗೆ ನೆರವಾಗಲು ‘ನಗರ ಉದ್ಯೋಗ ಯೋಜನೆ’ಯನ್ನು ಆರಂಭಿಸಬೇಕು ಮತ್ತು ಉದ್ಯೋಗ ಖಾತ್ರಿ ಯೋಜನೆಯ ಕೆಲಸದ ದಿನಗಳು ಹಾಗೂ ವೇತನವನ್ನು ಹೆಚ್ಚಿಸಬೇಕು ಎಂದು ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗವು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಗೆ ಸಲಹೆ ನೀಡಿದೆ.

ಅಸಂಘಟಿತ ವಲಯದ ಕಾರ್ಮಿಕರ ಹಕ್ಕುಗಳ ರಕ್ಷಣೆಗೆ ಸಂಬಂಧಿಸಿದಂತೆ ಕೋವಿಡ್ ಎರಡನೇ ಅಲೆಯ ಸಂದರ್ಭದಲ್ಲಿ ಆಯೋಗವು ಕೆಲವು ಸಲಹೆಗಳನ್ನು ನೀಡಿದೆ.

ಕೆಲವು ಬಡಾವಣೆ ಅಥವಾ ವಸತಿ ಸಂಕೀರ್ಣಗಳಲ್ಲಿ ಮನೆಗೆಲಸದವರ ಪ್ರವೇಶಕ್ಕೆ, ನಿವಾಸಿಗಳ ಅಭಿವೃದ್ಧಿ ಸಂಘಗಳು ನಿರ್ಬಂಧ ವಿಧಿಸಿವೆ. ಇದನ್ನು ತೆರವು ಮಾಡಿಸಬೇಕು. ಈ ಕುರಿತ ತೀರ್ಮಾನ ಕೈಗೊಳ್ಳುವ ಸ್ವಾತಂತ್ರ್ಯವನ್ನು ಮನೆಯ ಮಾಲೀಕರು ಮತ್ತು ಕೆಲಸದವರಿಗೆ ನೀಡಬೇಕು. ಪಿಡುಗಿನ ಹೆಸರಿನಲ್ಲಿ ನೌಕರರ ವೇತನ ಕಡಿತ ಮಾಡುವುದನ್ನು ನಿಲ್ಲಿಸಲು ಕ್ರಮ ಕೈಗೊಳ್ಳಬೇಕು. ಮನೆಗೆಲಸದವರನ್ನು ಸೋಂಕಿನ ವಾಹಕರೆಂದು ಪರಿಗಣಿಸುವ ನಿವಾಸಿ ಸಂಘಗಳು ಅವರ ಓಡಾಟಕ್ಕೆ ನಿಷೇಧ ಹೇರುತ್ತಿವೆ. ಇದರಿಂದ ಇಂಥವರ ಜೀವನ ಕಷ್ಟವಾಗಿದೆ. ರಾಷ್ಟ್ರೀಯ ಸ್ವಾಸ್ಥ್ಯ ವಿಮಾ ಯೋಜನೆಯನ್ನು ಮನೆಗೆಲಸದವರಿಗೂ ವಿಸ್ತರಿಸಬೇಕು ಎಂದು ಸೂಚಿಸಿದೆ.

ಕೋವಿಡ್ ಪಿಡುಗು ಮಹಿಳೆಯರನ್ನು ಆರ್ಥಿಕವಾಗಿ ದುರ್ಬಲಗೊಳಿಸಿದೆ. ಅವರಿಗೆ ವೇತನರಹಿತ ಆರೈಕೆಯ ಕೆಲಸವೇ ಹೆಚ್ಚಾಗಿದೆ. ಇಂಥವರ ಹೊರೆಯನ್ನು ಇಳಿಸಲು ರಾಷ್ಟ್ರಮಟ್ಟದಲ್ಲಿ ‘ಕೆಲಸದ ಹಂಚಿಕೆ ಅಭಿಯಾನ’ವನ್ನು ಆರಂಭಿಸಬೇಕು. ಉದ್ಯೋಗ ಖಾತ್ರಿ ಯೋಜನೆಯ ವೇತನವನ್ನು ಹಣದುಬ್ಬರಕ್ಕೆ ಅನುಗುಣವಾಗಿ ಹೆಚ್ಚಿಸಬೇಕು. ಮುಂದಿನ ಮಾರ್ಚ್ 31ರವರೆಗೆ ಜಾರಿಯಲ್ಲಿರುವಂತೆ ಕೆಲಸದ ದಿನಗಳನ್ನು ಕನಿಷ್ಠ 200 ದಿನಗಳಿಗೆ ಹೆಚ್ಚಿಸಬೇಕು ಎಂದು ಸಲಹೆ ನೀಡಿದೆ.

ಸ್ಮಶಾನದಲ್ಲಿ ಕೆಲಸ ಮಾಡುವವರು ಕೋವಿಡ್‌ನಿಂದ ಸತ್ತಿರುವವರ ಶರೀರದ ಜತೆಗೆ ನೇರ ಸಂಪರ್ಕಕ್ಕೆ ಬರುತ್ತಾರೆ. ಅಂಥವರನ್ನು ಕೋವಿಡ್ ಮುಂಚೂಣಿಯ ಕಾರ್ಯಕರ್ತರು ಎಂದು ಪರಿಗಣಿಸಿ, ಅವರಿಗೂ ಆರೋಗ್ಯ ವಿಮೆ, ಇತರ ಸೌಲಭ್ಯಗಳನ್ನು ನೀಡಬೇಕು ಎಂದಿದೆ.

23 ಕೋಟಿ ಮಂದಿ ಬಡತನಕ್ಕೆ

ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯವು ಸಿದ್ಧಪಡಿಸಿರುವ ‘ಸ್ಟೇಟ್ ಆಫ್ ವರ್ಕಿಂಗ್ ಇಂಡಿಯಾ 2021: ವನ್ ಇಯರ್ ಆಫ್ ಕೋವಿಡ್ -19’ ವರದಿಯನ್ನು ಆಯೋಗವು ಉಲ್ಲೇಖಿಸಿದೆ. ‘ಭಾರತದಲ್ಲಿ ಸುಮಾರು 50 ಕೋಟಿ ಜನರು ಅಸಂಘಟಿತ ವಲಯದಲ್ಲಿ ಕೆಲಸ ಮಾಡುತ್ತಿದ್ದಾರೆ. ಅವರಲ್ಲಿ ಸುಮಾರು 23 ಕೋಟಿ ಮಂದಿ ಕಳೆದ ಒಂದು ವರ್ಷದಲ್ಲಿ ಬಡತನಕ್ಕೆ ಇಳಿದಿದ್ದಾರೆ’ ಎಂದು ವರದಿಯಲ್ಲಿ ಹೇಳಲಾಗಿದೆ. ದೇಶದಲ್ಲಿ ನಿರುದ್ಯೋಗ ಭಾರಿ ಪ್ರಮಾಣದಲ್ಲಿ ಹೆಚ್ಚಿದೆ, ಜತೆಗೆ ವೇತನ ಕಡಿತವೂ ಈ ಕ್ಷೇತ್ರಗಳನ್ನು ಕಾಡಿದೆ ಎಂದು ಇತರ ಅನೇಕ ವರದಿಗಳು ಹೇಳಿರುವುದನ್ನೂ ಆಯೋಗ ಉಲ್ಲೇಖಿಸಿದೆ.

ಜುಲೈ ಕೊನೆಗೆ ದಿನಕ್ಕೆ 1 ಕೋಟಿ ಲಸಿಕೆ

ನವದೆಹಲಿ (ಪಿಟಿಐ): ಕೋವಿಡ್–19 ಲಸಿಕೆ ಸಮಸ್ಯೆಯು ಜುಲೈ ಕೊನೆ ಅಥವಾ ಆಗಸ್ಟ್ ಆರಂಭದ ಹೊತ್ತಿಗೆ ಬಹುಪಾಲು ಬಗೆಹರಿಯಲಿದೆ. ದಿನಕ್ಕೆ ಒಂದು ಕೋಟಿ ಜನರಿಗೆ ಹಾಕುವಷ್ಟು ಲಸಿಕೆ ಲಭ್ಯವಾಗಲಿದೆ ಎಂಬ ವಿಶ್ವಾಸವನ್ನು ಕೇಂದ್ರ ಸರ್ಕಾರ ವ್ಯಕ್ತಪಡಿಸಿದೆ.

ಕೋವಿಶೀಲ್ಡ್ ಮತ್ತು ಕೋವ್ಯಾಕ್ಸಿನ್‌ನ ತಲಾ ಎರಡು ಡೋಸ್ ಹಾಕಿಸುವಿಕೆ ನೀತಿಯಲ್ಲಿ ಯಾವುದೇ ಬದಲಾವಣೆ ಇಲ್ಲ. ಬೇರೆ ಬೇರೆ ಲಸಿಕೆಗಳ ಒಂದೊಂದು ಡೋಸ್ ಹಾಕಿಸುವಿಕೆ ವಿಚಾರದಲ್ಲಿ ಈವರೆಗೆ ಯಾವುದೇ ನಿರ್ಧಾರ ಆಗಿಲ್ಲ ಎಂದು ಕೇಂದ್ರ ಸರ್ಕಾರ ಸ್ಪಷ್ಟಪಡಿಸಿದೆ.

ಜಿಲ್ಲೆಗಳಲ್ಲಿ ಲಾಕ್‌ಡೌನ್ ತೆರವಿಗೆ ಅನುಸರಿಸಬಹುದಾದ ಮಾನದಂಡಗಳನ್ನು ಪ್ರಕಟಿಸಲಾಗಿದೆ. ವಾರದಲ್ಲಿ ನಡೆಸಿದ ಪರೀಕ್ಷೆಯಲ್ಲಿ ಕೋವಿಡ್ ದೃಢಪಡುವಿಕೆ ಪ್ರಮಾಣವು (ಪಾಸಿಟಿವಿಟಿ) ಶೇ 5ಕ್ಕಿಂತ ಕೆಳಗೆ ಇರಬೇಕು. 60 ವರ್ಷ ದಾಟಿದವರು ಮತ್ತು ಬೇರೆ ಗಂಭೀರ ಅನಾರೋಗ್ಯ ಇರುವ 45 ವರ್ಷ ದಾಟಿದವರಲ್ಲಿ ಶೇ 70ಕ್ಕಿಂತ ಹೆಚ್ಚು ಮಂದಿಗೆ ಲಸಿಕೆ ಹಾಕಿಸಿರಬೇಕು ಎಂದು ಕೇಂದ್ರವು ಹೇಳಿದೆ.

30 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ 344 ಜಿಲ್ಲೆಗಳಲ್ಲಿ ಕೋವಿಡ್ ದೃಢಪಡುವಿಕೆ ಪ್ರಮಾಣವು ಶೇ 5ಕ್ಕಿಂತ ಕಡಿಮೆ ಇದೆ. ಕೋವಿಡ್‌ನ ಹೊಸ ಪ್ರಕರಣಗಳ ಪ್ರಮಾಣ ಕಳೆದ ವಾರದಿಂದ ಇಳಿಕೆಯಾಗುತ್ತಿದೆ. ಮೇ 7ರಂದು ಗರಿಷ್ಠ ಸಂಖ್ಯೆಯ ಪ್ರಕರಣಗಳು ದಾಖಲಾಗಿದ್ದವು. ಅಂದಿಗೆ ಹೋಲಿಸಿದರೆ ಹೊಸ ಪ್ರಕರಣಗಳ ಪ್ರಮಾಣವು ಶೇ 69ರಷ್ಟು ಇಳಿಕೆಯಾಗಿದೆ ಎಂದು ಸರ್ಕಾರ ತಿಳಿಸಿದೆ.

ಸ್ಪುಟ್ನಿಕ್ ಲಸಿಕೆ: 30 ಲಕ್ಷ ಡೋಸ್ ಆಮದು

ಹೈದರಾಬಾದ್: ಸ್ಪುಟ್ನಿಕ್–ವಿ ಲಸಿಕೆಯ 30 ಲಕ್ಷ ಡೋಸ್‌ಗಳು ಹೈದರಾಬಾದ್ ವಿಮಾನ ನಿಲ್ದಾಣಕ್ಕೆ ಮಂಗಳವಾರ ಬೆಳಿಗ್ಗೆ ತಲುಪಿವೆ. ಭಾರತಕ್ಕೆ ವಿದೇಶದಿಂದ ಬಂದ ಅತ್ಯಂತ ದೊಡ್ಡ ಪ್ರಮಾಣದ ಲಸಿಕೆ ಇದಾಗಿದೆ. ರಷ್ಯಾದ ಈ ಲಸಿಕೆಯ ವಿತರಣೆಯ ಹೊಣೆಯನ್ನು ಡಾ. ರೆಡ್ಡೀಸ್ ಲ್ಯಾಬೊರೇಟರೀಸ್ ವಹಿಸಿಕೊಂಡಿದೆ. ಸಂಸ್ಥೆಯು ಲಸಿಕೆಯ 1.5 ಲಕ್ಷ ಡೋಸ್ ಅನ್ನು ಮೇ 1ರಂದು ಪಡೆದುಕೊಂಡಿತ್ತು.

ಸ್ಪುಟ್ನಿಕ್–ವಿ ಲಸಿಕೆಯ ಲಭ್ಯತೆಯು ಜೂನ್ 15ರ ಹೊತ್ತಿಗೆ ಇನ್ನಷ್ಟು ಹೆಚ್ಚಲಿದೆ. ಸೆಪ್ಟೆಂಬರ್ ಹೊತ್ತಿಗೆ ಗಣನೀಯ ಪ್ರಮಾಣದ ಲಸಿಕೆ ಡೋಸ್‌ಗಳು ಭಾರತದಲ್ಲಿ ಲಭ್ಯವಾಗಲಿವೆ ಎಂದು ಡಾ. ರೆಡ್ಡೀಸ್‌ನ ಸಹ ಅಧ್ಯಕ್ಷ ಜಿ.ವಿ. ಪ್ರಸಾದ್ ತಿಳಿಸಿದ್ದಾರೆ.

ದೇಶೀಯವಾಗಿಯೇ ಈ ಲಸಿಕೆಯ ತಯಾರಿಕೆಯು ಕೆಲವೇ ತಿಂಗಳಲ್ಲಿ ಆರಂಭವಾಗಲಿದೆ. ಒಟ್ಟು ಆರು ಕಡೆಗಳಲ್ಲಿ ಲಸಿಕೆ ತಯಾರಿಸಲಾಗುವುದು. ಧಾರವಾಡದ ಶಿಲ್ಪಾ ಬಯೊಲಜಿಕಲ್ಸ್‌ನಲ್ಲಿ ಮೊದಲ 12 ತಿಂಗಳಲ್ಲಿ 5 ಕೋಟಿ ಲಸಿಕೆ ತಯಾರಿಯ ಗುರಿ ಹಾಕಿಕೊಳ್ಳಲಾಗಿದೆ ಎಂದು ಡಾ. ರೆಡ್ಡೀಸ್ ಸಂಸ್ಥೆಯು ಹೇಳಿದೆ.

‘ಪ್ರವಾಹ ಎದುರಿಸಲು ಸಜ್ಜು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಇದೇ 6 ಅಥವಾ 7ರ ವೇಳೆಗೆ ಮುಂಗಾರು ಆರಂಭವಾಗಲಿದ್ದು, 20 ಜಿಲ್ಲೆಗಳಲ್ಲಿ ವಾಡಿಕೆಯಷ್ಟು ಹಾಗೂ 10 ಜಿಲ್ಲೆಗಳಲ್ಲಿ ವಾಡಿಕೆಗಿಂತ ಕಡಿಮೆ ಮಳೆ ಆಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಮುಂಗಾರು ಹಂಗಾಮಿನ ಕೃಷಿ ಚಟುವಟಿಕೆಯ ಪೂರ್ವಸಿದ್ಧತೆ ಕುರಿತು ಕೃಷಿ ಸಚಿವ ಬಿ.ಸಿ. ಪಾಟೀಲ ಮತ್ತು ಇಲಾಖೆಯ ಅಧಿಕಾರಿಗಳ ಜೊತೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಮಂಗಳವಾರ ಸಭೆ ನಡೆಸಿದರು.

‘ಮಳೆಗಾಲದಲ್ಲಿ ಪ್ರವಾಹ ಎದುರಿಸಲು ಪಂಚಾಯಿತಿ ಮಟ್ಟದ ಕ್ರಿಯಾ ಯೋಜನೆ ರೂಪಿಸಲಾಗುತ್ತಿದೆ. ಎನ್‌ಡಿಆರ್‌ಎಫ್, ಎಸ್‌ಡಿಆರ್‌ಎಫ್ ತಂಡಗಳು ಸಜ್ಜಾಗಿವೆ. ಕಟ್ಟೆಚ್ಚರ ವಹಿಸುವಂತೆ ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಗಿದೆ’ ಎಂದು ಯಡಿಯೂರಪ್ಪ ಹೇಳಿದರು.

‘ಕೃಷಿ ಚಟುವಟಿಕೆಯ ಉತ್ತೇಜನಕ್ಕೆ ಅಗತ್ಯ ಇರುವಷ್ಟು ಡಿಎಪಿ ಮತ್ತು ಯೂರಿಯಾ ರಸಗೊಬ್ಬರವನ್ನು ಸಕಾಲದಲ್ಲಿ ಪೂರೈಸುವ ಬಗ್ಗೆ ಕೇಂದ್ರ ಸಚಿವರ ಜೊತೆ ಚರ್ಚಿಸಲಾಗುವುದು’ ಎಂದು ಸಭೆಗೆ ತಿಳಿಸಿದರು.

‘2020-21ರಲ್ಲಿ ದಾಖಲೆ ಪ್ರಮಾಣದ 153.08 ಲಕ್ಷ ಟನ್ ಆಹಾರಧಾನ್ಯ ಉತ್ಪಾದನೆ ಆಗಿದೆ. ಕಳೆದ ವರ್ಷಕ್ಕಿಂತ (2019-20) ಶೇ 10ರಷ್ಟು ಹೆಚ್ಚಳವಾಗಿದೆ. ಪ್ರಸಕ್ತ ಸಾಲಿನಲ್ಲಿ 135.48 ಲಕ್ಷ ಟನ್ ಗುರಿ ಹೊಂದಲಾಗಿದೆ’ ಎಂದು ಬಿ.ಸಿ. ಪಾಟೀಲ ತಿಳಿಸಿದರು.

‘690 ಕೃಷಿ ಯಂತ್ರಧಾರೆ ಕೇಂದ್ರಗಳು ಮತ್ತು 210 ಗ್ರಾಮಮಟ್ಟದ ಕೃಷಿ ಯಂತ್ರೋಪಕರಣ ಬ್ಯಾಂಕ್‌ಗಳು ಕಾರ್ಯನಿರ್ವಹಿಸುತ್ತಿವೆ. ಬಾಡಿಗೆ ಆಧಾರದಲ್ಲಿ ಕೃಷಿ ಯಂತ್ರೋಪಕರಣ ಒದಗಿಸಲಾಗುತ್ತಿದೆ’ ಎಂದೂ ಅವರು ಹೇಳಿದರು. ರಾಜ್ಯದಲ್ಲಿ ಈವರೆಗಿನ ಮಳೆ ಪ್ರಮಾಣ, ಬಿತ್ತನೆ ಪ್ರಗತಿಯ ಬಗ್ಗೆ ಮುಖ್ಯಮಂತ್ರಿಗೆ ಅಧಿಕಾರಿಗಳು ಮಾಹಿತಿ ನೀಡಿದರು.

‘ಯೆಲ್ಲೊ ಅಲರ್ಟ್’ ಮುಂದುವರಿಕೆ

ಬೆಂಗಳೂರು: ರಾಜ್ಯದ ಕರಾವಳಿ ಹಾಗೂ ಒಳನಾಡಿನ ಜಿಲ್ಲೆಗಳಲ್ಲಿ ಜೂ.1ರಿಂದ 5ರವರೆಗೆ ವ್ಯಾಪಕ ಮಳೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಕರಾವಳಿ ಜಿಲ್ಲೆಗಳಾದ ಉತ್ತರ ಕನ್ನಡ, ದಕ್ಷಿಣ ಕನ್ನಡ ಹಾಗೂ ಉಡುಪಿಯಲ್ಲಿ ಜೂ.4ರವರೆಗೆ ‘ಯೆಲ್ಲೊ ಅಲರ್ಟ್’ ಮುಂದುವರಿಸಲಾಗಿದೆ. ಬೀದರ್, ಕಲಬುರ್ಗಿ, ಚಿಕ್ಕಮಗಳೂರು, ಚಿತ್ರದುರ್ಗ, ದಾವಣಗೆರೆ, ಹಾಸನ, ಕೊಡಗು, ಕೋಲಾರ ಹಾಗೂ ಶಿವಮೊಗ್ಗ ಜಿಲ್ಲೆಗಳಲ್ಲಿ ಜೂ.2 ಮತ್ತು 3ರಂದು ‘ಯೆಲ್ಲೊ ಅಲರ್ಟ್’ ಘೋಷಿಸಲಾಗಿದೆ.

ಬಳ್ಳಾರಿ, ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಹಾಗೂ ತುಮಕೂರು ಭಾಗಗಳಲ್ಲಿ ಇದೇ 3ರಂದು ಹೆಚ್ಚು ಮಳೆಯಾಗುವ ಸಾಧ್ಯತೆ ಇದೆ. ನೆರೆಯ ಕೇರಳಕ್ಕೆ ಬುಧವಾರ ಮತ್ತು ಗುರುವಾರ ಮುಂಗಾರಿನ ಪ್ರವೇಶವಾಗಲಿದೆ. ಈ ವಾರಾಂತ್ಯದ ವೇಳೆಗೆ ರಾಜ್ಯಕ್ಕೆ ಮುಂಗಾರು ಪ್ರವೇಶಿಸಲಿದೆ. ಹವಾಮಾನ ವೈಪರೀತ್ಯದಿಂದಾಗಿ ಈಗಾಗಲೇ ರಾಜ್ಯದಲ್ಲಿ ಪೂರ್ವ ಮುಂಗಾರು ಮಳೆಯಾಗುತ್ತಿದೆ ಎಂದೂ ತಿಳಿಸಿದೆ.

ಮಳೆ–ಎಲ್ಲಿ, ಎಷ್ಟು?: ಬೀದರ್ ಜಿಲ್ಲೆಯ ಹುಮನಾಬಾದ್‌ನಲ್ಲಿ ಮಂಗಳವಾರ 11 ಸೆಂ.ಮೀ ಗರಿಷ್ಠ ಮಳೆಯಾಗಿದೆ. ಧರ್ಮಸ್ಥಳ 5, ಮಂಗಳೂರು 4, ಹೊನ್ನಾವರ 3, ಬೆಳ್ತಂಗಡಿ, ಶಿಡ್ಲಘಟ್ಟ 2, ಚಿಕ್ಕೋಡಿಯಲ್ಲಿ ತಲಾ 1 ಸೆಂ.ಮೀ ಮಳೆಯಾಗಿದೆ. ರಾಯಚೂರಿನಲ್ಲಿ 37.4 ಡಿಗ್ರಿ ಸೆಲ್ಸಿಯಸ್ ಗರಿಷ್ಠ ತಾಪಮಾನ ದಾಖಲಾಗಿದೆ.

ಇಂದಿನ ಪಾಡ್‌ಕಾಸ್ಟ್ ವಿಶೇಷ
ಝಣ ಝಣ ಕಾಂಚಾಣ
ಪ್ರತೀ ದಿನ: ದಿನದ ಸೂಕ್ತಿ, ವಚನವಾಣಿ ಸಂಪಾದಕೀಯ, ಪ್ರಚಲಿತ
Prajavani.net/podcast

ಚಿನಕುರಳಿ

ಪ್ರಕಾಶ್ ಶೆಟ್ಟಿ

ವೈದ್ಯಕೀಯ ಸಿಬ್ಬಂದಿ ಕೊರತೆ; ಚಿಕಿತ್ಸೆಗಾಗಿ ಆಸ್ಪತ್ರೆಗಳಿಗೆ ಅಲೆದಾಟ

ಆರೈಕೆ ಕೇಂದ್ರವೇ ದೂರ; ಆಂಬುಲೆನ್ಸ್‌ಗೂ ಪರದಾಟ

• ಕೆ.ಎಸ್.ಸುನಿಲ್

ಗ್ರಾಮಾರೋಗ್ಯ ಆಗಲಿ ಇನ್ನಷ್ಟು ಯೋಗ್ಯ

ಹಾಸನ: ಎಂಬತ್ತೈದು ಸಾವಿರ ಜನಸಂಖ್ಯೆಯ ಆಲೂರು ತಾಲ್ಲೂಕಿಗೆ ಇರುವುದು ಒಂದೇ ಆಂಬುಲೆನ್ಸ್. ಮತ್ತೊಂದು ಕೆಟ್ಟು ಹೋಗಿದೆ. ಕೊರೊನಾ ಸೋಂಕಿತರನ್ನು ಆರೈಕೆ ಕೇಂದ್ರಕ್ಕೆ ಕರೆದೊಯ್ಯಲು ಹಾಗೂ ಮನೆಗೆ ಬಿಡಲು ಇರುವುದು ಅದೊಂದೇ ವಾಹನ. ಕೆಲವೊಮ್ಮೆ ಅದು ದೂರದ ಹಳ್ಳಿಗೆ ಹೋಗಿದ್ದರೆ, ಬರುವುದು ತಡವಾಗುತ್ತದೆ. ಅಂತಹ ಸಂದರ್ಭದಲ್ಲಿ, ತಾಲ್ಲೂಕು ಆಸ್ಪತ್ರೆಯಲ್ಲಿ ಗಂಭೀರ ಸ್ಥಿತಿಯಲ್ಲಿದ್ದ ರೋಗಿಗಳು ಜಿಲ್ಲಾಸ್ಪತ್ರೆಗೆ ತೆರಳುವುದು ಬಹಳ ಕಷ್ಟಕರವಾಗಿದೆ.

ಮಲೆನಾಡು ಪ್ರದೇಶ ಸಕಲೇಶಪುರ, ಆಲೂರು ಭಾಗದಲ್ಲಿ ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಈ ಭಾಗದಲ್ಲಿ ಒಂಟಿ ಮನೆಗಳಿದ್ದು, ಕಾಡಾನೆಗಳ ಉಪಟಳವೂ ಹೆಚ್ಚು. ಸದ್ಯಕ್ಕೆ ಬಸ್ ಸೇವೆಯೂ ಇಲ್ಲ. ರೋಗಿಗಳು ಗಂಭೀರ ಸ್ಥಿತಿಗೆ ತಲುಪಿದರೆ ಕಾಡಾನೆ ಭಯದಿಂದ ಚಿಕಿತ್ಸೆಗಾಗಿ 20 -30 ಕಿ.ಮೀ. ದೂರದ ಆಸ್ಪತ್ರೆಗೆ ಬರಲು ಸಾಧ್ಯವಾಗುತ್ತಿಲ್ಲ.

‘ಹಗಲೂ ರಾತ್ರಿ ಕಾಡಾನೆಗಳ ಕಾಟ. ಕೂಲಿ, ಕೃಷಿ ಮಾಡಿಕೊಂಡು ಬದುಕು ಸಾಗಿಸುತ್ತಿದ್ದೆವು. ಗಂಭೀರ ಆರೋಗ್ಯ ಸಮಸ್ಯೆಯಾದರೆ ಆಂಬುಲೆನ್ಸ್‌ಗೆ ಕರೆ ಮಾಡಲು ನೆಟ್‌ವರ್ಕ್ ಸಮಸ್ಯೆ. ಬಾಡಿಗೆ ವಾಹನಗಳೂ ಸಿಗುವುದಿಲ್ಲ. ಕೊರೊನಾ ಸೋಂಕು ಹೆಚ್ಚಾಗಿ ವ್ಯಾಪಿಸಿರುವುದರಿಂದ ಬಹುತೇಕ ಕ್ಲಿನಿಕ್‌ಗಳ ಬಾಗಿಲು ತೆರೆದಿಲ್ಲ. ಆಸ್ಪತ್ರೆಯಿಂದ ಆಸ್ಪತ್ರೆಗೆ ಅಲೆದಾಡುವಂತಾಗಿದೆ. ಹಾಗಾಗಿ, ಕಾಯಿಲೆ ಬಂದರೂ ಮನೆ ಮದ್ದು ಹಾಗೂ ಮಾತ್ರೆಗಳ ಮೊರೆ ಹೋಗುತ್ತಿದ್ದೇವೆ’ ಎನ್ನುತ್ತಾರೆ ಶುಕ್ರವಾರಸಂತೆ, ಹಾನುಬಾಳು, ಹೆತ್ತೂರು, ಯಸಳೂರು, ಅಲೇಬೇಲೂರು ಮತ್ತು ಬಾಳ್ಳುಪೇಟೆ ಜನರು.

ಸಕಲೇಶಪುರ, ಆಲೂರು, ಬೇಲೂರು, ಅರಸೀಕೆರೆ ತಾಲ್ಲೂಕು ಆಸ್ಪತ್ರೆಗಳಲ್ಲಿ ವೆಂಟಿಲೇಟರ್‌ಗಳು ಇದ್ದರೂ ಅಪರೇಟರ್‌ಗಳು ಇಲ್ಲ. ಹಲವು ಕಡೆ ಐಸಿಯು ಬೆಡ್‌ಗಳ ಕೊರತೆ ಇದೆ. ವೈದ್ಯರು, ಸ್ಟಾಫ್ ನರ್ಸ್, ಗ್ರೂಪ್ ಡಿ ನೌಕರರು ಅಗತ್ಯಕ್ಕೆ ತಕ್ಕಂತೆ ಇಲ್ಲ. ಸಮರ್ಪಕ ಚಿಕಿತ್ಸೆ ದೊರೆಯದ ಕಾರಣ, ರೋಗಿಗಳೂ ಆಸ್ಪತ್ರೆಗಳಿಂದ ಆಸ್ಪತ್ರೆಗಳಿಗೆ ಅಲೆಯುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ.

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ಬೇಲೂರು ತಾಲ್ಲೂಕಿನ ಅಂಗಡಿಹಳ್ಳಿ ಹಕ್ಕಿಪಿಕ್ಕಿ ಸಮುದಾಯದ ಸೋಂಕಿತರು ಬಯಲು ಶೆಡ್‌ನಲ್ಲಿ ಪ್ರತ್ಯೇಕ ವಾಸವಾಗಿದ್ದಾರೆ ಚಿತ್ರ: ಅತೀಖ್ ಉರ್ ರೆಹಮಾನ್

69 ತಜ್ಞ ವೈದ್ಯರ ಹುದ್ದೆ ಖಾಲಿ

ಜಿಲ್ಲಾ ಕೋವಿಡ್ ಆಸ್ಪತ್ರೆಯಲ್ಲಿ 13 ತಜ್ಞ ವೈದ್ಯರ ಹುದ್ದೆ ಮತ್ತು ಜಿಲ್ಲೆಯ ಸರ್ಕಾರಿ ಆಸ್ಪತ್ರೆಗಳಲ್ಲಿ 56 ತಜ್ಞ ವೈದ್ಯರ ಹುದ್ದೆ ಖಾಲಿ ಇವೆ. ಸಕಲೇಶಪುರ ತಾಲ್ಲೂಕು ಆಸ್ಪತ್ರೆಯಲ್ಲಿ ಹತ್ತು ವರ್ಷಗಳಿಂದ ಮುಖ್ಯ ವೈದ್ಯಾಧಿಕಾರಿ, ಫಿಜಿಷಿಯನ್, ಮಕ್ಕಳ ತಜ್ಞ, ರೇಡಿಯಾಲಜಿಸ್ಟ್, ಅರಿವಳಿಕೆ ತಜ್ಞರಿಲ್ಲ.

11ನೇ ಪುಟ ನೋಡಿ
ವಿಶೇಷ ಪುಟ 11

ಅರುಣ್ ಸಿಂಗ್ ಜೊತೆ ವಿಜಯೇಂದ್ರ ರಹಸ್ಯ ಚರ್ಚೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು ಪಕ್ಷದ ರಾಜ್ಯ ಉಸ್ತುವಾರಿ ಅರುಣ್ ಸಿಂಗ್ ಅವರನ್ನು ಮಂಗಳವಾರ ರಹಸ್ಯವಾಗಿ ಭೇಟಿ ಮಾಡಿ, ರಾಜ್ಯ ರಾಜಕೀಯ ಬೆಳವಣಿಗೆಗಳ ಕುರಿತು ಚರ್ಚಿಸಿದ್ದಾರೆ.

ವೈಯಕ್ತಿಕ ಕೆಲಸದ ನಿಮಿತ್ತ ದೆಹಲಿಗೆ ಬಂದಿರುವುದಾಗಿ ಆಪ್ತರ ಬಳಿ ಹೇಳಿಕೊಂಡಿರುವ ವಿಜಯೇಂದ್ರ, ಮಧ್ಯಾಹ್ನ ಅರುಣ್ ಸಿಂಗ್ ಅವರನ್ನು ಖಾಸಗಿಯಾಗಿ ಭೇಟಿಯಾಗಿ ಮಹತ್ವದ ವಿಷಯಗಳ ಕುರಿತು ಚರ್ಚಿಸಿದ್ದಾರೆ ಎಂದು ಪಕ್ಷದ ಉನ್ನತ ಮೂಲಗಳು ‘ಪ್ರಜಾವಾಣಿ’ಗೆ ತಿಳಿಸಿವೆ.

ಕೊರೊನಾ ಸ್ಥಿತಿಯ ಅಸಮರ್ಥ ನಿರ್ವಹಣೆ, ಭ್ರಷ್ಟಾಚಾರ ಆರೋಪ, ಯಡಿಯೂರಪ್ಪ ಆಡಳಿತ ವೈಖರಿಯ ವಿರುದ್ಧ ಎದ್ದಿರುವ ದನಿ, ಪಕ್ಷದ ಮುಖಂಡರ ನಿಲುವು, ಭಿನ್ನಮತ ಮತ್ತಿತರ ವಿಷಯಗಳ ಕುರಿತು ಚರ್ಚೆ ನಡೆದಿದೆ ಎಂದು ಹೇಳಲಾಗಿದೆ.

6ನೇ ಪುಟ ನೋಡಿ

ಸಚಿವ ಸಂಪುಟ ಪುನರ್ ರಚನೆ?

ನವದೆಹಲಿ: ಮುಖ್ಯಮಂತ್ರಿ ಯಡಿಯೂರಪ್ಪ ಅವರ ಸಚಿವ ಸಂಪುಟವನ್ನು ಪುನರ್ ರಚಿಸುವ ಕುರಿತು ಪಕ್ಷದ ರಾಜ್ಯ ಉಸ್ತುವಾರಿ ಅರುಣ್ ಸಿಂಗ್ ಅವರು ಬಿ.ವೈ. ವಿಜಯೇಂದ್ರ ಭೇಟಿ ಸಂದರ್ಭ ಚರ್ಚಿಸಿದ್ದಾರೆ ಎಂದು ಗೊತ್ತಾಗಿದೆ.

ಕೊರೊನಾ ಸಂಕಷ್ಟ ಕಾಲದಲ್ಲಿ ಕ್ರಿಯಾಶೀಲರಾಗಿ ತೊಡಗಿಸಿಕೊಳ್ಳದ ಕೆಲವು ಸಚಿವರನ್ನು ಪುನರ್ ರಚನೆ ವೇಳೆ ಕೈಬಿಟ್ಟು, ಆಸಕ್ತಿಯಿಂದ ಕೆಲಸ ಮಾಡಿದವರನ್ನು ಸಂಪುಟಕ್ಕೆ ಸೇರ್ಪಡೆ ಮಾಡಿಕೊಳ್ಳುವ ಕುರಿತು ಚರ್ಚಿಸಲಾಗಿದೆ ಎಂದು ಮೂಲಗಳು ಹೇಳಿವೆ.

6ನೇ ಪುಟ ನೋಡಿ

ಚಿನ್ನ, ಬೆಳ್ಳಿ ದರ ಏರಿಕೆ

ನವದೆಹಲಿ (ಪಿಟಿಐ): ಇಲ್ಲಿನ ಬುಧವಾರ ಪೇಟೆಯಲ್ಲಿ ಚಿನ್ನದ ಬೆಲೆಯು 10 ಗ್ರಾಂಗೆ ₹ 285ರಷ್ಟು ಏರಿಕೆ ಆಗಿ ₹ 48,892ಕ್ಕೆ ತಲುಪಿದೆ.

ಬೆಳ್ಳಿಯ ಬೆಲೆಯು ಕೆ.ಜಿ.ಗೆ 952ರಷ್ಟು ಹೆಚ್ಚಾಗಿ ₹ 71,850ಕ್ಕೆ ತಲುಪಿದೆ. 'ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬೆಲೆ ಹೆಚ್ಚಳ ಆದ ಕಾರಣದಿಂದಾಗಿ ದೇಶಿ ಮಾರುಕಟ್ಟೆಯಲ್ಲಿ ಚಿನ್ನದ ಬೆಲೆ ಹೆಚ್ಚಾಗಿದೆ' ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್ ಹೇಳಿದೆ.

ಬೆಂಗಳೂರು ಜಲಮಂಡಳಿಗೆ ಮುಖ್ಯಮಂತ್ರಿ ನಿರ್ದೇಶನ

ನೀರು ಸೋರಿಕೆ ಶೇ 20ಕ್ಕೆ ತಗ್ಗಿಸಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಲಮಂಡಳಿ ವ್ಯಾಪ್ತಿಯಲ್ಲಿರುವ ನೀರಿನ ಸೋರಿಕೆ ಪ್ರಮಾಣವನ್ನು ಶೇಕಡ 36ರಿಂದ ಶೇ 20ಕ್ಕೆ ಇಳಿಸಲು ಅಗತ್ಯ ಕಾರ್ಯತಂತ್ರ ರೂಪಿಸುವಂತೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಜಲಮಂಡಳಿ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಜಲಮಂಡಳಿಯ ಚಟುವಟಿಕೆಗಳ ಕುರಿತು ಮಂಗಳವಾರ ಪ್ರಗತಿ ಪರಿಶೀಲನೆ ನಡೆಸಿದ ಅವರು, ಇತರ ಬೃಹತ್ ನಗರಗಳಲ್ಲಿ ನೀರು ಸೋರಿಕೆ ತಡೆಗೆ ಕೈಗೊಂಡಿರುವ ಕ್ರಮಗಳ ಕುರಿತು ಅಧ್ಯಯನ ನಡೆಸಿ, ವರದಿ ಸಲ್ಲಿಸುವಂತೆ ಸೂಚಿಸಿದರು.

ಎಲ್ಲ ಯೋಜನೆಗಳನ್ನು ನಿಗದಿತ ಕಾಲಮಿತಿಯೊಳಗೆ ಪೂರ್ಣಗೊಳಿಸಬೇಕು. ಮಳೆಗಾಲ ಎದುರಿಸಲು ಕೈಗೊಂಡಿರುವ ತುರ್ತು ಕಾಮಗಾರಿಗಳನ್ನು ಬೇಗ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಬೇಕು ಎಂದು ಸೂಚನೆ ನೀಡಿದರು.

ಬಿಬಿಎಂಪಿ ವ್ಯಾಪ್ತಿಗೆ ಸೇರ್ಪಡೆಯಾಗಿರುವ 110 ಗ್ರಾಮಗಳಲ್ಲಿ ಕುಡಿಯುವ ನೀರಿನ ಕೊಳವೆ ಅಳವಡಿಸುವ ಕಾಮಗಾರಿ ಪೂರ್ಣಗೊಂಡಿದೆ. 51 ಗ್ರಾಮಗಳಿಗೆ ಈಗಾಗಲೇ ನೀರು ಪೂರೈಕೆ ಮಾಡಲಾಗುತ್ತಿದೆ. 59 ಗ್ರಾಮಗಳಿಗೆ 2022ರ ವೇಳೆಗೆ ನೀರು ಪೂರೈಕೆ ಆರಂಭವಾಗಲಿದೆ. 110 ಗ್ರಾಮಗಳಲ್ಲೂ ಒಳಚರಂಡಿ ವ್ಯವಸ್ಥೆ ನಿರ್ಮಾಣ ಕಾಮಗಾರಿ ಅಂತಿಮ ಹಂತದಲ್ಲಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

ನಗರಕ್ಕೆ ಪ್ರತಿದಿನ 77.5 ಕೋಟಿ ಲೀಟರ್ ಹೆಚ್ಚುವರಿ ನೀರನ್ನು ಒದಗಿಸುವ ಕಾವೇರಿ ಐದನೇ ಹಂತದ ಯೋಜನೆ ಪ್ರಗತಿಯಲ್ಲಿದೆ. ₹ 5,550 ಕೋಟಿ ವೆಚ್ಚದ ಯೋಜನೆಯ ಕಾಮಗಾರಿಗಳು ನಿಗದಿಗಿಂತ ವೇಗವಾಗಿ ನಡೆಯುತ್ತಿವೆ. 2023ರಲ್ಲಿ ಯೋಜನೆಯ ಕಾಮಗಾರಿ ಪೂರ್ಣಗೊಳ್ಳಲಿವೆ ಎಂದು ಅಧಿಕಾರಿಗಳು ವಿವರಿಸಿದರು.

ಮುಖ್ಯಮಂತ್ರಿಯವರ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಡಾ.ಇ.ವಿ. ರಮಣ ರೆಡ್ಡಿ, ನಗರಾಭಿವೃದ್ಧಿ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಾಕೇಶ್ ಸಿಂಗ್ ಮತ್ತು ಜಲಮಂಡಳಿ ಅಧ್ಯಕ್ಷ ಎನ್. ಜಯರಾಂ ಸಭೆಯಲ್ಲಿದ್ದರು.

'ವಯಸ್ಸಿನ ನಿರ್ಬಂಧ ಹಾಕದೇ ನೆರವು ನೀಡಿ'

ಸಾಣೇಹಳ್ಳಿ(ಹೊಸದುರ್ಗ): ಹತ್ತಾರು ನಾಟಕಗಳಲ್ಲಿ ಅಭಿನಯಿಸಿದ, ಇಂದಿಗೂ ಕಲೆಯನ್ನೇ ನಂಬಿರುವ ಕಲಾವಿದರಿಗೆ ವಯಸ್ಸಿನ ನಿರ್ಬಂಧ ಹಾಕದೇ ಮೂರು–ನಾಲ್ಕು ತಿಂಗಳು ಆರ್ಥಿಕ ನೆರವನ್ನು ನೀಡಬೇಕು ಎಂದು ತಾಲ್ಲೂಕಿನ ಸಾಣೇಹಳ್ಳಿ ತರಳಬಾಳು ಶಾಖಾ ಮಠದ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಅವರು ಸರ್ಕಾರ ಮತ್ತು ಸಂಸ್ಕೃತಿ ಇಲಾಖೆಯನ್ನು ಒತ್ತಾಯಿಸಿದ್ದಾರೆ.

'ಲಾಕ್‌ಡೌನ್ ಕಾರಣದಿಂದ ರಂಗ ಕಲಾವಿದರು ತುಂಬಾ ತೊಂದರೆ ಅನುಭವಿಸುತ್ತಿದ್ದಾರೆ. ಸರ್ಕಾರ ಕಲಾವಿದರಿಗೆ ಅಲ್ಪಸ್ವಲ್ಪ ಆರ್ಥಿಕ ನೆರವು ನೀಡಲು ಮುಂದಾಗಿರುವುದು ಅಭಿನಂದನಾರ್ಹ. ಆದರೆ, ಕನ್ನಡ ಸಂಸ್ಕೃತಿ ಇಲಾಖೆಯ ನಿರ್ದೇಶಕರು ಕಲಾವಿದರಿಗೆ ವಯಸ್ಸಿನ ನಿರ್ಬಂಧ ವಿಧಿಸಿರುವುದು ವಿಷಾದನೀಯ' ಎಂದರು.

ಸುದ್ದಿ 2 ನಿಮಿಷ

ಆನ್‌ಲೈನ್ ಜೂಜು: ನಿಲುವು ಸ್ಪಷ್ಟಪಡಿಸಲು ನಿರ್ದೇಶನ

ಬೆಂಗಳೂರು: ಆನ್‌ಲೈನ್ ಜೂಜಾಟದ ಬಗ್ಗೆ ಸ್ಪಷ್ಟ ನಿಲುವು ತೆಗೆದುಕೊಳ್ಳುವಂತೆ ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ಮಂಗಳವಾರ ನಿರ್ದೇಶನ ನೀಡಿದೆ.

ನಿಯಮಾವಳಿ ರೂಪಿಸುವ ತನಕ ಎಲ್ಲಾ ರೀತಿಯ ಆನ್‌ಲೈನ್ ಜೂಜಾಟ ನಿಷೇಧಿಸುವಂತೆ ಕೋರಿ ಸಲ್ಲಿಕೆಯಾಗಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ, ಈ ಆದೇಶ ನೀಡಿತು.

'ಕೋವಿಡ್ ಸಂದರ್ಭದಲ್ಲಿ ಮೋಸದ ಆನ್‌ಲೈನ್ ಜೂಜಿಗೆ ಯುವ ಸಮೂಹ ಬಲಿಯಾಗುತ್ತಿದ್ದಾರೆ. ನಿಯಮಾವಳಿ ರೂಪಿಸುವಂತೆ ಮನವಿ ಮಾಡಿದ್ದರೂ ಸರ್ಕಾರ ಪರಿಗಣಿಸಿಲ್ಲ' ಎಂದು ಅರ್ಜಿದಾರರಾದ ದಾವಣಗೆರೆಯ ಡಿ.ಆರ್. ಶಾರದಾ ಆರೋಪಿಸಿದ್ದಾರೆ.

'ಮುಂಬೈನ ಆನ್‌ಲೈನ್ ರಮ್ಮಿ ಫೌಂಡೇಷನ್(ಟಿಒಆರ್‌ಎಫ್) ಅನ್ನು ಪ್ರತಿವಾದಿಯಾಗಿ ಸೇರ್ಪಡೆ ಮಾಡಲಾಗಿದೆ. ಕೇಂದ್ರ ಸರ್ಕಾರವನ್ನು ಪ್ರತಿವಾದಿಯನ್ನಾಗಿ ಮಾಡುವ ಮುನ್ನ ರಾಜ್ಯ ಸರ್ಕಾರ ಈ ವಿಷಯದಲ್ಲಿ ಸ್ಪಷ್ಟ ನಿಲುವು ದಾಖಲಿಸಬೇಕು' ಎಂದು ಪೀಠ ತಿಳಿಸಿತು. ಜೂ.22 ತನಕ ಸಮಯ ನೀಡಿ ವಿಚಾರಣೆ ಮುಂದೂಡಿತು.

'ರಮ್ಮಿ ಒಂದು ಕೌಶಲದ ಆಟವೇ ಹೊರತು ಜೂಜಲ್ಲ. ದಂಡದ ನಿಬಂಧನೆಗಳಿಂದ ಈ ಆಟ ಮುಕ್ತವಾಗಿದೆ. ಆಟಗಾರರ ಆಸಕ್ತಿಗಳನ್ನು ರಕ್ಷಿಸುವ ಕೆಲಸವನ್ನು ಫೆಡರೇಷನ್ ಮಾಡುತ್ತಿದೆ' ಎಂದು ಟಿಒಆರ್‌ಎಫ್ ಅಭಿಪ್ರಾಯಪಟ್ಟಿದೆ.

ಡಾಲರ್ಸ್ ಆದಾಯ ಏರಿಕೆ

ಬೆಂಗಳೂರು: ಗಾರ್ಮೆಂಟ್ಸ್ ವಲಯದ ಪ್ರಮುಖ ಕಂಪನಿಗಳಲ್ಲಿ ಒಂದಾಗಿರುವ ಡಾಲರ್ಸ್ ಇಂಡಸ್ಟ್ರೀಸ್ ಲಿಮಿಟೆಡ್, ತನ್ನ ಹಣಕಾಸು ಫಲಿತಾಂಶ ಪ್ರಕಟಿಸಿದೆ. ಮಾರ್ಚ್ 31ಕ್ಕೆ ಕೊನೆಗೊಂಡ ತ್ರೈಮಾಸಿಕದಲ್ಲಿ ಕಂಪನಿಯ ಆದಾಯವು ₹ 310 ಕೋಟಿ ಆಗಿದೆ. ಇದು ಕಳೆದ ವರ್ಷದ ಇದೇ ತ್ರೈಮಾಸಿಕದಲ್ಲಿನ ಆದಾಯಕ್ಕೆ ಹೋಲಿಸಿದರೆ ಶೇಕಡ 29ರಷ್ಟು ಹೆಚ್ಚು.

2020–21ನೆಯ ಸಾಲಿನಲ್ಲಿ ಕಂಪನಿಯ ಆದಾಯವು ₹ 1,040 ಕೋಟಿ ಆಗಿದೆ. ಹಿಂದಿನ ಹಣಕಾಸು ವರ್ಷದಲ್ಲಿ ಕಂಪನಿಗೆ ಬಂದ ಆದಾಯಕ್ಕೆ ಹೋಲಿಸಿದರೆ ಇದು ಶೇ 7ರಷ್ಟು ಹೆಚ್ಚು ಎಂದು ಪ್ರಕಟಣೆ ತಿಳಿಸಿದೆ.

ನೈಋತ್ಯ ರೈಲ್ವೆ

ಇ–ಟೆಂಡರ್ ಪ್ರಕಟಣೆ ಸಂಖ್ಯೆ 17/ಎಂವೈಎಸ್/2021
ದಿನಾಂಕ : 28–05–2021

ಭಾರತದ ರಾಷ್ಟ್ರಪತಿಗಳ ಪರವಾಗಿ, ಕೆಳಸಹಿದಾರರು, ಕೆಳಗಿನ ಕೆಲಸಗಳಿಗಾಗಿ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ	ಕೆಲಸದ ವಿವರ	ಅಂದಾಜು ಮೌಲ್ಯ
1	ಸಬ್‌ವರ್ಕ್–1 :	ರೂ. 2,22,64,484/-

ಶಿವಮೊಗ್ಗ ಟೌನ್ – ತಾಳಗುಪ್ಪ ಸೆಕ್ಷನ್ : ಒಟ್ಟು ಉದ್ದ 2.800 ಕಿ.ಮೀ.ಗಾಗಿ ಬದಿಯ ಗಟಾರದ ನಿರ್ಮಾಣ ಎಡಬದಿ (ಕಿ.ಮೀ.94/500–700, 97/800–98/000, 99/100–200, 99/350–550, 103/500–900, 154/400–700, 156/600–800, 157/100–300 ಮತ್ತು ಬಲಬದಿ ಕಿ.ಮೀ. 99/100–300, 100/750–850, 153/300–800, 156/600–800). ಸಬ್‌ವರ್ಕ್–2 : ಬೀರೂರು – ಶಿವಮೊಗ್ಗ ಸೆಕ್ಷನ್ : ಬೀರೂರು – ಶಿವಮೊಗ್ಗ ನಡುವೆ 2.450 ಕಿ.ಮೀ. ಉದ್ದಕ್ಕೆ ಬದಿಯ ಗಟಾರದ ನಿರ್ಮಾಣ ಕಿ.ಮೀ. 41/300 – 41/700 (ಎಡಬದಿ ಮತ್ತು ಬಲಬದಿ), 50/000–200 (ಎಡಬದಿ ಮತ್ತು ಬಲಬದಿ), 50/500–850 (ಬಲಬದಿ), 53/800–54/700 (ಬಲಬದಿ).

ಕ್ರ	ಕೆಲಸದ ವಿವರ	ಅಂದಾಜು ಮೌಲ್ಯ
2	ಮೈಸೂರು ವಿಭಾಗ :	ರೂ. 60,94,041/-

ಶಿವಮೊಗ್ಗ – ತಾಳಗುಪ್ಪ ಸೆಕ್ಷನ್ : ಶಿವಮೊಗ್ಗ – ಆನಂದಪುರಂ ನಿಲ್ದಾಣಗಳ ನಡುವೆ ಕಿ.ಮೀ. 63.700 ರಿಂದ ಕಿ.ಮೀ. 113.700 ವರೆಗೆ 50.00 ಕಿ.ಮೀ. ಉದ್ದಕ್ಕೆ ಥ್ರೂ ಫಿಟ್ಟಿಂಗ್ ರಿನ್ಯೂವಲ್.

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 21–06–2021 ರಂದು 11:00 ಗಂಟೆಯವರೆಗೆ

ಹೆಚ್ಚಿನ ವಿವರಗಳಿಗೆ www.ireps.gov.in ಗೆ ಲಾಗ್‌ಆನ್ ಮಾಡಿ.

ವಿಭಾಗೀಯ ರೈಲ್ವೆ ವ್ಯವಸ್ಥಾಪಕರು (ಕಾಮಗಾರಿಗಳು), ಮೈಸೂರು

ಪಿಯುಬಿ/62/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2021–22

ರಾಜ್ಯಸಭೆಗೆ ಸ್ವಪನ್ ದಾಸ್‌ಗುಪ್ತ

ನವದೆಹಲಿ: ಈಚೆಗೆ ನಡೆದ ಪಶ್ಚಿಮ ಬಂಗಾಳ ವಿಧಾನಸಭೆ ಚುನಾವಣೆಯಲ್ಲಿ ಸೋತಿದ್ದ ಬಿಜೆಪಿ ನಾಯಕ ಸ್ವಪನ್ ದಾಸ್‌ಗುಪ್ತ ಅವರನ್ನು ರಾಜ್ಯಸಭೆಗೆ ನಾಮನಿರ್ದೇಶನ ಮಾಡಲಾಗಿದೆ.

ಈ ಮೊದಲು ಅವರು ರಾಜ್ಯಸಭೆಯ ಸದಸ್ಯರಾಗಿದ್ದರು. ಆದರೆ, ಚುನಾವಣೆಯಲ್ಲಿ ಸ್ಪರ್ಧಿಸುವ ಉದ್ದೇಶದಿಂದ ಆ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ಈಗ ಪುನಃ ಅವರನ್ನು ನಾಮನಿರ್ದೇಶನ ಮಾಡಿ ಆದೇಶ ಹೊರಡಿಸಲಾಗಿದೆ.

ಮನೆ ಬಾಗಿಲಿಗೆ ಔಷಧ, ಆಹಾರದ ಪೊಟ್ಟಣ ತಲುಪಿಸುತ್ತಿರುವ ಶಿಕ್ಷಕಿ

ನೊಂದವರ ನೋವಿಗೆ ಮಿಡಿಯುವ ದಶ್ಮಿ

• ಜಿ.ಶಿವಕುಮಾರ

ಪ್ರಜಾವಾಣಿ ವಿಶೇಷ

ಬೆಂಗಳೂರು: ಅವರದ್ದು ಸುಖೀ ಕುಟುಂಬ. ಕೋವಿಡ್‌ನಿಂದ ಸೃಷ್ಟಿಯಾಗಿರುವ ಸಂದಿಗ್ಧ ಪರಿಸ್ಥಿತಿಯಲ್ಲಿ ಗಂಡ ಹಾಗೂ ಮುದ್ದು ಮಗಳ ಜೊತೆ ಮನೆಯಲ್ಲಿ ಹಾಯಾಗಿ ಕಾಲ ಕಳೆಯಬಹುದಿತ್ತು. ಅದಕ್ಕೆ ಮನಸ್ಸು ಒಪ್ಪಲಿಲ್ಲ. ಏನಾದರೂ ವಿಶೇಷವಾದದ್ದನ್ನು ಸಾಧಿಸಬೇಕೆಂಬ ಹಂಬಲ ಹೊತ್ತ ಅವರು ಈ ಸಂಕಷ್ಟದ ಕಾಲದಲ್ಲಿ ನೊಂದವರ ನೋವಿಗೆ ಮಿಡಿಯುತ್ತಿದ್ದಾರೆ.

ಆ ಮಹಿಳೆಯ ಹೆಸರು ದಶ್ಮಿ ರಾಣಿ. ವೃತ್ತಿಯಲ್ಲಿ ವಿಜ್ಞಾನ ಶಿಕ್ಷಕಿ. ಚಂದ್ರಾ ಲೇಔಟ್‌ನಲ್ಲಿ ನೆಲೆಸಿರುವ ಅವರಿಗೆ ಬೈಕ್ ಓಡಿಸುವುದೆಂದರೆ ಬಲು ಪ್ರೀತಿ. ಕನ್ಯಾಕುಮಾರಿಯಿಂದ ಕಾಶ್ಮೀರ, ಬೆಂಗಳೂರಿನಿಂದ ಕೋಲ್ಕತ್ತ, ರಾಮೇಶ್ವರ, ಉತ್ತರಾಖಂಡ ಹೀಗೆ ಅನೇಕ ಪ್ರಸಿದ್ಧ ಸ್ಥಳಗಳಿಗೆ ಬೈಕ್‌ನಲ್ಲೇ ಪ್ರಯಾಣಿಸಿ ಸೈ ಎನಿಸಿಕೊಂಡಿದ್ದಾರೆ.

ರಾಯಲ್ ಎನ್‌ಫೀಲ್ಡ್ ಇಂಟರ್‌ಸೆಪ್ಟರ್ 650 ಸಿಸಿ ಬೈಕ್‌ನಲ್ಲಿ ನೂರಾರು ಕಿ.ಮೀ. ಸಂಚರಿಸಿ ಕೋವಿಡೇತರ ರೋಗಿಗಳಿಗೆ ಔಷಧ ಒದಗಿಸುವ ಕೆಲಸ ಮಾಡುತ್ತಿದ್ದಾರೆ. ಕೋವಿಡ್‌ನಿಂದಾಗಿ ಮನೆ ಆರೈಕೆಯಲ್ಲಿರುವ ಬೆಂಗಳೂರಿನ ನಿವಾಸಿಗಳಿಗೆ ಆಹಾರದ ಪೊಟ್ಟಣಗಳನ್ನೂ ಪೂರೈಸುತ್ತಾ ಎಲ್ಲರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ.

ಬುಲೆಟ್ ಬೈಕ್‌ನೊಂದಿಗೆ ದಶ್ಮಿ ರಾಣಿ

ನಿರಾಶ್ರಿತ ಮಹಿಳೆಗೆ ಆಹಾರದ ಪೊಟ್ಟಣ ನೀಡಿದ ಕ್ಷಣ

ಕೋವಿಡ್ ಕಾಲದಲ್ಲಿ ಕುಗ್ರಾಮಗಳಲ್ಲಿ ನೆಲೆಸಿರುವ ವೃದ್ಧರು ಹಾಗೂ 50 ಬಡ ಕುಟುಂಬಗಳಿಗೆ ಅಗತ್ಯ ಔಷಧ ತಲುಪಿಸಿರುವ ಅವರು, 1,000 ಮಂದಿಗೆ ಸ್ಯಾನಿಟರಿ ಪ್ಯಾಡ್ ಹಾಗೂ 50 ಕುಟುಂಬಗಳಿಗೆ ದಿನಸಿ ಕಿಟ್ ಕೂಡ ವಿತರಿಸಿದ್ದಾರೆ.

'ಹೋದ ವರ್ಷ ನಾನು ಕೋವಿಡ್ ಸೇನಾನಿಯಾಗಿ ಕೆಲಸ ಮಾಡಿದ್ದೆ. ಬೈಕ್‌ನಲ್ಲೇ ಹಳ್ಳಿಗಳಿಗೆ ಹೋಗಿ ಔಷಧ ನೀಡಿ ಬರುತ್ತಿದ್ದೆ. ಅವರು ಈಗಲೂ ಕರೆ ಮಾಡಿ ಔಷಧ ಕೇಳುತ್ತಿದ್ದಾರೆ. ಜೊತೆಗೆ ಕೆಲವು ಸ್ವಯಂಸೇವಾ ಸಂಸ್ಥೆಗಳ ಸದಸ್ಯರು ಕರೆ ಮಾಡಿ ಮನೆ ಆರೈಕೆಯಲ್ಲಿರುವವರ ವಿಳಾಸ ಹೇಳುತ್ತಾರೆ. ಅಲ್ಲಿಗೆ ಹೋಗಿ ಔಷಧ ಕೊಟ್ಟು ಬರುತ್ತೇನೆ' ಎಂದು ದಶ್ಮಿ 'ಪ್ರಜಾವಾಣಿ'ಗೆ ತಿಳಿಸಿದರು.

> ಕಷ್ಟದಲ್ಲಿರುವವರಿಗೆ ಕೈಲಾದಷ್ಟು ಸಹಾಯ ಮಾಡಬೇಕು ಎಂದು ಅಪ್ಪ ಹೇಳುತ್ತಿದ್ದರು. ಅವರ ಮಾತುಗಳೇ ನನ್ನ ಈ ಕೆಲಸಕ್ಕೆ ಪ್ರೇರಣೆ
> **ದಶ್ಮಿ ರಾಣಿ**

'ಬಿಡದಿಯಲ್ಲಿ ಬಡ ಮಹಿಳೆಯೊಬ್ಬರು ಎಚ್‌ಐವಿಯಿಂದ ಬಳಲುತ್ತಿದ್ದರು. ಅವರಿಗೆ ತುರ್ತಾಗಿ ಔಷಧ ಬೇಕಿತ್ತು. ಅದನ್ನು ರಾಮನಗರದಿಂದಲೇ ತಂದು ಕೊಡಬೇಕಿತ್ತು. ಸ್ವಯಂಸೇವಾ ಸಂಘಟನೆಯಿಂದ ಕರೆ ಬಂದ ಕೂಡಲೇ ಬೈಕ್ ಏರಿ ಹೊರಟೆ. ಅಲ್ಲಿಗೆ ಹೋದ ಮೇಲೆ ರೋಗಿಯ ಸಹಿ ಬೇಕು ಎಂದರು. ಕೂಡಲೇ ಬಿಡದಿಗೆ ಬಂದು ಮಹಿಳೆಯನ್ನು ಕರೆದುಕೊಂಡು ಹೋಗಿ ಔಷಧ ಕೊಡಿಸಿ ಮನೆಗೆ ಬಿಟ್ಟು ಬಂದೆ. ಒಮ್ಮೆ ತುಮಕೂರಿನ ಕುಣಿಗಲ್ ರಸ್ತೆಯಲ್ಲಿರುವ ಗೂಳೂರಿಗೂ ಹೋಗಿ ವ್ಯಕ್ತಿಯೊಬ್ಬರಿಗೆ ಔಷಧ ತಲುಪಿಸಿದ್ದೆ' ಎಂದರು.

ವಿಶೇಷ ಪ್ಯಾಕೇಜ್: ಅತಿಥಿ ಉಪನ್ಯಾಸಕರ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೋವಿಡ್ ಎರಡನೇ ಅಲೆ ಮತ್ತು ಲಾಕ್‌ಡೌನ್‌ನಿಂದ ಅತಿಥಿ ಉಪನ್ಯಾಸಕರ ಜೀವನ ಅತಂತ್ರವಾಗಿದ್ದು, ಸರ್ಕಾರ ವಿಶೇಷ ಪ್ಯಾಕೇಜ್ ಘೋಷಿಸುವ ಮೂಲಕ ನೆರವು ನೀಡಬೇಕು' ಎಂದು ಆಗ್ರಹಿಸಿ ಪ್ರತಿಭಟನೆ ನಡೆಸಲು ರಾಜ್ಯ ಅತಿಥಿ ಉಪನ್ಯಾಸಕರ ಹೋರಾಟ ಸಮಿತಿ ಮುಂದಾಗಿದೆ.

'ಆನ್‌ಲೈನ್ ತರಗತಿಗಳಿಗೂ ಅತಿಥಿ ಉಪನ್ಯಾಸಕರನ್ನು ನೇಮಿಸಿಕೊಳ್ಳಲು ಉನ್ನತ ಶಿಕ್ಷಣ ಇಲಾಖೆ ಹೇಳಿದೆ. ಆದರೂ ಅದು ಕಾರ್ಯರೂಪಕ್ಕೆ ಬಂದಿಲ್ಲ. ಹಲವು ಬಾರಿ ಹೋರಾಟ ನಡೆಸಿ ಸರ್ಕಾರಕ್ಕೆ ಮನವಿ ಸಲ್ಲಿಸಿದ್ದರೂ ಕೊರೊನಾ ಅವಧಿಯ ಪರಿಹಾರ ಪ್ಯಾಕೇಜ್ ಘೋಷಿಸಿಲ್ಲ. ಕೊರೊನಾದಿಂದ ಮೃತಪಟ್ಟ ಅತಿಥಿ ಉಪನ್ಯಾಸಕರ ಕುಟುಂಬಗಳಿಗೆ ಸೂಕ್ತ ಪರಿಹಾರ ನೀಡಿಲ್ಲ. ಹೀಗಾಗಿ, ಪ್ರತಿಭಟನೆ ನಡೆಸುವುದು ಅನಿವಾರ್ಯವಾಗಿದೆ' ಎಂದು ಸಮಿತಿಯ ಸಂಚಾಲಕ ಸಿದ್ಧಲಿಂಗ ಬಾಗೇವಾಡಿ ತಿಳಿಸಿದ್ದಾರೆ.

'ಅತಿಥಿ ಉಪನ್ಯಾಸಕರಿಗೆ ಈವರೆಗೂ ಯಾವುದೇ ರೀತಿಯ ಸೇವಾ ಭದ್ರತೆ ಖಾತ್ರಿಪಡಿಸಿಲ್ಲ. ಇದು ಸರ್ಕಾರದ ನಿರ್ಲಕ್ಷ್ಯ ಧೋರಣೆ. ಸರ್ಕಾರದ ಗಮನ ಸೆಳೆಯಲು ಇದೇ 3ರಂದು ರಾಜ್ಯದಾದ್ಯಂತ ಪ್ರತಿಭಟನೆ ನಡೆಸಲು ತೀರ್ಮಾನಿಸಿದ್ದೇವೆ' ಎಂದು ಅವರು ತಿಳಿಸಿದ್ದಾರೆ.

ಕೆನರಾ ಬ್ಯಾಂಕ್ Canara Bank
ಭಾರತ ಸರ್ಕಾರದ ಒಂದು ಉದ್ಯಮ | A Government of India Undertaking
ಸಿಂಡಿಕೇಟ್ Syndicate | Together We Can

ಆಸ್ತಿ ಮತ್ತು ಭವನ ವಿಭಾಗ, ವೃತ್ತ ಕಛೇರಿ, ನಂ.86, ಎಂ.ಜಿ ರಸ್ತೆ, ಬೆಂಗಳೂರು -560001. ದೂ: 25310038

ಗುತ್ತಿಗೆಗಾಗಿ ಸ್ಥಳದ ಅವಶ್ಯಕತೆ

ಕೆಳಕಂಡ ಪ್ರದೇಶ / ಸ್ಥಳಗಳಲ್ಲಿ ಶಾಖೆಗಳಿಗೆ ನಮೂದಿಸಿರುವ ವಿದ್ಯುತ್ ಪ್ರಮಾಣ ಮತ್ತು ವಾಹನ ನಿಲುಗಡೆಗೆ ಸಾಕಾಗುವಷ್ಟು ಸ್ಥಳಾವಕಾಶವಿರುವ ವಾಣಿಜ್ಯ ಸ್ಥಳಕ್ಕಾಗಿ ಸ್ವತ್ತಿನ ಮಾಲೀಕರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ :

ಕ್ರ. ಸಂ.	ಸ್ಥಳ	ವಿದ್ಯುತ್ ಅವಶ್ಯಕತೆ	ಕಾರ್ಪೆಟ್ ಜಾಗ ಚ.ಅಡಿಗಳಲ್ಲಿ (ಅಂದಾಜು)
01	ಮಹಾಲಕ್ಷ್ಮಿ ಲೇಔಟ್, ಬೆಂಗಳೂರು	25 KW	3200 ಚ.ಅಡಿ
02	ರಾಜಾಜಿ ನಗರ್, 1ನೇ ಬ್ಲಾಕ್, ಬೆಂಗಳೂರು	25 KW	2500 ಚ.ಅಡಿ
03	ಯಶವಂತಪುರ, ಬೆಂಗಳೂರು	25 KW	2500 ಚ.ಅಡಿ
04	ಕೆಂಪೇಗೌಡ ನಗರ, ಬೆಂಗಳೂರು-18	25 KW	2500 ಚ.ಅಡಿ
05	ಬಾಗಲೂರು, ಬೆಂಗಳೂರು	15 KW	1900 ಚ.ಅಡಿ
06	ತಾವರೆಕೆರೆ, ಮಾಗಡಿ ರಸ್ತೆ, ಬೆಂಗಳೂರು	15 KW	1500 ಚ.ಅಡಿ

ವಿವರಗಳನ್ನು ಬ್ಯಾಂಕಿನ ವೆಬ್‌ಸೈಟ್ : http://www.canarabank.comನಲ್ಲಿ ಪ್ರಕಟಿಸಲಾಗಿದೆ. ಅಗತ್ಯವಿರುವ ಅರ್ಜಿ ನಮೂನೆಗಳನ್ನು, ಮೇಲ್ಕಂಡ ಕಛೇರಿ ಅಥವಾ ಸಂಬಂಧಪಟ್ಟ ಶಾಖೆಗಳಿಂದ ಪಡೆಯಬಹುದು, ಇಲ್ಲವೆ ಬ್ಯಾಂಕಿನ ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದುದಾಗಿದೆ. ಅರ್ಜಿಗಳನ್ನು ಈ ಮೇಲ್ಕಂಡ ಕಛೇರಿಯಲ್ಲಿ ಸಲ್ಲಿಸಲು ಕೊನೆಯ ದಿನಾಂಕ 14-06-2021 ರ ಮಧ್ಯಾಹ್ನ. 3.00 ಗಂಟೆಯೊಳಗೆ.

ಇತರೆ ತಿದ್ದುಪಡಿಗಳಿದ್ದಲ್ಲಿ / ಮಾರ್ಪಾಡುಗಳಿದ್ದಲ್ಲಿ, ಬ್ಯಾಂಕಿನ ವೆಬ್‌ಸೈಟ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು. "ಮಧ್ಯವರ್ತಿಗಳಿಗೆ ಅವಕಾಶವಿಲ್ಲ"

ಸಹಿ/-
ಸಹಾಯಕ ಮಹಾ ಪ್ರಬಂಧಕರು
ಬೆಂಗಳೂರು ವೃತ್ತ

ಸ್ಥಳ : ಬೆಂಗಳೂರು
ದಿನಾಂಕ : 02-06-2021

'ನುಡಿದಂತೆ ನಡೆವ ನಾಯಕ ದೇವೇಗೌಡ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡರು ನುಡಿದಂತೆ ನಡೆಯುವ ನಾಯಕ. ಅವರ ರಾಜಕೀಯ ಬದುಕಿನಲ್ಲಿ ಇದಕ್ಕೆ ಸಾಕಷ್ಟು ನಿದರ್ಶನಗಳಿವೆ' ಎಂದು ಪತ್ರಕರ್ತ ಸುಗತ ಶ್ರೀನಿವಾಸರಾಜು ತಿಳಿಸಿದರು.

ದೇವೇಗೌಡ ಅವರು ಪ್ರಧಾನಿಯಾಗಿ 25 ವರ್ಷ ಪೂರೈಸಿದ ಹಿನ್ನೆಲೆಯಲ್ಲಿ ಜೆಡಿಎಸ್ ಹಮ್ಮಿಕೊಂಡಿದ್ದ 'ಸಾಧನೆ ಸ್ಮರಣೆ ಅಭಿಯಾನ'ದಲ್ಲಿ ಅವರು ಅಭಿಪ್ರಾಯ ಹಂಚಿಕೊಂಡರು.

'ಪ್ರಧಾನಿ ಹುದ್ದೆ ಅಲಂಕರಿಸಿದ ಬಳಿಕ ಸಂಸತ್ ಸದಸ್ಯರನ್ನು ಉದ್ದೇಶಿಸಿ ಮಾತನಾಡಿದ್ದ ಅವರು ಈ ಹುದ್ದೆಯಲ್ಲಿರುವಷ್ಟು ದಿನ ಬಡವರು, ತುಳಿತಕ್ಕೊಳಗಾದವರು, ಅಲ್ಪಸಂಖ್ಯಾತರ ಪರವಾಗಿ ಕೆಲಸ ಮಾಡುತ್ತೇನೆ ಎಂದಿದ್ದರು. ಪಲಾಯನವಾದ ಅನುಸರಿಸುವುದಿಲ್ಲ ಎಂದು ಸ್ಪಷ್ಟಪಡಿಸಿದ್ದರು. ನಿರ್ಜೀವ ವಸ್ತುಗಳಾಗಿರುವ ಸಂಸತ್ ಭವನದ ಎಲ್ಲಾ ಕಂಬಗಳಿಂದಲೂ ದೇವರು ಪ್ರತ್ಯಕ್ಷನಾಗಬಲ್ಲ ಎಂಬುದನ್ನೂ ತಿಳಿಸಿದ್ದರು' ಎಂದು ಸ್ಮರಿಸಿದರು.

'ದೇವೇಗೌಡರು ಸರಳವಾಗಿ ಬದುಕಿದವರು. ಸಂಸದರು ಮಧ್ಯರಾತ್ರಿ ಕರೆ ಮಾಡಿದರೂ ಸ್ವೀಕರಿಸಿ ಮಾತನಾಡುತ್ತಿದ್ದರು. ಅವರು ದೇಶ ಕಂಡ ಅಪರೂಪದ ರಾಜಕಾರಣಿ. ಬಹಳ ಅಧ್ಯಯನಶೀಲ ರಾಜಕಾರಣಿಯೂ ಹೌದು. ಸರ್ಕಾರಿ ವರದಿಗಳನ್ನು ಸೂಕ್ಷ್ಮವಾಗಿ ಅಧ್ಯಯನ ಮಾಡುತ್ತಿದ್ದರು. ಅವರಿಗೆ ಅದ್ಭುತವಾದ ಗ್ರಹಿಕೆ ಶಕ್ತಿ ಇದೆ. ತಮ್ಮ ಅನುಭವವನ್ನು ಸಾಮಾನ್ಯ ಜ್ಞಾನವೆಂಬ ರೀತಿಯಲ್ಲಿ ಇನ್ನೊಬ್ಬರಿಗೆ ವರ್ಗಾಯಿಸುತ್ತಾರೆ. ಇದು ಅವರ ವಿಶೇಷತೆ. ಅವರ ಕಾಲದಲ್ಲಿ ಕೃಷಿ ವಲಯದಲ್ಲಿ ಶೇ 8ರಷ್ಟು ಅಭಿವೃದ್ಧಿ ಸಾಧಿಸಲಾಗಿತ್ತು' ಎಂದರು.

'ದೇವೇಗೌಡರು ಗಂಗಾ ನದಿಯನ್ನು ಬಾಂಗ್ಲಾದೇಶಕ್ಕೆ ಹರಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ಹೀಗಾಗಿ ಅಲ್ಲಿನ ಜನ ಅವರನ್ನು ಪೂಜ್ಯಭಾವದಿಂದ ಕಾಣುತ್ತಾರೆ. 40 ವರ್ಷದಿಂದ ಕಗ್ಗಂಟಾಗಿದ್ದ ಸಮಸ್ಯೆಯನ್ನು ಅವರು ಎರಡೇ ವಾರದಲ್ಲಿ ಪರಿಹರಿಸಿದ್ದರು. ಇದು ಅವರ ರಾಜಕೀಯ ಚಾಣಾಕ್ಷತನಕ್ಕೆ ಸಾಕ್ಷಿಯಂತಿದೆ' ಎಂದು ಹೇಳಿದರು.

ಚೀನಾ: 41 ವರ್ಷದ ವ್ಯಕ್ತಿಯಲ್ಲಿ ಹಕ್ಕಿ ಜ್ವರ

ಬೀಜಿಂಗ್ (ರಾಯಿಟರ್ಸ್): ಚೀನಾದ ಪಶ್ಚಿಮ ಜಿಯಾಂಗ್ಸು ಪ್ರಾಂತ್ಯದ 41 ವರ್ಷದ ವ್ಯಕ್ತಿಯೊಬ್ಬರಲ್ಲಿ ಎಚ್‌10ಎನ್‌3 ತಳಿಯ ಹಕ್ಕಿ ಜ್ವರ ಪತ್ತೆಯಾಗಿದೆ.

ಈ ತಳಿಯಿಂದ ಸೋಂಕಿಗೆ ಒಳಪಟ್ಟ ಮೊದಲ ಮಾನವ ಪ್ರಕರಣ ಇದಾಗಿದೆ ಎಂದು ಚೀನಾದ ರಾಷ್ಟ್ರೀಯ ಆರೋಗ್ಯ ಆಯೋಗ (ಎನ್‌ಎಚ್‌ಸಿ) ಮಂಗಳವಾರ ತಿಳಿಸಿದೆ.

ಜೆನ್‌ಜಿಯಾಗ್ ನಗರದ ನಿವಾಸಿಯಾದ ಆ ವ್ಯಕ್ತಿಯು ಜ್ವರ ಮತ್ತು ಇತರ ರೋಗ ಲಕ್ಷಣಗಳಿಂದ ಏಪ್ರಿಲ್ 28ರಂದು ಆಸ್ಪತ್ರೆಗೆ ದಾಖಲಾದರು. ಅವರಿಗೆ ಎಚ್‌10ಎನ್‌3 ತಳಿಯ ಹಕ್ಕಿ ಜ್ವರದ ಸೋಂಕು ಪತ್ತೆಯಾಗಿದೆ ಎಂದು ಎನ್‌ಎಚ್‌ಸಿ ಪ್ರಕಟಣೆ ತಿಳಿಸಿದೆ. ಆದರೆ ಆ ವ್ಯಕ್ತಿಗೆ ಹೇಗೆ ಸೋಂಕು ತಗುಲಿತು ಎಂಬುದರ ವಿವರಗಳನ್ನು ಆಯೋಗ ನೀಡಿಲ್ಲ.

'ಎಚ್‌10ಎನ್‌3 ಕಡಿಮೆ ರೋಗಕಾರಕ. ಕೋಳಿಗಳಲ್ಲಿ ಕಂಡು ಬರುವ ಈ ವೈರಸ್ ತಳಿ ವ್ಯಾಪಕವಾಗಿ ಹರಡುವ ಸಾಧ್ಯತೆ ತೀರ ಕಡಿಮೆ' ಎಂದು ಎನ್‌ಎಚ್‌ಸಿ ತಿಳಿಸಿದೆ.

4ರಂದು ಯುವಸಾಧಕರ ಸಾಧನೆ ಮೆಲುಕು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಿಮೋವೇ' ಸಂಸ್ಥೆಯು ವಿಶ್ವ ಪರಿಸರ ದಿನದ ಅಂಗವಾಗಿ 'ಯೂತ್ ಫಾರ್ ನೇಚರ್' ಎಂಬ ಹ್ಯಾಷ್‌ಟ್ಯಾಗ್ ಅಡಿಯಲ್ಲಿ ವಿಶೇಷ ಕಾರ್ಯಕ್ರಮ ಹಮ್ಮಿಕೊಂಡಿದೆ.

ಪರಿಸರ ಪುನಸ್ಥಾಪನೆಗೆ ಶ್ರಮಿಸುತ್ತಿರುವ ಎಂಟು ಯುವ ಉದ್ಯಮಿಗಳನ್ನು ಈ ಕಾರ್ಯಕ್ರಮಕ್ಕೆ ಆಹ್ವಾನಿಸಲಾಗಿದೆ. ಇದೇ 4ರಂದು ನಡೆಯುವ ಕಾರ್ಯಕ್ರಮದಲ್ಲಿ ಇವರು ತಮ್ಮ ಸಾಧನೆಯ ಹಾದಿಯನ್ನು ಮೆಲುಕು ಹಾಕಲಿದ್ದಾರೆ.

'ಸರ್ಕಾರಿ ಶಾಲೆಗಳನ್ನು ಶೈಕ್ಷಣಿಕವಾಗಿ ಅಭಿವೃದ್ಧಿಪಡಿಸುವುದು ನಮ್ಮ ಸಂಸ್ಥೆಯ ಮೂಲ ಧ್ಯೇಯ. ಸಂಸ್ಥೆಯ ವತಿಯಿಂದ ಸಾಮಾಜಿಕ ಜಾಗೃತಿ ಮೂಡಿಸುವ ಕಾರ್ಯಕ್ರಮಗಳನ್ನೂ ಹಮ್ಮಿಕೊಳ್ಳಲಾಗಿದೆ. ವಿಶ್ವ ಪರಿಸರ ದಿನದ ಅಂಗವಾಗಿ ಮೂರು ವರ್ಷಗಳಿಂದ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸುತ್ತಾ ಬಂದಿದ್ದೇವೆ. ದಿನನಿತ್ಯದ ಬದುಕಿನಲ್ಲಿ ಬದಲಾವಣೆ ತುಂಬಾ ಅಗತ್ಯ. ನಾಗರಿಕರಿಗೆ ಇದನ್ನು ಮನವರಿಕೆ ಮಾಡಿಕೊಡುವ ಉದ್ದೇಶದಿಂದ 'ಆಲ್ಟರ್‌ನೇಟಿವ್' ಹೆಸರಿನಲ್ಲಿ ಕಾರ್ಯಕ್ರಮ ಶುರು ಮಾಡಿದೆವು. ಸಂಗೀತ, ಕಲೆ ಹಾಗೂ ವಿಚಾರ ವಿನಿಮಯದ ಮೂಲಕ ಜನರನ್ನು ತಲುಪಬೇಕು ಎಂಬ ಉದ್ದೇಶದಿಂದ ರಿಕ್ಕಿ ಕೇಜ್, ವಿಲಾಸ್ ನಾಯಕ್ ಮತ್ತಿತರ ಸಾಧಕರನ್ನು ಆಹ್ವಾನಿಸಿ ಕಾರ್ಯಕ್ರಮಗಳನ್ನು ನಡೆಸಿದ್ದೆವು' ಎಂದು ಸಂಸ್ಥೆಯ ಸಂಸ್ಥಾಪಕ ನಿರ್ದೇಶಕ ವಿನಯ್ ಶಿಂಧೆ ತಿಳಿಸಿದರು.

'ಈ ಬಾರಿ ಧ್ರುವ ಪಾಟೀಲ್, ಪೂಜಾ ರೈ ಮತ್ತಿತರರು ಮಾತನಾಡಲಿದ್ದಾರೆ. ಸಮಾರಂಭದ ನಂತರ ನಡೆಯುವ ದುಂಡು ಮೇಜಿನ ಸಭೆಯಲ್ಲಿ ಇವರು 'ಪರಿಸರ ಸಮತೋಲನ ಪುನಸ್ಥಾಪನೆಯಲ್ಲಿ ಯುವಕರ ಪಾತ್ರ' ವಿಷಯದ ಕುರಿತು ಚರ್ಚಿಸಲಿದ್ದಾರೆ' ಎಂದರು.

ನಗರದಲ್ಲಿ ಇಂದು

ಕೋವಿಡ್ ಸೇನಾನಿಗಳು, ಕೂಲಿ ಕಾರ್ಮಿಕರಿಗೆ ದಿನಸಿ ಕಿಟ್ ಹಾಗೂ ಅಗತ್ಯ ವಸ್ತುಗಳ ವಿತರಣೆ: ಚಾಲನೆ–ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಅತಿಥಿಗಳು–ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾರೆಡ್ಡಿ, ಸಲೀಂ ಅಹಮದ್, ವಿಧಾನ ಪರಿಷತ್ ಸದಸ್ಯ ಬಿ.ಕೆ. ಹರಿಪ್ರಸಾದ್, ಕೆ.ಎಂ.ನಾಗರಾಜ್, ನೇತೃತ್ವ–ಯು.ಬಿ. ವೆಂಕಟೇಶ್, ಆಯೋಜನೆ–ಬಸವನಗುಡಿ ಕ್ಷೇತ್ರದ ಕಾಂಗ್ರೆಸ್ ಘಟಕ, ಸ್ಥಳ–ರಾಮರಾವ್ ಆಟದ ಮೈದಾನ, ನ್ಯೂ ಕೆಂಪೇಗೌಡ ಬಡಾವಣೆ, ಕತ್ರಿಗುಪ್ಪೆ, ಬೆಳಿಗ್ಗೆ 10.30.



ವಿ.ಗೋಪಾಲ ಗೌಡ

ಕೊರೊನಾ ಕಾಲದ ಮಹಿಳೆಯರ ಸಂಕಟಗಳ ಪರಿಹಾರಕ್ಕೆ ಸಹಾಯವಾಣಿ ಆಪ್ತ ಸಲಹಾ ಕೇಂದ್ರ ಉದ್ಘಾಟನೆ–ನಿವೃತ್ತ ನ್ಯಾಯಮೂರ್ತಿ ವಿ.ಗೋಪಾಲಗೌಡ, ಆಯೋಜನೆ–ಅಖಿಲ ಭಾರತ ವಕೀಲರ ಸಂಘಟನೆ, ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ, ಸಂಜೆ 4 (ಆನ್‌ಲೈನ್ ಕಾರ್ಯಕ್ರಮ)

'ಲಕ್ಷ್ಮೀಶ ಕವಿಯ ಜೈಮಿನಿ ಭಾರತ' ಕಾವ್ಯ, ಗಮಕ, ವ್ಯಾಖ್ಯಾನ: ಗಮಕ–ಸುಮಾ ಪ್ರಸಾದ್, ವ್ಯಾಖ್ಯಾನ–ಸಂಪತ್ ಕುಮಾರ್, ಆಯೋಜನೆ–ಕರ್ನಾಟಕ ಸಾಹಿತ್ಯ ಅಕಾಡೆಮಿ, ಸಂಜೆ 4.30 (ಆನ್‌ಲೈನ್ ಕಾರ್ಯಕ್ರಮ).

ಎಚ್.ಎಸ್.ದೊರೆಸ್ವಾಮಿ ಅವರಿಗೆ ನುಡಿನಮನ: ಅತಿಥಿಗಳು–ಬರಗೂರು ರಾಮಚಂದ್ರಪ್ಪ, ಬಿ.ಕೆ.ಚಂದ್ರಶೇಖರ್, ಎಸ್. ಚಂದ್ರಶೇಖರ್, ರವಿಕೃಷ್ಣಾರೆಡ್ಡಿ, ಅಧ್ಯಕ್ಷತೆ–ಕೆ.ಟಿ.ಶ್ರೀಕಂಠೇಗೌಡ, ಆಯೋಜನೆ–ರಾಜ್ಯ ಪದವಿಪೂರ್ವ ಕಾಲೇಜುಗಳ ಉಪನ್ಯಾಸಕರ ಸಂಘ ಹಾಗೂ ಪ್ರಾಂಶುಪಾಲರ ಸಂಘ, ಸಂಜೆ 5 (ಆನ್‌ಲೈನ್ ಕಾರ್ಯಕ್ರಮ)

ಬರಗೂರು ರಾಮಚಂದ್ರಪ್ಪ

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080 - 45557160 /161/ 162/ 163/ 164 9845114560 / 9731810277/ 9886213331

JOB OPPORTUNITIES

Teachers/ Professors

WANTED Computer & Subject Teachers for India Literacy Project (NGO) Qual: B.Sc – B.Ed, B.E, MCA and M.Sc working knowledge of Computers, MS Office. Location: Raichur, Gulbarga, Bidar, Yadgir, Koppal, Bellary & Vijayanagara No.of Posts: 24 Send your resume/ CV to jobs@ilpnet.org

NIRMAN INTERNATIONAL PUBLIC SCHOOL, Near Automated RTO, 7th Block, Vishweshwaraiah Layout, Bangalore-91 Requires efficient LADY TEACHERS with BEd to teach English and Social Science for Primary and High School.Contact: 8123030731. Email: nirmanorganisation@gmail.com

Situation Required

WANTED JOB as WARDEN, Female, 10 Years Experienced, Any Residency School/ College/ Ladies Hostel. 7899669743.

CONNECT

FUSION MONT™ Svasthya VITAMIN - Enriched Functional Water Inviting Area Dealers for Retail Distribution & Online Deliveries Contact: 9845013347

Part-Time Jobs

MNC REQUIRED Software engineers business persons, homemakers educated unemployees earn 35-40k without invest 7019215243/ 9886641282

Hospital & Medical Jobs

WANTED EXPERIENCED B.Sc NURSE for the post RESIDENTIAL NURSE. Apply: medicopastoralassociation@gmail.com /7411485215

RENTAL PROPERTIES

Accommodation Available

Flats

TWO BEDROOM excellent furnished flat, Indira Nagar. Generator. Parking. 9986187882

PERSONAL

Change of Name

I,NEESHA RAJ D/o Tapan Bidyananda R/a #1, 2nd Cross, FCI Road, Muneshwara Layout, Kadugodi Post, Bangalore-560067 have changed my name to NISHA BIDYANANDA, affidavit dated 01.06.2021 before notary Veena.J, Bangalore-67.

DH Classifieds BOOK YOUR AD FOR SUNDAY & GET 50% OFF ON WEEKDAYS For Lineage & Single/ Multi Column Classifieds Display ads For more information contact: 9880856233 /9845114560 9886213331

CAUTION NOTICE Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers. GM-Advertisement

Om Shri Guru Basava Lingaya Namaha
HIREMATH SAMSTHAN VIDYAPEETH TRUST(R), BHALKI
SRI CHANNABASAVESHWARA GURUKUL PU COLLEGE
KARDYAL - TQ. BHALKI - DIST. BIDAR - 585 413 - www.cbgurukul.in
ONE CRORE SCHOLARSHIP OPPORTUNITY
FOR 10TH CBSE/ICSE/IGCSE STUDENTS
ONLINE EXAMINATION ON 6TH JUNE 2021
SUNDAY AT 10-00 AM TO 11-40 AM
JEE MAINS RESULT 2021 Above 95% 23 Students Above 90% 50 Students
COLLEGE HIGHEST PERCENTILE 99.11%
2019-20 COMPETITIVE EXAMINATION RESULT: MBBS 84, IIT 07, NIT 18, DENTAL 37, BAMS/BHMS 103, FARM SCIENCE 64, ENGINEERING 296, PHARMACY 28
OVERALL THEORY RESULT 98.55%
For registration Follow the Link or Scan QR Code https://test.edofox.com/registration/bidar.php
GENERAL FEATURES OF THE GURUKUL: 60 Acres of campus with scenic nature; Excellent infrastructure; Smart Classroom with cutting edge technology in entire Kalyana Karnataka; Lecturer with track record of success; Boys and Girls have separate Hostel with a Healthy, Sanitary & Secure Environment; Individual care as well as Monitoring
SPECIAL COACHING FOR COMPETITIVE EXAMINATIONS NEET, JEE–IIT KVPY, CET AND OTHERS
CONTACT 7353304503 7353304502 8147740402
ADMISSIONS OPEN ONLINE CLASSES ARE ALREADY STARTED
FOR 1st PUC SCIENCE & COMMERCE

ಬೆಂಗಳೂರು ವಿ.ವಿ: ಜಲ ವಿವಾದ ಉಪನ್ಯಾಸ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯ ಕಾನೂನು ಕಾಲೇಜು ಹಾಗೂ ಕಾನೂನು ಅಧ್ಯಯನ ವಿಭಾಗಗಳ ವತಿಯಿಂದ ‘ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಜಲವಿವಾದ’ ಕುರಿತು ಆನ್‌ಲೈನ್‌ನಲ್ಲಿ ವಿಶೇಷ ಉಪನ್ಯಾಸ ನಡೆಯಿತು.

ಐಐಟಿ ರೂರ್ಕಿಯ ಕುಲಾಧಿಪತಿ ಕೆ.ಜಿ.ರಂಗರಾಜ್ ಅವರು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಜಲವಿವಾದ, ನದಿ ಜೋಡಣೆ, ನ್ಯಾಯಾಧೀಕರಣ ರಚನೆ ಹಾಗೂ ಭಾರತ ಮತ್ತು ಪಾಕಿಸ್ತಾನ ನಡುವಣ ನದಿ ನೀರು ಹಂಚಿಕೆ ಒಪ್ಪಂದಗಳ ಕುರಿತು ಮಾಹಿತಿ ನೀಡಿದರು.

‘ಅಂತರರಾಜ್ಯ ಜಲ ವಿವಾದಗಳನ್ನು ಅರಿಯಲು ಇಂತಹ ಉಪನ್ಯಾಸ ಮಾಲಿಕೆಗಳು ಸಹಕಾರಿ’ ಎಂದು ಸುಪ್ರೀಂಕೋರ್ಟ್‌ನ ಹಿರಿಯ ವಕೀಲ ಫಾಲಿ ಎಸ್.ನಾರಿಮನ್ ತಿಳಿಸಿದರು.

ಸುಪ್ರೀಂಕೋರ್ಟ್‌ನ ಹಿರಿಯ ವಕೀಲ ಮೋಹನ್ ಕಾತರಕಿ, ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ ಕೆ.ಆರ್.ವೇಣುಗೋಪಾಲ್, ಕಾನೂನು ಕಾಲೇಜಿನ ಪ್ರಾಂಶುಪಾಲ ಸುರೇಶ್ ವಿ.ನಾಡಗೌಡರ್, ಡೀನ್ ಎನ್.ದಶರಥ್ ಹಾಗೂ ಸುದೇಶ್ ಇದ್ದರು.

ಮನೆ ಬಾಡಿಗೆದಾರರ ಸೋಗಿನಲ್ಲಿ ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಖಾಲಿ ಇರುವ ಮನೆಗಳನ್ನು ಬಾಡಿಗೆಗೆ ಪಡೆಯುವ ಸೋಗಿನಲ್ಲಿ ಮಾಲೀಕರನ್ನು ಸಂಪರ್ಕಿಸಿ ಲಕ್ಷಾಂತರ ರೂಪಾಯಿ ವಂಚಿಸಲಾಗುತ್ತಿದ್ದು, ಈ ಬಗ್ಗೆ ನಗರದ ಸೈಬರ್ ಕ್ರೈಂ ಠಾಣೆಯಲ್ಲಿ ದೂರುಗಳು ದಾಖಲಾಗಿವೆ.

‘ಹೈಗ್ರೌಂಡ್ಸ್ ನಿವಾಸಿಯಾಗಿರುವ 62 ವರ್ಷದ ಉದ್ಯಮಿಯೊಬ್ಬರು, ಮ್ಯಾಜಿಕ್ ಬ್ರಿಕ್ಸ್ ಜಾಲತಾಣಗಳಲ್ಲಿ ಮನೆ ಬಾಡಿಗೆ ಬಗ್ಗೆ ಜಾಹೀರಾತು ಪ್ರಕಟಿಸಿದ್ದರು. ಅವರಿಗೆ ಕರೆ ಮಾಡಿದ್ದ ಆರೋಪಿ, ‘ಮನೆ ಇಷ್ಟವಾಗಿದ್ದು, ಬಾಡಿಗೆಗೆ ಕೊಡಿ. ಮುಂಗಡವಾಗಿ ಹಣ ಕೊಡುತ್ತೇನೆ’ ಎಂದು ಹೇಳಿ ಮಾಲೀಕರಿಗೆ ಕೋಡ್ ಕಳುಹಿಸಿದ್ದ. ಗೂಗಲ್ ಪೇ ಆ್ಯಪ್‌ನಲ್ಲಿ ಕೋಡ್ ಹಾಕುತ್ತಿದ್ದಂತೆ, ಮಾಲೀಕರ ಬ್ಯಾಂಕ್ ಖಾತೆಯಲ್ಲಿದ್ದ ₹ 1.34 ಲಕ್ಷ ಹಂತ ಹಂತವಾಗಿ ಕಡಿತವಾಗಿದೆ. ಈ ಬಗ್ಗೆ ಕೇಂದ್ರ ವಿಭಾಗದ ಸೈಬರ್ ಕ್ರೈಂ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ’ ಎಂದೂ ತಿಳಿಸಿದರು.

‘ವೈಟ್‌ಫೀಲ್ಡ್ ವಿಭಾಗದ ಸೈಬರ್ ಕ್ರೈಂ ಠಾಣೆ ವ್ಯಾಪ್ತಿಯ ಮಂಜುನಾಥ್ ಲೇಔಟ್ ನಿವಾಸಿಯೊಬ್ಬರಿಗೂ ಬಾಡಿಗೆದಾರರ ಸೋಗಿನಲ್ಲಿ ನಂಬಿಸಿ ₹ 75 ಸಾವಿರ ವಂಚಿಸಲಾಗಿದೆ’ ಎಂದೂ ಹೇಳಿದರು.

ಕ್ಯೂ ಆರ್ ಕೋಡ್: ‘ಜೆ.ಪಿ. ನಗರ 2ನೇ ಹಂತದ 46 ವರ್ಷದ ನಿವಾಸಿಯೊಬ್ಬರು ತಮ್ಮ ಮನೆ ಬಾಡಿಗೆ ಇರುವುದಾಗಿ ಹೇಳಿ 99 ಎಕರೆಸ್ ಡಾಟ್ ಕಾಮ್ ಜಾಲತಾಣಗಳಲ್ಲಿ ಜಾಹೀರಾತು ನೀಡಿದ್ದರು. ಅದನ್ನು ನೋಡಿ ಕರೆ ಮಾಡಿದ್ದ ಆರೋಪಿ, ಮುಂಗಡ ಹಣ ನೀಡುವುದಾಗಿ ಹೇಳಿ ಕ್ಯೂ ಆರ್ ಕೋಡ್ ಕಳುಹಿಸಿದ್ದ. ಅದನ್ನು ಸ್ಕ್ಯಾನ್ ಮಾಡುತ್ತಿದ್ದ ಮಾಲೀಕರ ಬ್ಯಾಂಕ್ ಖಾತೆಯಿಂದ ಹಂತ ಹಂತವಾಗಿ ₹ 1.09 ಲಕ್ಷ ಕಡಿತವಾಗಿದೆ’ ಎಂದೂ ಪೊಲೀಸರು ಹೇಳಿದರು.

ಜಲಸಂಪನ್ಮೂಲ ಕಾರ್ಯದರ್ಶಿಯಾಗಿ ಲಕ್ಷ್ಮಣ ರಾವ್ ಪೇಶ್ವೆ

ಬೆಂಗಳೂರು: ಜಲಸಂಪನ್ಮೂಲ ಇಲಾಖೆಯ ಕಾರ್ಯದರ್ಶಿಯಾಗಿ ಎನ್. ಲಕ್ಷ್ಮಣ ರಾವ್ ಪೇಶ್ವೆ ಅವರನ್ನು ರಾಜ್ಯ ಸರ್ಕಾರ ಮಂಗಳವಾರ ನೇಮಿಸಿದೆ.

ಇಲಾಖೆಯ ಕಾರ್ಯದರ್ಶಿಯಾಗಿದ್ದ ಅನಿಲ್ ಕುಮಾರ್ ಅವರು ಮಂಗಳವಾರ ಸೇವೆಯಿಂದ ನಿವೃತ್ತರಾದರು. ವಿಶ್ವೇಶ್ವರಯ್ಯ ಜಲ ನಿಗಮದ ವ್ಯವಸ್ಥಾಪಕ ನಿರ್ದೇಶಕರಾಗಿರುವ ಪೇಶ್ವೆ ಅವರಿಗೆ ಹೆಚ್ಚುವರಿಯಾಗಿ ಕಾರ್ಯದರ್ಶಿ ಜವಾಬ್ದಾರಿಯನ್ನೂ ವಹಿಸಲಾಗಿದೆ.

ಬಿಬಿಎಂಪಿ ನಿವೃತ್ತ ಅಧಿಕಾರಿ ವಿರುದ್ಧ ಪ್ರಕರಣ

ಬೆಂಗಳೂರು: ವಾಯುಸೇನೆ ಆವರಣದೊಳಗೆ ಹೋಗಿ ಗಲಾಟೆ ಮಾಡಿ ಸೇನಾ ಸಿಬ್ಬಂದಿ ಕರ್ತವ್ಯಕ್ಕೆ ಅಡ್ಡಿಪಡಿಸಿದ್ದ ಆರೋಪದಡಿ ಬಿಬಿಎಂಪಿಯ ನಿವೃತ್ತ ಅಧಿಕಾರಿ ಕೆ. ಮಥಾಯ್ ವಿರುದ್ಧ ಸದಾಶಿವನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಮೇ 28ರಂದು ನಡೆದಿರುವ ಘಟನೆ ಸಂಬಂಧ ವಾಯುಸೇನೆ ಅಧಿಕಾರಿ ದೂರು ನೀಡಿದ್ದಾರೆ. ಮಥಾಯ್ ವಿರುದ್ಧ ಎಫ್ಐಆರ್ ದಾಖಲಿಸಿಕೊಳ್ಳಲಾಗಿದ್ದು, ವಿಚಾರಣೆ ನಡೆಸಬೇಕಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಬಳ್ಳಾರಿ ರಸ್ತೆಯಲ್ಲಿರುವ ವಾಯುಸೇನೆ ಆವರಣದಲ್ಲಿ ವಾಹನ ಸಂಚಾರ ಮುಕ್ತ ದಿನದ ಅಂಗವಾಗಿ ಎಲ್ಲ ಬಗೆಯ ವಾಹನಗಳ ಸಂಚಾರ ಬಂದ್ ಮಾಡಲಾಗಿತ್ತು. ವಾಯುಸೇನೆಯ ನಿವೃತ್ತ ಅಧಿಕಾರಿಯೂ ಆಗಿರುವ ಮಥಾಯ್, ಸೇನೆ ಕ್ಯಾಂಟಿನ್‌ಗೆ ಹೋಗಲು ಆವರಣದಲ್ಲಿ ಕಾರು ಚಲಾಯಿಸಿಕೊಂಡು ಹೊರಟಿದ್ದರು.’

‘ಕಾರು ತಡೆದಿದ್ದ ಭದ್ರತಾ ಸಿಬ್ಬಂದಿ ಜೊತೆಗೆ ಗಲಾಟೆ ಮಾಡಿದ್ದರು. ಕರ್ತವ್ಯಕ್ಕೆ ಅಡ್ಡಿಪಡಿಸಿದ್ದರು. ಸ್ಥಳಕ್ಕೆ ಬಂದ ಹಿರಿಯ ಅಧಿಕಾರಿಗಳು ಪರಿಸ್ಥಿತಿ ತಿಳಿಗೊಳಿಸಿದ್ದರು’ ಎಂದೂ ಮೂಲಗಳು ಹೇಳಿವೆ.

ನಮ್ಮ ಮನವಿಗೂ ಸರ್ಕಾರ ಸ್ಪಂದಿಸಲಿ: ಸಂಘದ ಅಧ್ಯಕ್ಷ ಸಿ. ಪ್ರಕಾಶ್ ಮನವಿ

ಪೀಣ್ಯ ಕೈಗಾರಿಕೆಗಳಿಗೆ ಬೇಕಿದೆ ‘ಆಮ್ಲಜನಕ’

• ವಿಜಯಕುಮಾರ್ ಎಸ್.ಕೆ.

ಬೆಂಗಳೂರು: ಲಾಕ್‌ಡೌನ್ ವೇಳೆ ಕೋವಿಡ್ ಸೋಂಕಿತರ ಚಿಕಿತ್ಸೆಗೆಂದು ಆಮ್ಲಜನಕ ಒದಗಿಸಿದ್ದ ಕೈಗಾರಿಕೆಗಳಿಗೇ ಈಗ ಆಮ್ಲಜನಕ ನೀಡಿ ಜೀವಕಳೆ ತುಂಬುವ ಅಗತ್ಯವಿದೆ. ಸರ್ಕಾರ ಲಾಕ್‌ಡೌನ್ ಸಡಿಲಗೊಳಿಸಿದರೂ ಆಮ್ಲಜನಕ ದೊರಕದಿದ್ದರೆ ಪೀಣ್ಯ ಕೈಗಾರಿಕಾ ಪ್ರದೇಶದಲ್ಲಿರುವ ಸಾವಿರಾರು ಕೈಗಾರಿಕೆಗಳು ತೆರೆಯಲಾಗದ ಸ್ಥಿತಿಯಲ್ಲಿವೆ.

ಲಾಕ್‌ಡೌನ್‌ಗೂ ಮುನ್ನ ಕೋವಿಡ್ ರೋಗಿಗಳಿಗೆ ಆಮ್ಲಜನಕ ಕೊರತೆಯಾದಾಗ ಕೈಗಾರಿಕೆಗಳಿಗೆ ಪೂರೈಕೆಯಾಗುತ್ತಿದ್ದ ಆಮ್ಲಜನಕವನ್ನೇ ಆಸ್ಪತ್ರೆಗಳಿಗೆ ಪೂರೈಸಲಾಯಿತು. ಪರಿಸ್ಥಿತಿ ಸುಧಾರಿಸುವ ತನಕ ಕೈಗಾರಿಕೆಗಳಿಗೆ ಆಮ್ಲಜನಕ ಪೂರೈಕೆ ಮಾಡದಂತೆಯೂ ಆಮ್ಲಜನಕ ತಯಾರಿಕಾ ಕಂಪನಿಗಳಿಗೆ ಸರ್ಕಾರ ಸೂಚಿಸಿತು. ಪೊಲೀಸ್ ಭದ್ರತೆ ನೀಡಿ ಆಮ್ಲಜನಕವನ್ನು ಆಸ್ಪತ್ರೆಗಳಿಗೆ ಪೂರೈಸಲಾಯಿತು.

‘ಪೀಣ್ಯ ಕೈಗಾರಿಕಾ ಪ್ರದೇಶದಲ್ಲಿ 10 ಸಾವಿರಕ್ಕೂ ಹೆಚ್ಚು ಕೈಗಾರಿಕೆಗಳಿದ್ದರೆ, ಅವುಗಳಲ್ಲಿ ಒಂದೂವರೆ ಸಾವಿರಕ್ಕೂ ಹೆಚ್ಚು ಕೈಗಾರಿಕೆಗಳು ಆಮ್ಲಜನಕ ಆಧಾರಿತ ಚಾಲನೆಯನ್ನು ಹೊಂದಿವೆ. ಆಮ್ಲಜನಕ ಇಲ್ಲದೆ ಈ ಕೈಗಾರಿಕೆಗಳ ಕಾರ್ಯನಿರ್ವಹಣೆ ಸಾಧ್ಯವೇ ಇಲ್ಲ’ ಎನ್ನುತ್ತಾರೆ ಪೀಣ್ಯ ಕೈಗಾರಿಕಾ ಸಂಘದ ಅಧ್ಯಕ್ಷ ಸಿ. ಪ್ರಕಾಶ್.

ಆಮ್ಲಜನಕ ಸಿಲಿಂಡರ್

‘ಜೀವ ಮೊದಲು, ಜೀವನ ಆ ನಂತರ ಎಂಬ ಕಾರಣಕ್ಕೆ ಆಮ್ಲಜನಕದ ವೈದ್ಯಕೀಯ ಬಳಕೆಗೆ ಸರ್ಕಾರ ತೆಗೆದುಕೊಂಡ ನಿರ್ಧಾರಕ್ಕೆ ನಾವೂ ಸಮ್ಮತಿಸಿದೆವು. ಈಗ ವೈದ್ಯಕೀಯ ಬಳಕೆಗೆ ಪೂರೈಕೆಯಾಗಿ ಮಿಗುವಷ್ಟು ಆಮ್ಲಜನಕ ತಯಾರಾಗುತ್ತಿದೆ. ಈ ಹೆಚ್ಚುವರಿ ಆಮ್ಲಜನಕವನ್ನು ಈಗಲಾದರೂ ಕೈಗಾರಿಕೆಗಳಿಗೆ ಪೂರೈಸಲು ತಯಾರಿಕಾ ಕಂಪನಿಗಳಿಗೆ ಸರ್ಕಾರ ಅನುಮತಿ ನೀಡಬೇಕು’ ಎಂದು ಅವರು ಮನವಿ ಮಾಡಿದರು.

ಪ್ರಜಾವಾಣಿ ವಿಶೇಷ

‘ಈ ಅನುಮತಿ ನೀಡದೆ ಲಾಕ್‌ಡೌನ್ ತೆರವುಗೊಳಿಸಿದರೆ ಕೈಗಾರಿಕೆಗಳನ್ನು ಪುನರ್ ಆರಂಭಿಸಲು ಸಾಧ್ಯವಾಗುವುದಿಲ್ಲ. ಈ ಸಂಬಂಧ ಮುಖ್ಯಮಂತ್ರಿ ಮತ್ತು ಸರ್ಕಾರದ ಮುಖ್ಯ ಕಾರ್ಯದರ್ಶಿ ಅವರನ್ನು ಭೇಟಿಯಾಗಿ ಮನವಿ ಮಾಡಲಾಗಿದೆ’ ಎಂದು ಅವರು ವಿವರಿಸಿದರು.

‘ಕೋವಿಡ್ ನಿಯಂತ್ರಣ ಆಗಬೇಕು ಎಂಬ ಕಾರಣಕ್ಕೆ ಒಂದೂವರೆ ತಿಂಗಳಿಂದ ಸರ್ಕಾರದ ನಿರ್ಧಾರಕ್ಕೆ ತಲೆಬಾಗಿ ಬೆಂಬಲಿಸಿದ್ದೇವೆ. ಈಗ ನಮ್ಮ ಮನವಿಗೂ ಸರ್ಕಾರ ಸ್ಪಂದಿಸಬೇಕು. ಕೈಗಾರಿಕೆಗಳಲ್ಲಿ ಶೇ 50ರಷ್ಟು ಕಾರ್ಮಿಕರನ್ನು ನಿಯೋಜಿಸಿಕೊಂಡು ಕಾರ್ಯನಿರ್ವಹಿಸಲು ಅನುಮತಿ ನೀಡಬೇಕು’ ಎಂದು ಮನವಿ ಮಾಡಿದರು.

‘ವಿದ್ಯುತ್ ಶುಲ್ಕ ಮನ್ನಾಕ್ಕೆ ಒತ್ತಾಯ’

‘ಲಾಕ್‌ಡೌನ್ ಕಾರಣಕ್ಕೆ ಕೈಗಾರಿಕೆಗಳನ್ನು ತೆರೆಯದೇ ಇದ್ದರೂ, ಬೆಸ್ಕಾಂ ನಿಗದಿತ ಶುಲ್ಕ ವಿಧಿಸುತ್ತದೆ. ಸಂಕಷ್ಟದ ಸಂದರ್ಭದಲ್ಲಿ ಇದನ್ನು ಪಾವತಿಸುವುದು ಕಷ್ಟವಾಗಿರುವ ಕಾರಣ ಶುಲ್ಕ ಮನ್ನಾ ಮಾಡಬೇಕು’ ಎಂದು ಸಿ. ಪ್ರಕಾಶ್ ಒತ್ತಾಯಿಸಿದರು.

ಶೇ 9ರಷ್ಟು ರಾಜ್ಯ ತೆರಿಗೆಯೂ ವಿದ್ಯುತ್ ಶುಲ್ಕದ ಜತೆಗೆ ಸೇರಿಕೊಳ್ಳುತ್ತಿದ್ದು, ಅದನ್ನೂ ಮನ್ನಾ ಮಾಡಬೇಕು. ಸಾಲದ ಕಂತು ಪಾವತಿ (ಇಎಂಐ) ಅವಧಿಯನ್ನು ಮುಂದೂಡಲು ಕೆಎಸ್ಎಫ್‌ಸಿಗೆ ನಿರ್ದೇಶನ ನೀಡಬೇಕು ಎಂದು ಮನವಿ ಮಾಡಿದರು.

‘ಕೈಗಾರಿಕೆಗಳಲ್ಲಿ ಕೆಲಸ ಮಾಡುವ ಕಾರ್ಮಿಕರು ಈ ಉದ್ಯಮಕ್ಕೆ ಯೋಧರಿದ್ದಂತೆ. ತಯಾರಿಕಾ ಕ್ಷೇತ್ರ ಆಗಿರುವ ಕಾರಣ ಅವರನ್ನು ಮುಂಚೂಣಿ ಕೆಲಸಗಾರರು ಎಂದು ಪರಿಗಣಿಸಿ 18ರಿಂದ 44 ವರ್ಷದವರಿಗೂ ಕೋವಿಡ್ ಲಸಿಕೆ ನೀಡಲು ಪರಿಗಣಿಸಬೇಕು’ ಎಂದು ಒತ್ತಾಯಿಸಿದರು.

ಸುದ್ದಿ 2 ನಿಮಿಷ

‘ಎಸ್‌ಡಿಆರ್‌ಎಫ್ ಬಿಡುಗಡೆಯಲ್ಲೂ ತಾರತಮ್ಯ’

ಬೆಂಗಳೂರು: 'ಕೇಂದ್ರ ಸರ್ಕಾರ ರಾಜ್ಯ ವಿಪತ್ತು ಪರಿಹಾರ ನಿಧಿ (ಎಸ್‌ಡಿಆರ್‌ಎಫ್) ಬಿಡುಗಡೆಯಲ್ಲೂ ತಾರತಮ್ಯ ಧೋರಣೆ ಅನುಸರಿಸಿದೆ’ ಎಂದು ಶಾಸಕರೂ ಆಗಿರುವ ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾ ರೆಡ್ಡಿ ದೂರಿದರು.

ಸುದ್ದಿಗಾರರ ಜತೆ ಮಂಗಳವಾರ ಮಾತನಾಡಿದ ಅವರು, ‘ರಾಜ್ಯಕ್ಕೆ ಎಸ್‌ಡಿಆರ್‌ಎಫ್ ಕಡಿತವಾಗಿದೆ. ₹ 1,264 ಕೋಟಿಯಲ್ಲಿ ಕೇವಲ ₹ 316 ಕೋಟಿ ಬಿಡುಗಡೆ ಆಗಿದೆ. ಪ್ರತಿ ಬಾರಿ ಕೇಂದ್ರದಿಂದ ಅನ್ಯಾಯ ಆಗುತ್ತಿದೆ’ ಎಂದು ಅಸಮಾಧಾನ ವ್ಯಕ್ತಪಡಿಸಿದರು.

‘ಪ್ರವಾಹ ಸಂದರ್ಭದಲ್ಲೂ ಕೇಂದ್ರ ಸರ್ಕಾರ ಇದೇ ರೀತಿ ಮಾಡಿತ್ತು. ಕೇಂದ್ರದ ಮಾರ್ಗಸೂಚಿಯ ಪ್ರಕಾರವೇ ರಾಜ್ಯ ಸರ್ಕಾರ ಪರಿಹಾರ ಕೇಳುತ್ತದೆ. ಆದರೆ, ಕೇಂದ್ರ ಸರ್ಕಾರ ಅದನ್ನೂ ಕೊಟ್ಟಿಲ್ಲ’ ಎಂದರು.

‘ರಾಜ್ಯದ ಪಾಲಿನ ಜಿಎಸ್‌ಟಿ ₹ 11 ಸಾವಿರ ಕೋಟಿ ಬರಬೇಕು. ಗುಜರಾತ್‌ಗೆ ಹೆಚ್ಚಿನ ಹಣ ಬಿಡುಗಡೆ ಮಾಡಲಾಗಿದೆ. ಗುಜರಾತ್‌ಗೆ ಭೇಟಿ ನೀಡಿದ ಪ್ರಧಾನಿ, ಆ ರಾಜ್ಯಕ್ಕೆ ₹ 1,000 ಕೋಟಿ ಬಿಡುಗಡೆ ಮಾಡಿದ್ದಾರೆ. ರಾಜ್ಯದಲ್ಲಿ ಪ್ರವಾಹ ಬಂದಾಗ ಬರಲೇ ಇಲ್ಲ. ರಾಜ್ಯದ ಬಿಜೆಪಿ ಸಂಸದರು ಪ್ರಧಾನಿ ಮುಂದೆ ನಿಂತು ಮಾತನಾಡುವುದಿಲ್ಲ. ಅವರಿಗೆ ಆ ಧೈರ್ಯವೂ ಇಲ್ಲ. ಇಂಥವರಿಂದ ನಾವು ಇನ್ನೇನು ನಿರೀಕ್ಷೆ ಮಾಡಲು ಸಾಧ್ಯ’ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಭೂಸ್ವಾಧೀನ: ದಾಖಲೆ ಸಲ್ಲಿಕೆಗೆ ಅವಧಿ ವಿಸ್ತರಿಸಿದ ಕೆಆರ್‌ಡಿಸಿಎಲ್

ಬೆಂಗಳೂರು: ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ (ಕೆಆರ್‌ಡಿಸಿಎಲ್) ಅಭಿವೃದ್ಧಿಪಡಿಸುತ್ತಿರುವ ರಸ್ತೆಗಳಿಗೆ ಅಗತ್ಯ ಇರುವ ಭೂಮಿ ಸ್ವಾಧೀನ ಸಂಬಂಧ ಹೊರಡಿಸಿರುವ ಅಂತಿಮ ಅಧಿಸೂಚನೆಯಂತೆ ಆಸ್ತಿಗಳ ಮಾಲೀಕರು ದಾಖಲೆಗಳನ್ನು ಸಲ್ಲಿಸಲು ನೀಡಿದ್ದ ಅವಧಿಯನ್ನು ನಿಗಮ ವಿಸ್ತರಣೆ ಮಾಡಿದೆ.

ಬೂದಿಗೆರೆ, ಮೈಲನಹಳ್ಳಿ ಮಾರ್ಗದಲ್ಲಿ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಸಂಪರ್ಕ ಕಲ್ಪಿಸುವ ಒಂದು ರಸ್ತೆ, ನೆಲಮಂಗಲದಿಂದ ಮಧುರೆ, ರಾಜಾನುಕುಂಟೆ, ತಿಪ್ಪಸಂದ್ರ ಮಾರ್ಗವಾಗಿ ದೇವನಹಳ್ಳಿಗೆ ಸಂಪರ್ಕ ಕಲ್ಪಿಸುವ ಮತ್ತೊಂದು ರಸ್ತೆ ವಿಸ್ತರಣೆ ಮಾಡಿ ಅಭಿವೃದ್ಧಿಪಡಿಸಲು ಭೂಸ್ವಾಧೀನಕ್ಕೆ ಅಂತಿಮ ಅಧಿಸೂಚನೆಯನ್ನು ನಿಗಮ ಮೇ 17 ರಂದು ಹೊರಡಿಸಿದೆ.

‘ಆಸ್ತಿಗಳಿಗೆ ಸಂಬಂಧಿಸಿದ ದಾಖಲೆಗಳನ್ನು ಸಲ್ಲಿಸಲು ಮಾಲೀಕರಿಗೆ 15 ದಿನಗಳ ಕಾಲಾವಕಾಶ ನೀಡಲಾಗಿತ್ತು. ಈ ಅವಧಿ ಜೂನ್ 2ಕ್ಕೆ ಅಂತ್ಯಗೊಳ್ಳುತ್ತದೆ. ಲಾಕ್‌ಡೌನ್ ಇರುವ ಕಾರಣ ಈ ಅವಧಿಯನ್ನು ಜೂನ್ 17ರ ತನಕ ವಿಸ್ತರಿಸಲಾಗಿದೆ’ ಎಂದು ಕೆಆರ್‌ಡಿಸಿಎಲ್ ಹೆದ್ದಾರಿ ವಿಭಾಗದ ಮುಖ್ಯ ಎಂಜಿನಿಯರ್ ತಿಳಿಸಿದ್ದಾರೆ.

ತುರ್ತು ಕೆಲಸ ಕಾರ್ಯಗಳ ನಿಮಿತ್ತ ತೆರಳಿದವರು ಕಾರ್ಪೊರೇಷನ್ ಬಸ್ ನಿಲ್ದಾಣದಲ್ಲಿ ಬಸ್‌ಗಳಿಗೆ ಕಾಯುತ್ತಿರುವುದು
ಪ್ರಜಾವಾಣಿ ಚಿತ್ರ

ಆರ್ಥಿಕ ನೆರವು ನೀಡಿ: ಯುವ ಕಲಾವಿದರಿಂದ ರಂಗ ಚಳವಳಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಹಾಗೂ ಲಾಕ್‌ಡೌನ್ ಕಾರಣ ಘೋಷಿಸಲಾಗಿರುವ ಆರ್ಥಿಕ ನೆರವಿಗೆ ಯುವ ಕಲಾವಿದರನ್ನು ಕೂಡ ಸರ್ಕಾರವು ಪರಿಗಣಿಸಬೇಕು ಎಂದು ಒತ್ತಾಯಿಸಿ ಕಲಾವಿದರು ಸಾಮಾಜಿಕ ಜಾಲತಾಣದಲ್ಲಿ ಮಂಗಳವಾರ ರಂಗ ಚಳವಳಿ ನಡೆಸಿದರು.

ವಿವಿಧ ವಲಯಗಳಿಗೆ ಆರ್ಥಿಕ ಪ್ಯಾಕೇಜ್ ಘೋಷಿಸಿರುವ ಸರ್ಕಾರ, ಕಲಾವಿದರಿಗೆ ತಲಾ ₹ 3 ಸಾವಿರ ನೆರವು ನೀಡುತ್ತಿದೆ. ಈ ನೆರವಿಗೆ ಸಂಬಂಧಿಸಿದಂತೆ ಕೆಲವೊಂದು ನಿರ್ಬಂಧಗಳನ್ನು ವಿಧಿಸಿದ್ದು, ಕಲಾವಿದರು 35 ವರ್ಷ ಮೇಲ್ಪಟ್ಟವರಾಗಿರಬೇಕು ಎಂದು ತಿಳಿಸಿದೆ. ಈ ವಯೋಮಿತಿಯನ್ನು ಸಡಿಲಿಸಬೇಕು ಎಂದು ಯುವ ಕಲಾವಿದರು ಆಗ್ರಹಿಸಿದ್ದಾರೆ.

'ಯೂತ್ ಆರ್ಟಿಸ್ಟ್ ಗಿಲ್ಡ್' ಸಾಮಾಜಿಕ ಜಾಲತಾಣದಲ್ಲಿ ಸರ್ಕಾರದ ವಿರುದ್ಧ ಚಳವಳಿ ನಡೆಸಿತು. ಕಲಾವಿದರು ಹಾಗೂ ಕಲಾ ಪೋಷಕರು ಕಪ್ಪು ಬಟ್ಟೆ ಪ್ರದರ್ಶಿಸುವ ಮೂಲಕ ಬೆಂಬಲ ಸೂಚಿಸಿದರು.

ರಂಗಭೂಮಿಗೆ ಇನ್ನಷ್ಟು ಯುವ ಕಲಾವಿದರು ಬರಬೇಕು, ನೆರವಿಗೆ ಸಂಬಂಧಿಸಿದಂತೆ ವಯೋಮಿತಿಯನ್ನು ಸಡಿಲಿಸಿ
ಚಳವಳಿ ನಿರತ ಕಲಾವಿದರು

‘ಆರ್ಥಿಕ ನೆರವಿನಲ್ಲಿ ಸರ್ಕಾರ ತಾರತಮ್ಯ ಮಾಡಬಾರದು. ವಯಸ್ಸಿನ ಮಿತಿ ಇಲ್ಲದೆಯೇ ಯುವ ಕಲಾವಿದರನ್ನು ಕೂಡ ಪರಿಗಣಿಸಬೇಕು. ಕನ್ನಡ ನಾಡಿನ ಸಂಸ್ಕೃತಿ, ಭಾಷೆ ಉಳಿಸಲು ಯುವ ಕಲಾವಿದರು ಕೂಡ ಶ್ರಮಿಸುತ್ತಿದ್ದಾರೆ’ ಎಂಬ ಅಭಿಪ್ರಾಯವನ್ನು ಚಳವಳಿ ನಿರತರು ವ್ಯಕ್ತಪಡಿಸಿದರು.

ನ್ಯಾಯ ಸಿಗಬೇಕು: ‘ರಂಗಭೂಮಿಗೆ ಯುವ ಕಲಾವಿದರು ಬರುವುದೇ ಕಡಿಮೆ. ಈ ಮಧ್ಯೆ 35 ವರ್ಷ ಮೇಲ್ಪಟ್ಟವರಿಗೆ ಮಾತ್ರ ಆರ್ಥಿಕ ನೆರವು ಘೋಷಿಸಿರುವುದು ಯುವ ಕಲಾವಿದರಿಗೆ ನಿರಾಸೆಯನ್ನುಂಟು ಮಾಡಿದೆ. ನಮ್ಮ ಕಲೆ-ಸಂಸ್ಕೃತಿಯನ್ನು ಉಳಿಸಬೇಕೆಂಬ ಆಶಯದೊಂದಿಗೆ ಈ ಕ್ಷೇತ್ರಕ್ಕೆ ಬಂದವರು ಈಗ ಸಂಕಷ್ಟ ಎದುರಿಸುತ್ತಿದ್ದಾರೆ. ಅವರಿಗೆ ಸರ್ಕಾರದ ನೆರವು ಅತ್ಯಗತ್ಯ. ಸರ್ಕಾರದ ಪ್ರಕಾರ ಯುವ ಕಲಾವಿದರು ಸುಖವಾಗಿದ್ದಾರೆ ಎಂದು ಅರ್ಥವೇ’ ಎಂದು ರಂಗ ಬದುಕು ಟ್ರಸ್ಟ್‌ನ ಕಲಾವಿದೆ ಮಧು ಪ್ರಶ್ನಿಸಿದ್ದಾರೆ.

‘ಯುವಜನರಿಂದಲೇ ನಮ್ಮ ರಂಗಭೂಮಿ ನಿಂತಿದೆ. ರಂಗಭೂಮಿಗೆ ಇನ್ನಷ್ಟು ಯುವ ಕಲಾವಿದರು ಬರಲು ಮನಸ್ಸು ಮಾಡಬೇಕು. ಹಾಗಾಗಿ, ನೆರವಿಗೆ ಸಂಬಂಧಿಸಿದಂತೆ ಯುವ ಕಲಾವಿದರಿಗೆ ನ್ಯಾಯ ಸಿಗುವಂತಾಗಬೇಕು. ವಯೋಮಿತಿಯನ್ನು ಸಡಿಲಿಸಿ, ನೆರವು ಒದಗಿಸಬೇಕು’ ಎಂದು ಆಗ್ರಹಿಸಿದ್ದಾರೆ.

ವರ್ಗಾವಣೆ ಮಾಡದೆ ಸ್ಥಳ ಬದಲಾವಣೆ ಮಾಡಲಾಗದು: ಹೈಕೋರ್ಟ್ ಅಭಿಪ್ರಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ನೌಕರನಿಗೆ ವರ್ಗಾವಣೆ ಆದೇಶವಿಲ್ಲದೆ ಸಾಮಾನ್ಯ ಪರಿಭಾಷೆಯಲ್ಲಿ ಮೂವ್‌ಮೆಂಟ್ ಆರ್ಡರ್ (ಸ್ಥಳ ಬದಲಾವಣೆ ಆದೇಶ) ಹೊರಡಿಸಲು ಆಗುವುದಿಲ್ಲ ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ. ಗಡಿ ಭದ್ರತಾ ಪಡೆಯ (ಬಿಎಸ್ಎಫ್) ಇನ್‌ಸ್ಪೆಕ್ಟರ್ ಒಬ್ಬರನ್ನು ಒಡಿಶಾದಲ್ಲಿ ಕರ್ತವ್ಯಕ್ಕೆ ಹಾಜರಾಗುವಂತೆ ಹೊರಡಿಸಿದ ಆದೇಶವನ್ನು ಪೀಠ ರದ್ದುಪಡಿಸಿತು.

ಬಿಎಸ್ಎಫ್ ಇನ್‌ಸ್ಪೆಕ್ಟರ್ ಆಗಿ ಯಲಹಂಕದಲ್ಲಿರುವ ಟಿ.ಎಸ್. ವೆಂಕಟೇಶ್ ಅವರನ್ನು ಒಡಿಶಾದಲ್ಲಿ ಕರ್ತವ್ಯಕ್ಕೆ ಹಾಜರಾಗುವಂತೆ 2021ರ ಫೆಬ್ರುವರಿ 8ರಂದು ನೀಡಿರುವ ಆದೇಶ ಪ್ರಶ್ನಿಸಿ ಅವರು ಹೈಕೋರ್ಟ್ ಮೆಟ್ಟಿಲೇರಿದ್ದರು. 2020ರ ಏಪ್ರಿಲ್‌ನಲ್ಲೇ ನಿವೃತ್ತಿಯಾಗಬೇಕಿತ್ತು. ನಿವೃತ್ತಿ ವಯಸ್ಸನ್ನು 60 ವರ್ಷಕ್ಕೆ ವಿಸ್ತರಿಸಿರುವ ಕಾರಣ 2023ರ ಏಪ್ರಿಲ್ ತನಕ ಸೇವೆ ವಿಸ್ತರಣೆಯಾಗಿದೆ ಎಂದು ಅರ್ಜಿದಾರರು ತಿಳಿಸಿದ್ದಾರೆ.

‘ಬಿಎಸ್ಎಫ್ ವರ್ಗಾವಣೆ ಮತ್ತು ನಿಯೋಜನೆ ನಿಯಮಗಳ 10ರ ಅಡಿಯಲ್ಲಿ ಸಿಬ್ಬಂದಿಗೆ ವರ್ಗಾವಣೆ ಆದೇಶವಿಲ್ಲದೆ ಕರ್ತವ್ಯಕ್ಕೆ ಬೇರೆಡೆಗೆ ಕಳುಹಿಸುವುದು ನಿಷೇಧ’ ಎಂದು ಅರ್ಜಿದಾರರು ಪ್ರತಿಪಾದಿಸಿದ್ದಾರೆ.

‘34 ವರ್ಷಗಳ ಸೇವಾ ಅವಧಿಯಲ್ಲಿ ವಿವಿಧೆಡೆಗೆ ವೆಂಕಟೇಶ್ ಅವರನ್ನು ವರ್ಗಾಯಿಸಲಾಗಿದೆ. ನಿವೃತ್ತಿ ಅವಧಿ ವಿಸ್ತರಿಸಲ್ಪಟ್ಟ ಅವಧಿಯಲ್ಲಿ ವರ್ಗಾವಣೆ ಮಾಡುವುದು ನಿಯಮಗಳಿಗೆ ವಿರುದ್ಧ. ನಿವೃತ್ತಿಯ ಅಂಚಿನಲ್ಲಿ ಬೆಂಗಳೂರಿನಿಂದ ಒಡಿಶಾಗೆ ಅವರನ್ನು ನಿಯೋಜಿಸುವ ಯಾವುದೇ ಅನಿವಾರ್ಯತೆ ಇಲ್ಲ’ ಎಂದು ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಪೀಠ ಅಭಿಪ್ರಾಯಪಟ್ಟಿತು.

ಇದು ಕೇವಲ ಸ್ಥಳ ಬದಲಾವಣೆ ಆದೇಶ ಎಂಬ ಬಿಎಸ್ಎಫ್ ವಾದವನ್ನು ಒಪ್ಪಲು ಪೀಠ ನಿರಾಕರಿಸಿತು. ‘ಸರ್ಕಾರಿ ನೌಕರರನ್ನು ವರ್ಗಾವಣೆ ಮಾಡದೆ ಸ್ಥಳ ಬದಲಾವಣೆ ಆದೇಶ ನೀಡಲು ಸಾಧ್ಯವಿಲ್ಲ’ ಎಂದು ಪೀಠ ತಿಳಿಸಿತು.

ರಾಗಿ: ಬಿಡುಗಡೆಯಾಗದ ಬೆಂಬಲ ಬೆಲೆ

ದಾಬಸ್ ಪೇಟೆ: ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಾಜು ನಿಗಮಕ್ಕೆ (ಕೆಎಫ್‌ಸಿಎಸ್‌ಸಿ) ಸರ್ಕಾರದ ಬೆಂಬಲ ಬೆಲೆ ಯೋಜನೆಯಡಿ ಕ್ವಿಂಟಲ್‌ಗೆ ₹3,295ರಂತೆ ರಾಗಿ ಸರಬರಾಜು ಮಾಡಿದ್ದ ನೆಲಮಂಗಲ ತಾಲ್ಲೂಕಿನ 1,759 ರೈತರಿಗೆ ಎರಡು ತಿಂಗಳಾದರೂ ಬೆಂಬಲ ಬೆಲೆ ಹಣ ಬಿಡುಗಡೆಯಾಗಿಲ್ಲ.

ತಾಲ್ಲೂಕಿನ 4,945 ರೈತರು ಬೆಂಬಲ ಬೆಲೆ ಯೋಜನೆಯಡಿ ರಾಗಿ ಸರಬರಾಜು ಮಾಡಿದ್ದಾರೆ. ಅದರಲ್ಲಿ 3,186 ರೈತರಿಗೆ ಮಾರ್ಚ್ 14ರವರೆಗಿನ ಹಣ ಬಂದಿದೆ. ಇನ್ನುಳಿದ ರೈತರಿಗೆ ₹2 ಕೋಟಿಗೂ ಅಧಿಕ ಹಣ ಬಿಡುಗಡೆಯಾಗಿಲ್ಲ. ಇದರಿಂದ ರಾಗಿ ಬೆಳೆಗಾರರು ಕಂಗಾಲಾಗಿದ್ದಾರೆ.

‘ಸರ್ಕಾರ ಆರಂಭಿಸಿದ್ದ ರಾಗಿ ಖರೀದಿ ಕೇಂದ್ರಕ್ಕೆ 21 ಕ್ವಿಂಟಲ್ ರಾಗಿ ಪೂರೈಸಿದ್ದು, ₹70 ಸಾವಿರದಷ್ಟು ಹಣ ಬರಬೇಕು. ಮಳೆಗಾಲ ಆರಂಭವಾಗಿದ್ದು, ಬೇಸಾಯ ಮಾಡಲು ಹಣದ ಅಗತ್ಯವಿದೆ. ಶೀಘ್ರವೇ ಹಣ ಬಿಡುಗಡೆ ಮಾಡಿದರೆ ಅನುಕೂಲ’ ಎಂದು ರೈತ ಧನಂಜಯ ಮನವಿ ಮಾಡಿದರು.

‘ಮುಂಗಾರಿಗೆ ಮುನ್ನ ಹೊಲ ಉಳುಮೆ ಮಾಡಿಸುವುದು, ರಸಗೊಬ್ಬರ ಖರೀದಿಸುವುದು ಸೇರಿದಂತೆ ಬಹಳಷ್ಟು ಖರ್ಚುಗಳಿವೆ. ಲಾಕ್‌ಡೌನ್‌ನಿಂದ ಅಗತ್ಯ ವಸ್ತುಗಳೆಲ್ಲ ದುಬಾರಿಯಾಗಿದೆ. ರೈತರ ಪರ ನಿಲ್ಲಬೇಕಿದ್ದ ಸರ್ಕಾರವೇ ಹಣ ಬಿಡುಗಡೆ ಮಾಡದಿರುವುದು ವಿಪರ್ಯಾಸ’ ಎನ್ನುತ್ತಾರೆ ರೈತ ಗಂಗಯ್ಯ.

ಈ ಬಗ್ಗೆ ಪ್ರತಿಕ್ರಿಯಿಸಿದ ನೆಲಮಂಗಲ ತಾಲ್ಲೂಕು ರಾಗಿ ಖರೀದಿ ನೋಡಲ್ ಅಧಿಕಾರಿ ನಾರಾಯಣ ರಾವ್, ‘ಖಜಾನೆಯಿಂದ ಹಣ ಬಿಡುಗಡೆ ಮಾಡಿದ ತಕ್ಷಣ ರೈತರ ಖಾತೆಗಳಿಗೆ ಹಣ ಜಮಾ ಮಾಡುತ್ತೇವೆ. ವಾರದೊಳಗೆ ಎಲ್ಲ ರೈತರಿಗೆ ಹಣ ಬಿಡುಗಡೆಯಾಗಬಹುದು’ ಎಂದರು.

ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಈ ಸಾಲಿನಲ್ಲಿ 21,241 ರೈತರು ರಾಗಿ ಖರೀದಿಗೆ ನೋಂದಣಿ ಮಾಡಿಸಿದ್ದು, 20,301 ರೈತರು ಸರ್ಕಾರಕ್ಕೆ ಬೆಂಬಲ ಬೆಲೆ ಯೋಜನೆಯಡಿ 3,91,701 ಕ್ವಿಂಟಲ್ ರಾಗಿಯನ್ನು ಸರಬರಾಜು ಮಾಡಿದ್ದಾರೆ.

ಸಂಕ್ಷಿಪ್ತ ಸುದ್ದಿ

ಆಹಾರ ಪೊಟ್ಟಣ ನೆಪ; ಕಾರು ಜಪ್ತಿ

ಬೆಂಗಳೂರು: ಲಾಕ್‌ಡೌನ್ ವೇಳೆ ಆಹಾರ ವಿತರಿಸುವ ನೆಪ ಹೇಳಿ ಕೆಲ ಪೊಟ್ಟಣ ಇಟ್ಟುಕೊಂಡು ಓಡಾಡುತ್ತಿದ್ದ ಬಿಎಂಡಬ್ಲ್ಯು ಕಾರನ್ನು ಪೊಲೀಸರು ಜಪ್ತಿ ಮಾಡಿದ್ದಾರೆ.

ಬೊಮ್ಮನಹಳ್ಳಿ ವೃತ್ತದ ಚೆಕ್‌ಪೋಸ್ಟ್‌ನಲ್ಲಿ ಮಂಗಳವಾರ ಬಿಎಂಡಬ್ಲ್ಯು ಕಾರು ತಡೆದಿದ್ದ ಪೊಲೀಸರು ತಪಾಸಣೆ ನಡೆಸಿದ್ದರು. ಆಹಾರ ವಿತರಿಸಲು ಹೋಗುತ್ತಿರುವುದಾಗಿ ಚಾಲಕ ಹೇಳಿದ್ದ. ಆದರೆ, ಪೊಲೀಸರು ವಿಚಾರಣೆ ನಡೆಸಿದಾಗ, ಹೊರಗೆ ಸುತ್ತಾಡುವುದಕ್ಕಾಗಿಯೇ ಚಾಲಕ ಆಹಾರ ಪೊಟ್ಟಣಗಳನ್ನು ಇಟ್ಟುಕೊಂಡಿದ್ದ ಎಂಬುದು ತಿಳಿಯಿತು.

1,005 ವಾಹನ ಜಪ್ತಿ: ‘ನಗರದಲ್ಲಿ ಮಂಗಳವಾರ 1,005 ವಾಹನಗಳನ್ನು ಜಪ್ತಿ ಮಾಡಲಾಗಿದೆ’ ಎಂದು ತಿಳಿಸಿದರು.

‘873 ದ್ವಿಚಕ್ರ ವಾಹನ, 80 ಮೂರು ಚಕ್ರ ವಾಹನ ಹಾಗೂ 52 ನಾಲ್ಕು ಚಕ್ರ ವಾಹನಗಳು ಜಪ್ತಿ ಆಗಿವೆ.’ ಎಂದೂ ಹೇಳಿದರು.

ಮಹಡಿಯಿಂದ ಬಿದ್ದು ಸಾವು

ಬೆಂಗಳೂರು: ವಿವೇಕನಗರ ಠಾಣೆ ವ್ಯಾಪ್ತಿಯಲ್ಲಿ ನಿರ್ಮಾಣ ಹಂತದ ಕಟ್ಟಡದಿಂದ ಬಿದ್ದು ವೃದ್ಧರೊಬ್ಬರು ಮೃತಪಟ್ಟಿದ್ದಾರೆ.

‘ಅಪಾರ್ಟ್‌ಮೆಂಟ್ ಸಮುಚ್ಚಯದ ನಿರ್ಮಾಣ ಕೆಲಸ ನಡೆಯುತ್ತಿದ್ದು, ಫ್ಲ್ಯಾಟ್‌ಗಳನ್ನು ಮಾರಾಟ ಮಾಡಲಾಗುತ್ತಿದೆ. ಫ್ಲ್ಯಾಟ್ ಖರೀದಿಗೆಂದು ಬಂದಿದ್ದ ವೃದ್ಧ, ಮಹಡಿಗಳನ್ನು ನೋಡುತ್ತಿದ್ದರು. 15ನೇ ಮಹಡಿಗೆ ಹೋದಾಗ ಬಿದ್ದಿದ್ದರು’ ಎಂದು ಪೊಲೀಸ್ ಮೂಲಗಳು ಹೇಳಿವೆ.

'ತೀವ್ರ ಗಾಯಗೊಂಡು ಸ್ಥಳದಲ್ಲೇ ವೃದ್ಧ ಮೃತಪಟ್ಟಿದ್ದಾರೆ. ಮೃತ ವೃದ್ಧ, ಕೋರಮಂಗಲ ನಿವಾಸಿ ಎಂದು ಗೊತ್ತಾಗಿದೆ. ಹೆಸರು ತಿಳಿದು ಬಂದಿಲ್ಲ’ ಎಂದೂ ತಿಳಿಸಿವೆ.

₹5 ಸಾವಿರ ನೆರವಿಗೆ ಆಗ್ರಹ

ಬೆಂಗಳೂರು: ‘ರಾಜ್ಯದಲ್ಲಿರುವ ಅಲೆಮಾರಿ ಸಮುದಾಯದ ಪ್ರತಿ ಕುಟುಂಬಕ್ಕೂ ತಲಾ ₹5 ಸಾವಿರ ನೆರವು ಘೋಷಿಸಿ, ಸರ್ಕಾರ ಕೂಡಲೇ ಹಣ ಬಿಡುಗಡೆ ಮಾಡಬೇಕು’ ಎಂದು ರಾಜ್ಯ ಅಲೆಮಾರಿ ಬುಡಕಟ್ಟು ಮಹಾಸಭಾದ ಗೌರವಾಧ್ಯಕ್ಷ ಸಿ.ಎಸ್.ದ್ವಾರಕಾನಾಥ್ ಆಗ್ರಹಿಸಿದ್ದಾರೆ.

ಈ ಸಂಬಂಧ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರಿಗೆ ಪತ್ರ ಬರೆದಿದ್ದಾರೆ.

‘ಕೊರೊನಾದಿಂದಾಗಿ ಸಂಕಷ್ಟಕ್ಕೆ ಸಿಲುಕಿದ್ದ ದುಡಿಯುವ ವರ್ಗಕ್ಕೆ ಸರ್ಕಾರ ವಿಶೇಷ ಪ್ಯಾಕೇಜ್ ಘೋಷಿಸಿರುವುದು ಸ್ವಾಗತಾರ್ಹ. ಆದರೆ, ಸೂಕ್ತ ನೆಲೆ ಕಾಣದೆ ಬದುಕುತ್ತಿರುವ ಅಲೆಮಾರಿ ಸಮುದಾಯಗಳನ್ನು ಸರ್ಕಾರ ಕಡೆಗಣಿಸಿರುವುದು ಖಂಡನೀಯ’ ಎಂದು ದೂರಿದರು.

‘ಇವರು ತಮ್ಮ ಕುಲಕಸುಬುಗಳಾದ ತೊಗಲು ಗೊಂಬೆಯಾಟ, ಬೀಗ-ಛತ್ರಿ ದುರಸ್ತಿ, ಗಾರುಡಿ, ಕಸರತ್ತಿನ ಕಲೆ, ನಾಟಿಮದ್ದು ಮಾರಾಟ, ಹಚ್ಚೆ ಹಾಕುವುದು, ಪ್ಲಾಸ್ಟಿಕ್ ವಸ್ತುಗಳ ಮಾರಾಟ, ಕಲೆಗಳನ್ನು ಪ್ರದರ್ಶಿಸುತ್ತಾ ಅಲೆಮಾರಿ ಜೀವನ ನಡೆಸಿರುತ್ತಾರೆ. ಸ್ಮಶಾನ, ಪಾಳು ಮಂಟಪಗಳು, ರೈಲ್ವೆ ಹಳಿಗಳ ಪಕ್ಕ, ಹಳೆಯ ಬಟ್ಟೆಗಳಿಂದ ಜೋಪಡಿಗಳನ್ನು ಹಾಕಿಕೊಂಡು, ಊರಾಚೆ ಬದುಕುವ ಅಲೆಮಾರಿಗಳು ಸರ್ಕಾರದ ಕಣ್ಣಿಗೆ ಕಾಣಿಸುತ್ತಿಲ್ಲ’ ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

ಬೆಣಚಕಲ್ಲು ಗ್ರಾಮದಲ್ಲಿ ಶುದ್ಧ ಕುಡಿಯುವ ನೀರಿನ ಘಟಕವನ್ನು ಸಚಿವ ಎಸ್.ಟಿ.ಸೋಮಶೇಖರ್ ಉದ್ಘಾಟಿಸಿ ಉಚಿತ ಕ್ಯಾನ್ ವಿತರಿಸಿದರು.

ಬಡವರಿಗೆ ದಿನಸಿ ಕಿಟ್

ರಾಜರಾಜೇಶ್ವರಿ ನಗರ: ‘ಲಾಕ್‌ಡೌನ್‌ನಿಂದ ಬಡವರು, ಕೂಲಿ ಕಾರ್ಮಿಕರು ಹಾಗೂ ಮಧ್ಯಮ ವರ್ಗ ಸಂಕಷ್ಟಕ್ಕೆ ಸಿಲುಕಿದ್ದು, ಉಳ್ಳವರು ಇಲ್ಲದವರಿಗೆ ಮಾನವೀಯತೆಯಿಂದ ಸಹಾಯಹಸ್ತ ಚಾಚಬೇಕು’ ಎಂದು ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ ತಿಳಿಸಿದರು.

ರಾಮೋಹಳ್ಳಿ ಗ್ರಾಮಪಂಚಾಯಿತಿ ವ್ಯಾಪ್ತಿಯ ಭೀಮನಕುಪ್ಪೆ, ಬೆಣಚಕಲ್ಲು ಗ್ರಾಮಸ್ಥರಿಗೆ ಗ್ರಾಮ ಪಂಚಾಯಿತಿ ಸದಸ್ಯ ಜಿ.ಮಹೇಶ್ ವತಿಯಿಂದ ದಿನಸಿ ಕಿಟ್ ವಿತರಣೆ ಹಾಗೂ ಬೆಣಚಕಲ್ಲು ಗ್ರಾಮದಲ್ಲಿ ಶುದ್ಧ ಕುಡಿಯುವ ನೀರಿನ ಘಟಕ ಉದ್ಘಾಟನಾ ಕಾರ್ಯಕ್ರಮದಲ್ಲಿ ಅವರು ಪಾಲ್ಗೊಂಡಿದ್ದರು.

‘ಸೋಂಕಿತರು ಯಾವುದೇ ಮುಜುಗರವಿಲ್ಲದೆ, ತಪಾಸಣೆಗೆ ಒಳಗಾಗಿ ಚಿಕಿತ್ಸೆ ಪಡೆದುಕೊಳ್ಳಬೇಕು’ ಎಂದರು.

ಗ್ರಾಮ ಪಂಚಾಯಿತಿ ಸದಸ್ಯ ಜಿ.ಮಹೇಶ್,‘ಸಂಕಷ್ಟದ ಕಾಲದಲ್ಲಿ ಸಹಾಯ ಮಾಡುವ ಮೂಲಕ ಜನರ ಜೊತೆಯಲ್ಲಿದ್ದೇವೆ’ ಎಂದು ಹೇಳಿದರು.

ರಾಮೋಹಳ್ಳಿ ರೈತ ಸೇವಾ ಸಹಕಾರ ಬ್ಯಾಂಕ್ ಅಧ್ಯಕ್ಷ ವಿ.ವೇಣುಗೋಪಾಲ್, ಬಿಜೆಪಿ ಮುಖಂಡ ಎಸ್.ಚೇತನ್, ಗ್ರಾಮ ಪಂಚಾಯಿತಿ ಅಧ್ಯಕ್ಷೆ ವೆಂಕಟಲಕ್ಷ್ಮಮ್ಮ, ಉಪಾಧ್ಯಕ್ಷ ಚಂದ್ರು, ಬಿ.ಎಚ್. ಪ್ರಭು ಮಾತನಾಡಿದರು.

ಸಾಮೂಹಿಕ ಅತ್ಯಾಚಾರ: ಸಿಕ್ಕಿಬಿದ್ದ ನಾಲ್ವರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಾಂಗ್ಲಾ ಯುವತಿ ಮೇಲೆ ಮೃಗೀಯವಾಗಿ ವರ್ತಿಸಿ ಸಾಮೂಹಿಕ ಅತ್ಯಾಚಾರ ಎಸಗಿದ್ದ ಪ್ರಕರಣದಲ್ಲಿ ಭಾಗಿಯಾಗಿ ಪರಾರಿಯಾಗಿದ್ದ ದಂಪತಿ ಸೇರಿ ನಾಲ್ವರು ಚೆನ್ನೈನಲ್ಲಿ ಪೊಲೀಸರಿಗೆ ಸಿಕ್ಕಿಬಿದ್ದಿದ್ದಾರೆ.

ರಾಮಮೂರ್ತಿನಗರ ಠಾಣೆ ವ್ಯಾಪ್ತಿಯ ಮನೆಯೊಂದರಲ್ಲಿ ಯುವತಿ ಮೇಲೆ ಅತ್ಯಾಚಾರ ನಡೆದಿತ್ತು. ಈ ಸಂಬಂಧ ಇಬ್ಬರು ಮಹಿಳೆಯರು ಸೇರಿ ಆರು ಮಂದಿಯನ್ನು ಈಗಾಗಲೇ ಬಂಧಿಸಲಾಗಿತ್ತು. ಬಂಧಿತರ ಸಂಖ್ಯೆ ಈಗ 10ಕ್ಕೆ ಏರಿದೆ.

‘ಕೃತ್ಯದ ಬಳಿಕ ಪರಾರಿಯಾಗಿದ್ದ ದಂಪತಿ ಸೇರಿ ನಾಲ್ವರು ತಮಿಳುನಾಡಿನಲ್ಲಿ ತಲೆಮರೆಸಿಕೊಂಡಿದ್ದರು. ವಿಶೇಷ ತಂಡವು ಆರೋಪಿಗಳನ್ನು ಚೆನ್ನೈನಲ್ಲಿ ಪತ್ತೆ ಮಾಡಿ ವಶಕ್ಕೆ ಪಡೆದು ನಗರಕ್ಕೆ ಕರೆತಂದಿದೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಅಪರಾಧ ಸುದ್ದಿ

‘ಸಂತ್ರಸ್ತೆ ಹಾಗೂ ಬಂಧಿತ ಆರೋಪಿಗಳೆಲ್ಲರೂ ಬಾಂಗ್ಲಾ ಪ್ರಜೆಗಳು. ಎಲ್ಲರೂ ಪಶ್ಚಿಮ ಬಂಗಾಳದ ಮೂಲಕ ಅಕ್ರಮವಾಗಿ ದೇಶದೊಳಗೆ ನುಸುಳಿದ್ದರು. ಮಸಾಜ್ ಪಾರ್ಲರ್‌ಗಳನ್ನು ತೆರೆದು ವೇಶ್ಯಾವಾಟಿಕೆ ನಡೆಸುತ್ತಿದ್ದರು’ ಎಂದು ಮೂಲಗಳು ಹೇಳಿವೆ.

’ಹಣದ ಬಗ್ಗೆ ಮಾತುಕತೆ ನಡೆಸಬೇಕೆಂದು ಹೇಳಿ ಸಂತ್ರಸ್ತೆಯನ್ನು ಚೆನ್ನೈನಿಂದ ಬೆಂಗಳೂರಿಗೆ ಕರೆಸಿಕೊಂಡು ಅತ್ಯಾಚಾರ ಎಸಗಲಾಗಿತ್ತು’ ಎಂದೂ ಮೂಲಗಳು ತಿಳಿಸಿವೆ.

‘ಆರೋಪಿಗಳನ್ನು ಬಂಧಿಸಿ ಪುರಾವೆ ಸಂಗ್ರಹಿಸಿರುವ ತಂಡ, ಇನ್ನೊಂದು ತಿಂಗಳಿನಲ್ಲಿ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಲಿದೆ’ ಎಂದೂ ಹೇಳಿವೆ.

ಗಡಿಪಾರು ಸಾಧ್ಯತೆ: ‘ಸಂತ್ರಸ್ತೆ, ಆರೋಪಿಗಳು ಅಕ್ರಮ ವಾಸಿಗಳು. ಪ್ರಕರಣದ ವಿಚಾರಣೆ ಮುಗಿಯುತ್ತಿದ್ದಂತೆ ಅವರನ್ನು ಗಡಿಪಾರು ಮಾಡುವ ಬಗ್ಗೆ ಕಾನೂನು ತಜ್ಞರ ಸಲಹೆ ಕೋರಲಾಗಿದೆ’ ಎಂದೂ ತಿಳಿಸಿವೆ.

‘ಲಿಂಕ್ ಕ್ಲಿಕ್’ ಮಾಡಿ ಹಣ ಕಳೆದುಕೊಂಡ

ಬೆಂಗಳೂರು: ಅಪರಿಚಿತ ವ್ಯಕ್ತಿಯಿಂದ ಮೊಬೈಲ್‌ಗೆ ಬಂದಿದ್ದ ಲಿಂಕ್ ಕ್ಲಿಕ್ ಮಾಡಿದ್ದ ನಗರದ ಮಹಿಳೆಯೊಬ್ಬರು ತಮ್ಮ ಬ್ಯಾಂಕ್ ಖಾತೆಯಿಂದ ₹ 1.02 ಲಕ್ಷ ಕಳೆದುಕೊಂಡಿದ್ದಾರೆ.

ಬಳ್ಳಾರಿ ರಸ್ತೆಯ ನಿವಾಸಿಯಾಗಿರುವ ಮಹಿಳೆ ವಂಚನೆ ಸಂಬಂಧ ಈಶಾನ್ಯ ವಿಭಾಗದ ಸೈಬರ್ ಕ್ರೈಂ ಠಾಣೆಗೆ ದೂರು ನೀಡಿದ್ದಾರೆ.

‘ದೂರುದಾರರಿಗೆ ಕರೆ ಮಾಡಿ ಏಕಾಏಕಿ ಕಡಿತಗೊಳಿಸಿದ್ದ ವ್ಯಕ್ತಿಯೊಬ್ಬರು, ಸಂದೇಶದ ಮೂಲಕ ಲಿಂಕ್ ಕಳುಹಿಸಿದ್ದರು. ಅದು ಏನಿರಬಹುದೆಂಬ ಕುತೂಹಲದೊಂದಿಗೆ ಮಹಿಳೆ ಲಿಂಕ್ ಮೇಲೆ ಕ್ಲಿಕ್ ಮಾಡಿದ್ದರು. ಅದಾದ ಕೆಲ ಕ್ಷಣಗಳಲ್ಲೇ ದೂರುದಾರರ ಬ್ಯಾಂಕ್ ಖಾತೆಯಿಂದ ₹ 1.02 ಲಕ್ಷ ಕಡಿತವಾಗಿದೆ. ಸೈಬರ್ ವಂಚಕರೇ ಕರೆ ಮಾಡಿ ವಂಚಿಸಿರುವುದಾಗಿ ಮಹಿಳೆ ದೂರಿದ್ದಾರೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

ಆರ್ಥಿಕ ಸಂಕಷ್ಟಕ್ಕೆ ಸಿಲುಕಿರುವ ದುಡಿಯುವ ವರ್ಗದಿಂದ ಒತ್ತಾಯ

‘₹10 ಸಾವಿರ ಪರಿಹಾರ ಕೊಡಬೇಕು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಲಾಕ್‌ಡೌನ್‌ನಿಂದ ಆರ್ಥಿಕ ಸಂಕಷ್ಟಕ್ಕೆ ಸಿಲುಕಿರುವ ದುಡಿಯುವ ವರ್ಗದವರಿಗೆ ₹ 10 ಸಾವಿರ ಪರಿಹಾರ ನೀಡಬೇಕು’ ಎಂಬುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ರಾಜ್ಯದಾದ್ಯಂತ ಮಂಗಳವಾರ ಪ್ರತಿಭಟನೆ ನಡೆಸಲಾಯಿತು.

ಕೊರೊನಾ ಸೋಂಕು ಹೆಚ್ಚಿದ ಕಾರಣ ಲಾಕ್‌ಡೌನ್ ಜಾರಿ ಮಾಡಲಾಗಿದ್ದು, ಇದರ ನಿಯಮಗಳನ್ನು ಪಾಲಿಸಿ ದುಡಿಯುವ ವರ್ಗದವರು ಪ್ರತಿಭಟನೆ ನಡೆಸಿದರು. ಮನೆ ಹಾಗೂ ಬಡಾವಣೆಗಳಲ್ಲಿ ಘೋಷಣಾ ಫಲಕ ಪ್ರದರ್ಶಿಸಿ, ಸರ್ಕಾರಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

‘ಜೀವ ಉಳಿಸಿ, ಜೀವನೋಪಾಯ ರಕ್ಷಿಸಿ’ ಘೋಷವಾಕ್ಯದಡಿ ಸಿಪಿಐ (ಎಂಎಲ್), ಸಿಪಿಐಎಂ, ಎಸ್‌ಯುಸಿಐ (ಸಿ), ಎಐಎಫ್‌ಬಿ, ಎಐಸಿಸಿಟಿಯು, ಸ್ವರಾಜ್ ಇಂಡಿಯಾ ಮತ್ತು ಆರ್‌ಪಿಐ ಸಹಯೋಗದಲ್ಲಿ ಪ್ರತಿಭಟನೆ ನಡೆಯಿತು. ಬೆಂಗಳೂರು, ಮೈಸೂರು, ಕೊಡಗು, ಮಂಗಳೂರು, ಕೊಪ್ಪಳ, ರಾಯಚೂರು, ಬಳ್ಳಾರಿ, ವಿಜಯನಗರ, ಕೋಲಾರ ಸೇರಿ ವಿವಿಧೆಡೆ ಪ್ರತಿಭಟನೆಗೆ ಸ್ಪಂದನೆ ವ್ಯಕ್ತವಾಯಿತು.

ಕಾರ್ಮಿಕರೊಬ್ಬರು ತಮ್ಮ ಮನೆ ಎದುರು ಮಕ್ಕಳ ಜೊತೆ ಘೋಷಣಾ ಫಲಕ ಪ್ರದರ್ಶಿಸಿ ಪ್ರತಿಭಟನೆ ನಡೆಸಿದರು

ಬೀದಿ ವ್ಯಾಪಾರಿಗಳು, ಪೌರ ಕಾರ್ಮಿಕರು, ವಲಸೆ ಕಾರ್ಮಿಕರು, ಕಟ್ಟಡ ನಿರ್ಮಾಣ ಕಾರ್ಮಿಕರು, ಆಸ್ಪತ್ರೆಗಳ ಸ್ವಚ್ಛತಾ ಕಾರ್ಮಿಕರು, ವಿವಿಧ ಸಂಸ್ಥೆಗಳ ಗುತ್ತಿಗೆ ಕಾರ್ಮಿಕರು, ತೋಟ ಹಾಗೂ ಭೂ ರಹಿತ ಕಾರ್ಮಿಕರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

‘ದುಡಿಯುವ ವರ್ಗದವರಿಗೆ ಉಚಿತ ಕೋವಿಡ್ ಚಿಕಿತ್ಸೆ, ಔಷಧಿ ಹಾಗೂ ಲಸಿಕೆ ನೀಡಬೇಕು. ರೈತ ಹಾಗೂ ಕಾರ್ಮಿಕ ವಿರೋಧಿ ಕಾಯ್ದೆಗಳನ್ನು ರದ್ದುಗೊಳಿಸಬೇಕು. ಕನಿಷ್ಠ 200 ದಿನಗಳ ಉದ್ಯೋಗ ಖಾತ್ರಿಯನ್ನು ಗ್ರಾಮೀಣ ಹಾಗೂ ನಗರ ಪ್ರದೇಶಗಳಿಗೆ ವಿಸ್ತರಿಸಬೇಕು. ಆರೋಗ್ಯ ಕಾರ್ಯಕರ್ತರು, ಮುಂಚೂಣಿ ಕಾರ್ಮಿಕರಿಗೆ ವಿಶೇಷ ರಕ್ಷಣೆ ಒದಗಿಸಬೇಕು’ ಎಂದು ಆಗ್ರಹಿಸಿದರು.

‘ಲಾಕ್‌ಡೌನ್ ಜಾರಿಯಾಗಿರುವ ಇಂದಿನ ದಿನಗಳಲ್ಲಿ ಕಾರ್ಮಿಕರು ಜೀವನ ನಡೆಸುವುದು ಕಷ್ಟವಾಗಿದೆ. ಇದು ಸಾಂಕೇತಿಕ ಪ್ರತಿಭಟನೆ. ಸರ್ಕಾರ ಬೇಡಿಕೆ ಈಡೇರಿಸಲು ಕ್ರಮ ಕೈಗೊಳ್ಳದಿದ್ದರೆ ಗಂಭೀರ ಸ್ವರೂಪದ ಹೋರಾಟ ಆರಂಭಿಸಲಾಗುವುದು’ ಎಂದೂ ಎಚ್ಚರಿಸಿದರು.

ಚಿತ್ರಾವಳಿ

ಲಗ್ಗೆರೆಯ ಬ್ಲೆಸ್ ಗ್ರಾಮೀಣ ಹಾಗೂ ನಗರಾಭಿವೃದ್ಧಿ ಸಂಸ್ಥೆಯ ಪಂಡಿತ್ ಪುಟ್ಟರಾಜ ಗವಾಯಿ ಅಂಗವಿಕಲ, ಅಂಧರ ಹಾಗೂ ಅನಾಥ ಮಕ್ಕಳ ಪುನರ್ವಸತಿ ಕೇಂದ್ರದ ಅಭಿವೃದ್ಧಿಗಾಗಿ ಧರ್ಮಸ್ಥಳದ ಧರ್ಮಾಧಿಕಾರಿ ಡಿ.ವೀರೇಂದ್ರ ಹೆಗ್ಗಡೆ ಅವರ ಪರವಾಗಿ ₹3 ಲಕ್ಷ ಮೊತ್ತದ ಚೆಕ್ ಅನ್ನು ಧರ್ಮಸ್ಥಳ ತಂಡದ ಪ್ರಾದೇಶಿಕ ನಿರ್ದೇಶಕ ಸೀನಪ್ಪ ಅವರು ಬ್ಲೆಸ್ ಸಂಸ್ಥೆಯ ಅಧ್ಯಕ್ಷ ವೈಜನಾಥ್ ಅವರಿಗೆ ಹಸ್ತಾಂತರಿಸಿದರು. ಅಮರ ಪ್ರಸಾದ್, ಗಣೇಶ್, ಪದ್ಮಾ, ಸುಧಾ, ವೈಭವ್ ಹಾಗೂ ಇತರರು ಇದ್ದರು.

ಬನಶಂಕರಿ ಎರಡನೇ ಹಂತದ ಗಣೇಶ ಮಂದಿರ ವಾರ್ಡ್‌ನ ಬಿಡಿಎ ಕಾಂಪ್ಲೆಕ್ಸ್ ಆವರಣದಲ್ಲಿ ವಾದ್ಯಗೋಷ್ಠಿ, ರಂಗಭೂಮಿ, ಚಿತ್ರರಂಗದ ಕಲಾವಿದರು ಹಾಗೂ ಮನೆ ಕೆಲಸ ಮಾಡುವವರಿಗೆ ಕಂದಾಯ ಸಚಿವ ಆರ್.ಅಶೋಕ ಅವರು ದಿನಸಿ ಸಾಮಗ್ರಿಗಳನ್ನು ಮಂಗಳವಾರ ವಿತರಿಸಿದರು. ಇಸ್ಕಾನ್ ದೇವಾಲಯದ ಮುಖ್ಯಸ್ಥ ಚೈತನ್ಯ ದಾಸ್, ನವೀನ್ ನಿರೋನ್ ದಾಸ್, ಸ್ಥಳೀಯ ಮುಖಂಡರಾದ ಎ.ಎಚ್. ಬಸವರಾಜು, ಎಚ್.ಹನುಮಂತರಾಯಪ್ಪ ಹಾಗೂ ಇತರರು ಇದ್ದರು.

ಹೆಸರಘಟ್ಟ ಮುಖ್ಯರಸ್ತೆಯಲ್ಲಿ ನಡೆಯುತ್ತಿರುವ ಕಾವೇರಿ ಯೋಜನೆಯ 5ನೇ ಹಂತದ ಪೈಪ್‌ಲೈನ್ ಅಳವಡಿಕೆ ಕಾಮಗಾರಿಯ ಪ್ರಗತಿಯನ್ನು ಶಾಸಕ ಆರ್. ಮಂಜುನಾಥ್ ಮಂಗಳವಾರ ಪರಿಶೀಲಿಸಿದರು. ಅಧಿಕಾರಿಗಳು ಇದ್ದರು.

ಕೊರೊನಾ ಸೋಂಕಿತರ ನೇರ ಸಂಪರ್ಕ ● ಅಭದ್ರತೆಯ ನಡುವೆಯೇ ಕೆಲಸ ನಿರ್ವಹಣೆ

ಸೋಂಕಿನ ಆತಂಕದಲ್ಲಿ ಔಷಧ ಮಳಿಗೆ ಸಿಬ್ಬಂದಿ

● ಮನೋಹರ್ ಎಂ.

ಲಾಕ್‌ಡೌನ್ ವೇಳೆ ಸೇವೆ ನೀಡುತ್ತಿರುವ ಮುನೇಶ್ವರ ನಗರದ ಮೆಡಿಕಲ್ ಸ್ಟೋರ್ –ಪ್ರಜಾವಾಣಿ ಚಿತ್ರ

ಬೆಂಗಳೂರು: 'ಆರೋಗ್ಯದಲ್ಲಿ ಏರುಪೇರು ಕಂಡುಬಂದ ತಕ್ಷಣ ಜನರು ಬರುವುದು ಔಷಧ ಮಳಿಗೆಗಳತ್ತ. ಕೊರೊನಾ ಸೋಂಕಿತರೇ ಹೆಚ್ಚಿನ ಸಂಖ್ಯೆಯಲ್ಲಿ ಔಷಧ ಖರೀದಿಗೆ ಬರುತ್ತಾರೆ. ಈ ವೇಳೆ ಫಾರ್ಮಸಿಸ್ಟ್‌ಗಳು (ಔಷಧ ವಿತರಕರು) ಹಾಗೂ ಅಲ್ಲಿನ ಕೆಲಸಗಾರರು ಸೋಂಕಿತರ ನೇರ ಸಂಪರ್ಕಕ್ಕೆ ಸಿಲುಕುತ್ತಾರೆ. ಈ ಕಠಿಣ ಸ್ಥಿತಿಯಲ್ಲಿ ಕಾರ್ಯನಿರ್ವಹಿಸುವುದೇ ಸವಾಲಾಗಿದೆ'.

ಲಾಕ್‌ಡೌನ್ ಅವಧಿಯಲ್ಲಿ ಅಗತ್ಯ ಸೇವೆಯಡಿ ಕಾರ್ಯನಿರ್ವಹಿಸುತ್ತಿರುವ ಔಷಧ ಮಳಿಗೆಗಳ ಫಾರ್ಮಸಿಸ್ಟ್‌ಗಳು ಹಾಗೂ ಅಲ್ಲಿನ ಕೆಲಸಗಾರರ ಆತಂಕದ ಮಾತುಗಳಿವು.

'ಈ ವಲಯದಲ್ಲಿ ಕೆಲಸ ಮಾಡುತ್ತಿರುವವರನ್ನು ಸರ್ಕಾರ ಗಣನೆಗೆ ತೆಗೆದುಕೊಂಡಿಲ್ಲ. ನಮ್ಮನ್ನು ಕೊರೊನಾ ಸೇನಾನಿಗಳೆಂದೂ ಪರಿಗಣಿಸಿಲ್ಲ. ಸದಾ ಅಪಾಯದ ನೆರಳಲ್ಲೇ ಕೆಲಸ ಮಾಡುತ್ತಿರುವ ನಮಗೆ ಆರೋಗ್ಯ ಭದ್ರತೆಯೂ ಇಲ್ಲ' ಎಂದು ಸಿಬ್ಬಂದಿ ಅಳಲು ತೋಡಿಕೊಂಡರು.

ಪ್ರಜಾವಾಣಿ ವಿಶೇಷ

'ಕೊರೊನಾ ನಿಯಂತ್ರಣದಲ್ಲಿ ವೈದ್ಯರಿಗೆ ಸಮಾನವಾಗಿ ಫಾರ್ಮಸಿ ಕ್ಷೇತ್ರವೂ ಕೆಲಸ ಮಾಡುತ್ತಿದೆ. ಸಣ್ಣಪುಟ್ಟ ಆರೋಗ್ಯ ಸಮಸ್ಯೆಯ ಜೊತೆಗೆ ಕೊರೊನಾ ಸೋಂಕಿನ ಲಕ್ಷಣ ಕಂಡು ಬಂದವರೂ ಔಷಧ ಖರೀದಿಗೆ ಮಳಿಗೆಗಳತ್ತ ಮೊದಲು ಧಾವಿಸುತ್ತಾರೆ. ಔಷಧ ಮಾರಾಟದ ವೇಳೆ ಅಂಗಡಿಯಲ್ಲಿರುವವರಿಗೂ ಸೋಂಕು ಹರಡಬಹುದು. ಈ ಸ್ಥಿತಿಯಲ್ಲೇ ನಾವು ಕೆಲಸ ಮಾಡುವುದು ಅನಿವಾರ್ಯ' ಎಂದು ಅವೆನ್ಯೂ ರಸ್ತೆಯ ಔಷಧ ಮಳಿಗೆಯೊಂದರ ಫಾರ್ಮಸಿಸ್ಟ್ ವಿವೇಕ್ ಕಳವಳ ವ್ಯಕ್ತಪಡಿಸಿದರು.

'ಸರ್ಕಾರ ನಮ್ಮನ್ನು ವಿಶೇಷವಾಗಿ ಪರಿಗಣನೆಗೆ ತೆಗೆದುಕೊಂಡಿಲ್ಲ. ಯಾವುದೇ ಭದ್ರತೆಯೂ ಒದಗಿಸಿಲ್ಲ. ಮಳಿಗೆಗಳಲ್ಲಿ ಮಹಿಳೆಯರು ಹಾಗೂ ಹೆಣ್ಣುಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಕೆಲಸ ಮಾಡುತ್ತಾರೆ. ಬಾಡಿಗೆ ಕಟ್ಟಡದಲ್ಲಿ ಶೌಚಾಲಯದ ವ್ಯವಸ್ಥೆಗಳಿಲ್ಲ. ನೆರೆಯ ಸಂಕೀರ್ಣದಲ್ಲಿರುವ ಶೌಚಾಲಯ ಬಳಕೆಗೆ ಬಾಡಿಗೆ ಪಾವತಿಸಬೇಕಿದೆ. ಕೆಲಸಕ್ಕೆ ಬರುವ ಸಿಬ್ಬಂದಿ ಆರೋಗ್ಯ ರಕ್ಷಣೆಯ ಹೊಣೆಯನ್ನು ನಾವೇ ಹೊತ್ತಿದ್ದೇವೆ. ಮಳಿಗೆಯಲ್ಲಿ ಕೆಲಸ ಮಾಡುತ್ತಿರುವ ಏಳು ಮಂದಿಗೂ ಆರೋಗ್ಯ ವಿಮೆ ಮಾಡಿಸಲಾಗಿದೆ' ಎಂದು ಅವರು ವಿವರಿಸಿದರು.

'ಜೀವನ ನಿರ್ವಹಣೆಗಾಗಿ ಕೆಲಸ ಅನಿವಾರ್ಯ. ಬರುವ ಸಂಬಳ ಕಡಿಮೆಯೇ ಆದರೂ ಬದುಕು ಸಾಗುತ್ತಿದೆ. ಲಾಕ್‌ಡೌನ್ ವೇಳೆ ಕೆಲಸಕ್ಕೆ ಅಡ್ಡಿಯಾಗದಿದ್ದರೂ ಆತಂಕವೇ ಹೆಚ್ಚು' ಎನ್ನುತ್ತಾರೆ ರಾಜಾಜಿನಗರದ ಔಷಧ ಮಳಿಗೆಯೊಂದರಲ್ಲಿ ಸಹಾಯಕಿಯಾಗಿರುವ ಎಸ್.ಗೀತಾ.

'ಮನೆಯಲ್ಲೇ ಪ್ರತ್ಯೇಕ ಆರೈಕೆಯಲ್ಲಿರುವವರು ತಾವೇ ಬಂದು ಔಷಧ ಖರೀದಿಸುತ್ತಾರೆ. ಒಂದು ವೇಳೆ ಅವರಿಂದ ಸೋಂಕು ತಗುಲಿದರೆ, ಕುಟುಂಬದ ಗತಿಯೇನು ಎಂಬ ಭಯ ಸದಾ ಕಾಡುತ್ತದೆ' ಎಂದು ಅವರು ತಿಳಿಸಿದರು.

'ಕೊರೊನಾ ಸೇನಾನಿಗಳೆಂದು ಪರಿಗಣಿಸಿ'

'ಫಾರ್ಮಸಿಸ್ಟ್‌ಗಳು, ಔಷಧದ ಮಳಿಗೆಗಳಲ್ಲಿ ಕೆಲಸ ಮಾಡುವ ಸಿಬ್ಬಂದಿಯನ್ನೂ ಸರ್ಕಾರ ಕೊರೊನಾ ಸೇನಾನಿಗಳೆಂದು ಪರಿಗಣಿಸಬೇಕು' ಎಂದು ಕರ್ನಾಟಕ ಫಾರ್ಮ ಚಿಲ್ಲರೆ ವ್ಯಾಪಾರಿಗಳು ಮತ್ತು ವಿತರಕರ ಸಂಘದ ಅಧ್ಯಕ್ಷ ಸಿ.ಜಯರಾಂ ಒತ್ತಾಯಿಸಿದರು.

'ಈ ಸಂಬಂಧ ಕೇಂದ್ರ ಸರ್ಕಾರಕ್ಕೆ ಬೇಡಿಕೆಗಳನ್ನು ಸಲ್ಲಿಸಲಾಗಿದೆ. ನಮ್ಮ ಸೇವೆಯನ್ನು ಪರಿಗಣಿಸಿ, ಸರ್ಕಾರ ವಿಶೇಷ ಆರ್ಥಿಕ ನೆರವು ಘೋಷಿಸಬೇಕು. ಎಲ್ಲ ಸಿಬ್ಬಂದಿಗೆ ₹50 ಲಕ್ಷದವರೆಗೆ ಆರೋಗ್ಯ ವಿಮೆ ಒದಗಿಸಬೇಕು ಹಾಗೂ ಕೊರೊನಾದಿಂದ ಮೃತಪಟ್ಟಿರುವವರ ಕುಟುಂಬಗಳಿಗೆ ತಲಾ ₹10 ಲಕ್ಷ ಪರಿಹಾರ ಒದಗಿಸಬೇಕು' ಎಂದೂ ಹೇಳಿದರು.

ಅಂಕಿ-ಅಂಶಗಳು

10 ಸಾವಿರ ಬೆಂಗಳೂರಿನಲ್ಲಿರುವ ಔಷಧ ವಿತರಕರು

28 ಸಾವಿರ ರಾಜ್ಯದಲ್ಲಿರುವ ಔಷಧ ವಿತರಕರು

50 ಕೊರೊನಾದಿಂದ ಮೃತಪಟ್ಟವರು (ಅಂದಾಜು)

ಲಾಕ್‌ಡೌನ್‌ನಿಂದ ಕೆಲಸಕ್ಕೆ ತೆರಳಲು ಸಾರಿಗೆ ವ್ಯವಸ್ಥೆ ಇಲ್ಲ. ಆಹಾರದ ಲಭ್ಯತೆಯೂ ಇಲ್ಲ. ಸರ್ಕಾರ ಆರೋಗ್ಯ ಭದ್ರತೆ ನೀಡಿದರೆ ನಿರಾಂತಕ.
-ಸುಮಲತಾ, ಔಷಧ ಮಳಿಗೆ ಸಿಬ್ಬಂದಿ, ಅವೆನ್ಯೂ ರಸ್ತೆ

ಕೋವಿಡ್: ನಗರದಲ್ಲಿ ಸಾವಿನ ಪ್ರಮಾಣ ಶೇಕಡ 5ಕ್ಕೆ ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಕೋವಿಡ್ ಪರೀಕ್ಷೆ ಮಾಡಿಸಿಕೊಂಡವರಲ್ಲಿ ಸೋಂಕು ಪತ್ತೆ ಪ್ರಮಾಣವನ್ನು ಶತಾಯ-ಗತಾಯ ಶೇ 5ಕ್ಕೆ ಇಳಿಸಿಬೇಕು ಎಂದು ಬಿಬಿಎಂಪಿ ಹರಸಾಹಸಪಡುತ್ತಿದೆ. ಇದರಲ್ಲಿ ತಕ್ಕಮಟ್ಟಿನ ಯಶಸ್ಸನ್ನೂ ಗಳಿಸಿದೆ. ಆದರೆ, ಈ ಯಶಸ್ಸಿನಿಂದ ಖುಷಿ ಪಡುವ ಸ್ಥಿತಿಯಲ್ಲಿ ಅಧಿಕಾರಿಗಳಿಲ್ಲ. ಏಕೆಂದರೆ, ಕೋವಿಡ್‌ನಿಂದ ಸಾಯುವವರ ಪ್ರಮಾಣ ಶೇ 5ಕ್ಕೆ ಏರಿಕೆ ಕಂಡಿದೆ.

ಬಿಬಿಎಂಪಿ ಅಂಕಿ-ಅಂಶಗಳ ಪ್ರಕಾರ 2021ರ ಏಪ್ರಿಲ್ ಆರಂಭದಲ್ಲಿ ಶೇ 0.37ರಷ್ಟಿದ್ದ ಕೋವಿಡ್ ಪೀಡಿತರ ಸಾವಿನ ದರ ಏಪ್ರಿಲ್ ಅಂತ್ಯಕ್ಕೆ ಶೇ 0.56ರಷ್ಟಿತ್ತು. ಮಂಗಳವಾರ ಬಿಡುಗಡೆ ಮಾಡಿದ ಅಂಕಿ ಅಂಶಗಳ ಪ್ರಕಾರ ಸಾವಿನ ದರ ಶೇ 5ಕ್ಕೆ ತಲುಪಿದೆ. ನಗರದಲ್ಲಿ ಇದುವರೆಗೆ ಒಟ್ಟು 13,623 ಮಂದಿ ಕೋವಿಡ್‌ನಿಂದ ಅಸು ನೀಗಿದ್ದಾರೆ. ಅವರಲ್ಲಿ ಮೇ ತಿಂಗಳಿನಲ್ಲಿ ಮೃತಪಟ್ಟವರ ಸಂಖ್ಯೆ 6,978. ಅಂದರೆ ನಗರದಲ್ಲಿ ಇದುವರೆಗೆ ಕೋವಿಡ್‌ನಿಂದ ಸತ್ತವರಲ್ಲಿ ಶೇ 51ರಷ್ಟು ಮಂದಿ ಮೇ ತಿಂಗಳೊಂದರಲ್ಲೇ ಕೊನೆಯುಸಿರೆಳೆದಿದ್ದಾರೆ.

ಕೈ ಹಿಡಿಯದ ಸರದಿ ವ್ಯವಸ್ಥೆ: 'ಹಾಸಿಗೆ ಹಂಚಿಕೆಗೆ ಸರದಿ ವ್ಯವಸ್ಥೆ ಜಾರಿಗೊಳಿಸುವ ಮೂಲಕ ವ್ಯವಸ್ಥೆಯಲ್ಲಿ ಪಾರದರ್ಶಕತೆ ತಂದಿದ್ದೇವೆ' ಎಂದು ಹಾಸಿಗೆ ಹಂಚಿಕೆಯ ಉಸ್ತುವಾರಿ ಸಚಿವ ಅರವಿಂದ ಲಿಂಬಾವಳಿ ಹಾಗೂ ಸಂಸದ ತೇಜಸ್ವಿ ಸೂರ್ಯ ಹೇಳಿಕೊಂಡಿದ್ದಾರೆ. ಆದರೆ, ಈ ಸುಧಾರಣಾ ಕ್ರಮಗಳ ಬಳಿಕವೂ ಸಾವಿನ ಪ್ರಮಾಣ ತಗ್ಗಿಲ್ಲ. ಕೋವಿಡ್ ಪ್ರಕರಣಗಳ ಸಂಖ್ಯೆ ಇಳಿಮುಖವಾಗಲು ಶುರುವಾಗಿ ಮೂರು ವಾರಗಳು ಉರುಳಿವೆ. ಆದರೂ ಸಾವಿನ ಸಂಖ್ಯೆ ಇಳಿಯುತ್ತಿಲ್ಲ.

ಈಗಲೂ ಐಸಿಯು ಹಾಸಿಗೆ ಒದಗಿಸುವಂತೆ ಕೋರಿ ನೂರಕ್ಕೂ ಅಧಿಕ ಕರೆಗಳು ಬರುತ್ತಿವೆ. ಚಿಕಿತ್ಸೆ ನಿರ್ಧಾರ ಕೇಂದ್ರಗಳಿಗೆ ಬರುವವರಿಗೆ ವೆಂಟಿಲೇಟರ್ ವ್ಯವಸ್ಥೆಯ ಹಾಸಿಗೆ ಅಗತ್ಯ ಇದ್ದರೂ ಅದನ್ನು ಒದಗಿಸಲು ಸಾಧ್ಯವಾಗದ ಸ್ಥಿತಿ ಇದೆ ಎಂದು ಅಸಹಾಯಕತೆ ವ್ಯಕ್ತಪಡಿಸುತ್ತಾರೆ ಬಿಬಿಎಂಪಿ ಅಧಿಕಾರಿಗಳು.

ಮಂಗಳವಾರದ ಅಂಕಿ ಅಂಶಗಳ ಪ್ರಕಾರ ಇಡೀ ನಗರದಲ್ಲಿ ಅಷ್ಟೂ ಆಸ್ಪತ್ರೆಗಳ ಐಸಿಯು ಘಟಕಗಳಲ್ಲಿ ವೆಂಟಿಲೇಟರ್ ಸೌಲಭ್ಯ ಇರುವ 20 ಹಾಸಿಗೆಗಳು ಮಾತ್ರ ಲಭ್ಯ ಇದ್ದವು.

'ಈಗಲೂ ಮನೆಯಲ್ಲೇ ಚಿಕಿತ್ಸೆ ಪಡೆಯುತ್ತಿರುವ ಅನೇಕರಲ್ಲಿ ದಿಢೀರ್ ಉಸಿರಾಟದ ಸಮಸ್ಯೆ ಕಾಣಿಸಿಕೊಳ್ಳುತ್ತದೆ. ಅಂತಹವರಿಗೆ ತಕ್ಷಣ ತೀವ್ರ ನಿಗಾ ಘಟಕಗಳಲ್ಲಿ (ಐಸಿಯು) ವೆಂಟಿಲೇಟರ್ ಸೌಲಭ್ಯ ಹಾಸಿಗೆಗಳ ಅಗತ್ಯವಿದೆ. ವೆಂಟಿಲೇಟರ್ ಸೌಲಭ್ಯ ಇರುವ ಹಾಸಿಗೆಗಳ ಕೊರತೆ ಈಗಲೂ ಮುಂದುವರಿದಿದೆ' ಎಂದು ಅಧಿಕಾರಿಯೊಬ್ಬರು ಅಭಿಪ್ರಾಯಪಟ್ಟರು.

'ಒಮ್ಮೆ ಐಸಿಯುಗೆ ದಾಖಲಾದವರು ಪೂರ್ತಿ ಗುಣಮುಖರಾಗಲು ಕನಿಷ್ಠ ಪಕ್ಷ 10 ದಿನಗಳಾದರೂ ಬೇಕು. ಐಸಿಯು ಹಾಸಿಗೆಗಳ ಸಂಖ್ಯೆ ಹೆಚ್ಚಿಸದೇ ಹೋದರೆ, ಕೋವಿಡ್ ಪ್ರಕರಣಗಳ ಸಂಖ್ಯೆ ಇಳಿಕೆ ಕಂಡರೂ ಸಾವಿನ ಪ್ರಮಾಣ ತಗ್ಗುವುದಿಲ್ಲ' ಎಂದರು.

ಕೋವಿಡ್: ಸಾವಿರ ದರ, ಸೋಂಕು ಪತ್ತೆ ದರಗಳ ವಿವರ

ದಿನಾಂಕ	ಸೋಂಕು ಪತ್ತೆ	ಸೋಂಕು ಪತ್ತೆ ದರ (ಶೇ)	ಸಾವಿನ ದರ (ಶೇ)
ಮಾ.30–ಏ 05	20,844	5.04	0.37
ಏ.06–ಏ.12	38,844	7.51	0.56
ಏ. 13– ಏ.19	76,166	12.13	0.53
ಏ. 20– ಏ.26	1,11,716	18.22	0.59
ಏ.27– ಮೇ 03	1,52,523	35.13	0.55
ಮೇ 04– ಮೇ 10	1,43,245	38.53	1.29
ಮೇ 11– ಮೇ 17	89,553	30.65	1.49
ಮೇ 18– ಮೇ 24	58,424	17.57	3.16
ಮೇ 25– ಮೇ 31	35,171	9.35	5.00

ಬೆಂಗಳೂರು ನಗರದ ಕೋವಿಡ್ ಅಂಕಿ-ಅಂಶ

11,66,647 ▲ ಒಟ್ಟು ಸೋಂಕಿತರು

1,43,702 ▼	10,09,322 ▲	13,622 ▲
ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು

ಮಂಗಳವಾರದ ಏರಿಕೆ

ಹೊಸ ಪ್ರಕರಣ	3,418 ▼
ಗುಣಮುಖ	5,483 ▼
ಸಾವು	276 ▲

ಆಧಾರ: ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಕಪ್ಪು ಶಿಲೀಂಧ್ರ: ಔಷಧದ 10 ವಯಲ್ಸ್ ಕಳವು

ಬೆಂಗಳೂರು: ವಿಕ್ಟೋರಿಯಾ ಆಸ್ಪತ್ರೆ ರೋಗಿಗಳ ಚಿಕಿತ್ಸೆಗಾಗಿ ವಿತರಿಸಲಾಗಿದ್ದ 'ಕಪ್ಪು ಶಿಲೀಂಧ್ರ' ರೋಗದ 'ಆ್ಯಂಫೊಟೆರಿಸಿನ್-ಬಿ' ಔಷಧದ 10 ವಯಲ್ಸ್‌ಗಳು ಕಳವಾಗಿದ್ದು, ಈ ಸಂಬಂಧ ವಿ.ವಿ. ಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಕೋವಿಡ್ ಆರೈಕೆ ಕೇಂದ್ರದ ಅಧಿಕಾರಿ ದೂರು ನೀಡಿದ್ದಾರೆ. ಅಪರಿಚಿತರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ. ಆಸ್ಪತ್ರೆಯಲ್ಲಿರುವ ವ್ಯಕ್ತಿಗಳೇ ಕಳವು ಮಾಡಿರುವ ಅನುಮಾನವಿದೆ' ಎಂದು ಪೊಲೀಸರು ಹೇಳಿದರು.

'ಕಪ್ಪು ಶಿಲೀಂಧ್ರ ರೋಗದಿಂದ ಬಳಲುತ್ತಿರುವವರಿಗೆ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಔಷಧ ನಿಯಂತ್ರಣಾಧಿಕಾರಿಗಳು ರೋಗಿಗಳ ಸಂಖ್ಯೆಗೆ ತಕ್ಕಂತೆ ವಯಲ್ಸ್ ಗಳನ್ನು ವಿಕ್ಟೋರಿಯಾ ಆಸ್ಪತ್ರೆಗೆ ಪೂರೈ ಸಿದ್ದರು.'

'ಕರ್ತವ್ಯದಲ್ಲಿದ್ದ ವೈದ್ಯರು ರೋಗಿಗಳಿಗೆ ಚಿಕಿತ್ಸೆ ನೀಡಲು ಬಂದಾಗ, ವಯಲ್ಸ್‌ಗಳಲ್ಲಿ ವ್ಯತ್ಯಾಸ ಕಂಡುಬಂದಿತ್ತು. ಹೆಚ್ಚಿನ ಪರಿಶೀಲನೆ ನಡೆಸಿದಾಗ, 10 ವಯಲ್ಸ್‌ಗಳನ್ನು ಯಾರೋ ಕಳವು ಮಾಡಿದ್ದು ಗೊತ್ತಾಗಿದೆ.' ಎಂದೂ ಪೊಲೀಸರು ತಿಳಿಸಿದರು.

ರೆಮ್‌ಡಿಸಿವಿರ್ ಚುಚ್ಚುಮದ್ದು ಕಳವು ಮಾಡಿ ಮಾಗಡಿ ರಸ್ತೆಯಲ್ಲಿ ಮಾರಾಟ ಮಾಡಲು ಬಂದಿದ್ದ ವಿಕ್ಟೋರಿಯಾ ಆಸ್ಪತ್ರೆಯ ವಾರ್ಡ್ ಬಾಯ್‌ನನ್ನು ಪೊಲೀಸರು ಸೆರೆ ಹಿಡಿದಿದ್ದರು.

ಮಾಸ್ಕ್ ಗಲಾಟೆ; ಯುವತಿ ವಶಕ್ಕೆ

ಬೆಂಗಳೂರು: ಸದಾಶಿವನಗರ ಠಾಣೆ ವ್ಯಾಪ್ತಿಯ ಬಿ.ಎನ್. ರಸ್ತೆಯಲ್ಲಿ ಮಾಸ್ಕ್ ವಿಚಾರಕ್ಕಾಗಿ ಮಂಗಳವಾರ ಗಲಾಟೆ ನಡೆದಿದ್ದು, ಈ ಸಂಬಂಧ ಯುವತಿಯೊಬ್ಬರನ್ನು ಪೊಲೀಸರು ವಶಕ್ಕೆ ಪಡೆದರು.

'ಯುವತಿ ಹೆಸರು ಅದ್ವೈತಾ ಎಂದು ಹೇಳಲಾಗಿದೆ. ಎರಡು ಶ್ವಾನಗಳ ಜೊತೆಯಲ್ಲಿ ಅವರು ರಸ್ತೆಗೆ ಬಂದಿದ್ದರು. ಅದೇ ಸಂದರ್ಭದಲ್ಲಿ ಇನ್ನೊಬ್ಬ ಯುವತಿ, ಬಾಯಿಗೆ ಮಾತ್ರ ಮಾಸ್ಕ್ ಹಾಕಿಕೊಂಡು ಹೊರಟಿದ್ದರು. ಅದನ್ನು ಪ್ರಶ್ನಿಸಿದ್ದ ಅದ್ವೈತಾ, 'ಮೂಗು ಹಾಗೂ ಬಾಯಿ ಎರಡಕ್ಕೂ ಮಾಸ್ಕ್ ಹಾಕಿಕೊಳ್ಳಬೇಕು' ಎಂದು ಹೇಳಿದ್ದರು.

'ಮಾಸ್ಕ್ ಜಾರಿ ಬಾಯಿ ಮೇಲೆ ಬಂದಿದೆ' ಎಂದು ಯುವತಿ ಉತ್ತರಿಸಿದ್ದರು. ಅಷ್ಟಕ್ಕೆ ಮಾತಿಗೆ ಮಾತು ಬೆಳೆದು ಪರಿಸ್ಥಿತಿ ವಿಕೋಪಕ್ಕೆ ಹೋಗುತ್ತಿದ್ದಂತೆ ಅದ್ವೈತಾ, ಯುವತಿ ಮೇಲೆ ಹಲ್ಲೆ ಮಾಡಿದ್ದರು. ಸಹಾಯಕ್ಕೆ ಬಂದ ಸ್ಥಳೀಯರು ಯುವತಿಯನ್ನು ರಕ್ಷಿಸಿ ಆಸ್ಪತ್ರೆಗೆ ಕರೆದೊಯ್ದರು. ಸ್ಥಳೀಯರ ಮೇಲೆಯೂ ಅದ್ವೈತಾ ಹರಿಹಾಯ್ದು ನಿಂದಿಸಿದ್ದರು. ಸ್ಥಳಕ್ಕೆ ಹೋದ ಹೊಯ್ಸಳ ಸಿಬ್ಬಂದಿ, ಎರಡೂ ಶ್ವಾನಗಳ ಸಮೇತ ಅದ್ವೈತಾ ಅವರನ್ನು ಠಾಣೆಗೆ ಕರೆತಂದರು' ಎಂದೂ ಮೂಲಗಳು ತಿಳಿಸಿವೆ.

ಲಸಿಕಾ ಕೇಂದ್ರ–ಬಿಜೆಪಿ ಬೆಂಬಲಿಗರಿಗೆ ಹಿಂಬಾಗಿಲ ಪ್ರವೇಶ ಆರೋಪ

ಎಲ್ಲರಿಗೂ ಒಂದೇ ನಿಯಮ: ಗೌರವ್ ಸ್ಪಷ್ಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಲಸಿಕೆ ವಿತರಣೆಗೆ ಎಲ್ಲರಿಗೂ ಒಂದೇ ನಿಯಮ. ಅದರ ಪ್ರಕಾರವೇ ಎಲ್ಲರೂ ಲಸಿಕೆ ಪಡೆಯಬೇಕು. ಯಾರಿಗೂ ವಿಶೇಷ ಆದ್ಯತೆ ನೀಡಲು ಅವಕಾಶ ಇಲ್ಲ' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಸ್ಪಷ್ಟಪಡಿಸಿದರು.

'ಕೆಲವು ಲಸಿಕಾ ಕೇಂದ್ರಗಳಲ್ಲಿ ಬಿಜೆಪಿ ಬೆಂಬಲಿಗರು ಸರದಿ ಪಾಲಿಸದೇ ಹಿಂಬಾಗಿಲಿನ ಮೂಲಕ ಬಂದು ಲಸಿಕೆ ಪಡೆಯುತ್ತಿದ್ದಾರೆ. ಬಿಜೆಪಿ ಪ್ರಮುಖರೇ ಲಸಿಕಾ ಕೇಂದ್ರದಲ್ಲಿ ಕುಳಿತುಕೊಂಡು ಇಂತಹ ವ್ಯವಸ್ಥೆ ಮಾಡುತ್ತಿದ್ದಾರೆ' ಎಂಬ ಆರೋಪದ ಕುರಿತು ಸುದ್ದಿಗಾರರ ಪ್ರಶ್ನೆಗೆ ಅವರು ಮಂಗಳವಾರ ಪ್ರತಿಕ್ರಿಯಿಸಿದರು.

'ಲಸಿಕಾ ಕೇಂದ್ರಗಳ ನಿರ್ವಹಣೆಗೆ ಬಿಬಿಎಂಪಿ ಸಿಬ್ಬಂದಿ ಅಲ್ಲದೇ ಬೇರೆಯವರು ಇದ್ದರೆ ಅದನ್ನು ತಪ್ಪು ಎನ್ನಲಾಗದು. ಸ್ಥಳೀಯ ಪ್ರಮುಖರನ್ನು ವಿಶ್ವಾಸಕ್ಕೆ ಪಡೆದು ಲಸಿಕಾ ಅಭಿಯಾನ ನಡೆಸಲಾಗುತ್ತಿದೆ. ಆದರೆ, ಲಸಿಕೆ ಅಭಿಯಾನವು ಸರ್ಕಾರ ನಿಗದಿಪಡಿಸಿದ ಮಾನದಂಡದ ಪ್ರಕಾರವೇ ನಡೆಯಲಿದೆ' ಎಂದರು.

'ಸರ್ಕಾರದ ನಿರ್ದೇಶನದಂತೆ ಸಾರ್ವಜನಿಕರ ಹಿತದೃಷ್ಟಿಯಿಂದ ಹೆಚ್ಚು ಸ್ಥಳಾವಕಾಶ ಇರುವ ಪ್ರದೇಶಗಳಲ್ಲಿ ಲಸಿಕಾ ಕೇಂದ್ರಗಳನ್ನು ಆರಂಭಿಸಿದ್ದೇವೆ. ಎಲ್ಲ 198 ವಾರ್ಡ್‌ಗಳಲ್ಲಿ ಲಸಿಕಾ ಕೇಂದ್ರಗಳಿವೆ. ಕೆಲವು ವಾರ್ಡ್‌ಗಳಲ್ಲಿ ಎರಡೆರಡು ಕಡೆ ಲಸಿಕೆ ಹಾಕಲು ವ್ಯವಸ್ಥೆ ಕಲ್ಪಿಸಲಾಗಿದೆ. 45 ವರ್ಷ ಮೇಲ್ಪಟ್ಟವರಿಗೆಲ್ಲ ಈ ಕೇಂದ್ರಗಳಲ್ಲೇ ಲಸಿಕೆ ಹಾಕಲಾಗುತ್ತಿದೆ. ನೋಂದಣಿ ಮಾಡಿದವರಿಗೆ ಹಾಗೂ ನೇರವಾಗಿ ಕೇಂದ್ರಕ್ಕೆ ಬರುವವರಿಗೂ ಲಸಿಕೆ ಪಡೆಯಲು ಅವಕಾಶ ಕಲ್ಪಿಸಲಾಗಿದೆ' ಎಂದರು.

'ಕೊರೊನಾ ನಿಯಂತ್ರಣದಲ್ಲಿ ಮುಂಚೂಣಿಯಲ್ಲಿದ್ದ 20 ಕಾರ್ಮಿಕ ವರ್ಗಗಳನ್ನು ಸರ್ಕಾರ ಗುರುತಿಸಿದೆ. ಈ ವರ್ಗಗಳಲ್ಲಿನ 18ರಿಂದ 45 ವರ್ಷಗಳ ಒಳಗಿನವರಿಗೆ ಲಸಿಕೆ ಹಾಕಲು ವಿಶೇಷ ಶಿಬಿರಗಳನ್ನು ಆಯೋಜಿಸಲಾಗುತ್ತಿದೆ' ಎಂದು ಮಾಹಿತಿ ನೀಡಿದರು.

'18 ವರ್ಷಗಳಿಂದ 45 ವರ್ಷಗಳ ಒಳಗಿನವರಿಗೆ ಲಸಿಕೆ ನೀಡಲು ಸರ್ಕಾರದ ಗೊತ್ತುಪಡಿಸಿದ ಆದ್ಯತಾ ಪಟ್ಟಿಯಲ್ಲಿ ಕೊಳೆಗೇರಿ ನಿವಾಸಿಗಳ ಹೆಸರು ಇಲ್ಲ. ಹಾಗಾಗಿ ಕಾರ್ಪೊರೇಟ್ ಸಂಸ್ಥೆಗಳ ಸಾಮಾಜಿಕ ಹೊಣೆಗಾರಿಕೆ ನಿಧಿಯ ನೆರವಿನಡಿ ಕೊಳೆಗೇರಿಗಳ ಜನರಿಗೆ ಲಸಿಕೆ ಹಾಕಲು ವಿಶೇಷ ಅಭಿಯಾನ ಹಮ್ಮಿಕೊಳ್ಳಲಾಗುತ್ತಿದೆ. ಅಲ್ಲಿನ ನಿವಾಸಿಗಳಿಗೆ ಲಸಿಕೆ ಬಗ್ಗೆ ಸಂದೇಹ ನಿವಾರಣೆಗೆ ಸರ್ಕಾರೇತರ ಸಂಸ್ಥೆಗಳ ನೆರವಿನಿಂದ ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳುತ್ತೇವೆ' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

'ಲಾಕ್‌ಡೌನ್ ಕುರಿತು ಸರ್ಕಾರವೇ ನಿರ್ಣಯ ಕೈಗೊಳ್ಳಲಿದೆ. ಖಾಸಗಿ ಆಸ್ಪತ್ರೆ ಹಾಗೂ ಸರ್ಕಾರದ ಲಸಿಕಾ ಕೇಂದ್ರಗಳೆರಡಕ್ಕೂ ಲಸಿಕೆ ಪೂರೈಕೆ ಆಗುತ್ತಿದೆ. ಸೋಮವಾರ 90 ಸಾವಿರ ಮಂದಿಗೆ ಲಸಿಕೆ ನೀಡಲಾಗಿದೆ. ಇದರಲ್ಲಿ 40 ಸಾವಿರ ಮಂದಿ ಸರ್ಕಾರ ಲಸಿಕಾ ಕೇಂದ್ರಗಳಲ್ಲಿ ಹಾಗೂ 50 ಸಾವಿರ ಮಂದಿ ಖಾಸಗಿ ಆಸ್ಪತ್ರೆಗಳಲ್ಲಿ ಲಸಿಕೆ ಪಡೆದಿದ್ದಾರೆ' ಎಂದು ಮಾಹಿತಿ ನೀಡಿದರು.

'ನಮೂನೆ ಒದಗಿಸುವುದು ನೋಡಲ್ ಅಧಿಕಾರಿಗಳ ಹೊಣೆ'

ಗೌರವ್ ಗುಪ್ತ

'18ರಿಂದ 44 ವರ್ಷಗಳ ಒಳಗಿನ ಆದ್ಯತಾ ಗುಂಪಿನ ಕಾರ್ಮಿಕರು ಲಸಿಕೆ ಪಡೆಯಲು ಅಗತ್ಯವಿರುವ ನಮೂನೆಗಳನ್ನು ಸಂಬಂಧಪಟ್ಟ ನೋಡಲ್ ಅಧಿಕಾರಿಗಳೇ ಪೂರೈಸಬೇಕು. ಲಸಿಕೆ ಪಡೆಯಲು ಬರುವವರು ನಮೂನೆಗಳನ್ನು ತರಬೇಕಾದ ಅಗತ್ಯವಿಲ್ಲ' ಎಂದು ಗೌರವ್ ಗುಪ್ತ ಸ್ಪಷ್ಟಪಡಿಸಿದರು.

ಜೆರಾಕ್ಸ್ ಅಂಗಡಿಗಳು ತೆರೆಯದ ಕಾರಣ ನಮೂನೆಗಳ ಪ್ರತಿ ಮಾಡಿಸಲು ಕಾರ್ಮಿಕರು ಸಮಸ್ಯೆ ಎದುರಿಸುತ್ತಿರುವ ದೂರಿನ ಬಗ್ಗೆ ಅವರು ಪ್ರತಿಕ್ರಿಯಿಸಿದರು.

'ಕೆಲಸಗಾರರು ಸರ್ಕಾರ ಗುರುತಿಸಿದ ಗುಂಪಿನಡಿ ಬರುತ್ತಾರೆಯೇ ಎಂಬುದನ್ನು ಅವರ ಸಂಘದ ಪದಾಧಿಕಾರಿಗಳು ಖಾತರಿಪಡಿಸಬೇಕು. ನಮೂನೆ ಒದಗಿಸಿ ಭರ್ತಿ ಮಾಡಲು ನೋಡಲ್ ಅಧಿಕಾರಿಗಳು ಹಾಗೂ ಸಂಘದ ಪದಾಧಿಕಾರಿಗಳು ನೆರವಾಗಬೇಕು' ಎಂದು ಅವರು ತಿಳಿಸಿದರು.

ಅಂತರ ಮರೆತರು

ಕಾಡುಮಲ್ಲೇಶ್ವರ ಗೆಳೆಯರ ಬಳಗದಿಂದ ಮಲ್ಲೇಶ್ವರದಲ್ಲಿ ಮಂಗಳವಾರ ಆಯೋಜಿಸಿದ್ದ ಉಚಿತ ಆಹಾರ ವಿತರಣೆ ವೇಳೆ ಜನರು ಅಂತರ ಕಾಯ್ದುಕೊಳ್ಳದೆ ಆಹಾರ ಪಡೆಯಲು ಮುಗಿಬಿದ್ದರು –ಪ್ರಜಾವಾಣಿ ಚಿತ್ರ

ಜೂಜಾಟ: ₹ 6.70 ಲಕ್ಷ ಜಪ್ತಿ

ಬೆಂಗಳೂರು: ಲಾಕ್‌ಡೌನ್ ವೇಳೆ ಜೂಜು ಆಡುತ್ತಿದ್ದ 9 ಮಂದಿಯನ್ನು ಬಾಗಲೂರು ಪೊಲೀಸರು ಬಂಧಿಸಿದ್ದಾರೆ.

'ಆರೋಪಿಗಳಾದ ಮಂಜುನಾಥ್, ಲಿಖಿತ್, ಆನಂತಕುಮಾರ್, ಮುನಿಕೃಷ್ಣ, ನಾಗೇಂದ್ರ ಕುಮಾರ್, ಶ್ರೀನಿವಾಸ್, ಪ್ರಶಾಂತ್, ಶ್ರೀನಿವಾಸಲು, ಮಂಜೇಗೌಡ ಬಂಧಿತರು. ಇವರೆಲ್ಲ ಸ್ಥಳೀಯ ವಿನಾಯಕನಗರ ಹಾಗೂ ಸುತ್ತಮುತ್ತಲಿನ ಪ್ರದೇಶಗಳ ನಿವಾಸಿಗಳು. ಅವರಿಂದ ₹ 6.70 ಲಕ್ಷ ನಗದು ಹಾಗೂ ಮೊಬೈಲ್‌ಗಳನ್ನು ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಬಾಗಲೂರು ಬಳಿಯ ವಿನಾಯಕ ನಗರದ ನಿರ್ಮಾಣ ಹಂತದ ಕಟ್ಟಡದ ಕೊಠಡಿಗಳಲ್ಲಿ ಸೇರಿದ್ದ ಆರೋಪಿಗಳು, ಜೂಜು ಆಡುತ್ತಿದ್ದರು. ಮಾಹಿತಿ ಬರುತ್ತಿದ್ದಂತೆ ಇನ್‌ಸ್ಪೆಕ್ಟರ್ ನೇತೃತ್ವದ ತಂಡ ದಾಳಿ ಮಾಡಿತ್ತು. 'ಕಟ್ಟಡದ ಮಾಲೀಕರೇ ಇತರೆ ಆರೋಪಿಗಳನ್ನು ಆಹ್ವಾನಿಸಿ ಜೂಜಾಟ ಆಡಿಸುತ್ತಿದ್ದರು' ಎಂದೂ ಪೊಲೀಸರು ತಿಳಿಸಿದರು.

ಜನರಿಗೆ ನೀಡಬೇಕಾಗಿದ್ದ ಲಸಿಕೆ ಬಿಜೆಪಿ ಕಾರ್ಯಕರ್ತರ ಪಾಲು!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜನರಿಗೆ ನೀಡಬೇಕಾಗಿದ್ದ ಕೋವಿಡ್ ಲಸಿಕೆಯನ್ನು ಪಕ್ಷದ ಕಾರ್ಯಕರ್ತರಿಗೆ ಹಾಕಿಸಿರುವ ಸಿ.ವಿ.ರಾಮನ್ ನಗರ ಕ್ಷೇತ್ರದ ಬಿಜೆಪಿ ಶಾಸಕ ಎಸ್.ರಘು ನಡೆಯ ವಿರುದ್ಧ ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಭುವನೇಶ್ವರಿ ನಗರದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಲಸಿಕೆ ಪಡೆಯಲು ಸುಮಾರು 300 ಮಂದಿ ಹೆಸರು ನೋಂದಾಯಿಸಿದ್ದರು. ಅವರಿಗೆ ಟೋಕನ್ ಕೂಡ ನೀಡಲಾಗಿತ್ತು. ಆರೋಗ್ಯ ಕೇಂದ್ರಕ್ಕೆ ಬಂದವರನ್ನು ಅಲ್ಲಿನ ಸಿಬ್ಬಂದಿ ಲಸಿಕೆ ಇಲ್ಲ ಎಂದು ಹೇಳಿ ವಾಪಸ್ ಕಳಿಸಿದ್ದಾರೆ. ಇದರಿಂದ ಕೆರಳಿದ ಅವರು ಸಿಬ್ಬಂದಿ ಜೊತೆ ವಾಗ್ವಾದ ನಡೆಸಿದ್ದಾರೆ.

ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಹಾಕಬೇಕಾಗಿದ್ದ ಲಸಿಕೆಗಳನ್ನು ರಘು ಅವರ ಒಡೆತನದ ಓಂ ಶಕ್ತಿ ಕಲ್ಯಾಣ ಮಂಟಪದಲ್ಲಿ ಕಾರ್ಯಕರ್ತರಿಗಾಗಿ ವ್ಯವಸ್ಥೆ ಮಾಡಿದ್ದ ಕಾರ್ಯಕ್ರಮಕ್ಕೆ ಕಳುಹಿಸಲಾಯಿತು. ಹೀಗಾಗಿ, ನೋಂದಾಯಿಸಿ ಕಾಯುತ್ತಿದ್ದವರಿಗೆ ಲಸಿಕೆ ಸಿಗಲಿಲ್ಲ ಎಂದು ಜನ ಅಸಹನೆ ವ್ಯಕ್ತಪಡಿಸಿದ್ದಾರೆ.

'ರಘು ಅವರು ತಮ್ಮ ಒಡೆತನದ ಓಂ ಶಕ್ತಿ ಕಲ್ಯಾಣ ಮಂಟಪದಲ್ಲಿ ಬಿಜೆಪಿ ಕಾರ್ಯಕರ್ತರು, ತಮ್ಮ ಆಪ್ತರು ಹಾಗೂ ಕುಟುಂಬದ ಸದಸ್ಯರಿಗೆ ಲಸಿಕೆಯನ್ನು ಉಚಿತವಾಗಿ ನೀಡಿದ್ದಾರೆ. ಈ ಸಂಬಂಧ ಬ್ಯಾನರ್ ಕೂಡ ಹಾಕಿಸಿದ್ದಾರೆ. ಅಲ್ಲಿ ಸೇರಿದ್ದವರು ಅಂತರ ನಿಯಮವನ್ನೂ ಗಾಳಿಗೆ ತೂರಿದ್ದಾರೆ' ಎಂದು ಸ್ಥಳೀಯರು ಆರೋಪಿಸಿದ್ದಾರೆ.

'ವಯಸ್ಸಾದ ಅಪ್ಪ ಅಮ್ಮನಿಗೆ ಲಸಿಕೆ ಹಾಕಿಸಬೇಕಿತ್ತು. ಹೀಗಾಗಿ ಬೆಳಿಗ್ಗೆ 7 ಗಂಟೆಗೇ ಹೋಗಿ ಟೋಕನ್ ಪಡೆದುಕೊಂಡಿದ್ದೆ. 9.45ಕ್ಕೆ ಅಪ್ಪ ಅಮ್ಮನನ್ನು ಕರೆದುಕೊಂಡು ಬರುವಂತೆ ಆರೋಗ್ಯ ಕೇಂದ್ರದ ಸಿಬ್ಬಂದಿ ಸೂಚಿಸಿದ್ದರು. ಪೋಷಕರು ಮಧುಮೇಹದಿಂದ ಬಳಲುತ್ತಿದ್ದಾರೆ. ಹೀಗಾಗಿ ಉಪಾಹಾರವಿದ್ದ ಬಾಕ್ಸ್‌ನೊಂದಿಗೆ ನಿಗದಿತ ಸಮಯಕ್ಕೆ ಕೇಂದ್ರದ ಬಳಿ ಹೋದೆ. 10.15ಕ್ಕೆ ಬಂದ ಸಿಬ್ಬಂದಿ, 'ಇಲ್ಲಿ ಲಸಿಕೆ ನೀಡುವುದಿಲ್ಲ ನೀವೆಲ್ಲಾ ಕಲ್ಯಾಣ ಮಂಟಪಕ್ಕೆ ಹೋಗಿ' ಅಂದರು. ಅಲ್ಲಿ ತುಂಬಾ ಜನ ಸೇರಿದ್ದರು. ಹೀಗಾಗಿ ನಾನೇ ಸರತಿ ಸಾಲಿನಲ್ಲಿ ನಿಂತೆ. ಸುಮಾರು ಸಮಯ ಕಾದರೂ ಲಸಿಕೆ ಸಿಗಲಿಲ್ಲ. ಸರ್ಕಾರದಿಂದ ನೀಡಿರುವ ಲಸಿಕೆಯನ್ನು ಶಾಸಕರು ತಮ್ಮ ಕಾರ್ಯಕರ್ತರಿಗೆ ಹೇಗೆ ಕೊಡುತ್ತಾರೆ' ಎಂದು ಸ್ಥಳೀಯ ನಿವಾಸಿ ಮಂಜು ಪ್ರಶ್ನಿಸಿದರು.

ಸ್ಥಳೀಯರಾದ ಜಗದೀಶ್ ಹಾಗೂ ಕವಿತಾ ಅವರು ಶಾಸಕರ ವಿರುದ್ಧ ಕಿಡಿ ಕಾಡಿದರು.

'ನನ್ನ ಹೆಸರಿಗೆ ಮಸಿ ಬಳಿಯುವ ಪ್ರಯತ್ನ'

'ಕ್ಷೇತ್ರದ ಎಲ್ಲರಿಗೂ ಲಸಿಕೆ ಕೊಡಿಸಲು ನಾನು ನಿರಂತರವಾಗಿ ಶ್ರಮಿಸುತ್ತಿದ್ದೇನೆ. ನನ್ನ ಹೆಸರಿಗೆ ಮಸಿ ಬಳಿಯಲು ಕೆಲವರು ನಡೆಸಿರುವ ಷಡ್ಯಂತ್ರ ಇದು' ಎಂದು ಶಾಸಕ ರಘು 'ಪ್ರಜಾವಾಣಿ'ಗೆ ತಿಳಿಸಿದರು.

'ಬಿಜೆಪಿ ಕಾರ್ಯಕರ್ತರಿಗೆ ಮಾತ್ರ ಲಸಿಕೆ ನೀಡಲಾಗುತ್ತಿದೆ ಎಂಬುದು ಸುಳ್ಳು. ಈ ಆರೋಪದಲ್ಲಿ ಹುರುಳಿಲ್ಲ. ಆರೋಗ್ಯ ಕೇಂದ್ರಕ್ಕೆ ಹೋಗುವುದು ಕಷ್ಟ ಎಂದು ಜನ ಹೇಳಿದ್ದರು. ಅವರಿಗೆ ತೊಂದರೆ ಆಗುವುದನ್ನು ತಪ್ಪಿಸಲು ಹಾಗೂ ಅಂತರ ನಿಯಮವನ್ನು ಕಟ್ಟುನಿಟ್ಟಾಗಿ ಪಾಲಿಸಲು ಅನುವಾಗುತ್ತದೆ ಎಂಬ ಕಾರಣಕ್ಕೆ ಕಲ್ಯಾಣ ಮಂಟಪದಲ್ಲಿ ಲಸಿಕೆ ನೀಡಲು ವ್ಯವಸ್ಥೆ ಮಾಡಲಾಗಿದೆ' ಎಂದರು.



ಚೆಕ್‌ಪೋಸ್ಟ್‌ನಲ್ಲಿ ಸಿಕ್ಕಿಬಿದ್ದ ಸುಲಿಗೆಕೋರರು

ಬೆಂಗಳೂರು: ನಗರದ ಹಲವೆಡೆ ಸಾರ್ವಜನಿಕರನ್ನು ಅಡ್ಡಗಟ್ಟಿ ಸುಲಿಗೆ ಮಾಡಿ ಪರಾರಿಯಾಗಿದ್ದ ನಾಲ್ವರು ಆರೋಪಿಗಳನ್ನು ಹನುಮಂತನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಮೈಸೂರು ರಸ್ತೆಯ ಹಳೇ ಗುಡ್ಡದಹಳ್ಳಿಯ ಮೊಹಮ್ಮದ್ ಯೂಸೂಫ್ (19), ಸೈಯದ್ ಸಾಹೇಬ್ (22), ಚಂದ್ರಾಲೇಔಟ್ ಗಂಗನಹಳ್ಳಿಯ ಮೊಹಮ್ಮದ್ ತೌಸಿಫ್ (19) ಹಾಗೂ ಬಾಪೂಜಿನಗರದ ಶ್ರೀನಿವಾಸ್ (22) ಬಂಧಿತರು. ಅವರಿಂದ ಕಾರು, 2 ದ್ವಿಚಕ್ರ ವಾಹನ ಹಾಗೂ ಕೃತ್ಯಕ್ಕೆ ಬಳಸಿದ್ದ ಚಾಕು ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಲಾಕ್‌ಡೌನ್ ಇರುವುದರಿಂದ ಠಾಣೆ ವ್ಯಾಪ್ತಿಯಲ್ಲಿ ಚೆಕ್‌ಪೋಸ್ಟ್ ನಿರ್ಮಿಸಿ ವಾಹನಗಳ ತಪಾಸಣೆ ನಡೆಸಲಾಗುತ್ತಿದೆ. 2 ದ್ವಿಚಕ್ರ ವಾಹನಗಳಲ್ಲಿ ಚೆಕ್‌ಪೋಸ್ಟ್ ಬಳಿ ಬಂದಿದ್ದ ಆರೋಪಿಗಳು, ಅನುಮಾನಾಸ್ಪದವಾಗಿ ನಡೆದುಕೊಂಡಿದ್ದರು. ಇಬ್ಬರು ಪರಾರಿಯಾಗಲು ಯತ್ನಿಸಿದ್ದರು. ಅವರನ್ನು ಸಿಬ್ಬಂದಿ ಬೆನ್ನಟ್ಟಿ ಹಿಡಿದರು. ವಿಚಾರಿಸಿದಾಗ ಕೃತ್ಯ ಬಾಯ್ಬಿಟ್ಟರು' ಎಂದೂ ಪೊಲೀಸರು ತಿಳಿಸಿದರು.

ಕಪ್ಪು ಪಟ್ಟಿ ಧರಿಸಿ ಆಯುಷ್ ವೈದ್ಯರಿಂದ ಕರ್ತವ್ಯ ನಿರ್ವಹಣೆ

ಪ್ರಜಾವಾಣಿ ವಾರ್ತೆ

ಆರೋಗ್ಯ ಕೇಂದ್ರವೊಂದರಲ್ಲಿ ಮಂಗಳವಾರ ಆಯುಷ್ ವೈದ್ಯೆಯೊಬ್ಬರು ಕಪ್ಪು ಪಟ್ಟಿ ಧರಿಸಿ ಕರ್ತವ್ಯ ನಿರ್ವಹಿಸಿದರು

ಬೆಂಗಳೂರು: ವಿಶೇಷ ಭತ್ಯೆಗೆ ಒತ್ತಾಯಿಸಿರುವ ಆಯುಷ್ ವೈದ್ಯಾಧಿಕಾರಿಗಳು, ಕಪ್ಪು ಪಟ್ಟಿ ಧರಿಸಿ ಮಂಗಳವಾರ ಸೇವೆ ಸಲ್ಲಿಸಿದರು. ಈ ಮೂಲಕ ಅವರು ಸರ್ಕಾರದ ವಿರುದ್ಧ ಅನಿರ್ದಿಷ್ಟಾವಧಿ ಪ್ರತಿಭಟನೆ ಪ್ರಾರಂಭಿಸಿದರು.

ರಾಜ್ಯದಲ್ಲಿ ಸದ್ಯ ಆಯುಷ್ ಇಲಾಖೆಯಡಿ 840 ಆಯುಷ್ ವೈದ್ಯಾಧಿಕಾರಿಗಳು ಕಾರ್ಯನಿರ್ವಹಿಸುತ್ತಿದ್ದಾರೆ. ಕೋವಿಡ್ ಕಾಣಿಸಿಕೊಂಡ ಬಳಿಕ ಅವರನ್ನು ಕೋವಿಡ್ ಆರೈಕೆ ಕೇಂದ್ರ, ಟ್ರಯಾಜ್ ಸೆಂಟರ್, ವೈದ್ಯಕೀಯ ಆಮ್ಲಜನಕ ಕೇಂದ್ರ ಸೇರಿದಂತೆ ವಿವಿಧೆಡೆ ನಿಯೋಜಿಸಲಾಗಿದೆ. ವಿಶೇಷ ಭತ್ಯೆಗೆ ಸಂಬಂಧಿಸಿದಂತೆ ಸರ್ಕಾರ ಸ್ಪಂದಿಸದ ಕಾರಣ ಕಪ್ಪು ಪಟ್ಟಿ ಧರಿಸಿ, ಸೇವೆ ನೀಡಲಾರಂಭಿಸಿದ್ದಾರೆ. ಇದೇ 7ರೊಳಗೆ ಬೇಡಿಕೆ ಈಡೇರದಿದ್ದಲ್ಲಿ ಕೋವಿಡ್ ಕೆಲಸ ಕಾರ್ಯಗಳನ್ನು ಬಹಿಷ್ಕರಿಸಿ, ಮಾತ್ರ ಇಲಾಖೆಯ ಚಿಕಿತ್ಸಾಲಯ ಮತ್ತು ಆಸ್ಪತ್ರೆಗಳಿಗೆ ಸೀಮಿತವಾಗಿ ಕರ್ತವ್ಯ ನಿರ್ವಹಿಸಲು ಮುಂದಾಗಿದ್ದಾರೆ.

'ಆರೋಗ್ಯ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ವೈದ್ಯಾಧಿಕಾರಿಗಳಿಗೆ ವಿಶೇಷ ಭತ್ಯೆ ಹೆಚ್ಚಿಸಿ, ಆದೇಶಿಸಲಾಗಿದೆ. ಕಾಲಕಾಲಕ್ಕೆ ನೀಡಲಾಗುವ ವೇತನ, ಭತ್ಯೆ ಮತ್ತು ಸ್ಥಾನಮಾನವನ್ನು ಆಯುಷ್ ವೈದ್ಯಾಧಿಕಾರಿಗಳಿಗೂ ವಿಸ್ತರಿಸಬೇಕೆಂದು ಸಚಿವ ಸಂಪುಟದಲ್ಲಿ ನಿರ್ಣಯಿಸಲಾಗಿದೆ. ಹೀಗಿದ್ದರೂ ವಿಶೇಷ ಭತ್ಯೆಯಲ್ಲಿ ತಾರತಮ್ಯ ಮಾಡಿ, ಆಯುಷ್ ವೈದ್ಯಾಧಿಕಾರಿಗಳ ಸೇವೆಯನ್ನು ಕಡೆಗಣಿಸಲಾಗಿದೆ' ಎಂದು ಕರ್ನಾಟಕ ಸರ್ಕಾರಿ ಆಯುಷ್ ವೈದ್ಯಾಧಿಕಾರಿಗಳ ಸಂಘದ ಪ್ರಧಾನ ಕಾರ್ಯದರ್ಶಿ ಡಾ.ಜೆ. ಈರಣ್ಣ ಬೇಸರ ವ್ಯಕ್ತಪಡಿಸಿದರು.

ಸ್ಥಳೀಯ ನಿವಾಸಿಗಳಲ್ಲಿ ಮನೆ ಮಾಡಿದ ಆತಂಕ

ವಡ್ಡರಹಳ್ಳಿಯಲ್ಲಿ ಕರಡಿ ಸವಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಲೆಕ್ಟ್ರಾನಿಕ್ ಸಿಟಿ ಸಮೀಪದ ಮೈಲಸಂದ್ರ ವಡ್ಡರಹಳ್ಳಿಯ ಎಸ್‌ಆರ್‌ವೈ ಬಡಾವಣೆಯಲ್ಲಿ ರಾತ್ರಿ ವೇಳೆ ಕರಡಿ ಸಂಚರಿಸುತ್ತಿದ್ದು, ಸ್ಥಳೀಯ ನಿವಾಸಿಗಳ ನಿದ್ದೆಗೆಡಿಸಿದೆ. ಭಾನುವಾರ ರಾತ್ರಿ ಕರಡಿಯು ಈ ಪ್ರದೇಶದ ರಸ್ತೆಗಳಲ್ಲಿ ಓಡಾಡಿದ ದೃಶ್ಯ ಮನೆಯೊಂದರ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ.

'ತಿಂಗಳಿನಿಂದ ಈ ಪ್ರದೇಶದಲ್ಲಿ ಕರಡಿ ಅಡ್ಡಾಡುತ್ತಿದೆ. ಭಾನುವಾರ ರಾತ್ರಿ 10.30ರ ವೇಳೆ ಕರಡಿ ನಮ್ಮ ಮನೆ ಬಳಿ ರಸ್ತೆ ದಾಟಿದ್ದನ್ನು ನಾನು ನೋಡಿದೆ. ಈ ದೃಶ್ಯ ಸಮೀಪದ ಮನೆಯೊಂದರ ಸಿಸಿಟಿವಿ ಕ್ಯಾಮೆರಾದಲ್ಲಿ ದಾಖಲಾಗಿದೆ' ಎಂದು ಎಸ್‌ಆರ್‌ವೈ ಬಡಾವಣೆಯ ನಿವಾಸಿ ಜಿ.ಪ್ರಮೋದ್ 'ಪ್ರಜಾವಾಣಿ'ಗೆ ತಿಳಿಸಿದರು.

ವಡ್ಡರಹಳ್ಳಿಯ ಎಸ್‌ಆರ್‌ವೈ ಬಡಾವಣೆಯಲ್ಲಿ ಕರಡಿ ಅಡ್ಡಾಡುತ್ತಿದ್ದ ದೃಶ್ಯ ಮನೆಯೊಂದರ ಸಿಸಿಟಿವಿ ಕ್ಯಾಮೆರಾದಲ್ಲಿ ಭಾನುವಾರ ರಾತ್ರಿ ಸೆರೆಯಾಗಿದೆ

'ನಿತ್ಯವೂ ರಾತ್ರಿ ಈ ಪ್ರದೇಶದಲ್ಲಿ ಕರಡಿ ಕಾಣಿಸಿಕೊಳ್ಳುತ್ತಿದೆ. ಆಗೆಲ್ಲ ನಾಯಿಗಳು ಒಂದೇ ಸಮನೆ ಬೊಗಳುತ್ತವೆ. ಅನೇಕರು ಕರಡಿಯನ್ನು ನೋಡಿದ್ದಾರೆ. ಇದುವರೆಗೂ ಯಾರ ಮೇಲೂ ಅದು ದಾಳಿ ನಡೆಸಿಲ್ಲ. ಈಗ ಲಾಕ್‌ಡೌನ್ ಜಾರಿಯಲ್ಲಿರುವುದರಿಂದ ರಾತ್ರಿ ವೇಳೆ ಜನರ ಓಡಾಟ ತೀರಾ ಕಡಿಮೆ ಇದೆ. ಆದರೆ, ಲಾಕ್‌ಡೌನ್ ತೆರವುಗೊಂಡ ಬಳಿಕ ಕರಡಿ ಜನರ ಮೇಲೆ ದಾಳಿ ನಡೆಸುವ ಅಪಾಯ ಖಂಡಿತಾ ಇದೆ' ಎಂದು ಅವರು ಆತಂಕ ತೋಡಿಕೊಂಡರು.

ವಡ್ಡರಹಳ್ಳಿ ಪ್ರದೇಶದಲ್ಲಿ ಖಾಲಿ ನಿವೇಶನಗಳು, ಕೃಷಿಭೂಮಿ, ಕುರುಚಲು ಪೊದೆಗಳು ಹಾಗೂ ಮರಮಟ್ಟುಗಳಿವೆ. ಸಮೀಪದಲ್ಲೇ ಎರಡು ಕೆರೆಗಳಿವೆ. ಈ ಪ್ರದೇಶ ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನಕ್ಕೆ ಸಮೀಪದಲ್ಲಿದೆ. ಐದಾರು ವರ್ಷಗಳಿಂದ ಈಚೆಗೆ ಈ ಪ್ರದೇಶದಲ್ಲಿ ಹೊಸ ಬಡಾವಣೆ ಅಭಿವೃದ್ಧಿಯಾಗುತ್ತಿದೆ. ಇದು ವನ್ಯಜೀವಿ–ಮಾನವ ಸಂಘರ್ಷಕ್ಕೆ ಕಾರಣವಾಗಿದೆ ಎಂದು ಸ್ಥಳೀಯರು ತಿಳಿಸಿದರು.

ಅರಣ್ಯ ಇಲಾಖೆಯವರು ಈ ಕರಡಿಯನ್ನು ಸ್ಥಳಾಂತರಿಸಬೇಕು ಎಂದು ಸ್ಥಳೀಯರು ಒತ್ತಾಯಿಸಿದರು.

ಬಿಸಿ ಡಾಂಬರು ಮಿಶ್ರಣ: ಟೆಂಡರ್ ಅಕ್ರಮಗಳು ಟಿವಿಸಿಸಿ ತನಿಖೆಯಲ್ಲಿ ಸಾಬೀತು

ಘಟಕ ನಿರ್ವಹಣೆಗೆ ಮರು ಟೆಂಡರ್

ಪ್ರಜಾವಾಣಿ ವಾರ್ತೆ

ವರದಿ ಫಲಶ್ರುತಿ

ಬೆಂಗಳೂರು: ಬಿಬಿಎಂಪಿಯು ಕಣ್ಣೂರಿನಲ್ಲಿ ಸ್ಥಾಪಿಸಿರುವ ಬಿಸಿ ಡಾಂಬರು ಮಿಶ್ರಣ (ಹಾಟ್ ಮಿಕ್ಸ್) ಘಟಕದ ನಿರ್ವಹಣೆಯ ಟೆಂಡರ್ ಪ್ರಕ್ರಿಯೆಯಲ್ಲಿ ಅಕ್ರಮ ನಡೆದಿರುವುದು ಬಿಬಿಎಂಪಿ ಆಯುಕ್ತರ ತಾಂತ್ರಿಕ ಮತ್ತು ಜಾಗೃತ ಕೋಶ (ಟಿವಿಸಿಸಿ) ತನಿಖೆಯಲ್ಲಿ ಸಾಬೀತಾಗಿದೆ. ಹಾಗಾಗಿ ಈ ಘಟಕದ ನಿರ್ವಹಣೆಯ ಈಗಿನ ಟೆಂಡರ್ ರದ್ದುಪಡಿಸಿ ಮರು ಟೆಂಡರ್ ಕರೆಯಲು ಬಿಬಿಎಂಪಿ ನಿರ್ಧರಿಸಿದೆ.

ಈ ಟೆಂಡರ್ ಪ್ರಕ್ರಿಯೆಯಲ್ಲಿ ನಡೆದಿರುವ ಅಕ್ರಮಗಳ ಬಗ್ಗೆ 'ಪ್ರಜಾವಾಣಿ' ಮೇ 27 ಹಾಗೂ 28ರ ಸಂಚಿಕೆಗಳಲ್ಲಿ ವಿಶೇಷ ವರದಿಗಳನ್ನು ಪ್ರಕಟಿಸಿ ಗಮನ ಸೆಳೆದಿತ್ತು. ಇದನ್ನು ಗಂಭೀರವಾಗಿ ಪರಿಗಣಿಸಿದ್ದ ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಅವರು ಟೆಂಡರ್ ಪ್ರಕ್ರಿಯೆಯನ್ನು ಪರಿಶೀಲನೆಗೆ ಒಳಪಡಿಸಿ ಮೂರು ದಿನಗಳಲ್ಲಿ ವರದಿ ನೀಡುವಂತೆ ಟಿವಿಸಿಸಿಗೆ ಸೂಚನೆ ನೀಡಿದ್ದರು. ಟಿವಿಸಿಸಿ ಕಾರ್ಯಪಾಲಕ ಎಂಜಿನಿಯರ್ ಅವರು ಮುಖ್ಯ ಆಯುಕ್ತರಿಗೆ ಸೋಮವಾರ ವರದಿ ನೀಡಿದ್ದಾರೆ.

'ಟೆಂಡರ್ ಪ್ರಕ್ರಿಯೆಯಲ್ಲಿ ಅಕ್ರಮ ನಡೆದಿರುವುದು ಮೇಲ್ನೋಟಕ್ಕೆ ಸಾಬೀತಾಗಿದೆ. ಮರುಟೆಂಡರ್ ಮಾಡುವ ಅವಶ್ಯಕತೆ ಇದೆ. ಹಾಗಾಗಿ, ಈ ಘಟಕದ ನಿರ್ವಹಣೆಗೆ ಮರು ಟೆಂಡರ್ ಕರೆಯಲು ಕ್ರಮ ಕೈಗೊಳ್ಳಲಾಗುತ್ತದೆ' ಎಂದು ಗೌರವ್ ಗುಪ್ತ 'ಪ್ರಜಾವಾಣಿ'ಗೆ ತಿಳಿಸಿದರು.

ಈ ಘಟಕದ ನಿರ್ವಹಣೆಯ ಮತ್ತು ಬಿಬಿಎಂಪಿಯ ಸಂಪನ್ಮೂಲ ಬಳಸಿ ಬಿಸಿ ಡಾಂಬರು ಮಿಶ್ರಣ ತಯಾರಿಸುವ ಸಲುವಾಗಿ ಪಾಲಿಕೆ 2021ರ ಮಾರ್ಚ್ 20ರಂದು ಟೆಂಡರ್ ಕರೆದಿತ್ತು. ಐದು ಗುತ್ತಿಗೆದಾರರು ಈ ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಿದ್ದರು. ನಾಲ್ಕು ಪ್ರಮುಖ ಮಾನದಂಡಗಳ ಆಧಾರದಲ್ಲಿ ಗುತ್ತಿಗೆದಾರರ ತಾಂತ್ರಿಕ ಅರ್ಹತೆಯ ಪರಿಶೀಲನೆ ನಡೆಸಲಾಗಿತ್ತು.

ಟಿವಿಸಿಸಿ ವರದಿಯ ಪ್ರಮುಖ ಸಾರ

- ಅಂಕ ನೀಡುವಿಕೆಯಲ್ಲಿ ತಾರತಮ್ಯ ಮೇಲ್ನೋಟಕ್ಕೆ ಸಾಬೀತು
- ನಿಗದಿಪಡಿಸಿದಷ್ಟು ಯಂತ್ರೋಪಕರಣ ಇಲ್ಲದಿದ್ದರೂ ಗುತ್ತಿಗೆದಾರ ಧನಂಜಯ ಅವರಿಗೆ ಪೂರ್ಣ ಅಂಕ ನೀಡಿದ್ದು ಸರಿಯಲ್ಲ
- ಕಾರಣವಿಲ್ಲದೇ ಜೆಎಂಸಿ ಕನ್ಸ್ಟ್ರಕ್ಷನ್ ಸಂಸ್ಥೆಯನ್ನು ತಾಂತ್ರಿಕವಾಗಿ ಅನರ್ಹ ಎಂದು ಪರಿಗಣಿಸಿದ್ದು ಅಸಮಂಜಸ
- ಸುಳ್ಳು ದಾಖಲೆ ಸಲ್ಲಿಸಿರುವ ಬಗ್ಗೆ ಸಂಬಂಧಪಟ್ಟ ಪ್ರಾಧಿಕಾರದಿಂದ ಹೆಚ್ಚಿನ ಮಾಹಿತಿ ತರಿಸುವಂತೆ ಟಿವಿಸಿಸಿ ಶಿಫಾರಸು

ವೃತ್ತಿಪರ ಸಿಬ್ಬಂದಿಯ ಅರ್ಹತೆ ಹಾಗೂ ದಕ್ಷತೆಗೆ 15 ಅಂಕಗಳನ್ನು ನಿಗದಿಪಡಿಸಲಾಗಿತ್ತು, ಇದರಲ್ಲಿ ಗುತ್ತಿಗೆದಾರ ಬಿ.ಎಸ್.ಧನಂಜಯ ಅವರಿಗೆ ಪೂರ್ತಿ 15 ಅಂಕಗಳನ್ನು ಹಾಗೂ ಜೆಎಂಸಿ ಕನ್ಸ್ಟ್ರಕ್ಷನ್ ಸಂಸ್ಥೆಗೆ 7 ಅಂಕ ನೀಡಲಾಗಿದೆ. ಉಳಿದ ಮೂವರು ಗುತ್ತಿಗೆದಾರರಿಗೆ ಸೊನ್ನೆ ಅಂಕ ನೀಡಲಾಗಿದೆ. ಇಲ್ಲಿ ಜೆಎಂಸಿ ಕನ್ಸ್ಟ್ರಕ್ಷನ್ ಸಂಸ್ಥೆ ಎಲ್ಲ ಅರ್ಹತೆ ಪೂರೈಸಿದ್ದರೂ ಕೇವಲ 7 ಅಂಕ ನೀಡಿದ್ದು ಸಮಂಜಸ ಅಲ್ಲ ಎಂದು ಟಿವಿಸಿಸಿ ಅಭಿಪ್ರಾಯಪಟ್ಟಿದೆ.

ಯಂತ್ರೋಪಕರಣ ಸೌಲಭ್ಯಗಳ ಲಭ್ಯತೆ ಹಾಗೂ ಜ್ಞಾನ ಹಸ್ತಾಂತರಕ್ಕೆ ಸಂಬಂಧಿಸಿದ ಪರಿಸ್ಥಿತಿ ತಲಾ 10 ಅಂಕ ನಿಗದಿಪಡಿಸಲಾಗಿತ್ತು. 'ಇದರ ಪ್ರಕಾರ ಗುತ್ತಿಗೆದಾರರು ನಿರ್ದಿಷ್ಟ ಸಂಖ್ಯೆ ಟಿಪ್ಪರ್, ಜೆಸಿಬಿಗಳನ್ನು ಹಾಗೂ ಸ್ವಂತ ಮಿಲ್ಲಿಂಗ್ ಯಂತ್ರವನ್ನು ಹೊಂದಿರಬೇಕಿತ್ತು. ಧನಂಜಯ ಅವರು ಸ್ವಂತ ಮಿಲ್ಲಿಂಗ್ ಯಂತ್ರ ಹೊಂದಿಲ್ಲದೇ ಇದ್ದರೂ ಅವರಿಗೆ 10ರಲ್ಲಿ 10 ಅಂಕ ನೀಡಿದ್ದು ಸರಿಯಲ್ಲ. ಉಳಿದ ಮೂವರು ಗುತ್ತಿಗೆದಾರರು ನಿಗದಿತ ಸಂಖ್ಯೆಯ ಟಿಪ್ಪರ್, ಜೆಸಿಬಿ ಹಾಗೂ ಮಿಲ್ಲಿಂಗ್ ಯಂತ್ರ ಹೊಂದಿದ್ದರೂ ಅವರಿಗೆ 10ರಲ್ಲಿ 8 ಅಂಕ ಮಾತ್ರ ನೀಡಿರುವುದು ಸಮಂಜಸವಲ್ಲ' ಎಂದು ಟಿವಿಸಿಸಿ ಹೇಳಿದೆ.

ಜೆಎಂಸಿ ಕನ್ಸ್ಟ್ರಕ್ಷನ್ಸ್‌ನ ಮೋಹನ್ ನರಸಿಂಹಲು ಅವರು ತಾಂತ್ರಿಕ ಮೌಲ್ಯಮಾಪನದ ಎಲ್ಲ ಪತ್ರಗಳನ್ನು ಪೂರೈಸಿದ್ದರು. ಆದರೂ, 'ಬಿಬಿಎಂಪಿಯ ಟೆಂಡರ್‌ಗಳ ಹಿಂದಿನ ಬಿಡ್ಡಿಂಗ್ ದಾಖಲೆಗಳ ಪ್ರಕಾರ ಪೂರ್ವ ವಲಯದಲ್ಲಿ 2019-20ರಲ್ಲಿ ಅತಿ ದಟ್ಟಣೆ ಕಾರಿಡಾರ್ ಅಭಿವೃದ್ಧಿ ಕಾಮಗಾರಿಗಳಲ್ಲಿ ಸ್ಪರ್ಧಾತ್ಮಕವಲ್ಲದ ದರವನ್ನು ನಮೂದಿಸಿದ್ದಾರೆ. ಅವರು ಗುತ್ತಿಗೆ ಪಡೆದಿರುವ ಬಳ್ಳಾರಿ ರಸ್ತೆ ವಿಸ್ತರಣೆ ಹಾಗೂ ಜಯಮಹಲ್ ರಸ್ತೆ ವಿಸ್ತರಣೆ ಕಾಮಗಾರಿ ಇನ್ನೂ ಅಪೂರ್ಣವಾಗಿದ್ದು, ಅತಿ ದಟ್ಟಣೆ ಕಾರಿಡಾರ್ ಕಾಮಗಾರಿ ತೆವಳುತ್ತಾ ಸಾಗುತ್ತಿದೆ. ರಸ್ತೆ ನಿರ್ವಹಣೆ ಕಾಮಗಾರಿಯನ್ನು ನಿತ್ಯವೂ ಕೈಗೊಳ್ಳಬೇಕಾಗುತ್ತದೆ. ಈ ಕಾಮಗಾರಿಗಳನ್ನು ಎಚ್ಚರಿಕೆಯಿಂದ ಹಾಗೂ ನಿಗದಿತ ಕಾಲಾವಧಿಯೊಳಗೆ ಪೂರ್ಣಗೊಳಿಸಬೇಕಾಗುತ್ತದೆ. ಹಾಗಾಗಿ ಜೆಎಂಸಿಯ ತಾಂತ್ರಿಕ ಬಿಡ್ ಪರಿಗಣಿಸುವುದು ಸಮಂಜಸವಲ್ಲ' ಎಂದು ಕಾರಣ ನೀಡಿ ತಿರಸ್ಕರಿಸಲಾಗಿತ್ತು. ಈ ರೀತಿ ತಾಂತ್ರಿಕ ಬಿಡ್ ಅನ್ನು ಅನರ್ಹಗೊಳಿಸಿದ್ದು ಸರಿಯಲ್ಲ ಎಂದು ಟಿವಿಸಿಸಿ ಅಭಿಪ್ರಾಯಪಟ್ಟಿದೆ.

'ಪ್ರಜಾವಾಣಿ'ಯಲ್ಲಿ ಪ್ರಕಟವಾದ ವಿಶೇಷ ವರದಿಯಲ್ಲಿ ಉಲ್ಲೇಖಿಸಿದಂತೆ, ಧನಂಜಯ ಅವರು ಸಲ್ಲಿಸಿರುವ ವಾರ್ಷಿಕ ವಹಿವಾಟಿನ ದಾಖಲೆಗಳು ಸುಳ್ಳಿನಿಂದ ಕೂಡಿರುವ ಬಗ್ಗೆ ಹಾಗೂ ಅವರು ಫಾರ್ಚೂನರ್ ವಾಹನದ ದಾಖಲೆಗಳನ್ನು ಟಿಪ್ಪರ್ ದಾಖಲೆ ಎಂಬಂತೆ ಬಿಂಬಿಸಿ ಸಲ್ಲಿಸಿರುವ ಬಗ್ಗೆ ಸಂಬಂಧಪಟ್ಟ ಪ್ರಾಧಿಕಾರದ ಮೂಲಕ ಮಾಹಿತಿ ಪಡೆಯಬಹುದು ಎಂದು ಟಿವಿಸಿಸಿ ಹೇಳಿದೆ.

ಅಂಕ ನೀಡಿಕೆಯಲ್ಲಿ ತಾರತಮ್ಯ ಮಾಡಿರುವುದರಿಂದ ಧನಂಜಯ ಅತಿ ಹೆಚ್ಚು ಅಂಕ (87) ಗಳಿಸಲು ಸಾಧ್ಯವಾಗಿದೆ. ಮೊದಲ ಸ್ಥಾನ ಪಡೆಯುವ ಅರ್ಹತೆ ಇದ್ದರೂ ಜೆಎಂಸಿ ಕನ್ಸ್ಟ್ರಕ್ಷನ್ಸ್ 77 ಅಂಕ ಪಡೆಯುವ ಮೂಲಕ ಎರಡನೇ ಸ್ಥಾನಕ್ಕ ಸೀಮಿತವಾಗಿದ್ದು ತನಿಖೆಯಲ್ಲಿ ಸಾಬೀತಾಗಿದೆ.

ಸುದ್ದಿ 2 ನಿಮಿಷ

ಹೈಕೋರ್ಟ್ ಕಲಾಪ ನೇರ ಪ್ರಸಾರ

ಬೆಂಗಳೂರು: ಹೈಕೋರ್ಟ್ ಇತಿಹಾಸದಲ್ಲಿ ಮೊದಲ ಬಾರಿಗೆ ನ್ಯಾಯಾಲಯದ ವಿಚಾರಣೆಯ ನೇರ ಪ್ರಸಾರವನ್ನು ಯೂಟ್ಯೂಬ್‌ನಲ್ಲಿ ಸೋಮವಾರ ಪ್ರಸಾರ ಆರಂಭಿಸಲಾಯಿತು.

ಕಾರವಾರ ಬಂದರು ಪ್ರದೇಶದಲ್ಲಿ ಕಾರ್ಯಾನುಷ್ಠಾನ ಅಭಿವೃದ್ಧಿ ಚಟುವಟಿಕೆಗಳ ಸಂಬಂಧ ಸಲ್ಲಿಕೆಯಾಗಿದ್ದ ಎರಡು ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳ ವಿಚಾರಣೆಯನ್ನು ನೇರ ಪ್ರಸಾರ ಮಾಡಲಾಯಿತು.

ಅದಕ್ಕೂ ಮುಂಚಿತವಾಗಿಯೇ ವಕೀಲರಿಗೆ ಮಾಹಿತಿ ನೀಡಲಾಗಿತ್ತು. 'ವಕೀಲರ ಗಮನಕ್ಕೆ ತರುವುದು ನಮ್ಮ ಕರ್ತವ್ಯ' ಎಂದು ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ಮೌಖಿಕವಾಗಿಯೂ ಹೇಳಿದರು.

ಪ್ರಾಯೋಗಿಕವಾಗಿ ನೇರ ಪ್ರಸಾರ ಮಾಡಲಾಗಿದ್ದು, ಇದನ್ನು ಮುಂದುವರಿಸುವ ಬಗ್ಗೆ ಬರುವ ಅಭಿಪ್ರಾಯಗಳನ್ನು ಆಧರಿಸಿ ನಿರ್ಧಾರ ಕೈಗೊಳ್ಳಲಾಗುವುದು ಎಂದು ಅವರು ತಿಳಿಸಿದರು.



'ಕೋವಿಡ್ ಪ್ರಕರಣಗಳು ಉಲ್ಬಣಗೊಂಡ ಬಳಿಕ ವರ್ಚುವಲ್ ಮಾದರಿಯಲ್ಲಿ ವಿಚಾರಣೆಯನ್ನು ಹೈಕೋರ್ಟ್ ನಡೆಸುತ್ತಿದೆ. ಇದರ ಮುಂದುವರಿದ ಭಾಗವಾಗಿ ಸಾರ್ವಜನಿಕರ ಹಿತದೃಷ್ಟಿಯಿಂದ ನೇರ ಪ್ರಸಾರವನ್ನು ಹೈಕೋರ್ಟ್ ಆರಂಭಿಸಿದೆ. ಗುಜರಾತ್ ಹೈಕೋರ್ಟ್ ಈ ಹಿಂದೆ ನೇರಪ್ರಸಾರ ಆರಂಭಿಸಿತ್ತು.

'ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ಅವರು ಕೈಗೊಂಡಿರುವ ಈ ಕ್ರಮ ಶ್ಲಾಘನೀಯ. ಹೈಕೋರ್ಟ್‌ನ ಬೇರೆ ಪೀಠಗಳಲ್ಲೂ ನೇರ ಪ್ರಸಾರ ಕಲ್ಪಿಸುತ್ತಾರೆ ಎಂದು ನಿರೀಕ್ಷಿಸುತ್ತೇನೆ. ಜಿಲ್ಲಾ ನ್ಯಾಯಾಲಯಗಳಿಗೂ ಈ ಸೌಲಭ್ಯ ವಿಸ್ತರಣೆಯಾದರೆ ನ್ಯಾಯಾಂಗದಲ್ಲಿ ಹೆಚ್ಚಿನ ಹೊಣೆಗಾರಿಕೆ ಮತ್ತು ಪಾರದರ್ಶಕತೆ ಕಾಣಬಹುದು' ಎಂದು ಸುಪ್ರೀಂ ಕೋರ್ಟ್ ವಕೀಲ ಕೆ.ವಿ. ಧನಂಜಯ ಅಭಿಪ್ರಾಯಪಟ್ಟರು.

ಸಾವಿನಲ್ಲೂ ಸಾರ್ಥಕತೆ ಕಂಡ ವ್ಯಕ್ತಿ

ಬೆಂಗಳೂರು: ಮಿದುಳು ನಿಷ್ಕ್ರಿಯಗೊಂಡ ವ್ಯಕ್ತಿಯೊಬ್ಬರು ಅಂಗಾಂಗ ದಾನಿ ಮಾಡಿ ದೀರ್ಘಾವಧಿ ಅನಾರೋಗ್ಯ ಸಮಸ್ಯೆ ಎದುರಿಸುತ್ತಿದ್ದ ಇಬ್ಬರಿಗೆ ನೆರವಾಗಿದ್ದಾರೆ.

ದೀರ್ಘ ಕಾಲದ ಅನಾರೋಗ್ಯ ಸಮಸ್ಯೆ ಎದುರಿಸುತ್ತಿದ್ದ 37 ವರ್ಷದ ವ್ಯಕ್ತಿಗೆ ನಗರದ ಬಿಜಿಎಸ್ ಗ್ಲೆನಿಗಲ್ಸ್ ಗ್ಲೋಬಲ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಒದಗಿಸಲಾಗುತ್ತಿತ್ತು. ವ್ಯಕ್ತಿ ಚಿಕಿತ್ಸೆಗೆ ಸ್ಪಂದಿಸದ ಕಾರಣ ವೈದ್ಯರು ಕುಟುಂಬದ ಸದಸ್ಯರಿಗೆ ಅಂಗಾಂಗ ದಾನದ ಬಗ್ಗೆ ಮನವರಿಕೆ ಮಾಡಿಸಿದರು. ಇದರಿಂದಾಗಿ ಮಿದುಳು ನಿಷ್ಕ್ರೀಯಗೊಂಡ ವ್ಯಕ್ತಿಯ ಮೂತ್ರಪಿಂಡ ಹಾಗೂ ಯಕೃತ್ತು ಪಡೆದ ವೈದ್ಯರು, 61 ಹಾಗೂ 66 ವರ್ಷದ ರೋಗಿಗಳಿಗೆ ಕಸಿ ಮಾಡಿದ್ದಾರೆ. ಇಬ್ಬರೂ ಗಂಭೀರ ಸ್ವರೂಪದ ಸಮಸ್ಯೆ ಎದುರಿಸುತ್ತಿದ್ದರು.

'ಕೋವಿಡ್ ಎರಡನೇ ಅಲೆ ಕಾಣಿಸಿಕೊಂಡ ಬಳಿಕ ಕೋವಿಡೇತರ ರೋಗಿಗಳು ಚಿಕಿತ್ಸೆಗೆ ಸಮಸ್ಯೆ ಎದುರಿಸುತ್ತಿದ್ದಾರೆ. ಹಲವಾರು ರೋಗಿಗಳು ಅಂಗಾಂಗಕ್ಕಾಗಿ ಎದುರು ನೋಡುತ್ತಿದ್ದಾರೆ. ಅದೇ ರೀತಿ, ಕೆಲವರು ಕೋವಿಡ್ ಪೀಡಿತರಾಗಿದ್ದಾರೆ. ಇದರಿಂದಾಗಿ ದಾನಿಗಳು ದೊರೆತರೂ ಕಸಿ ಸಾಧ್ಯವಾಗುತ್ತಿಲ್ಲ. ಚಿಕಿತ್ಸೆ ಮತ್ತಷ್ಟು ವಿಳಂಬವಾಗುತ್ತಿದೆ' ಎಂದು ಆಸ್ಪತ್ರೆಯ ಕಸಿ ವಿಭಾಗದ ಹಿರಿಯ ಸಲಹೆಗಾರ ಡಾ. ವೇಣುಗೋಪಾಲ್ ತಿಳಿಸಿದ್ದಾರೆ.

ಕೊರೊನಾ ಜಾಗೃತಿ ಭಾರತೀಯ ನಾಮಫಲಕ ಕುಂಚ ಕಲಾವಿದರ ಸಂಘದ ಕಲಾವಿದರು ಕೊರೊನಾ ಜಾಗೃತಿ ಮೂಡಿಸಲು ಚಾಮರಾಜಪೇಟೆ ಮುಖ್ಯರಸ್ತೆಯಲ್ಲಿ ಬೃಹತ್ ಚಿತ್ರ ಬಿಡಿಸಿದರು

ಪ್ರಜಾವಾಣಿ ಚಿತ್ರ

12 ಕಾರಿಡಾರ್‌ಗಳ ಅಭಿವೃದ್ಧಿ, ನಿರ್ವಹಣೆ ಯೋಜನೆ

ತಾಂತ್ರಿಕ ಅರ್ಹತೆ ಪಡೆಯದ ಗುತ್ತಿಗೆದಾರನಿಗೆ ಕಾಮಗಾರಿ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರವು ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮದ (ಕೆಆರ್‌ಡಿಸಿಎಲ್) ಮೂಲಕ ಅನುಷ್ಠಾನಗೊಳಿಸಲಿರುವ ನಗರದ 12 ಅತಿ ದಟ್ಟಣೆ ಕಾರಿಡಾರ್‌ಗಳ ಅಭಿವೃದ್ಧಿ ಹಾಗೂ ನಿರ್ವಹಣೆಗೆ ಕಾಮಗಾರಿಗಳ ಟೆಂಡರ್ ಪ್ರಕ್ರಿಯೆಯ ಇನ್ನೊಂದು ಭ್ರಷ್ಟಾಚಾರ ಬಯಲಿಗೆ ಬಂದಿದೆ.

ಟೆಂಡರ್ ಪ್ರಕಿಯೆಯ ತಾಂತ್ರಿಕ ಪರಿಶೀಲನೆ ಹಂತದಲ್ಲೇ ಅನರ್ಹಗೊಂಡ ಗುತ್ತಿಗೆದಾರನಿಗೇ ಕಾಮಗಾರಿ ನೀಡಲು ಶಿಫಾರಸು ಮಾಡುವ ಮೂಲಕ ನಿಗಮವು ಹೊಸ ಸಂಪ್ರದಾಯಕ್ಕೆ ನಾಂದಿ ಹಾಡಿದೆ.

ಟೆಂಡರ್ ನಿಯಮಗಳ ಪ್ರಕಾರ ಯಾವುದೇ ಗುತ್ತಿಗೆದಾರ ತಾಂತ್ರಿಕ ಪರಿಶೀಲನೆಯಲ್ಲಿ ಅನರ್ಹಗೊಂಡರೆ ಅವರ ಬಿಡ್ ಅನ್ನು ಹಣಕಾಸು ಪರಿಶೀಲನೆಗೆ ಪರಿಗಣಿಸುವುದೇ ಇಲ್ಲ. ಆದರೂ ಈ ಯೋಜನೆಯ ಪ್ಯಾಕೇಜ್ -3ರಲ್ಲಿ ಗುತ್ತಿಗೆದಾರ ಉದಯ್ ಶಿವಕುಮಾರ್ ಅವರ ಇನ್‌ಫ್ರಾ ಪ್ರೈವೇಟ್ ಲಿಮಿಟೆಡ್ ಸಂಸ್ಥೆ ತಾಂತ್ರಿಕ ಅರ್ಹತೆ ಪಡೆಯದಿದ್ದರೂ ಅವರ ಹಣಕಾಸು ಬಿಡ್ ತೆರೆಯಲಾಗಿದೆ. ಅಷ್ಟೇ ಅಲ್ಲ, ಅಂತಿಮವಾಗಿ ಈ ಸಂಸ್ಥೆಗೇ ಕಾಮಗಾರಿಯ ಗುತ್ತಿಗೆ ವಹಿಸಲು ನಿಗಮವು ಶಿಫಾರಸು ಮಾಡಿದೆ.

ಈ ಯೋಜನೆಯ ಪ್ಯಾಕೇಜ್- 3ರಲ್ಲಿ ಹೊಸೂರು ರಸ್ತೆ, ಬನ್ನೇರುಘಟ್ಟ ರಸ್ತೆ, ಕನಕಪುರ ರಸ್ತೆ ಹಾಗೂ ಸಿಲ್ಕ್‌ಬೋರ್ಡ್‌ನಿಂದ ಮೈಸೂರು ರಸ್ತೆವರೆಗಿನ ಹೊರವರ್ತುಲ ರಸ್ತೆಗಳ ಅಭಿವೃದ್ಧಿ ಮತ್ತು ನಿರ್ವಹಣೆ ಕಾಮಗಾರಿಗಳು ಸೇರಿದ್ದವು. ಒಟ್ಟು 49.45 ಕಿ.ಮೀ ಉದ್ದದ ರಸ್ತೆಗಳ ಅಭಿವೃದ್ಧಿಗೆ ₹ 39.35 ಕೋಟಿ ಮತ್ತು ಐದು ವರ್ಷಗಳ ವಾರ್ಷಿಕ ನಿರ್ವಹಣೆಗೆ ₹ 120.34 ಕೋಟಿ ಅಂದಾಜು ವೆಚ್ಚ ಸೇರಿದಂತೆ ಒಟ್ಟು ₹ 159.69 ಕೋಟಿಯ ಕಾಮಗಾರಿಗೆ 2021ರ ಜ.6ರಂದು ಟೆಂಡರ್ ಕರೆಯಲಾಗಿತ್ತು. ಆರ್‌ಎಂಎನ್ ಇನ್‌ಫ್ರಾಸ್ಟ್ರಕ್ಚರ್ ಪ್ರೈವೇಟ್ ಲಿಮಿಟೆಡ್, ಉದಯ್ ಶಿವಕುಮಾರ್ ಅವರ ಇನ್‌ಫ್ರಾ ಪ್ರೈವೇಟ್ ಲಿಮಿಟೆಡ್ ಹಾಗೂ ಶ್ರೀನಿವಾಸ ಕನ್‌ಸ್ಟ್ರಕ್ಷನ್ಸ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಸಂಸ್ಥೆಗಳು ಟೆಂಡರ್‌ಗೆ ಅರ್ಜಿ ಸಲ್ಲಿಸಿದ್ದವು. ಈ ಗುತ್ತಿಗೆ ಸಂಸ್ಥೆಗಳ ತಾಂತ್ರಿಕ ಅರ್ಹತೆಯ ಪರಿಶೀಲನೆಗಾಗಿ ಏ. 21ರಂದು ತಾಂತ್ರಿಕ ಪರಿಶೀಲನಾ ಸಮಿತಿ ಸಭೆ ನಡೆದಿತ್ತು.

ಟೆಂಡರ್ ಷರತ್ತುಗಳ ಪ್ರಕಾರ, ಪ್ಯಾಕೇಜ್- 3ರ ಟೆಂಡರ್ ಗುತ್ತಿಗೆ ಪಡೆಯಲು ಗುತ್ತಿಗೆ ಸಂಸ್ಥೆಯು ನಗರದಲ್ಲಿ 25 ಕಿ.ಮೀ ಉದ್ದದ ರಸ್ತೆ/ ಹೆದ್ದಾರಿಯನ್ನು ಕನಿಷ್ಠ ಪಕ್ಷ 1 ವರ್ಷ ನಿರ್ವಹಣೆ ಮಾಡಿದ ಅನುಭವ ಹೊಂದಿರಬೇಕು. ಆದರೆ, ಉದಯ್ ಶಿವಕುಮಾರ್ ಇನ್‌ಫ್ರಾ ಪ್ರೈವೇಟ್ ಸಂಸ್ಥೆಯು ಈ ಕುರಿತ ದಾಖಲೆಗಳನ್ನು ಇ-ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಿರಲಿಲ್ಲ. ಈ ಕಾರಣಕ್ಕೆ ನಿಗಮದ ವ್ಯವಸ್ಥಾಪಕ ನಿರ್ದೇಶಕ ಪ್ರಕಾಶ್ ಕುಮಾರ್ ಅಧ್ಯಕ್ಷತೆಯ ಟೆಂಡರ್ ಪರಿಶೀಲನಾ ಸಮಿತಿಯು ಈ ಸಂಸ್ಥೆಯನ್ನು ತಾಂತ್ರಿಕವಾಗಿ ಅನರ್ಹಗೊಳಿಸಿತ್ತು.

ಈ ಬಗ್ಗೆ ಪ್ರತಿಕ್ರಿಯೆಗೆ ನಿಗಮದ ವ್ಯವಸ್ಥಾಪಕ ನಿರ್ದೇಶಕರು ಲಭ್ಯರಾಗಲಿಲ್ಲ.

ಟೆಂಡರ್ ಷರತ್ತುಗಳು

- ಈ ಕಾಮಗಾರಿ ಅನುಷ್ಠಾನಕ್ಕೆ ತಾಂತ್ರಿಕ ಅರ್ಹತೆ ಪಡೆಯಲು ಗುತ್ತಿಗೆದಾರ ಕಳೆದ ಐದು ವರ್ಷಗಳಲ್ಲಿ ಯಾವುದಾದರೂ ಎರಡು ವರ್ಷಗಳಲ್ಲಿ ಕಾಮಗಾರಿಯ ಒಟ್ಟು ವೆಚ್ಚಕ್ಕಿಂತ ದುಪ್ಪಟ್ಟು ವಾರ್ಷಿಕ ವಹಿವಾಟು ಹೊಂದಿರಬೇಕು.
- ಇದೇ ಮಾದರಿಯ ಯಾವುದಾದರೂ ಒಂದು ರಸ್ತೆ ಅಭಿವೃದ್ಧಿ ಕಾಮಗಾರಿಯನ್ನು ಮುಖ್ಯ ಗುತ್ತಿಗೆದಾರರಾಗಿ ಪೂರ್ಣಗೊಳಿಸಿರಬೇಕು. ಅದರ ಅಭಿವೃದ್ಧಿ ವೆಚ್ಚ ಹಾಗೂ ವಾರ್ಷಿಕ ನಿರ್ವಹಣೆಯ ವೆಚ್ಚವು ಕಾಮಗಾರಿ ವೆಚ್ಚದ ಶೇ 50ರಷ್ಟಾದರೂ ಇರಬೇಕು.
- ಐದು ವರ್ಷಗಳಲ್ಲಿ ಯಾವುದಾದರೂ ಒಂದು ವರ್ಷ ಡಾಂಬರೀಕರಣ ಕಾಮಗಾರಿ ನಡೆಸಿರಬೇಕು ಹಾಗೂ ಸೈನ್ ಬೋರ್ಡ್ ಅಳವಡಿಕೆ, ಸಂಚಾರ ನಿರ್ವಹಣೆ ಪರಿಕರಗಳ ಅಳವಡಿಕೆ ಮಾಡಿದ ಅನುಭವ ಇರಬೇಕು.
- ಯಾವುದಾದರೂ ಒಂದು ವರ್ಷ ಈ ಕಾಮಗಾರಿಯ ಪ್ಯಾಕೇಜ್‌ಗೆ ಗೊತ್ತುಪಡಿಸಿದ ರಸ್ತೆಯ ಒಟ್ಟು ಉದ್ದದ ಶೇ 50ರಷ್ಟು ಉದ್ದದ ರಸ್ತೆಯನ್ನು ನಿರ್ವಹಣೆ ಮಾಡಿದ ಅನುಭವ ಇರಬೇಕು.
- ಗುತ್ತಿಗೆದಾರ ಅಥವಾ ಉಪಗುತ್ತಿಗೆದಾರರು ಕನಿಷ್ಠ ಕಟ್ಟಡ/ ರಸ್ತೆಗಳ ವಿದ್ಯುದೀಕರಣ ನಡೆಸುವ ₹ 5 ಕೋಟಿ ವೆಚ್ಚದ ಕಾಮಗಾರಿ ನಿರ್ವಹಣೆಗೆ ಅಗತ್ಯವಿರುವ ಪರವಾನಗಿ ಹೊಂದಿರಬೇಕು.

ಲಸಿಕೆಗೆ ಪೇಟೆಂಟ್ ಬೇಡ ಸ್ವದೇಶಿ ಜಾಗರಣ್ ಮಂಚ್ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೋವಿಡ್ ಇಡೀ ಮನುಕುಲವನ್ನೇ ತಲ್ಲಣಗೊಳಿಸಿದೆ. ಈ ಸಮಯದಲ್ಲಿ ಕೆಲವೇ ಕಂಪನಿಗಳು ಲಸಿಕೆ ತಯಾರಿಸುವ ಹಕ್ಕು ಹೊಂದಿವೆ. ಈ ಕಂಪನಿಗಳು ಹೊಂದಿರುವ ಪೇಟೆಂಟ್ ಅನ್ನು ತಾತ್ಕಾಲಿಕವಾಗಿ ರದ್ದು ಮಾಡಬೇಕು' ಎಂದು ಸ್ವದೇಶಿ ಜಾಗರಣ್ ಮಂಚ್‌ನ ಮುಖಂಡ ಬಿ.ಎಂ.ಕುಮಾರಸ್ವಾಮಿ ತಿಳಿಸಿದರು.

ಮಂಗಳವಾರ ನಡೆದ ಆನ್‌ಲೈನ್ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಇದನ್ನು ವಿಶೇಷ ಸಂದರ್ಭವೆಂದು ಪರಿಗಣಿಸಿ ಲಸಿಕೆ ಹಾಗೂ ವೈದ್ಯಕೀಯ ಉಪಕರಣಗಳನ್ನು ತಯಾರಿಸಲು ಇತರ ಕಂಪನಿಗಳಿಗೂ ಅನುಮತಿ ನೀಡಬೇಕು. ಇದಕ್ಕಾಗಿ ದೇಶದಾದ್ಯಂತ ಆನ್‌ಲೈನ್ ಅಭಿಯಾನ ಹಮ್ಮಿಕೊಂಡಿದ್ದೇವೆ' ಎಂದರು.

'ಜೂನ್ 15ರೊಳಗೆ 25 ಲಕ್ಷ ಸಹಿ ಸಂಗ್ರಹಿಸುವ ಗುರಿ ಇದೆ. ನಮ್ಮಲ್ಲಿ ಈಗ ಎರಡು ಕಂಪನಿಗಳು ಮಾತ್ರ ಲಸಿಕೆ ಉತ್ಪಾದಿಸುತ್ತಿವೆ. ಈ ಕಂಪನಿಗಳು ಹಗಲು ರಾತ್ರಿ ಕೆಲಸ ಮಾಡಿದರೂ ನಮಗೆ ಬೇಕಾದಷ್ಟು ಲಸಿಕೆ ಸಿಗುವುದಿಲ್ಲ. ಪೇಟೆಂಟ್ ಮುಕ್ತವಾದರೆ ಭಾರತದ 25 ಕಂಪನಿಗಳು ಲಸಿಕೆ ಉತ್ಪಾದಿಸಬಹುದು. ಕೊರೊನಾ ವೈರಾಣು ಕಾಲ ಕಾಲಕ್ಕೆ ರೂಪಾಂತರಗೊಳ್ಳುತ್ತಿದೆ. ಹೀಗಾಗಿ ಪ್ರಪಂಚದ ಎಲ್ಲರಿಗೂ ಏಕ ಕಾಲದಲ್ಲಿ ಲಸಿಕೆ ನೀಡಬೇಕು. ಇದು ಜಗತ್ತಿನ ಎದುರಿಗಿರುವ ಬಹುದೊಡ್ಡ ಸವಾಲು. ಒಬ್ಬೊಬ್ಬರಿಗೆ ಎರಡು ಡೋಸ್ ಎಂದರೆ ಎಲ್ಲರಿಗೂ ಲಸಿಕೆ ನೀಡಲು ಸುಮಾರು 1,400 ಕೋಟಿ ಡೋಸ್ ಬೇಕು. ಈಗ ನಾವಿರುವ ಸ್ಥಿತಿಯಲ್ಲಿ ಈ ವರ್ಷವೇ ಜಗತ್ತಿನ ಎಲ್ಲರಿಗೂ ಲಸಿಕೆ ನೀಡುವುದು ಕಷ್ಟ' ಎಂದು ತಿಳಿಸಿದರು.

'ಭಾರತದಲ್ಲಿ ದಿನಕ್ಕೆ 20 ಲಕ್ಷ ಜನರಿಗೆ ಲಸಿಕೆ ನೀಡಲಾಗುತ್ತಿದೆ. ಇದೇ ವೇಗದಲ್ಲಿ ಸಾಗಿದರೆ ಶೇ 75 ಮಂದಿಗೆ ಲಸಿಕೆ ನೀಡಲು ಇನ್ನೂ ನಾಲ್ಕು ವರ್ಷ ಬೇಕಾಗಬಹುದು. ವಿಳಂಬ ಮಾಡಿದಷ್ಟೂ ಅಪಾಯ ಹೆಚ್ಚು' ಎಂದರು.

ರಾಜ್ ಕಪೂರ್, ದಿಲೀಪ್ ಕುಮಾರ್ ಪೂರ್ವಜರ ಮನೆ ಮ್ಯೂಸಿಯಂ: ಪಾಕ್

ಪೇಶಾವರ (ಪಿಟಿಐ): ಬಾಲಿವುಡ್ ನಟರಾದ ರಾಜ್ ಕಪೂರ್ ಹಾಗೂ ದಿಲೀಪ್ ಕುಮಾರ್ ಅವರ ಪೂರ್ವಜರ ಮನೆಗಳನ್ನು ಖರೀದಿಸಿ ವಸ್ತು ಸಂಗ್ರಹಾಲಯವನ್ನಾಗಿ (ಮ್ಯೂಸಿಯಂ) ಪರಿವರ್ತಿಸಲು ಪಾಕಿಸ್ತಾನದ ಖೈಬರ್ ಪಖ್ತುನ್‌ಖ್ವಾ ಪ್ರಾಂತ್ಯ ಸರ್ಕಾರವು ಮಂಗಳವಾರ ಅನುಮೋದನೆ ನೀಡಿದೆ.

ಪೇಶಾವರದ ಜಿಲ್ಲಾ ಆಯುಕ್ತ ಕ್ಯಾಪ್ಟನ್ (ನಿವೃತ್ತ) ಖಾಲಿದ್ ಮೆಹಮದ್ ಎರಡೂ ಮನೆಗಳ ಮಾಲೀಕರ ಆಕ್ಷೇಪಣೆಯನ್ನು ತಿರಸ್ಕರಿಸಿ, ಮನೆಗಳ ಮಾಲೀಕತ್ವವನ್ನು ಪುರಾತತ್ವ ಇಲಾಖೆಗೆ ವರ್ಗಾಯಿಸಿದರು.

ರಾಜ್ ಕಪೂರ್ ಹಾಗೂ ದಿಲೀಪ್ ಕುಮಾರ್ ಅವರ ಪೂರ್ವಜನ ಮನೆಗಳನ್ನು ಕ್ರಮವಾಗಿ ₹ 1.5 ಕೋಟಿ ಹಾಗೂ ₹ 80 ಲಕ್ಷಕ್ಕೆ ಖರೀದಿಸಲು ಅಲ್ಲಿನ ಸರ್ಕಾರವು ಬೆಲೆ ನಿಗದಿಪಡಿಸಿತ್ತು. ಇದರಲ್ಲಿ ಮ್ಯೂಸಿಯಂ ಮಾಡುವ ಯೋಜನೆಯನ್ನೂ ಒಳಗೊಂಡಿತ್ತು.

ರಾಜ್ ಕಪೂರ್ ಅವರ ಪೂರ್ವಜರ ಮನೆಯ ಮಾಲೀಕ ಅಲಿ ಖಾದೀರ್ ಅವರು ₹ 20 ಕೋಟಿ ಹಾಗೂ ದಿಲೀಪ್ ಕುಮಾರ್ ಅವರ ಪೂರ್ವಜರ ಮನೆಯ ಮಾಲೀಕ ₹ 3.50 ಕೋಟಿಯ ಮಾರುಕಟ್ಟೆ ದರದಲ್ಲಿ ಈ ಮನೆಗಳನ್ನು ಖರೀದಿಸಬೇಕೆಂದು ಸರ್ಕಾರಕ್ಕೆ ಕೋರಿದ್ದರು. ಆದರೆ, ಅಲ್ಲಿನ ಸರ್ಕಾರವು ಕಳೆದ ತಿಂಗಳು ಪೇಶಾವರ ಜಿಲ್ಲಾಡಳಿತಕ್ಕೆ ₹ 2.30 ಕೋಟಿ ಹಣ ನೀಡಿ ಎರಡೂ ಮನೆಗಳನ್ನು ಖರೀದಿಸಿ ಅವುಗಳನ್ನು ವಸ್ತು ಸಂಗ್ರಹಾಲಯವನ್ನಾಗಿ ಪರಿವರ್ತಿಸಲು ಸೂಚಿಸಿತ್ತು.

ಗ್ಯಾಸ್ಟ್ರೋಎಂಟ್ರಾಲಜಿ ಸೈನ್ಸಸ್ ಅಂಡ್ ಆರ್ಗನ್ ಟ್ರಾನ್ಸ್‌ಪ್ಲಾಂಟ್ ಸಂಸ್ಥೆ
((ಕರ್ನಾಟಕ ಸರ್ಕಾರದ ಸ್ವಾಯತ್ತ ಸಂಸ್ಥೆ) (ನೋ. ಸಂಖ್ಯೆ .DRB-2/SOR/54/2017-18)
ಓಲ್ಡ್ ಸ್ಕೂಲ್ ಆಫ್ ನರ್ಸಿಂಗ್ ಬಿಲ್ಡಿಂಗ್, ವಿಕ್ಟೋರಿಯಾ ಆಸ್ಪತ್ರೆ ಕ್ಯಾಂಪಸ್, ಬೆಂಗಳೂರು-02.
ದೂ: 080-26707727 ಇ-ಮೇಲ್: **igotinstitute@gmail.com**
ಸಂಖ್ಯೆ: ಐಜಿಒಟಿ/ಟಿಎನ್‌ಡಿ/09/2021–22 ದಿನಾಂಕ: 01.06.2021

ಸಂಕ್ಷಿಪ್ತ ಟೆಂಡರ್ ಅಧಿಸೂಚನೆ
(ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ)

ಇನ್ಸ್ಟಿಟ್ಯೂಟ್ ಆಫ್ ಗ್ಯಾಸ್ಟ್ರೋ ಎಂಟ್ರಾಲಜಿ ಸೈನ್ಸಸ್ ಅಂಡ್ ಆರ್ಗನ್ ಟ್ರಾನ್ಸ್‌ಪ್ಲಾಂಟ್ ಸಂಸ್ಥೆಯ ಟೆಂಡರ್ ಆಹ್ವಾನಿಸುವ ಪ್ರಾಧಿಕಾರವು ಕೆಳಕಂಡ ಕಾರ್ಯಗಳಿಗೆ ಎರಡು ಲಕೋಟೆ ಪದ್ಧತಿ ಅನುಸರಿಸಿ ಅರ್ಹ ಟೆಂಡರ್‌ದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಟೆಂಡರ್ ಸಂಖ್ಯೆ ಹಾಗೂ ದಿನಾಂಕ: (1) IGOT/TND/09/2021-22, Dtd: 01.06.2021: Drugs, Disposables, Misc and Anaesthesia Items. **(2)** IGOT/TND/10/2021-22, Dtd: 01.06.2021: Endoscopy Accessories. **(3)** IGOT/TND/11/2021-22, Dtd: 01.06.2021: Sutures, Surgicals and Staplers. **(4)** IGOT/TND/EMS/12/2021-22, Dtd: 01.06.2021: Electrical Maintenance, Plumber and Lift Operator. **(5)** IGOT/TND/BMW/04/2021-22 Dtd: 01.06.2021: Re-tender Bio-Medical Waste.

ಟೆಂಡರ್‌ದಾರರು ದಿನಾಂಕ: **01.06.2021** ರಿಂದ **19.06.2021** ರ ಸಾಯಂಕಾಲ **4.00** ಗಂಟೆಯವರೆಗೆ **www.eproc.karnataka.gov.in** ವೀಕ್ಷಿಸಿ ಟೆಂಡರ್ ದಸ್ತಾವೇಜುಗಳನ್ನು ಇ–ಪೋರ್ಟಲ್ ಮುಖಾಂತರ ಭರ್ತಿ ಮಾಡಿ ಸಲ್ಲಿಸಬಹುದಾಗಿದೆ. ಟೆಂಡರ್‌ದಾರರ ತಾಂತ್ರಿಕ ಬಿಡ್ಡನ್ನು ದಿನಾಂಕ: **22.06.2021, ಬೆಳಿಗ್ಗೆ 11.30** ಗಂಟೆಗೆ ತೆರೆಯಲಾಗುವುದು.

ಸಹಿ/- ನಿರ್ದೇಶಕರು

ಕರ್ನಾಟಕ ಸರ್ಕಾರ
ಲೋಕೋಪಯೋಗಿ ಇಲಾಖೆ,
ಕಾರ್ಯನಿರ್ವಾಹಕ ಇಂಜನೀಯರರು,
ಲೋಕೋಪಯೋಗಿ ಇಲಾಖೆ, ವಿಭಾಗ, ಚಿಕ್ಕೋಡಿ
ದೂರವಾಣಿ ಸಂ: 08338–273859 ಇ–ಮೇಲ್ : eepwdckd@gmail.com
ಕ್ರ.ಸಂ. ಲೋ.ಇ/ಚಿ.ವಿ/ಸ.ಇಂ–1/ಟೆಂಡರ್/2021–22/466 ದಿನಾಂಕ: 31–05–2021

ಅವಧಿ ವಿಸ್ತರಣೆ ಇ–ಅಲ್ಪಾವಧಿ ಟೆಂಡರ್ ಪ್ರಕಟಣೆ–1

ಈ ಕಚೇರಿ ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ ಕ್ರ.ಸಂ. ಲೋ.ಇ./ಚಿ.ವಿ/ಸ.ಇಂ–1/ಟೆಂಡರ್/2021–22/373 ದಿನಾಂಕ: 13–05–2021 ರಡಿ ಟೆಂಡರ್ ಆಹ್ವಾನಿಸಲಾಗಿದ್ದು, ಸದರಿ ಪ್ರಕಟಣೆಗಳಲ್ಲಿನ ಕ್ರ.ಸಂ. 1 ರಲ್ಲಿನ ಕಾಮಗಾರಿಗಳಿಗೆ ಈ ಕೆಳಗಿನಂತೆ ಅವಧಿ ವಿಸ್ತರಣೆ ಮಾಡಲಾಗಿದೆ.

ಗುತ್ತಿಗೆ ಪ್ರಕ್ರಿಯೆಯ ಮಾರ್ಪಡಿಸಿದ ನಿಗದಿತ ದಿನಾಂಕಗಳು :

1) ಗುತ್ತಿಗೆ ಪೂರ್ವಭಾವಿ ಸಭೆ ವಿಭಾಗ ಕಚೇರಿಯಲ್ಲಿ : **07–06–2021 ರಂದು (ಬೆಳಿಗ್ಗೆ 11:00 ಗಂಟೆಗೆ)** 2) ಆಕ್ಷೇಪಣೆ – ಸಂದೇಹ ಮತ್ತು ವಿವರಣೆಗಳಿಗೆ ಕೊನೆಯ **ದಿನಾಂಕ 09–06–2021 (ಸಾಯಂಕಾಲ 5.30 ಗಂಟೆಯವರೆಗೆ)** 3) ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ **ದಿನಾಂಕ : 11–06–2021 (ಸಾಯಂಕಾಲ 5.00 ಗಂಟೆಯವರೆಗೆ)** 4) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ (Two Cover System): **14–06–2021 (ಸಾಯಂಕಾಲ 4.30 ಗಂಟೆಗೆ)** 5) ಹಣಕಾಸು ಬಿಡ್‌ನ್ನು ತೆರೆಯುವ ದಿನಾಂಕ (Two Cover System): **"ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ"** ಉಳಿದ ಉಪವಿಧಿಗಳಲ್ಲಿ/ಷರತ್ತುಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು,
ಲೋಕೋಪಯೋಗಿ ಇಲಾಖೆ ವಿಭಾಗ ಚಿಕ್ಕೋಡಿ.
DIPO/RO No. 123/2021-22

ಹೃದಯ ಶಸ್ತ್ರಚಿಕಿತ್ಸಕ ಡಾ. ವಿವೇಕ್ ಜವಳಿ ಅಭಿಮತ

'ವೈದ್ಯಕೀಯ ಶಿಕ್ಷಣಕ್ಕೆ ತಂತ್ರಜ್ಞಾನದ ಸ್ಪರ್ಶ ಅಗತ್ಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬದಲಾದ ಕಾಲಘಟ್ಟದಲ್ಲಿ ತಂತ್ರಜ್ಞಾನವು ಎಲ್ಲ ಕ್ಷೇತ್ರಗಳನ್ನು ಶರವೇಗದಲ್ಲಿ ಆವರಿಸಿಕೊಳ್ಳುತ್ತಿದೆ. ಹಾಗಾಗಿ, ಶಿಕ್ಷಣ ಮತ್ತು ವೈದ್ಯಕೀಯ ಕ್ಷೇತ್ರವು ತಂತ್ರಜ್ಞಾನದ ಬೆನ್ನುಹತ್ತಿ ಸಾಗಬೇಕು' ಎಂದು ಫೋರ್ಟಿಸ್ ಆಸ್ಪತ್ರೆಯ ಹೃದಯ ಶಸ್ತ್ರಚಿಕಿತ್ಸಕ ಡಾ. ವಿವೇಕ್ ಜವಳಿ ತಿಳಿಸಿದರು.

ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯವು (ಆರ್‌ಜಿಎಚ್‌ಎಸ್) ನಗರದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ 26ನೇ ಸಂಸ್ಥಾಪನಾ ದಿನಾಚರಣೆ ಉದ್ಘಾಟಿಸಿ, ಮಾತನಾಡಿದರು. 'ವಿಶ್ವವಿದ್ಯಾಲಯಗಳು ಹೊಸತನಕ್ಕೆ ತೆರೆದುಕೊಂಡು, ಸ್ಪರ್ಧಾತ್ಮಕ ಯುಗಕ್ಕೆ ಒಡ್ಡಿಕೊಳ್ಳಬೇಕು. ಶೈಕ್ಷಣಿಕ ಪ್ರಗತಿ ಸಾಧಿಸಲು ಗುಣಮಟ್ಟ, ಪ್ರಮಾಣ ಹಾಗೂ ಬಂಡವಾಳ ಸೆಳೆತಕ್ಕೆ ಆದ್ಯತೆ ನೀಡಬೇಕು. ಎಲ್ಲಕ್ಕಿಂತ ಮುಖ್ಯವಾಗಿ ಸಂಶೋಧನೆಗಳು ವಿಶ್ವವಿದ್ಯಾಲಯದ ಆತ್ಮವಾಗಿರುತ್ತವೆ. ಹಾಗಾಗಿ, ಎಲ್ಲ ವಿಭಾಗಗಳಲ್ಲಿ ಸಂಶೋಧನೆಗೆ ಪೂರಕವಾದ ವಾತಾವರಣ ನಿರ್ಮಿಸಿಕೊಡಬೇಕು' ಎಂದರು.

ಡಾ. ವಿವೇಕ್ ಜವಳಿ

'ಭವಿಷ್ಯದಲ್ಲಿ ಆನ್‌ಲೈನ್ ಶಿಕ್ಷಣಕ್ಕೆ ಕೂಡ ಹೆಚ್ಚಿನ ಬೇಡಿಕೆ ಬರಲಿದೆ. ಹಾಗಾಗಿ, ಶಿಕ್ಷಣ ಕ್ಷೇತ್ರದಲ್ಲಿ ತಂತ್ರಜ್ಞಾನ ಪ್ರಮುಖ ಪಾತ್ರವಹಿಸುತ್ತದೆ. ಕಟ್ಟಡಗಳ ನಿರ್ಮಾಣಕ್ಕಿಂತ ತಂತ್ರಜ್ಞಾನದ ಮೇಲೆ ಹೂಡಿಕೆ ನಮ್ಮ ಆದ್ಯತೆಯಾಗಬೇಕು. ವೈದ್ಯಕೀಯ ಸೀಟುಗಳನ್ನು ಹೆಚ್ಚಿಸುವುದರಿಂದ ಈ ಕ್ಷೇತ್ರದ ಸಮಸ್ಯೆಗಳಿಗೆ ಪರಿಹಾರ ದೊರೆಯುವುದಿಲ್ಲ. ಬದಲಾಗಿ, ಗುಣಮಟ್ಟದ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು. ವೈದ್ಯಕೀಯ ಸಂಸ್ಥೆಗಳು ಪ್ರಾದೇಶಿಕ ಕೇಂದ್ರಗಳ ನಿರ್ಮಾಣದ ಕಡೆಗೂ ಗಮನ ನೀಡಬೇಕು. ಶಿಕ್ಷಕರ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು' ಎಂದು ಹೇಳಿದರು.

ಜಾಗತಿಕ ಮಟ್ಟದಲ್ಲಿ ಸಾಧನೆ: ವಿಶ್ವವಿದ್ಯಾಲಯದ ಕುಲಪತಿ ಡಾ.ಎಸ್. ಸಚ್ಚಿದಾನಂದ, 'ಕಳೆದ 25 ವರ್ಷಗಳಲ್ಲಿ ಹಲವಾರು ಸಾಧನೆಗಳನ್ನು ಮಾಡಲಾಗಿದೆ. ಹಲವರ ಪರಿಶ್ರಮದಿಂದ ವಿಶ್ವವಿದ್ಯಾಲಯವು ಜಾಗತಿಕ ಮಟ್ಟದಲ್ಲಿ 1,862ನೇ ಸ್ಥಾನ ಪಡೆದಿದೆ. ಜಗತ್ತಿನ 20 ಸಾವಿರ ಅತ್ಯುತ್ತಮ ವಿಶ್ವವಿದ್ಯಾಲಯಗಳ ಪಟ್ಟಿಯಲ್ಲಿ 2 ಸಾವಿರದ ಒಳಗಡೆ ಸ್ಥಾನ ಪಡೆದುಕೊಳ್ಳುವುದು ಸುಲಭವಲ್ಲ. ಮುಂದಿನ 25 ವರ್ಷದೊಳಗೆ ವಿಶ್ವವಿದ್ಯಾಲಯವು ಅಗ್ರ 500 ವಿಶ್ವವಿದ್ಯಾಲಯಗಳ ಪಟ್ಟಿಯಲ್ಲಿ ಸ್ಥಾನ ಪಡೆಯುವಂತಾಗಬೇಕು' ಎಂದು ತಿಳಿಸಿದರು.

'ಸಂಶೋಧನೆಗಳಿಗೆ ಕೂಡ ಕೆಲ ವರ್ಷಗಳಿಂದ ಹೆಚ್ಚಿನ ಆದ್ಯತೆ ನೀಡಲಾಗುತ್ತಿದೆ. ಪರೀಕ್ಷೆ, ಫಲಿತಾಂಶದಲ್ಲಿ ಗೊಂದಲ ಉಂಟಾಗದಂತೆ ಕ್ರಮಕೈಗೊಳ್ಳಲಾಗಿದೆ. ವಿದ್ಯಾರ್ಥಿಗಳಿಗೆ ವೈದ್ಯಕೀಯ ಸೌಲಭ್ಯಗಳನ್ನು ಕೂಡ ಒದಗಿಸಲಾಗುತ್ತಿದೆ. ಅಪಘಾತ ಸೇರಿದಂತೆ ವಿವಿಧ ಸಂದರ್ಭದಲ್ಲಿ ಆರ್ಥಿಕ ನೆರವು ನೀಡಲಾಗುತ್ತಿದೆ. ಕೋವಿಡ್‌ನಿಂದ ಪಾಲಕರನ್ನು ಕಳೆದುಕೊಂಡ ವಿದ್ಯಾರ್ಥಿಗಳಿಗೆ ಪ್ರವೇಶ ಶುಲ್ಕದಲ್ಲಿ ವಿನಾಯಿತಿ ಘೋಷಿಸಲಾಗಿದೆ' ಎಂದರು.

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ
ಸಂಚಾರ ವಾಣಿಜ್ಯ ಶಾಖೆ, ಕೇಂದ್ರ ಕಛೇರಿ, ಶಾಂತಿನಗರ, ಬೆಂಗಳೂರು–27
ಸಂಖ್ಯೆ: ಬೆಂಮಸಾಸಂ/ಕೇಕ/ಸಂ/ವಾ/325/2021–22 ದಿನಾಂಕ: 31.05.2021

ಅಲ್ಪಾವಧಿ ಟೆಂಡರ್/ಸಂಧಾನ ಪ್ರಕಟಣೆ ಸಂಖ್ಯೆ–04/2021–22
(ಇ–ಪ್ರೊಕ್ಯರ್‌ಮೆಂಟ್ ಮೂಲಕ)

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯು ಹೊಸದಾಗಿ ನಿರ್ಮಿಸಿರುವ ಬಿಟಿಎಂ ಲೇಔಟ್ ಬಸ್ ನಿಲ್ದಾಣ ಸಂಕೀರ್ಣ **"ಎಲ್ಲಿ ಹೇಗಿದೆಯೋ ಅದೇ ಸ್ಥಿತಿಯಲ್ಲಿ"** ನೀಡುವ ನಿಬಂಧನೆಗೆ ಒಳಪಟ್ಟಂತೆ 12 ವರ್ಷಗಳ ಅವಧಿಗೆ ವಾಣಿಜ / ಕಛೇರಿ ಕ್ಷೇತ್ರಗಳ ನಿರ್ವಹಣೆಗೆ ಹಾಗೂ ಸಂಸ್ಥೆಯ ವೈಟ್‌ಫೀಲ್ಡ್ (ಐ.ಟಿ.ಪಿ.ಎಲ್) ಸಾರಿಗೆ ಸಂಕೀರ್ಣ **"ಎಲ್ಲಿ ಹೇಗಿದೆಯೋ ಅದೇ ಸ್ಥಿತಿಯಲ್ಲಿ"** ನೀಡುವ ನಿಬಂಧನೆಗೆ ಒಳಪಟ್ಟಂತೆ 12 ವರ್ಷಗಳ ಅವಧಿಗೆ ವಾಣಿಜ್ಯ / ಕಛೇರಿ ಕ್ಷೇತ್ರಗಳ ನಿರ್ವಹಣೆ ಮಾಡಲು ಆಸಕ್ತ ಅನುಭವವುಳ್ಳ ಏಜೆನ್ಸಿ / ಸಂಸ್ಥೆ / ಕಂಪನಿ / ವ್ಯಕ್ತಿಗಳಿಂದ ಇ–ಸಂಗ್ರಹಣಾ ವೇದಿಕೆ ಮುಖಾಂತರ ಬಿಡ್‌ಗಳನ್ನು ಆಹ್ವಾನಿಸಿದೆ.

(1) ಬಿಡ್ ಸಲ್ಲಿಸುವ ಕೊನೆಯ ದಿನಾಂಕ: **14.06.2021**ರಂದು **12:00 ಗಂಟೆಯವರೆಗೆ.**
(2) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **16.06.2021**ರಂದು **12:30 ಗಂಟೆಗೆ.**
(3) ಆರ್ಥಿಕ ಬಿಡ್ ತೆರೆಯುವ ದಿನಾಂಕ: **19.06.2021**ರಂದು **12:30 ಗಂಟೆಗೆ.**

ಮಾಸಿಕ ಪರವಾನಗಿ ಶುಲ್ಕ, ಇಎಂಡಿ ಮೊತ್ತ ಹಾಗೂ ವಿಸ್ತೀರ್ಣಗಳ ಮಾಹಿತಿಗಾಗಿ **https://eproc.karnataka.gov.in** ಗೆ ಲಾಗಾನ್ ಆಗಿ ಅಥವಾ ಇ–ಸಂಗ್ರಹಣಾ ಕೋಶ ದೂರವಾಣಿ ಸಂಖ್ಯೆ: 080–23010900; 23010901; 22371090; 22340060; 22340948 ಅಥವಾ 7760991026 & 7760997519. ಇ–ಮೇಲ್: **ctmc@mybmtc.com** ಗೆ ಸಂಪರ್ಕಿಸಬಹುದು.

ಸಹಿ/–
ಮುಖ್ಯ ಸಂಚಾರ ವ್ಯವಸ್ಥಾಪಕರು (ವಾಣಿಜ್ಯ)
(ಟೆಂಡರ್ ಕರೆಯುವ ಪ್ರಾಧಿಕಾರಿ)
ವಾಸಾಸಂಇ/ಬೆಂನ/450/ಅಲಕ್‌ನಂದ/2021–22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ರಾಮನಗರ ಜಿಲ್ಲಾ ಪಂಚಾಯತ್
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ,
ರಾಮನಗರ ವಿಭಾಗ, ರಾಮನಗರ.
ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ ಸಂಖ್ಯೆ: 06/ ದಿನಾಂಕ : 28–05–2021
ಕಾಅ/ಗ್ರಾ.ಕು.ನೀ. & ನೈ.ವಿ/ರಾ/ಟೆಂಡರ್/ಸ.ಇಂ.–4/ಜೆಜೆಎಂ/308–317/2021–22

ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕರ್ನಾಟಕ ಪಾರದರ್ಶಕತೆ ಅಧಿನಿಯಮ 2000 ರ ಪ್ರಕಾರ ರಾಮನಗರ ಜಿಲ್ಲೆಯ ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿನ ಗ್ರಾಮೀಣ ಪ್ರದೇಶದಲ್ಲಿ ಜೆಜೆಎಂ ಯೋಜನೆಯಡಿಯಲ್ಲಿ ಅನುಮೋದನೆಗೊಂಡಿರುವ ರಾಮನಗರ ಜಿಲ್ಲೆಯ ಕನಕಪುರ ತಾಲ್ಲೂಕಿನ ಕುಡಿಯುವ ನೀರು ಸರಬರಾಜು ಯೋಜನೆಯ ಕಾಮಗಾರಿಗಳನ್ನು ನಿರ್ವಹಿಸಲು ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್‌ಗಳನ್ನು ಅಧಿಕೃತ ಗುತ್ತಿಗೆದಾರರಿಂದ ಆಹ್ವಾನಿಸಲಾಗಿದೆ. ವಿವರಗಳು ಕಾಮಗಾರಿಗಳನ್ನು ನಿರ್ವಹಿಸಲು ಈ ಕೆಳಕಂಡಂತಿವೆ.

1) ಕನಿಷ್ಠ ಟೆಂಡರ್‌ಗಿಟ್ಟ ಮೊತ್ತ : ರೂ. 57.16 ಲಕ್ಷಗಳು. ಇ.ಎಂ.ಡಿ. ಮೊತ್ತ : ರೂ. 1.14 ಲಕ್ಷಗಳು. 2) ಗರಿಷ್ಠ ಟೆಂಡರ್‌ಗಿಟ್ಟ ಮೊತ್ತ : ರೂ. 166.75 ಲಕ್ಷಗಳು. ಇ.ಎಂ.ಡಿ. ಮೊತ್ತ : ರೂ. 2.50 ಲಕ್ಷಗಳು. 3) ಕಾಲಾವಧಿ : 06 ತಿಂಗಳು. 4) ಬಿಡ್ ಪೂರ್ವಬಾವಿ ಸಭೆ : 07–06–2021 ರ ಬೆಳಿಗ್ಗೆ 11.00 ಗಂಟೆಗೆ. ಸ್ಥಳ : ಕಾರ್ಯಪಾಲಕ ಅಭಿಯಂತರರ ಕಛೇರಿ, 3ನೇ ಮಹಡಿ, ಪಂಚಾಯತ್ ಭವನ ರಾಮನಗರ.

ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ದರಗಳನ್ನು ನಮೂದಿಸಿ **ಸಲ್ಲಿಸಲು ಕೊನೆಯ ದಿನಾಂಕ : 14–06–2021 ರ ಸಂಜೆ 5.30 ಗಂಟೆಯವರೆಗೆ. ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 16–06–2021 ರ ಬೆಳಿಗ್ಗೆ 11.00 ಗಂಟೆಯ ನಂತರ. ಆರ್ಥಿಕ ಬಿಡ್ ತೆರೆಯುವ ದಿನಾಂಕ : 21–06–2021 ರ ಬೆಳಿಗ್ಗೆ 11.00 ಗಂಟೆಯ ನಂತರ.** ಮೇಲ್ಕಾಣಿಸಿದ ದಿನವೇನಾದರೂ ಸಾರ್ವತ್ರಿಕ ರಜಾ ದಿನವಾದಲ್ಲಿ ಮುಂದಿನ ದಿನವನ್ನು ಗಣನೆಗೆ ತೆಗೆದುಕೊಳ್ಳಲಾಗುವುದು. **ಟೆಂಡರ್ ಕಾಮಗಾರಿಗಳ ವಿವರ ಹಾಗೂ ನಿಯಮಾವಳಿಗಳನ್ನು ಒಳಗೊಂಡಿರುವ ಮಾಹಿತಿಗೆ ಈ ಕಛೇರಿಯ ಇಲಾಖೆ ವೆಬ್‌ಸೈಟ್ : www.eproc.karnataka.gov.in** ರಲ್ಲಿ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು,
ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ ಇಲಾಖೆ,
ರಾಮನಗರ ವಿಭಾಗ, ರಾಮನಗರ.
ಡಿಐಪಿಆರ್/ರಾಮನಗರ/72/ಮಣಿಪಾಲ್/20–21

ಶ್ರೀಕಾಂತ್ ವಿರುದ್ಧ ಸಾರ್ವಜನಿಕರ ತೀವ್ರ ಆಕ್ರೋಶ

ಲಸಿಕೆ ನೀಡಿದರೇ ಪಾಲಿಕೆ ಮಾಜಿ ಸದಸ್ಯ!

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಲಸಿಕಾ ಅಭಿಯಾನದಲ್ಲಿ ತಾನೇ ಲಸಿಕೆ ನೀಡಿರುವಂತೆ ಪೋಟೋ ತೆಗೆದು ಸಾಮಾಜಿಕ ತಾಣಗಳಲ್ಲಿ ಹರಿಬಿಟ್ಟಿರುವ ಪಾಲಿಕೆ ಮಾಜಿ ಸದಸ್ಯ ಎಂ.ಎನ್.ಶ್ರೀಕಾಂತ್ ನಡೆಗೆ ಸಾರ್ವಜನಿಕ ವಲಯದಲ್ಲಿ ಆಕ್ಷೇಪ ವ್ಯಕ್ತವಾಗಿದೆ.

ಕ್ಷೇತ್ರದ ದೇವಸಂದ್ರದ ಲಿಟಲ್ ಬ್ಲೂಮ್ ಶಾಲೆಯಲ್ಲಿ ಆಯೋಜಿಸಿದ್ದ ಲಸಿಕಾ ಅಭಿಯಾನದಲ್ಲಿ ದೇವಸಂದ್ರ ವಾರ್ಡ್‌ನ ಸಾರ್ವಜನಿಕರಿಗೆ ಲಸಿಕೆ ಶಿಬಿರ ಹಮ್ಮಿಕೊಳ್ಳಲಾಗಿತ್ತು,

ಅಭಿಯಾನದಲ್ಲಿ ಪಾಲ್ಗೊಂಡಿದ್ದ ಎಂ.ಎನ್. ಶ್ರೀಕಾಂತ್ ತಾವೇ ಲಸಿಕೆ ನೀಡುತ್ತಿರುವಂತೆ ಪೋಸ್ ಕೊಟ್ಟು ಪೋಟೋಗಳನ್ನು ಸಾಮಾಜಿಕ ತಾಣಗಳಲ್ಲಿ ಹಾಕಿದ್ದರು.

ಈ ಪೋಟೋಗಳನ್ನು ನೋಡಿದ ಸಾರ್ವಜನಿಕರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

'ಕೊರೊನಾ ತುರ್ತು ಸಂದರ್ಭದಲ್ಲಿ ಜನರ ಜೀವದ ಜೊತೆ ಆಟ ಆಡುವ ಅಧಿಕಾರವನ್ನು ಇವರಿಗೆ ಕೊಟ್ಟವರು ಯಾರು. ಕೊರೊನಾ ಎರಡನೇ ಅಲೆ ವ್ಯಾಪಕವಾಗಿ ಹರಡಿ ಹಲವು ಸಾವು ನೋವುಗಳು ಆಗುತ್ತಿರುವ ಇಂತಹ ಸಂದರ್ಭದಲ್ಲಿ ಇಂತಹ ಪ್ರಚಾರದ ಗೀಳು ಬೇಕೇ' ಕಾಂಗ್ರೆಸ್ ಮುಖಂಡ ಡಿ.ಎ. ಗೋಪಾಲ್ ಆಕ್ರೋಶ ವ್ಯಕ್ತಪಡಿಸಿದ್ದಾರೆ.

'ವಾರ್ಡ್‌ನಲ್ಲಿ ಶ್ರೀಕಾಂತ್ ಅವರ ಅನುಯಾಯಿಗಳು, ಬಿಜೆಪಿ ಕಾರ್ಯಕರ್ತರಿಗೆ ಸುಲಭವಾಗಿ ಲಸಿಕೆ ಸಿಗುತ್ತಿದೆ. ಆದರೆ, ಸಾಮಾನ್ಯ ಜನರು ಮೂರು ದಿನ ಸರತಿಸಾಲಿನಲ್ಲಿ ನಿಂತರೂ ಲಸಿಕೆ ಸಿಗುತ್ತಿಲ್ಲ' ಎಂದು ಕೆಪಿಸಿಸಿ ನಗರ ಸಾಮಾಜಿಕ ಜಾಲ ತಾಣದ ಕಾರ್ಯದರ್ಶಿ ಗಗನ್ ಯಾದವ್ ಆರೋಪಿಸಿದ್ದಾರೆ.

ಲಸಿಕೆ ನೀಡಿದಂತೆ ಚಿತ್ರ ತೆಗೆಸಿಕೊಂಡ ಎಂ.ಎನ್.ಶ್ರೀಕಾಂತ್

ವಿಕೋಪ ನಿರ್ವಹಣಾ ಕಾಯ್ದೆ ಅಡಿ ಕ್ರಮ ● ಎರಡು ವರ್ಷ ಜೈಲು ಶಿಕ್ಷೆಗೂ ಅವಕಾಶ

ಆಲಾಪನ್‌ಗೆ ಮತ್ತೊಂದು ನೋಟಿಸ್

ನವದೆಹಲಿ (ಪಿಟಿಐ): ಪಶ್ಚಿಮ ಬಂಗಾಳ ಸರ್ಕಾರ ಮತ್ತು ಕೇಂದ್ರ ಸರ್ಕಾರದ ನಡುವಣ ಸಂಘರ್ಷ ಮತ್ತಷ್ಟು ತಾರಕಕ್ಕೆ ಏರಿದೆ. ಪಶ್ಚಿಮ ಬಂಗಾಳದ ನಿವೃತ್ತ ಮುಖ್ಯ ಕಾರ್ಯದರ್ಶಿ ಆಲಾಪನ್ ಬಂದೋಪಾಧ್ಯಾಯ ಅವರಿಗೆ ಕೇಂದ್ರ ಸರ್ಕಾರವು ವಿಕೋಪ ನಿರ್ವಹಣಾ ಕಾಯ್ದೆಯ 51ನೇ ಬಿ ಸೆಕ್ಷನ್ ಅಡಿಯಲ್ಲಿ ನೋಟಿಸ್ ಜಾರಿ ಮಾಡಿದೆ. ಈ ಸೆಕ್ಷನ್ ಅಡಿ ಗರಿಷ್ಠ 2 ವರ್ಷ ಅವಧಿಗೆ ಕಾರಾಗೃಹ ಶಿಕ್ಷೆ ವಿಧಿಸಲು ಅವಕಾಶವಿದೆ.

ಈ ಕಾಯ್ದೆಯ ಅಡಿ ಯಾವುದೇ ನಿರ್ದೇಶನ ಅಥವಾ ಆದೇಶವನ್ನು ಕೇಂದ್ರ ಸರ್ಕಾರ ನೀಡಿರಲಿಲ್ಲ. ಹೀಗಿದ್ದೂ ಈ ಕಾಯ್ದೆ ಅಡಿ ನೋಟಿಸ್ ಜಾರಿ ಮಾಡಲಾಗಿದೆ. ಇದು ಸಂವಿಧಾನ ಬಾಹಿರ ಎಂದು ಟಿಎಂಸಿ ಹೇಳಿದೆ.

ಆಲಾಪನ್ ಅವರಿಗೆ ಕೇಂದ್ರ ಸರ್ಕಾರದ ವಿವಿಧ ಕಚೇರಿಗಳು ಸೋಮವಾರದಿಂದ ಈವರೆಗೆ ಎರಡು ನೋಟಿಸ್ ಜಾರಿ ಮಾಡಿವೆ. ಕೇಂದ್ರ ಸೇವೆಗೆ ಹಾಜರಾಗಬೇಕು ಎಂದು ಸಿಬ್ಬಂದಿ ಮತ್ತು ತರಬೇತಿ ಇಲಾಖೆಯು ಸೋಮವಾರ ನೋಟಿಸ್ ಜಾರಿ ಮಾಡಿತ್ತು. ಈಗ ಕೇಂದ್ರ ಗೃಹ ಸಚಿವಾಲಯವು ವಿಕೋಪ ನಿರ್ವಹಣಾ ಕಾಯ್ದೆ ಅಡಿ ನೋಟಿಸ್ ಜಾರಿ ಮಾಡಿದೆ. ನೋಟಿಸ್‌ಗೆ ಮೂರು ದಿನಗಳಲ್ಲಿ ಉತ್ತರ ನೀಡಲು ಸೂಚಿಸಿದೆ.

'ಪ್ರಧಾನಿಯು ರಾಷ್ಟ್ರೀಯ ವಿಕೋಪ ನಿರ್ವಹಣಾ ಪ್ರಾಧಿಕಾರದ ಮುಖ್ಯಸ್ಥರು. ಅವರ ನೇತೃತ್ವದಲ್ಲಿ ಕಾಲೈಕುಂಡದಲ್ಲಿ ಆಯೋಜಿಸಲಾಗಿದ್ದ ಪರಿಶೀಲನಾ ಸಭೆಗೆ ನೀವು ಗೈರುಹಾಜರಾಗಿದ್ದೀರಿ. ಪ್ರಧಾನಿಯವರು ನಿಮಗಾಗಿ 15 ನಿಮಿಷ ಕಾದಿದ್ದರು. ಆನಂತರ ಸಭೆಗೆ ಹಾಜರಾಗಬೇಕೇ ಇಲ್ಲವೇ ಎಂದು ಸೋಮವಾರ ನೋಟಿಸ್ ಕೇಳಿತ್ತು. ನಿಮ್ಮ ಮುಖ್ಯಮಂತ್ರಿಗಳ ಜತೆ ಬಂದು ತಕ್ಷಣವೇ ನಿರ್ಗಮಿಸಿದ್ದೀರಿ. ಇದು ಕೇಂದ್ರ ಸರ್ಕಾರವು ನೀಡಿರುವ ನಿರ್ದೇಶನದ ಉಲ್ಲಂಘನೆಯಾಗುತ್ತದೆ. ವಿಕೋಪ ನಿರ್ವಹಣಾ ಕಾಯ್ದೆಯ 51ನೇ ಬಿ ಸೆಕ್ಷನ್‌ನ ಉಲ್ಲಂಘನೆಯಾಗುತ್ತದೆ. ಈ ಕಾಯ್ದೆ ಅಡಿ ನಿಮ್ಮ ವಿರುದ್ಧ ಏಕೆ ಕ್ರಮ ತೆಗೆದುಕೊಳ್ಳಬಾರದು' ಎಂದು ನೋಟಿಸ್‌ನಲ್ಲಿ ಪ್ರಶ್ನಿಸಲಾಗಿದೆ.

'ಈ ಕಾಯ್ದೆ ಅಡಿ ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರ ಅಥವಾ ರಾಷ್ಟ್ರೀಯ ಕಾರ್ಯಕಾರಿ ಸಮಿತಿ ಅಥವಾ ರಾಜ್ಯ ಕಾರ್ಯಕಾರಿ ಸಮಿತಿ ಅಥವಾ ಜಿಲ್ಲಾಡಳಿತವು ಹೊರಡಿಸಿದ ನಿರ್ದೇಶನ ಅಥವಾ ಆದೇಶವನ್ನು ಪಾಲಿಸದೇ ಇದ್ದರೆ, ಆ ಅಧಿಕಾರಿಗೆ ಗರಿಷ್ಠ ಎರಡು ವರ್ಷ ಜೈಲು ಶಿಕ್ಷೆ ಅಥವಾ ದಂಡ ಅಥವಾ ಎರಡನ್ನೂ ವಿಧಿಸಲು ಅವಕಾಶವಿದೆ' ಎಂದು ವಿಕೋಪ ನಿರ್ವಹಣಾ ಕಾಯ್ದೆಯ 5ನೇ ಬಿ ಸೆಕ್ಷನ್ ಹೇಳುತ್ತದೆ.

ಕೋವಿಡ್ ಸಾಂಕ್ರಾಮಿಕದ ಕಾರಣ ವಿಕೋಪ ನಿರ್ವಹಣಾ ಕಾಯ್ದೆಯನ್ನು ಜಾರಿ ಮಾಡಲಾಗಿದೆ. ಕೇಂದ್ರ ಗೃಹ ಕಾರ್ಯದರ್ಶಿಯು ಈ ಕಾಯ್ದೆ ಅಡಿ ಕಾರ್ಯನಿರ್ವಹಿಸುತ್ತಿರುವ ರಾಷ್ಟ್ರೀಯ ಕಾರ್ಯಕಾರಿ ಸಮಿತಿಯ ಮುಖ್ಯಸ್ಥರಾಗಿದ್ದಾರೆ. ಅವರು ಈ ನೋಟಿಸ್ ಅನ್ನು ಜಾರಿ ಮಾಡಿದ್ದಾರೆ.

ಮುಖ್ಯಾಂಶಗಳು

- ಕೇಂದ್ರ ಸರ್ಕಾರದಿಂದ ಎರಡು ದಿನದಲ್ಲಿ ಎರಡು ನೋಟಿಸ್
- ಮೂರು ದಿನದಲ್ಲಿ ಲಿಖಿತ ಉತ್ತರ ನೀಡುವಂತೆ ಗೃಹ ಸಚಿವಾಲಯ ಸೂಚನೆ
- ನೋಟಿಸ್ ಜಾರಿಗೆ ವಿರೋಧ ಪಕ್ಷಗಳಿಂದ ತೀವ್ರ ಆಕ್ಷೇಪ

ಮುಖ್ಯ ಕಾರ್ಯದರ್ಶಿಯು ಮುಖ್ಯಮಂತ್ರಿಯ ಅಧೀನದಲ್ಲಿ ಬರುತ್ತಾರೆ. ಹೀಗಿದ್ದಾಗ ಮುಖ್ಯಮಂತ್ರಿಯ ಆದೇಶವನ್ನು ಪಾಲಿಸುವುದರಲ್ಲಿ ಯಾವುದೇ ತಪ್ಪಿಲ್ಲ
ಪ್ರದೀಪ್ ಭಟ್ಟಾಚಾರ್ಯ, ಕಾಂಗ್ರೆಸ್ ರಾಜ್ಯಸಭಾ ಸದಸ್ಯ

ಸಭೆಗೆ ಗೈರಾಗುವ ಸುಳಿವು ನೀಡಿದ್ದ ಮಮತಾ: ಧನಕರ್


ಜಗದೀಪ್ ಧನಕರ್

ಕೋಲ್ಕತ್ತ: 'ಕಾಲೈಕುಂಡದಲ್ಲಿ ಪ್ರಧಾನಿ ಜೊತೆಗಿನ ಸಭೆಗೆ ಬಿಜೆಪಿ ಶಾಸಕ ಹಾಗೂ ಪ್ರತಿಪಕ್ಷ ನಾಯಕ ಸುವೆಂದು ಅಧಿಕಾರಿ ಅವರು ಹಾಜರಾದರೆ ನಾನು ಆ ಸಭೆಗೆ ಬರುವುದಿಲ್ಲ' ಎಂಬುದಾಗಿ ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ತಮಗೆ ಸುಳಿವು ನೀಡಿದ್ದರು ಎಂದು ರಾಜ್ಯಪಾಲ ಜಗದೀಪ್ ಧನಕರ್ ಹೇಳಿದ್ದಾರೆ.

'ಯಾಸ್ ಚಂಡಮಾರುತ ಹಾನಿ ಕುರಿತು ಪ್ರಧಾನಿ ಕರೆದಿದ್ದ ಪರಿಶೀಲನಾ ಸಭೆಗೆ ಹಾಜರಾಗದ ತಮ್ಮ ಜತೆ ದುರಹಂಕಾರದಲ್ಲಿ ಮಾತನಾಡಿದ್ದ ಮಮತಾ, ಸಭೆಗೆ ಗೈರಾಗುವ ಮಾಹಿತಿ ನೀಡಿದ್ದರು' ಎಂದು ಧನಕರ್ ಟ್ವೀಟ್ ಮಾಡಿದ್ದಾರೆ.

'ಮಮತಾ ಮತ್ತು ಅವರ ಅಧಿಕಾರಿಗಳು ಸಂವಿಧಾನದ ನಿಯಮಗಳನ್ನು ಗಾಳಿಗೆ ತೂರಿದ್ದಾರೆ. ಸಹಕಾರಿ ಒಕ್ಕೂಟ ವ್ಯವಸ್ಥೆಯಲ್ಲಿ ನಂಬಿಕೆ ಇರಿಸಿರುವ ಭಾರತದ ಇತಿಹಾಸದಲ್ಲಿ ಮೇ 28 ಒಂದು ಕಪ್ಪು ಚುಕ್ಕೆ' ಎಂದು ಧನಕರ್ ಹೇಳಿದ್ದಾರೆ. ಮೇ 28ರಂದು ಪ್ರಧಾನಿ ನಡೆಸಿದ ಸಭೆಗೆ ಮಮತಾ ಹಾಗೂ ಸರ್ಕಾರದ ಮುಖ್ಯ ಕಾರ್ಯದರ್ಶಿ ಆಲಾಪನ್ ಬಂದೋಪಾಧ್ಯಾಯ ಅವರು ಗೈರಾಗಿದ್ದರು.

ಮಮತಾ ಅವರು ಮುಖ್ಯಮಂತ್ರಿ ಕಚೇರಿಗೆ ಅಪಖ್ಯಾತಿ ತಂದಿದ್ದಾರೆ. ಆಲಾಪನ್ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಬೇಕು ಎಂದು ಸುವೆಂದು ಅಧಿಕಾರಿ ಆಗ್ರಹಿಸಿದ್ದಾರೆ.

'ಮಮತಾ ಮತ್ತು ಅವರ ಅಧಿಕಾರಿಗಳು ಸಂವಿಧಾನದ

ನಿವೃತ್ತ ಅಧಿಕಾರಿಯನ್ನು ಕೇಂದ್ರ ಸರ್ಕಾರವು ಗುರಿ ಮಾಡುತ್ತಿದೆ. ಪಶ್ಚಿಮ ಬಂಗಾಳ ಸರ್ಕಾರದ ಆಡಳಿತ ಯಂತ್ರವನ್ನು ದುರ್ಬಲಗೊಳಿಸಲು ಯತ್ನಿಸುತ್ತಿದೆ
ಮಮತಾ ಬ್ಯಾನರ್ಜಿ, ಪಶ್ಚಿಮ ಬಂಗಾಳ ಮುಖ್ಯಮಂತ್ರಿ

ವಿಕೋಪ ನಿರ್ವಹಣಾ ಕಾಯ್ದೆ ಅಡಿ ಯಾವುದೇ ಆದೇಶ ನೀಡಿಲ್ಲ. ಈ ಕಾಯ್ದೆಯ ಉಲ್ಲಂಘನೆ ಆಗುವುದು ಹೇಗೆ. ಈ ನೋಟಿಸ್ ಸಂಪೂರ್ಣವಾಗಿ ಕಾನೂನು ಬಾಹಿರ
ಸುಖೇಂದು ಶೇಖರ್ ರಾಯ್, ಟಿಎಂಸಿ ರಾಜ್ಯಸಭಾ ಸದಸ್ಯ

ನಿರ್ಗಮಿತ ಮುಖ್ಯ ಕಾರ್ಯದರ್ಶಿ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಬೇಕು. ಅವರು ಪ್ರಕೃತಿ ವಿಕೋಪದ ಸಂದರ್ಭದಲ್ಲಿನ ಸೇವಾ ನಿಯಮಗಳನ್ನು ಉಲ್ಲಂಘಿಸಿದ್ದಾರೆ
ಸುವೆಂದು ಅಧಿಕಾರಿ, ಪಶ್ಚಿಮ ಬಂಗಾಳ ವಿರೋಧ ಪಕ್ಷದ ನಾಯಕ

ಮಗುವಿಗೆ ಜನ್ಮ ನೀಡಿದ ದಾದಿಯರಿಗೆ ಮನೆಯಿಂದಲೇ ಕೆಲಸ: ಕೇಂದ್ರ ಸೂಚನೆ

ನವದೆಹಲಿ (ಪಿಟಿಐ): ಕೋವಿಡ್ ಕಾಲದ ಈ ಸಂದರ್ಭದಲ್ಲಿ ಶುಶ್ರೂಷಕರು ತಾಯಿಯಾದರೆ ಅವರು ಮನೆಯಿಂದಲೇ ಕೆಲಸ ಮಾಡಲು ಅವಕಾಶ ಮಾಡಿಕೊಡಬೇಕು ಎಂದು ಕೇಂದ್ರ ಸರ್ಕಾರ ರಾಜ್ಯ ಸರ್ಕಾರಗಳಿಗೆ ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಸೂಚನೆ ನೀಡಿದೆ.

ಶುಶ್ರೂಷಕಿಯು ಮಗುವಿಗೆ ಜನ್ಮ ನೀಡಿದ ದಿನದಿಂದ ಒಂದು ವರ್ಷದವರೆಗೆ ಅವರಿಗೆ ಮನೆಯಿಂದಲೇ ಕೆಲಸ ಮಾಡಲು ಸೂಚಿಸಬೇಕು ಎಂದು ಸರ್ಕಾರ ಸಲಹೆ ನೀಡಿದೆ.

ನೌಕರರ ವಿಶೇಷವಾಗಿ ಮಗುವಿಗೆ ಜನ್ಮ ನೀಡಿದ ದಾದಿಯರ ಹಿತದೃಷ್ಟಿಯಿಂದ ಈ ಕ್ರಮ ಕೈಗೊಳ್ಳಲಾಗಿದೆ ಎಂದು ಕೇಂದ್ರ ಸರ್ಕಾರ ಸೂಚಿಸಿದೆ ಎಂದು ಕಾರ್ಮಿಕ ಸಚಿವಾಲಯದ ಹೇಳಿಕೆ ತಿಳಿಸಿದೆ.

'2022ರಲ್ಲಿ ಸಕಾಲದಲ್ಲಿ ಐದು ವಿಧಾನಸಭಾ ಚುನಾವಣೆ'

ಸುಶೀಲ್ ಚಂದ್ರ

ನವದೆಹಲಿ (ಪಿಟಿಐ): 'ಕೊರೊನಾ ಸಾಂಕ್ರಾಮಿಕದ ನಡುವೆಯೂ ಬಿಹಾರ, ಪಶ್ಚಿಮಬಂಗಾಳ ಮತ್ತು ಇತರ ನಾಲ್ಕು ರಾಜ್ಯಗಳಲ್ಲಿ ನಡೆಸಿದ ವಿಧಾನಸಭಾ ಚುನಾವಣೆಗಳಲ್ಲಿ ಸಾಕಷ್ಟು ಅನುಭವ ಪಡೆದಿದ್ದು, ಮುಂದಿನ ವರ್ಷದ ಆರಂಭದಲ್ಲಿ ಉತ್ತರ ಪ್ರದೇಶ ಮತ್ತು ಪಂಜಾಬ್ ಸೇರಿದಂತೆ ಐದು ರಾಜ್ಯಗಳ ವಿಧಾನಸಭಾ ಚುನಾವಣೆಗಳನ್ನು ಚುನಾವಣಾ ಆಯೋಗವು ಸಕಾಲದಲ್ಲಿ ಯಶಸ್ವಿಯಾಗಿ ನಡೆಸುವ ವಿಶ್ವಾಸ ಹೊಂದಿದೆ' ಎಂದು ಮುಖ್ಯ ಚುನಾವಣಾ ಆಯುಕ್ತ ಸುಶೀಲ್ ಚಂದ್ರ ಪ್ರತಿಪಾದಿಸಿದ್ದಾರೆ.

'ಮುಂದಿನ ವರ್ಷ ಚುನಾವಣೆಗಳನ್ನು ಐದು ರಾಜ್ಯಗಳಲ್ಲಿ ನಿಗದಿತ ಸಮಯಕ್ಕೆ ನಿಗದಿತ ವೇಳಾಪಟ್ಟಿಯ ಪ್ರಕಾರವೇ ನಾವು ಸಂಪೂರ್ಣವಾಗಿ ನಡೆಸುತ್ತೇವೆ' ಎಂದು ಅವರು ಸುದ್ದಿಸಂಸ್ಥೆಗೆ ನೀಡಿದ ಸಂದರ್ಶನದಲ್ಲಿ ತಿಳಿಸಿದ್ದಾರೆ.

ಕೋವಿಡ್ -19ರ ಕಾರಣದಿಂದಾಗಿ ಐದು ರಾಜ್ಯಗಳಲ್ಲಿ ವಿಧಾನಸಭಾ ಚುನಾವಣೆಯನ್ನು ಸಮಯಕ್ಕೆ ಸರಿಯಾಗಿ ನಡೆಸಲು ಚುನಾವಣಾ ಆಯೋಗಕ್ಕೆ ಸಾಧ್ಯವಿದೆಯೇ ಎಂದು ಕೇಳಲಾದ ಪ್ರಶ್ನೆಗೆ ಅವರು ಈ ಪ್ರತಿಕ್ರಿಯೆ ನೀಡಿದ್ದಾರೆ.

'ಸಾಂಕ್ರಾಮಿಕದ ಸಮಯದಲ್ಲಿ ನಾವು ಬಿಹಾರ ಮತ್ತು ನಾಲ್ಕು ರಾಜ್ಯಗಳು ಹಾಗೂ ಒಂದು ಕೇಂದ್ರಾಡಳಿತ ಪ್ರದೇಶದಲ್ಲಿ ಚುನಾವಣೆಗಳನ್ನು ಮಾಡಿದ್ದೇವೆ. ಸಾಂಕ್ರಾಮಿಕದ ಸಮಯದಲ್ಲಿ ಮತದಾನ ಹೇಗೆ ನಡೆಸಬೇಕೆಂಬುದರ ಬಗ್ಗೆ ನಾವು ಸಾಕಷ್ಟು ಅನುಭವಗಳನ್ನು ಕಲಿತಿದ್ದೇವೆ' ಎಂದು ಅವರು ಹೇಳಿದರು.

ಗೋವಾ, ಮಣಿಪುರ, ಪಂಜಾಬ್ ಮತ್ತು ಉತ್ತರಾಖಂಡದ ವಿಧಾನಸಭೆಗಳ ಅವಧಿ 2022ರ ಮಾರ್ಚ್‌ನಲ್ಲಿ ಮುಕ್ತಾಯಗೊಳ್ಳಲಿದ್ದು, ಉತ್ತರಪ್ರದೇಶದ ವಿಧಾನಸಭೆಯ ಅವಧಿ ಮೇ ತಿಂಗಳಲ್ಲಿ ಕೊನೆಗೊಳ್ಳಲಿದೆ.

ತೇಜ್‌ಪಾಲ್ ಪ್ರಕರಣ: ಗೋವಾ ಸರ್ಕಾರದಿಂದ ಮೇಲ್ಮನವಿ

ಮುಂಬೈ (ಪಿಟಿಐ): ಅತ್ಯಾಚಾರ ಪ್ರಕರಣಕ್ಕೆ ಸಂಬಂಧಿಸಿದಂತೆ ಪತ್ರಕರ್ತ ತರುಣ್ ತೇಜ್‌ಪಾಲ್ ಅವನ್ನು ಖುಲಾಸೆಗೊಳಿಸಿರುವುದರ ಬಗ್ಗೆ ಮರುತನಿಖೆ ನಡೆಸಬೇಕು ಎಂದು ಗೋವಾ ಸರ್ಕಾರ ಹೇಳಿದ್ದು, ಸೆಷನ್ಸ್ ನ್ಯಾಯಾಲಯದ ಗ್ರಹಿಕೆಯನ್ನೇ ತನ್ನ ಮೇಲ್ಮನವಿಯ ಪ್ರಮುಖ ವಿಷಯ ಮಾಡಿಕೊಂಡಿದೆ.

ಬಾಂಬೆ ಹೈಕೋರ್ಟ್‌ನ ಗೋವಾ ಪೀಠಕ್ಕೆ ಸಲ್ಲಿಸಲಾಗಿರುವ ಈ ಮೇಲ್ಮನವಿಗೆ ಕೆಲವು ತಿದ್ದುಪಡಿಗಳನ್ನು ಮಾಡಲಾಗಿದ್ದು, ಸೆಷನ್ಸ್ ನ್ಯಾಯಾಲಯವು ತಪ್ಪೊಪ್ಪಿಗೆಯ ಇಮೇಲ್ ಸಂದೇಶವನ್ನು ಸಂಪೂರ್ಣವಾಗಿ ಕಡೆಗಣಿಸಿದೆ, ಇದು ಸಂಶಯ ಇಲ್ಲದ ರೀತಿಯಲ್ಲಿ ಆರೋಪಿಯ ತಪ್ಪನ್ನು ಸಾಬೀತುಪಡಿಸುತ್ತದೆ ಎಂದು ಹೇಳಿದೆ.

'ವಿಚಾರಣಾ ನ್ಯಾಯಾಲಯವು ಆರೋಪಿ ಪರ ನೀಡಲಾದ ಸಾಕ್ಷ್ಯಗಳನ್ನು ಸತ್ಯವೆಂದು ಪರಿಗಣಿಸಿದೆ. ಆದರೆ ಸಂತ್ರಸ್ತೆಯ ಪುರಾವೆಗಳನ್ನು ಪರಿಗಣಿಸಿಲ್ಲ' ಎಂದು ಸರ್ಕಾರ ಹೇಳಿದೆ. ಬುಧವಾರ ಈ ಮೇಲ್ಮನವಿಯನ್ನು ವಿಚಾರಣೆಗೆ ಕೈಗೆತ್ತಿಕೊಳ್ಳುವ ನಿರೀಕ್ಷೆ ಇದೆ.

ಉತ್ತರಪ್ರದೇಶದ ಲಖನೌದಲ್ಲಿ ಲಸಿಕಾ ಕೇಂದ್ರವೊಂದರ ಬಳಿ ಮಂಗಳವಾರ ಜನರು ಲಸಿಕೆ ಪಡೆಯಲು ಜಮಾಯಿಸಿದ್ದರು. ಪಿಟಿಐ– ಚಿತ್ರ

ಚೋಕ್ಸಿ ಕರೆತರಲು ಡೊಮಿನಿಕಾಗೆ ಸಿಬಿಐ ಡಿಐಜಿ ನೇತೃತ್ವದ ತಂಡ

ನವದೆಹಲಿ(ಪಿಟಿಐ) : ಪಂಜಾಬ್ ನ್ಯಾಷನಲ್ ಬ್ಯಾಂಕಿಗೆ ₹ 13,500 ಕೋಟಿ ಮೊತ್ತ ವಂಚಿಸಿದ ಪ್ರಕರಣದಲ್ಲಿ ಭಾರತದಿಂದ ಪರಾರಿಯಾಗಿರುವ ವಜ್ರದ ವ್ಯಾಪಾರಿ ಮೆಹಲ್ ಚೋಕ್ಸಿಯನ್ನು ಕರೆತರಲು ತನಿಖಾ ಸಂಸ್ಥೆಗಳ ಅಧಿಕಾರಿಗಳನ್ನು ಒಳಗೊಂಡ ಸಿಬಿಐ ಡಿಐಜಿ ನೇತೃತ್ವದ ತಂಡವು ಡೊಮಿನಿಕಾಗೆ ತೆರಳಿದೆ.

ಅಲ್ಲಿನ ನ್ಯಾಯಾಲಯವು ಗಡಿಪಾರು ಮಾಡಲು ಅವಕಾಶ ನೀಡಿದರೆ, ಭಾರತದ ತಂಡವು ಬಂಧಿತ ಚೋಕ್ಸಿಯನ್ನು ಕರೆತರಲಿದೆ ಎಂದು ಅಧಿಕಾರಿಗಳು ಮಂಗಳವಾರ ತಿಳಿಸಿದ್ದಾರೆ.

ಡೊಮಿನಿಕಾದ ಹೈಕೋರ್ಟ್‌ನಲ್ಲಿ ಚೋಕ್ಸಿ ಪ್ರಕರಣದ ವಿಚಾರಣೆಯು ಬುಧವಾರ ನಡೆಯಲಿದೆ (ಸ್ಥಳೀಯ ಕಾಲಮಾನ). ಸಿಬಿಐನ ಇಬ್ಬರು ಅಧಿಕಾರಿಗಳು ಸೇರಿದಂತೆ ವಿವಿಧ ತನಿಖಾ ಸಂಸ್ಥೆಗಳ ಅಧಿಕಾರಿಗಳು ಡೊಮಿನಿಕಾ ತಲುಪಿದ್ದಾರೆ.

ಆಮ್ಲಜನಕ ಸಾಂದ್ರಕ ಮೇಲೆ ಐಜಿಎಸ್‌ಟಿ: ಹೈಕೋರ್ಟ್ ಆದೇಶಕ್ಕೆ 'ಸುಪ್ರೀಂ' ತಡೆ

ನವದೆಹಲಿ (ಪಿಟಿಐ): ವೈಯಕ್ತಿಕ ಬಳಕೆಗಾಗಿ ಆಮದು ಮಾಡಿಕೊಳ್ಳುವ ಆಮ್ಲಜನಕ ಸಾಂದ್ರಕಗಳ ಮೇಲೆ ಸಮಗ್ರ ಸರಕು ಮತ್ತು ಸೇವಾ ತೆರಿಗೆ (ಐಜಿಎಸ್‌ಟಿ) ವಿಧಿಸುವ ಕೇಂದ್ರ ಸರ್ಕಾರದ ಅಧಿಸೂಚನೆಯನ್ನು ರದ್ದುಗೊಳಿಸಿದ್ದ ದೆಹಲಿ ಹೈಕೋರ್ಟ್‌ನ ಆದೇಶಕ್ಕೆ ಸುಪ್ರೀಂ ಕೋರ್ಟ್ ಮಂಗಳವಾರ ತಡೆ ನೀಡಿದೆ.

ಈ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಡಿ.ವೈ.ಚಂದ್ರಚೂಡ್ ಮತ್ತು ಎಂ.ಆರ್.ಷಾ ಅವರ ವಿಶೇಷ ನ್ಯಾಯಪೀಠವು ಹೈಕೋರ್ಟ್‌ನಲ್ಲಿ ಈ ಕುರಿತು ಪಿಐಎಲ್ ಸಲ್ಲಿಸಿದ್ದವರಿಗೆ ಪ್ರತಿಕ್ರಿಯೆ ದಾಖಲಿಸುವಂತೆ ಸೂಚಿಸಿತು.

'ಮುಂದಿನ ಆದೇಶದವರೆಗೆ, ದೆಹಲಿ ಹೈಕೋರ್ಟ್‌ನ ಈ ಕುರಿತ ಆದೇಶಕ್ಕೆ ತಡೆ ನೀಡಲಾಗಿದೆ' ಎಂದು ನ್ಯಾಯಪೀಠ ತಿಳಿಸಿತು.

ಸಂಕ್ಷಿಪ್ತ ಸುದ್ದಿ

ನೆರವು ನೀಡಿದ ಟ್ವಿಟರ್ ಸಿಇಒ

ನವದೆಹಲಿ: ಟ್ವಿಟರ್ ಸಿಇಒ ಜಾಕ್ ಡೊರ್ಸೆ ಅವರು ₹ 110 ಕೋಟಿ ಅನ್ನು ಆರ್‌ಎಸ್‌ಎಸ್ ಜೊತೆಗೆ ಸಂಪರ್ಕವುಳ್ಳ ಸಂಘಟನೆ ಸೇರಿದಂತೆ ಮೂರು ಸೇವಾ ಸಂಸ್ಥೆಗಳಿಗೆ ಕೋವಿಡ್ ಪರಿಹಾರ ಕಾರ್ಯಗಳಿಗೆ ಬಳಸಲು ಕೊಡುಗೆ ನೀಡಿದ್ದಾರೆ.

ಕೇರ್, ಏಡ್‌ಇಂಡಿಯಾ ಮತ್ತು ಸೇವಾಯುಎಸ್‌ಎ ಸಂಸ್ಥೆಗಳಿಗೆ ಒಟ್ಟಾಗಿ ₹ 110 ಕೋಟಿ ಕೊಡುಗೆ ನೀಡಲಾಗುವುದು ಎಂದು ಡೊರ್ಸೆ ಅವರು ಇತ್ತೀಚೆಗೆ ಟ್ವೀಟ್ ಮಾಡಿದ್ದರು. ಸೇವಾ ಇಂಟರ್‌ನ್ಯಾಷನಲ್ ಸಂಸ್ಥೆಗೆ ಆರ್‌ಎಸ್‌ಎಸ್ ಜೊತೆಗೆ ಸಂಪರ್ಕವಿದೆ.

ಸೇವಾಗೆ ನೀಡಿದ ನೆರವನ್ನು ಭಾರತದಲ್ಲಿ ಕೋವಿಡ್ ಸ್ಥಿತಿ ಎದುರಿಸಲು ಆಮ್ಲಜನಕ ಕಾನ್ಸ್‌ನ್‌ಟ್ರೇಟರ್ಸ್, ವೆಂಟಿಲೇಟರ್‌ಗಳು, ಬೈಪ್ಯಾಪ್, ಸಿಪ್ಯಾಪ್ ಖರೀದಿಸಲು ಬಳಕೆ ಮಾಡಲಾಗುವುದು ಎಂದು ಹೇಳಲಾಗಿದೆ.

ಸಚಿವ ಪೋಖ್ರಿಯಾಲ್ ಏಮ್ಸ್‌ಗೆ ದಾಖಲು

ನವದೆಹಲಿ: ಶಿಕ್ಷಣ ಸಚಿವ ರಮೇಶ್ ಪೋಖ್ರಿಯಾಲ್ ನಿಶಾಂಕ್‌ಅವರಿಗೆ ಉಸಿರಾಟದ ಸಮಸ್ಯೆ ಕಾಣಿಸಿಕೊಂಡಿದ್ದು, ಆಮ್ಲಜನಕ ಮಟ್ಟವು ಕಡಿಮೆಯಾದ ಕಾರಣ ಚಿಕಿತ್ಸೆಗಾಗಿ ಇಲ್ಲಿನ ಏಮ್ಸ್‌ಗೆ ಮಂಗಳವಾರ ದಾಖಲಿಸಲಾಗಿದೆ.

ಸಚಿವರ ಆರೋಗ್ಯ ಸ್ಥಿತಿಯು ಸ್ಥಿರವಾಗಿದೆ ಎಂದು ಸಚಿವರ ಕಚೇರಿಯು ತಿಳಿಸಿದೆ. ಅವರಿಗೆ ಏಪ್ರಿಲ್ 21ರಂದು ಕೋವಿಡ್ ಸೋಂಕು ದೃಢಪಟ್ಟಿದ್ದು, ಚಿಕಿತ್ಸೆ ಪಡೆದು ಚೇತರಿಸಿಕೊಂಡಿದ್ದರು. ನಂತರ ಕೆಲ ವಾರ ತಮ್ಮ ಕರ್ತವ್ಯವನ್ನು ನಿಭಾಯಿಸಿದ್ದು, 12ನೇ ತರಗತಿ ಸಿಬಿಎಸ್‌ಇ ಪರೀಕ್ಷೆ ಸಂಬಂಧ ಸಭೆಯನ್ನು ನಡೆಸಿದ್ದರು. ಈಗ ಕೋವಿಡ್ ನಂತರದ ಸಮಸ್ಯೆಗಳು ಕಾಣಿಸಿಕೊಂಡಿವೆ.

ಗುಲಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮಕ್ಕೆ ಒಳಪಟ್ಟಿದೆ)
ಸಂಖ್ಯೆ:ಜೆಸ್ಕಾಂ/ಮು.ಇ.(ವಿ)/ಅ.ಅ.ವಿ.(ತಾ.)/ಕಾ.ನಿ.ಅ.ವಿ.(ತಾ.)/ಸ.ಕಾ.ನಿ.ಅ.ವಿ–1(ತಾ)/ಸ.ಅ–1(ತಾ)/2021-22/7819 ದಿ.:1-6-2021
:: ಟೆಂಡರ್ ಪ್ರಕಟಣೆ ::
1) ಕಾಮಗಾರಿ ವಿವರ ; TP-023 /GK-WS /2021-22 /Raichur Rural Division: "ಕಾ ಮತ್ತು ಪಾ ಗ್ರಾಮೀಣ ವಿಭಾಗ ರಾಯಚೂರು ನಲ್ಲಿನ ಗ್ರಾಮೀಣ ಪ್ರದೇಶಗಳಲ್ಲಿನ ವಿವಿಧ ನಿಗಮಗಳ ಗಂಗಾ ಕಲ್ಯಾಣ ಮತ್ತು ಗ್ರಾಮೀಣ ಕುಡಿಯುವ ನೀರಿನ ಯೋಜನೆಗಳ ಅಡಿಯಲ್ಲಿ ಬಾಕಿ ಇರುವ ಅರ್ಜಿಗಳಿಗೆ ವಿದ್ಯುತ್ ಸರಬರಾಜು ವ್ಯವಸ್ಥೆ ಮಾಡಲು ಮೂಲಸೌಕರ್ಯಗಳ ರಚನೆ", 2) ಕಾಮಗಾರಿ ಅಂದಾಜು ಮೊತ್ತ : ರೂ. 1060.91 ಲಕ್ಷ, 3) ಗುತ್ತಿಗೆದಾರರ ಅರ್ಹತೆ ವಿವರ : ಟೆಂಡರ್ ದಸ್ತಾವೇಜು (ಐ.ಎಫ್.ಬಿ) ಪ್ರಕಾರ, 4) ಇ–ಪ್ರೊಕ್ಯೂರಮೆಂಟ ಬಿಡ್ ದಾಖಲೆಗಳು ಲಭ್ಯವಿರುವ ದಿನಾಂಕ ಅಥವಾ ನಂತರ: 07.06.2021 after 10.30 Hrs, 5) ಕ್ವರಿಸ್ ಸಲ್ಲಿಸುವ ಅಂತಿಮ ದಿನಾಂಕ : 16.06.2021 up to 17.30 Hrs, 6) ಪ್ರೀ ಬಿಡ್ ಮಿಟಿಂಗ್ ದಿನಾಂಕ : 21.06.2021 at 11:00 Hrs, 7) ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ : 12.07.2021 up to 17.30 Hrs, 8) ತಾಂತ್ರಿಕ ಬಿಡ್‌ತೆರೆಯುವ ದಿನಾಂಕ: 14.07.2021 at 11:00 Hrs, 9) ಆರ್ಥಿಕ ಬಿಡ್‌ತೆರೆಯುವ ದಿನಾಂಕ :19.07.2021 at 14:00 Hrs 10) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ : ಕಾರ್ಯನಿರ್ವಾಹಕ ಅಭಿಯಂತರರು(ವಿ), ತಾಂತ್ರಿಕ ಶಾಖೆ, ನಿಗಮ ಕಾರ್ಯಾಲಯ, ಗು.ವಿ.ಸ.ಕಂ.ನಿ. ಕಲಬುರಗಿ–585 102. ಮೊ.ಸಂ: 9448359013, 11) ಅಂತರಜಾಲತಾಣದ ವಿಳಾಸ : www.e-proc.karnataka.gov.in
ಸಹಿ/– ಮುಖ್ಯ ಅಭಿಯಂತರರು (ವಿ), (ಕಾರ್ಯಾಚರಣೆ), ನಿಗಮ ಕಛೇರಿ, ಜೆಸ್ಕಾಂ, ಕಲಬುರಗಿ.
ವಾ.ಸಾ.ಸಂ.ಇ/ಕಲಬುರಗಿ/226/ಎಂ.ಸಿ&ಎ/2021–22
ವಿದ್ಯುತ್ ಸಂಬಂಧಿತ ದೂರುಗಳಿಗೆ 1912 ಗೆ ಕರೆ ಮಾಡಿ URJA MITRA APP ಡೌನಲೋಡ್ ಮಾಡಿಕೊಳ್ಳಿ

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ ಕಲಬುರಗಿ–585105
ದೂರವಾಣಿ ಸಂಖ್ಯೆ: 08472–278634/256944, E-mail: eerwssglb14@gmail.com
ಸಂ.ಕಾ.ನಿ.ಅ/ಗ್ರಾ.ಕು.ನೀ&ನೈ/.ವಿ.ಕ/ ತಾ .ಶಾ /2021–22 ದಿನಾಂಕ : 31–05–2021
ಅಲ್ಪಾವಧಿ ಟೆಂಡರ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಪದ್ಧತಿಯಲ್ಲಿ e-procurement portal ನಡಿಯಲ್ಲಿ ಮಾತ್ರ) (ದ್ವಿಲಕೋಟೆಯಲ್ಲಿ)
ಕರ್ನಾಟಕ ಘನತೆವೆತ್ತ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಕಲಬುರಗಿರವರಿಂದ ಕುಡಿಯುವ ನೀರು ಕಾಮಗಾರಿಗಳಿಗೆ ಅರ್ಹ ಗುತ್ತಿಗೆದಾರರಿಂದ ಟೆಂಡರ ಆಹ್ವಾನಿಸಲಾಗಿದ್ದು ವಿವರ ಈ ಕೆಳಗಿನಂತಿದೆ.
1) ಕಾಮಗಾರಿಯ ವಿವರ : ಅಫಜಲಪೂರ ತಾಲೂಕಿನ 04 (Indent No 33460, 33463, 33469, 33462) ಕಲಬುರಗಿ ತಾಲೂಕಿನ 04 (Indent No 33470, 33849, 29295 & 34062), 2) ಟೆಂಡರಿಗಿಟ್ಟ ಮೊತ್ತ : ಕನಿಷ್ಠ : 67,56,628/–, ಗರಿಷ್ಠ : 1,06,31,762/–, 3) ಲೆಕ್ಕ ಶೀರ್ಷಿಕೆ : Jal Jeevan Mission 2020-21, 4) ಗುತ್ತಿಗೆದಾರರ ಅರ್ಹತೆ :3ನೇ ದರ್ಜೆ ಗುತ್ತಿಗೆದಾರರು & ಮೇಲ್ಪಟ್ಟು, 5) ಟೆಂಡರ ಫಾರಂ ಪಡೆಯುವ ದಿನಾಂಕ : 29–05–2021 ರಿಂದ 09–06–2021, 6) ಟೆಂಡರ ಅರ್ಜಿ ಬೆಲೆ ಮತ್ತು ಇ.ಎಂ.ಡಿ. ಮೊತ್ತ : ಇ–ಪ್ರೋಕ್ಯೂರಮೆಂಟ್ ಪ್ರಕಾರ, 7) ಟೆಂಡರ ಫಾರಂ ಸಲ್ಲಿಸುವ ಅಂತಿಮ ದಿನಾಂಕ : 09–06–2021 ಸಾಯಂಕಾಲ 4:00 ಗಂಟೆವರೆಗೆ, 8) ತಾಂತ್ರಿಕ ಬಿಡ್ಡ ತೆರೆಯುವ ದಿನಾಂಕ : 10–06–2021 ಸಾಯಂಕಾಲ 4:01 ಗಂಟೆವರೆಗೆ, 9) ಆರ್ಥಿಕ ಬಿಡ್ಡ ತೆರೆಯುವ ದಿನಾಂಕ : 14–06–2021 ಬೆ. 11.00 ಗಂಟೆಯ ನಂತರ, 10) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ : ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ ಮೊದಲನೆ ಮಹಡಿ, ಕುಸನೂರ ರೋಡ, ಕಲಬುರಗಿ, 11) ಅಂತರಜಾಲ ತಾಣದ ವಿಳಾಸ: www.eproc.karnataka.gov.in
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ ಕಲಬುರಗಿ
ವಾ.ಸಾ.ಸಂ.ಇ/ಕಲಬುರಗಿ/222/ಎಂ.ಸಿ&ಎ/2021–22

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಚೇರಿ, ಬಿಟಿಎಂ ಬಡಾವಣೆ ವಿಭಾಗ, ಬೃ.ಬೆಂ.ಮ.ಪಾಲಿಕೆ ವಾಣಿಜ್ಯ ಸಂಕೀರ್ಣ, 2ನೇ ಮಹಡಿ, ಲಸ್ಕರ್ ಹೊಸೂರು ರಸ್ತೆ, ಆಡುಗೋಡಿ, ಬೆಂಗಳೂರು – 560 030.
ಸಂಖ್ಯೆ: ಕಾಪಾಅ(ಬಿಟಿಎಂ)ಜೆಇ/ಇ–ಪ್ರೊಕ್/04/2021–22 ದಿನಾಂಕ: 01.06.2021
ಅಲ್ಪಾವಧಿ ಟೆಂಡರ್ ಪ್ರಕಟಣೆ
(ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)
ಕೆಳಗಿನ ಸಹಿದಾರರು, ಬೃ.ಬೆಂ.ಮ.ಪಾಲಿಕೆ ಅಥವಾ ಯಾವುದೇ ಹೆಸರಾಂತ ಏಜೆನ್ಸಿಗಳು ಅಥವಾ ತತ್ಸಮಾನವಾಗಿ ಸಿ.ಪಿ.ಡಬ್ಲ್ಯೂ.ಡಿ/ಕೆ.ಪಿ.ಡಬ್ಲ್ಯೂ.ಡಿ/ರೈಲ್ವೇಸ್/ಎಂ.ಇ.ಎಸ್ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ನೋಂದಾಯಿತ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಳಿಗಾಗಿ ಐಟಂ ದರದ ಆಧಾರದಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ ಸಂ.	ಕಾಮಗಾರಿಗಳ ಹೆಸರು (ದ್ವಿಲಕೋಟೆ ಪದ್ದತಿ) 1ನೇ ಕರೆ	ಕಾಮಗಾರಿಯ ಅಂದಾಜು ಮೊತ್ತ (₹. ಲಕ್ಷಗಳಲ್ಲಿ)
1.	ವಾರ್ಡ್ ಸಂಖ್ಯೆ–172 ಮಡಿವಾಳದಲ್ಲಿ ಚರಂಡಿಗಳಿಗೆ ಸುಧಾರಣೆ ಹಾಗೂ ಮಳೆ ನೀರು ಕೊಯ್ಲು ಗುಂಡಿಗಳನ್ನು ಒದಗಿಸುವುದು.	50.10
	2ನೇ ಕರೆ	
2.	ವಾರ್ಡ್ ಸಂಖ್ಯೆ–148 ಈಜಿಪುರ ಮತ್ತು ಸುತ್ತಮುತ್ತಲ ಪ್ರದೇಶದಲ್ಲಿ ಹದಗೆಟ್ಟ ಸ್ಥಿತಿಯಲ್ಲಿರುವ ಹಾಗೂ ಬೆಂಗಳೂರು ಜಲ ಮಂಡಳಿ ಅಗೆದಿರುವ ರಸ್ತೆಯ ಭಾಗಗಳನ್ನು ಪುನಶ್ಚೇತನ ಹಾಗೂ ಇತರೆ ಅಭಿವೃದ್ಧಿ ಕಾಮಗಾರಿಗಳನ್ನು ಮಾಡುವುದು.	51.00
3.	ವಾರ್ಡ್ ಸಂಖ್ಯೆ–148 ಈಜಿಪುರದಲ್ಲಿ ಬೆಂಗಳೂರು ಜಲ ಮಂಡಳಿ ಅಗೆದಿರುವ ರಸ್ತೆ ಭಾಗದಲ್ಲಿ ಹಾನಿಯಾಗಿರುವ ಜಾಗಕ್ಕೆ ಕಾಬಲ್ ಕಲ್ಲುಗಳನ್ನು (Pavers)ಗಳನ್ನು ಒದಗಿಸುವುದು.	85.00
4.	ವಾರ್ಡ್ ಸಂಖ್ಯೆ–148 ಈಜಿಪುರದಲ್ಲಿ ಚರಂಡಿ, ರಸ್ತೆಗಳನ್ನು ಸುಧಾರಣೆ ಮಾಡುವುದು ಹಾಗೂ ಇತರೆ ಕಾಮಗಾರಿಗಳನ್ನು ಮಾಡುವುದು.	86.00
5.	ವಾರ್ಡ್ ಸಂಖ್ಯೆ–151 ಕೋರಮಂಗಲದ ಸಿದ್ಧಾರ್ಥ ಕಾಲೋನಿ ಮತ್ತು ಸುತ್ತಮುತ್ತಲ ಪ್ರದೇಶದಲ್ಲಿ ರಸ್ತೆಗಳಿಗೆ ಕಾಬಲ್ ಪೇವರ್ಸ್‌ಗಳನ್ನು ಒದಗಿಸುವುದು.	50.10
6.	ವಾರ್ಡ್ ಸಂಖ್ಯೆ–172 ಮಡಿವಾಳದ ಗುಂಡುತೋಪು ಸಮುದಾಯ ಭವನಕ್ಕೆ ಸುಧಾರಣೆಗಳು ಹಾಗೂ ಹೆಚ್ಚುವರಿ ಕಾಮಗಾರಿಗಳನ್ನು ಮಾಡುವುದು.	87.00
	ಟೆಂಡರ್ ನಮೂನೆಯ ಮೊತ್ತ (ರೂಗಳಲ್ಲಿ) (ಮರು ಪಾವತಿಸಲಾಗುವುದಿಲ್ಲ): ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಪ್ರಕಾರ	

ಟೆಂಡರ್ ವೇಳಾಪಟ್ಟಿ: (1) ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: 17.06.2021ರ ಸಂಜೆ 4.00 ಗಂಟೆಯವರೆಗೆ. (2) ಭರ್ತಿ ಮಾಡಿದ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: 18.06.2021ರ ಸಂಜೆ 4:30 ಗಂಟೆಗೆ. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಚೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ https://eproc.karnataka.gov.in ನಲ್ಲಿ ಪಡೆದುಕೊಳ್ಳಬಹುದಾಗಿದೆ.
ಸಹಿ/– ಕಾರ್ಯಪಾಲಕ ಅಭಿಯಂತರರು, ಬಿಟಿಎಂ ಬಡಾವಣೆ ವಿಭಾಗ
ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ
ಮುಖ್ಯ ಇಂಜಿನಿಯರ್ ಕಛೇರಿ, ಗ್ರಾ.ಕು.ನೀ. & ನೈ.ಇ., 1ನೇ ಮಹಡಿ, "ಇ" ಬ್ಲಾಕ್, ಕೆಹೆಚ್‌ಬಿ ಕಟ್ಟಡ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು – 560 009. ದೂರವಾಣಿ : 080–22533700 ಫ್ಯಾಕ್ಸ್ : 22240509 ಇ–ಮೇಲ್ : cerws14@gmail.com
No.RDP/RDW&SD/25/Tech/AE-10/2020-21/302 Dated:01-06-2021
"ಟೆಂಡರ್ ಪ್ರಕಟಣೆ" (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)
Tender No.RDP/RDW&SD/25/Tech/AE-10/2020-21
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯಡಿಯಲ್ಲಿ, ಹಲವಾರು ಗ್ರಾಮೀಣ ಕುಡಿಯುವ ನೀರು ಯೋಜನೆಗಳ ಅನುಷ್ಠಾನಕ್ಕಾಗಿ Project Management Unit ಸೇವೆ ಒದಗಿಸಲು ಅರ್ಹ ಸಲಹಾ ಸಂಸ್ಥೆಯನ್ನು ಗೊತ್ತುಪಡಿಸುವ ಸಲುವಾಗಿ KTPP ನಿಯಮಾವಳಿಯ ಮೇರೆಗೆ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್‌ನ್ನು ತಾಂತ್ರಿಕ ಮತ್ತು ಆರ್ಥಿಕ ಎರಡು ಲಕೋಟೆ ಪದ್ಧತಿಯಲ್ಲಿ ಆಹ್ವಾನಿಸಲಾಗಿದೆ. ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಸಲ್ಲಿಸುವ ಕೊನೆಯ ದಿನಾಂಕ: 03.07.2021 ರಂದು ಸಂಜೆ 5.30 ಗಂಟೆಯವರೆಗೆ ಮತ್ತು Pre-bid meeting ಅನ್ನು ದಿನಾಂಕ 17–06–2021ರಂದು ಬೆಳಿಗ್ಗೆ 11.00 ಗಂಟೆಗೆ. ಟೆಂಡರ್ ಡಾಕ್ಯುಮೆಂಟ್‌ನಲ್ಲಿ ತಿಳಿಸಿರುವ ಪ್ರಕಾರ ನಡೆಸಲಾಗುವುದು. ಟೆಂಡರ್‌ಗಿಟ್ಟ ಮೊತ್ತ ರೂ. 8.45 ಕೋಟಿಗಳು (ಜಿಎಸ್‌ಟಿ ಹೊರತುಪಡಿಸಿ) ಮತ್ತು ಇಎಂಡಿ ಮೊತ್ತ ರೂ. 10,00,000/– ಹೆಚ್ಚಿನ ವಿವರಗಳನ್ನು ವೆಬ್‌ಸೈಟ್ : www.eproc.karnataka.gov.in ನಲ್ಲಿ ಅಥವಾ ಈ ಕಚೇರಿಯ ದೂರವಾಣಿ ಸಂಖ್ಯೆ 080–22533700 ಗೆ ಕಛೇರಿ ವೇಳೆ ಸಂಪರ್ಕಿಸಿ ಮಾಹಿತಿ ಪಡೆಯಬಹುದಾಗಿರುತ್ತದೆ.
ಸಹಿ/– ಮುಖ್ಯ ಅಭಿಯಂತರರು, ಗ್ರಾ.ಕು.ನೀ.&.ನೈ. ಇಲಾಖೆ, ಬೆಂಗಳೂರು.
ವಾ.ಸಂ.ಇ/ಬೆಂ.ನಗರ/RO. No. 455/2021–22
ಕೋವಿಡ್–19 ಆತಂಕ ಬೇಡ: ಮುನ್ನೆಚ್ಚರಿಕೆ ಇರಲಿ
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಹಾಸನ ವಿಭಾಗ, ಹಾಸನ
ಸಂ:ಕಾ.ಇಂ:ಲೋ.ಇ:ಹಾವಿ:ಹಾಸನ:ಸಇಂ–3/2020–21 ದಿನಾಂಕ. 31.05.2021
ಟೆಂಡರ್ ಮುಂದೂಡಿಕೆ ಪ್ರಕಟಣೆ
ಈ ಕಛೇರಿಯ ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 41/2020–21 ದಿನಾಂಕ 29.03.2021 ರಲ್ಲಿ ಕರೆಯಲಾಗಿದ್ದ ಅರಸೀಕೆರೆ ತಾಲ್ಲೂಕಿನ ಕ್ರಮ ಸಂಖ್ಯೆ 17, 18 ಹಾಗೂ 19 ರ ಕಾಮಗಾರಿಗಳಿಗೆ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಬಿಡ್ಡನ್ನು ಸಲ್ಲಿಸುವ ಕೊನೆಯ ದಿನಾಂಕವನ್ನು ಮುಂದೂಡಲಾಗಿದ್ದು ಅಂತರ್‌ಜಾಲದಲ್ಲಿ ದಿನಾಂಕ 14.06.2021 ರಂದು 16.00 ಘಂಟೆವರೆಗೆ ಟೆಂಡರ್‌ನ ನಿಗಧಿತ ನಮೂನೆಗಳನ್ನು http://www.eproc.karnataka.gov.in ನಲ್ಲಿ ಡೌನಲೋಡ್ ಮಾಡಿ ಅವಶ್ಯ ಮಾಹಿಗಳೊಂದಿಗೆ ಹಾಗೂ ನಿಗಧಿತ ಇಎಂಡಿ ಯಂದಿಗೆ ಅಪ್‌ಲೋಡ್ ಮಾಡಬಹುದಾಗಿದೆ ಉಳಿದಂತೆ ಯಾವುದೇ ಬದಲಾವಣೆ ಇರುವುದಿಲ್ಲ. ಹೆಚ್ಚಿನ ವಿವರಗಳನ್ನು ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಹಾಸನ ವಿಭಾಗ, ಹಾಸನ ಇವರಿಂದ ಕಛೇರಿ ವೇಳೆಯಲ್ಲಿ ಪಡೆಯುವುದು.
ಸಹಿ/– ಕಾರ್ಯಪಾಲಕ ಇಂಜಿನಿಯರ್, ಲೋಇ ಹಾಸನ ವಿಭಾಗ, ಹಾಸನ.
ವಾಸಾಸಂಇ/ಹಿಸನಿ/ಹಾಸನ/ಎಂಸಿಎ/117/2020–21
ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ
ಮುಖ್ಯ ವೈದ್ಯಾಧಿಕಾರಿಗಳ ಕಾರ್ಯಾಲಯ ಉಪ ವಿಭಾಗ ಆಸ್ಪತ್ರೆ, ಗಂಗಾವತಿ–583227 ಜಿ॥ಕೊಪ್ಪಳ.
ದೂ.08533–230102/230103
e-mail: sdh.gangavathi@gmail.com
ಸಂಖ್ಯೆ:ಉವಿಆಗಂ/ಟೆಂಡರ್/85/2020–21 ದಿನಾಂಕ:29/05/2021
ಅಲ್ಪಾವಧಿ ಇ–ಪ್ರೋಕ್ಯೂರ್‌ಮೆಂಟ್ ಟೆಂಡರ್
ವಿಷಯ: ಉಪ ವಿಭಾಗ ಆಸ್ಪತ್ರೆ, ಗಂಗಾವತಿಯಲ್ಲಿ ಆಂಬ್ಯೂಲೆನ್ಸ ವಾಹನ ಖರೀದಿಸಲು ಅಲ್ಪಾವಧಿ ಇ–ಪ್ರೋಕ್ಯೂರ್‌ಮೆಂಟ್ ಮೂಲಕ ಟೆಂಡರ್ ಕರೆಯುವ ಬಗ್ಗೆ.
ಉಲ್ಲೇಖ: ಮಾನ್ಯ ಜಿಲ್ಲಾಧಿಕಾರಿಗಳು ಕೊಪ್ಪಳ ಇವರ ಪತ್ರ ಸಂಖ್ಯೆ:64781FileNo:KOP-DC-53011/39/2021-KOPDC ದಿನಾಂಕ:28/05/2021
ಮೇಲ್ಕಾಣಿಸಿದ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ, ಉಪ ವಿಭಾಗ ಆಸ್ಪತ್ರೆ, ಗಂಗಾವತಿ ಕೊಪ್ಪಳ ಜಿಲ್ಲೆಯಲ್ಲಿ, ರೂ:17,00,000.00. ಅಂದಾಜು ಮೊತ್ತದ ಆಂಬ್ಯೂಲೆನ್ಸ ವಾಹನಗಳನ್ನು ಖರೀದಿಸಲು ಅಲ್ಪಾವದಿ ಇ–ಪ್ರೋಕ್ಯೂರ್‌ಮೆಂಟ್ ಟೆಂಡರ್ ಕರೆಯಲಾಗಿದೆ. ಟೆಂಡರ್ ಮಾಹಿತಿ ಈ ಕೆಳಗಿನಂತಿರುತ್ತದೆ.
1.ಟೆಂಡರ್ ಪ್ರಾರಂಭದ ದಿನಾಂಕ: 31/05/2021. 2.ಟೆಂಡರ್ ಬಗ್ಗೆ ಆಕ್ಷೇಪಣೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 04/06/2021ರಂದು ಸಂಜೆ 4.30 ಗಂಟೆಗೆ. 3.ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 09/06/2021 ರಂದು ಸಂಜೆ 04.30 ಗಂಟೆಗೆ. 4.ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 10/06/2021 ರಂದು ಸಂಜೆ 04.45 ಗಂಟೆಗೆ. 5.Website : https://eproc.karnataka.gov.in
ಹೆಚ್ಚಿನ ಮಾಹಿತಿಗಾಗಿ ಕಛೇರಿಯ ವೇಳೆಯಲ್ಲಿ ಈ ಕೆಳಕಂಡ ಅಧಿಕಾರಿಯವರನ್ನು ಸಂಪರ್ಕಿಸಬಹುದು.
ಸಹಿ/– ಮುಖ್ಯ ವೈದ್ಯಾಧಿಕಾರಿಗಳು, ಉಪ ವಿಭಾಗ ಆಸ್ಪತ್ರೆ ಗಂಗಾವತಿ ಜಿ॥ಕೊಪ್ಪಳ.
ಡಿಐಪಿಆರ್/ಕೊಪ್ಪಳ/87/ಎಂಸಿಎ/2021–22

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರವರ ಕಛೇರಿ, ಕೆರೆಗಳು, ವಿಭಾಗ-2, ಕೊಠಡಿ ನಂ.309, 3ನೇ ಮಹಡಿ, ಹೊಸ ಕಟ್ಟಡ, ಬಿಬಿಎಂಪಿ, ಎನ್.ಆರ್. ಚೌಕ, ಬೆಂಗಳೂರು-560 002.
ಸಂಖ್ಯೆ:ಕಾಪಾಅ-2(ಕೆರೆಗಳು)/ಟೆಂಡರ್-05/2021-22 ದಿನಾಂಕ: 01-06-2021
ಅಲ್ಪಾವಧಿ ಟೆಂಡರ್ ಪ್ರಕಟಣೆ (ದ್ವಿ ಲಕೋಟೆ ಪದ್ಧತಿ)
(ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)
ಕಾರ್ಯಪಾಲಕ ಅಭಿಯಂತರರು-2, ಕೆರೆಗಳು ವಿಭಾಗ, ಬೃಬೆಂಮಪಾ, ಬೆಂಗಳೂರು ಇವರು ಕೆಳಕಂಡ ಯೋಜನೆಗಳಿಗೆ ವಿವರವಾದ ಯೋಜನಾ ವರದಿ (ತಾಂತ್ರಿಕ ಮತ್ತು ಆರ್ಥಿಕ) ತಯಾರಿಸಲು ಸಲಹಾಗಾರರನ್ನು ನೇಮಕ ಮಾಡಲು ಪ್ರಸ್ತಾವನೆಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಯೋಜನೆಯ ಹೆಸರು	ಯೋಜನಾ ಮೊತ್ತ (ರೂ.ಲಕ್ಷಗಳಲ್ಲಿ)
01	ತಾವರೆಕೆರೆ ಕೆರೆಯ ಸುಧಾರಣೆ ಹಾಗೂ ಅಭಿವೃದ್ಧಿ ಕಾಮಗಾರಿಗೆ ವಿವರವಾದ ಯೋಜನಾ ವರದಿ ಸೇವೆಯನ್ನು ಒದಗಿಸುವುದು. (ಕರೆ-2).	510.00
02	ಸರ್ವೆ ನಂ.27 ಮತ್ತು 28ರಲ್ಲಿರುವ ಅರೆಹಳ್ಳಿ ಕೆರೆಯ ಸುಧಾರಣೆ ಹಾಗೂ ಅಭಿವೃದ್ಧಿ ಕಾಮಗಾರಿಗೆ ವಿವರವಾದ ಯೋಜನಾ ವರದಿ ಸೇವೆಯನ್ನು ಒದಗಿಸುವುದು. (ಕರೆ-2).	689.50

ಟೆಂಡರ್ ದಾಖಲಾತಿಯಲ್ಲಿ ನಮೂದಿಸಿರುವ ಪ್ರಕಾರ ಟೆಂಡರ್‌ಗಳು ಇಎಂಡಿ ಘೋಷಣೆ ಪತ್ರ ಜೊತೆಗೂಡಿರಬೇಕು ಸರ್ಕಾರ ಆದೇಶದ ಸಂಖ್ಯೆ: ಎಫ್‌ಡಿ 675 ವೆಚ್ಚ-12/2020 ದಿನಾಂಕ: 22-12-2020ರ ಪ್ರಕಾರ ಒಳಗೊಂಡಿರಬೇಕು.
ಟೆಂಡರ್‌ನ ಕಾರ್ಯಸೂಚಿ: 1) ಪೂರ್ವ ಬಿಡ್ ಸಭೆಯನ್ನು ಮುಖ್ಯ ಅಭಿಯಂತರವರ ಕಛೇರಿ (ಕೆರೆಗಳು) ಇಲ್ಲಿ ದಿನಾಂಕ: 07-06-2021 ರಂದು ಸಂಜೆ 3:00 ಗಂಟೆಗೆ ನಡೆಸಲಾಗುವುದು. 2) ಪ್ರಸ್ತಾವನೆಗಳನ್ನು ಸಲ್ಲಿಸುವ ಕೊನೆಯ ದಿನಾಂಕ: 11-06-2021 ರಂದು ಸಂಜೆ 4:00 ಗಂಟೆಯವರೆಗೆ. 3) ತಾಂತ್ರಿಕ ಪ್ರಸ್ತಾವನೆಯನ್ನು ತೆರೆಯುವ ದಿನಾಂಕ: 14-06-2021 ರಂದು ಬೆಳಗ್ಗೆ 11:00 ಗಂಟೆಗೆ. 4) ತಾಂತ್ರಿಕ ಪ್ರಸ್ತಾವನೆಗಳ ಅನುಮೋದನೆ ನಂತರ ಆರ್ಥಿಕ ಪ್ರಸ್ತಾವನೆಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಮೂಲಕ ತೆರೆಯಲಾಗುವುದು. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಅಥವಾ https://eproc.karnataka.gov.in ಇಲ್ಲಿಗೆ ಲಾಗಿನ್‌ಮಾಡಿ ಪಡೆಯಬಹುದು.
ಸಹಿ/– ಕಾರ್ಯಪಾಲಕ ಅಭಿಯಂತರರು, ಕೆರೆಗಳ ವಿಭಾಗ-2, ಬೃಬೆಂಮಪಾ.
ಕೋವಿಡ್-19. ಆತಂಕ ಬೇಡ: ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ವಿಜಯಪುರ
ಐ.ಎಫ್.ಟಿ. ಸಂ: ಕಾ.ನಿ.ಇಂ./ಲೋ.ಇ./ವಿ.ಜಿ.ಪಿ/ಪಿ.ಬಿ/8443/2021–22/330 ದಿನಾಂಕ:29.05.2021
ಅಲ್ಪಾವಧಿ ಗುತ್ತಿಗೆ ಆಹ್ವಾನ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್)
ಕಾರ್ಯನಿರ್ವಾಹಕ ಇಂಜನೀಯರರು ಲೋಕೋಪಯೋಗಿ ಇಲಾಖೆ ವಿಭಾಗ, ವಿಜಯಪುರ ಅಡಿಯಲ್ಲಿ ಐಟಂವಾರು ಗುತ್ತಿಗೆಗಳನ್ನು ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ನೋಂದಾಯಿತ ಗುತ್ತಿಗೆದಾರರು ಲೋಕೋಪಯೋಗಿ ಇಲಾಖೆಯಲ್ಲಿ ನೋಂದಣಿ ಮತ್ತು ನವೀಕರಣ ಪ್ರಮಾಣ ಪತ್ರದ ದಾಖಲೆಗಳನ್ನು ಗೆಜೆಟೆಡ್ ಅಧಿಕಾರಿಯಿಂದ ಪ್ರಮಾಣೀಕರಿಸಿ ಟೆಂಡರ್‌ನೊಂದಿಗೆ ಸಲ್ಲಿಸುವುದು ಮತ್ತು ಅರ್ಹ ಗುತ್ತಿಗೆದಾರರಿಂದ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ–4 ರಲ್ಲಿ ಲೆಕ್ಕ ಶೀರ್ಷಿಕೆ 8443–ಠೇವಣಿ ವಂತಿಕೆ ಅಡಿಯಲ್ಲಿ ವಿಜಯಪುರ ನಗರದ ಎ.ಟಿ.ಆರ್–72–600 ಏರ್‌ಕ್ರಾಫ್ಟ್ ಹಗಲು ವ್ಹಿ.ಎಫ್.ಆರ್ ಕಾರ್ಯಾಚರಣೆಯ ವಿಮಾಣ ನಿಲ್ದಾಣ ನಿರ್ಮಾಣ. (ಹಂತ–2) (ಇಂಡೆಂಟ್ ನಂ. 137623) ಕಾಮಗಾರಿಗೆ ಗುತ್ತಿಗೆಯನ್ನು ಕರೆಯಲಾಗಿದ್ದು ಅಂದಾಜು ಮೊತ್ತ ರೂ. 9100.00 ಲಕ್ಷಗಳು. ಸದರಿ ಕಾಮಗಾರಿಯ ಟೆಂಡರ್ ಅವಧಿ 11 ತಿಂಗಳು ಮಳೆಗಾಲ ಸಹಿತ. & ಸರ್ಕಾರದ ಆದೇಶದನ್ವಯ ಮುಂಗಡ ಠೇವಣಿ ಮೊತ್ತಕ್ಕೆ ವಿನಾಯಿತಿ ನೀಡಲಾಗಿದೆ. (Contractor Should enclose EMD Declation in Declaration in prescribed format vide GO No. FD/675/Expenditure/12/2020 Bangalore Dated:11/12/2020). ಸದರಿ ಕಾಮಗಾರಿಗಳ ಗುತ್ತಿಗೆ ಮೊತ್ತಕ್ಕೆ ಅನುಗುಣವಾಗಿ ಜಿ.ಎಸ್.ಟಿ ಪ್ರತ್ಯೇಕವಾಗಿ ನೀಡಲಾಗುವುದು ಹಾಗೂ ವಿಸ್ತೃತ ಗುತ್ತಿಗೆ ಅವಧಿಯಲ್ಲಿ, ಗುತ್ತಿಗೆ ಅವಧಿಯು ಗುತ್ತಿಗೆದಾರರ ವಿಳಂಭದಿಂದ ಉಂಟಾದಲ್ಲಿ ಆ ಅವಧಿಯಲ್ಲಿ ಜಿ.ಎಸ್.ಟಿ ದರಗಳಲ್ಲಿ ಹೆಚ್ಚಳವಾದಲ್ಲಿ ಇದನ್ನು ಗುತ್ತಿಗೆದಾರರೇ ಭರಿಸುವುದು. ಗುತ್ತಿಗೆದಾರರ ಪೂರ್ವ ಭಾವಿ ಸಭೆ ದಿನಾಂಕ: 01.07.2021ರ ಮುಂಜಾನೆ 11.00 ಗಂಟೆಗೆ, ಟೆಂಡರ್‌ಗಳನ್ನು ಸ್ವೀಕರಿಸುವ ದಿನಾಂಕ: 07.07.2021ರ ಸಂಜೆ 4.30 ಗಂಟೆಯವರೆಗೆ, ಟೆಂಡರ್‌ಗಳ ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: 09.07.2021ರ ಮುಂಜಾನೆ 11.00 ಗಂಟೆಯ ನಂತರ ಮತ್ತು ಟೆಂಡರ್‌ಗಳ ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: 12.07.2021ರ ಮುಂಜಾನೆ 11.00 ಗಂಟೆಯ ನಂತರ. ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದವರ ಕಛೇರಿಯಲ್ಲಿ ಹಾಗೂ ಅಂತರ್ಜಾಲದ ಮೂಲಕ ವೆಬ್‌ಸೈಟ್ ವಿಳಾಸ www.eproc.karnataka.gov.in ರಲ್ಲಿ ಪಡೆಯಬಹುದು.
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ ವಿಭಾಗ, ವಿಜಯಪುರ.
ವಾಸಾಸಂಇ/ವಿಜಯಪುರ/094/ಜಿಎ/2021–22

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ವಿಭಾಗ ಕಾರ್ಯಾಲಯ, ಹಬ್ಬುವಾಡಾ–ಕಾರವಾರ, ಉತ್ತರ ಕನ್ನಡ ಜಿಲ್ಲೆ – 581 301
ದೂ: 08382–228935, ಫ್ಯಾಕ್ಸ್: 229735 ಇ–ಮೇಲ್: eerdwsd.uk@gmail.com
ನಂ.:ಕಾನಿಇಂ/ಗ್ರಾಕುನಿ&ನೈವಿ/ಕಾರವಾರ/ಪಿಬಿ–1/ಅಲ್ಪಾವಧಿ ಟೆಂಡರ/JJM/2021–22/281 ದಿನಾಂಕ:29.05.2021
ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರಮೆಂಟ್ ಮೂಲಕ)
ಕರ್ನಾಟಕ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ ಕಾರವಾರ ಇವರಿಂದ ಪಂಚಾಯತ್ ರಾಜ್ ಇಂಜನೀಯರಿಂಗ್ ಇಲಾಖೆಯಲ್ಲಿ/ಗ್ರಾಮೀಣ ಕುಡಿಯುವ ನೀರು ಸರಬರಾಜು ಇಲಾಖೆಯಲ್ಲಿ ನೊಂದಾಯಿಸಿದ ಅರ್ಹ ಹಾಗೂ ಇ–ಪ್ರೊಕ್ಯೂರಮೆಂಟ್ ಸಂಸ್ಥೆಯಿಂದ ನೊಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಕುಡಿಯುವ ನೀರು ಸರಬರಾಜು ಯೋಜನೆಯಡಿ ಮಂಜೂರಾದ ಕಾಮಗಾರಿಗಳಿಗೆ ಕರ್ನಾಟಕ ಸರ್ಕಾರದ ಸಾರ್ವಜನಿಕ ಖರೀದಿ ಪಾರದರ್ಶಕತೆ ಕಾನೂನು ಹಾಗೂ ನಿಯಮಾವಳಿ 2000 ಹಾಗೂ Standard Tender Document KW-2&3 ನಂತೆ ತತ್ಸಂಬಂಧ ಕಾಲಕಾಲಕ್ಕೆ ಹೊರಡಿಸಲಾದ ತಿದ್ದುಪಡಿ ಆದೇಶಗಳನ್ವಯ ನಿಬಂಧನೆಗೆ ಒಳಪಟ್ಟು ಈ ಕೆಳಗಿನಂತೆ ಐಟಂವಾರು ಟೆಂಡರ್ ಕರೆಯಲಾಗಿದೆ. ಅರ್ಹ ಗುತ್ತಿಗೆದಾರರು ಇ–ಆಡಳಿತ ಕೇಂದ್ರ ಅಥವಾ ವೆಬ್ ಸೈಟ್ www.eproc.karnataka.gov.in ನಲ್ಲಿ ಪ್ರಕಟಿಸಿದಂತೆ. ಟೆಂಡರ್ ವಿವರಗಳು ಈ ಕೆಳಗಿನಂತಿದೆ.
ಕಾಮಗಾರಿ ಹೆಸರು: ಸಾಮಾನ್ಯ ವರ್ಗದ ಗುತ್ತಿಗೆದಾರರಿಗೆ ಮೀಸಲಿಟ್ಟ ಕಾಮಗಾರಿಗಳು 1) RWSSD/2020-21/WS/WORK_INDENT32276/CALL-5, ಟೆಂಡರಿಗಿಟ್ಟ ಅಂದಾಜು ಮೊತ್ತ ರೂ. 27.82 ಲಕ್ಷ 2) RWSSD/2020-21/WS/WORK_INDENT33648/CALL-3, ಟೆಂಡರಿಗಿಟ್ಟ ಅಂದಾಜು ಮೊತ್ತ ರೂ. 48.79 ಲಕ್ಷ 3) RWSSD/2020-21/WS/WORK_INDENT33202/CALL-4, ಟೆಂಡರಿಗಿಟ್ಟ ಅಂದಾಜು ಮೊತ್ತ ರೂ. 46.03 ಲಕ್ಷ, 4) RWSSD/2020-21/WS/WORK_INDENT32352/CALL-4, ಟೆಂಡರಿಗಿಟ್ಟ ಅಂದಾಜು ಮೊತ್ತ ರೂ. 74.28 ಲಕ್ಷ, ಕಾಲಮಿತಿ (ಮಳೆಗಾಲ ಸಹಿತ): ಕ್ರಸಂಖ್ಯೆ: (1), (2) ಮತ್ತು (3) – 60 ದಿನಗಳು, ಕ್ರಸಂಖ್ಯೆ: (4) – 90 ದಿನಗಳು. ಗುತ್ತಿಗೆದಾರರ ದರ್ಜೆ: 3 ನೇ ದರ್ಜೆ & ಮೇಲಿನ
1) ಟೆಂಡರ್ ದಾಖಲಾತಿಗಳನ್ನು ಇ–ಪ್ರೊಕ್ಯುರಮೆಂಟ ಮುಖಾಂತರ ಡೌನಲೋಡ ಮಾಡಿಕೊಳ್ಳುವ ದಿನಾಂಕ: 30.05.2021 ರಿಂದ 07.06.2021 ರ 15.00 ಘಂಟೆ ವರೆಗೆ 2) ಟೆಂಡರುಗಳನ್ನು ಇ–ಪ್ರೊಕ್ಯುರಮೆಂಟ ಮೂಲಕ ಸಲ್ಲಿಸುವ ಕೊನೆಯ ದಿನಾಂಕ: 07.06.2021 ರ 16.30 ಗಂಟೆವರೆಗೆ 3) ಟೆಂಡರಗಳನ್ನು ತೆರೆಯುವ ದಿನಾಂಕ: 08.06.2021 ರಂದು 17.00 ಘಂಟೆಯ ನಂತರ. ಉಳಿದ ವಿವರಗಳನ್ನು www.eproc.karnataka.gov.in ವೆಬ್‌ಸೈಟ್ ನಲ್ಲಿ ಪಡೆಯಬಹುದು ಹಾಗೂ ಈ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಪಡೆಯಬಹುದು.
ಸಹಿ/– ಕಾರ್ಯನಿರ್ವಾಹಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಕಾರವಾರ (ಉ.ಕ.ಜಿಲ್ಲೆ)
DIPR/KWR/MCA/172/21-22 dt.31.5.2021

ಲಾಕ್‌ಡೌನ್ ಪರಿಣಾಮ: ಮಾರುಕಟ್ಟೆ ಇಲ್ಲ, ಬೇಡಿಕೆಯೂ ಇಲ್ಲ • ವಿವಿಧೆಡೆ ಬೆಳೆ ನಾಶ

ಹೊಲದಲ್ಲೇ ಉಳಿದ ಹಣ್ಣು, ತರಕಾರಿ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಲಾಕ್‌ಡೌನ್ ಪರಿಣಾಮ ಕೃಷಿ ಉತ್ಪನ್ನಗಳ ಮಾರಾಟ ಮೇಲೂ ಆಗಿದೆ. ಮಾರುಕಟ್ಟೆ ಕೊರತೆ, ಬೇಡಿಕೆ ಕುಸಿತದ ಕಾರಣ ಉತ್ತರ ಕರ್ನಾಟಕದ ವಿವಿಧ ಜಿಲ್ಲೆಗಳಲ್ಲಿ ಕೆಲವರು ಬೆಳೆಗಳನ್ನು ಹೊಲದಲ್ಲಿಯೇ ಬಿಟ್ಟಿದ್ದಾರೆ, ಇನ್ನು ಹಲವರು ನಾಶ ಮಾಡಿದ್ದಾರೆ.

ಬೆಳಗಾವಿ ಜಿಲ್ಲೆಯ ಅಥಣಿ ತಾಲ್ಲೂಕಿನಲ್ಲಿ ತೆಲಸಂಗ ಭಾಗದಲ್ಲಿ ರೈತರು ಕಲ್ಲಂಗಡಿ ಹಣ್ಣುಗಳನ್ನು ಗಿಡದಲ್ಲೇ ಬಿಟ್ಟಿದ್ದಾರೆ. ಕಣಬರ್ಗಿಯಲ್ಲಿ ರೈತರೊಬ್ಬರು ಕೊತ್ತಂಬರಿ ಸೊಪ್ಪು, ಖಾನಾಪುರ ತಾಲ್ಲೂಕಿನ ಪಾರಿಶ್ವಾಡದ ಹೂಕೋಸು, ಮೂಡಲಗಿ ತಾಲ್ಲೂಕಿನ ಹಳ್ಳೂರದಲ್ಲಿ ಮೆಣಸಿನಕಾಯಿ ಬೆಳೆಯನ್ನು ಹಾಗೇ ಹೊಲದಲ್ಲಿ ಬಿಟ್ಟಿದ್ದರು. ಅಲ್ಲಲ್ಲಿ ಕೆಲವರು ಹೂವುಗಳನ್ನು ನಾಶಪಡಿಸಿದ್ದಾರೆ.

ಉತ್ತರ ಕನ್ನಡ ಜಿಲ್ಲೆಯಲ್ಲಿ ಕಲ್ಲಂಗಡಿ ಬೆಳೆಗಾರರು ಮಾರುಕಟ್ಟೆ ವ್ಯವಸ್ಥೆ ಇಲ್ಲದೆ ಕಂಗಾಲಾಗಿದ್ದಾರೆ. ಅಂಕೋಲಾ ತಾಲ್ಲೂಕಿನ ಹಟ್ಟಿಕೇರಿಯಲ್ಲಿ 60 ಹೆಕ್ಟೇರ್ ಪ್ರದೇಶದ ಬೆಳೆಯನ್ನು ರೈತರು ನಾಶಮಾಡಿದ್ದಾರೆ. ಹೊಲದಲ್ಲೇ ಕಟಾವು ಮಾಡಿ ಮೇಯಲು ಜಾನುವಾರು ಬಿಟ್ಟಿದ್ದಾರೆ.

ಗದಗ ಜಿಲ್ಲೆ ನರಗುಂದ ತಾಲ್ಲೂಕಿನ ಕುರ್ಲಗೇರಿಯ ರೈತರು ಬೆಳೆದಿದ್ದ ಪೇರಲ ಹಣ್ಣು ತೋಟದಲ್ಲಿಯೇ ಕೊಳೆಯುತ್ತಿವೆ. ಹಾವೇರಿ ಜಿಲ್ಲೆಯ ನಾಗನೂರ, ಗಣಜೂರು, ಕಬ್ಬೂರ ಸೇರಿದಂತೆ ಹಲವು ಕಡೆ ಮಾರುಕಟ್ಟೆ ಸಿಗದೆ ಹೂವುಗಳನ್ನು ಹೊಲದಲ್ಲಿಯೇ ಬಿಡಲಾಗಿದೆ.

ಅಂಕೋಲಾ ತಾಲ್ಲೂಕಿನ ಹಟ್ಟಿಕೇರಿಯಲ್ಲಿ ಕಲ್ಲಂಗಡಿ ಫಸಲನ್ನು ರೈತರು ಹೊಲದಲ್ಲೇ ಕತ್ತರಿಸಿ ಹಾಕಿರುವುದು

ಹೂವು, ಹಣ್ಣು, ತರಕಾರಿಗಳನ್ನು ಸರ್ಕಾರವೇ ರೈತರಿಂದ ನೇರವಾಗಿ ಖರೀದಿಸಬೇಕು. ಒಂದು ತಿಂಗಳು ತಡವಾಗಿ ಹಣ ಕೊಟ್ಟರೂ ಪರವಾಗಿಲ್ಲ. ಬೇಗ ಕೊಳೆಯುವ ಈ ಬೆಳೆಗಳನ್ನು ಮೊದಲು ಖರೀದಿಸಬೇಕು
ಡಿ.ಕೆ. ಶಿವಕುಮಾರ್, ಕೆಪಿಸಿಸಿ ಅಧ್ಯಕ್ಷ

ಹಾವೇರಿ ತಾಲ್ಲೂಕು ಕೋಣನತಂಬಿಗಿ ಸುತ್ತಮುತ್ತ ನೂರಾರು ಎಕರೆಯಲ್ಲಿ ಪೇರಲ ಬೆಳೆಯುತ್ತಿದೆ. 'ಎರಡೂವರೆ ಎಕರೆಯಲ್ಲಿ ಪೇರಲ ಬೆಳೆದಿದ್ದೆ, ಮಾರುಕಟ್ಟೆಯಿಲ್ಲದೇ ₹1.5 ಲಕ್ಷ ನಷ್ಟವಾಗಿದೆ' ಎಂದು ಕೋಣನತಂಬಿಗಿ ರೈತ ಸತೀಶ ಸಮಸ್ಯೆ ತೋಡಿಕೊಂಡರು.

ರೈತ ಕಂಗಾಲು (ಕಲಬುರ್ಗಿ ವರದಿ): ಕಲಬುರ್ಗಿ ಜಿಲ್ಲೆಯಲ್ಲಿ ಈ ವರ್ಷ ಒಟ್ಟು 480 ಹೆಕ್ಟೇರ್ ಪ್ರದೇಶದಲ್ಲಿ ಕಲ್ಲಂಗಡಿ ಬೆಳೆಯಲಾಗಿದೆ. ಲಾಕ್‌ಡೌನ್‌ನಿಂದಾಗಿ ಸೂಕ್ತ ಮಾರುಕಟ್ಟೆ ಸಿಗದೇ ಹಣ್ಣು, ತರಕಾರಿ ರೈತರ ಹೊಲದಲ್ಲೇ ಉಳಿದಿವೆ. ಬೇಸಿಗೆ ಆರಂಭದಲ್ಲಿ ಕೆಜಿಗೆ ₹ 10 ದರ ಇತ್ತು, ಈಗ ದರ ಗಣನೀಯವಾಗಿ ಕುಸಿದಿದ್ದು, ಆಳಂದ ಹಾಗೂ ಅಫಜಲಪುರ ತಾಲ್ಲೂಕಿನಲ್ಲಿ ಹಲವು ರೈತರು ತಾವು ಬೆಳೆದ ಕಲ್ಲಂಗಡಿ ಹಾಗೂ ತರಕಾರಿಗಳನ್ನು ಹಾಗೆಯೇ ಬಿಟ್ಟಿದ್ದಾರೆ. ಕೆಲವರು ದನಗಳಿಗೆ ತಿನ್ನಿಸುತ್ತಿದ್ದಾರೆ.

ಬೀದರ್ ಜಿಲ್ಲೆಯಲ್ಲಿ 800 ಹೆಕ್ಟೇರ್‌ನಲ್ಲಿ ಕಲ್ಲಂಗಡಿ ಬೆಳೆದಿದ್ದು, ರೈತರಿಗೆ ಲಾಕ್‌ಡೌನ್ ಅವಧಿಯಲ್ಲಿ ಶೇ 30ರಷ್ಟು ನಷ್ಟವಾಗಿದೆ. 'ಕೋವಿಡ್ ಸಂದರ್ಭದಲ್ಲಿ ಕಲ್ಲಂಗಡಿ ತಿನ್ನುವುದು ಆರೋಗ್ಯಕ್ಕೆ ಒಳ್ಳೆಯದಲ್ಲ ಎನ್ನುವ ತಪ್ಪುಕಲ್ಪನೆಯೂ ಬೆಲೆ ಕುಸಿತಕ್ಕೆ ಕಾರಣ' ಎಂದು ತೋಟಗಾರಿಕೆ ಇಲಾಖೆ ಅಧಿಕಾರಿಗಳು ಹೇಳಿದ್ದಾರೆ.

ಕೊಪ್ಪಳ ಜಿಲ್ಲೆಯಲ್ಲಿ ಮಾವು, ಕಲ್ಲಂಗಡಿ, ಕರಬೂಜ ಕೆಲವೆಡೆ ರೈತರ ಬೆಳೆಯೇ ಕೊಳೆತುಹೋಗಿವೆ. ಕೆಲ ರೈತರು ಬದನೆಕಾಯಿ, ಟೊಮ್ಯಾಟೊ ಬೆಳೆಗಳನ್ನು ದನಕ್ಕೆ ಹಾಕಿದ್ದಾರೆ. ಸುಗಂಧರಾಜ ಮತ್ತಿತರ ಹೂ ಬೆಳೆ ನಾಶಪಡಿಸಿದ್ದಾರೆ. ಯಾದಗಿರಿ ಜಿಲ್ಲೆಯಲ್ಲಿ ಬೆಳೆದ ಕಲ್ಲಂಗಡಿಯೂ ಮಾರಾಟವಾಗುತ್ತಿಲ್ಲ.

ಸುದ್ದಿ 2 ನಿಮಿಷ

'ರೈತರ ಬಾಕಿ ಪಾವತಿಗೆ ₹ 250 ಕೋಟಿ ಬಿಡುಗಡೆ'

ಬೆಂಗಳೂರು: 'ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ರೈತರಿಂದ ಖರೀದಿಸಿದ್ದ ಆಹಾರಧಾನ್ಯಗಳಿಗೆ ಸಂಬಂಧಿಸಿದಂತೆ ₹ 1,067 ಕೋಟಿ ಪಾವತಿಗೆ ಬಾಕಿ ಇದೆ. ರೈತರಿಗೆ ಪಾವತಿಸಲು ತಕ್ಷಣ ₹ 250 ಕೋಟಿ ಬಿಡುಗಡೆ ಮಾಡುವಂತೆ ಸೂಚಿಸಲಾಗಿದೆ' ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ತಿಳಿಸಿದರು.

ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಕಳೆದ ವರ್ಷ ರಾಜ್ಯ ಸರ್ಕಾರ ಖರೀದಿಸಿದ ಆಹಾರ ಧಾನ್ಯದ ಬಾಬ್ತು ₹ 1,067 ಕೋಟಿ ರೈತರಿಗೆ ಪಾವತಿಸದೇ ಬಾಕಿ ಉಳಿಸಿಕೊಂಡಿರುವ ಬಗ್ಗೆ ಮೇ 27ರಂದು 'ಪ್ರಜಾವಾಣಿ'ಯಲ್ಲಿ ವಿಶೇಷ ವರದಿ ಪ್ರಕಟವಾಗಿತ್ತು.

2020–21ನೇ ಸಾಲಿನಲ್ಲಿ ಬೆಂಬಲ ಬೆಲೆ ಯೋಜನೆಯಡಿ ದಾಖಲೆ ಪ್ರಮಾಣದಲ್ಲಿ ಭತ್ತ, ರಾಗಿ ಮತ್ತು ಬಿಳಿಜೋಳ ಖರೀದಿಸಲಾಗಿತ್ತು. 2,74,036 ರೈತರಿಂದ ಖರೀದಿಸಿದ ಈ ಉತ್ಪನ್ನಗಳಿಗೆ ₹ 2,184.38 ಕೋಟಿ ಪಾವತಿಸಬೇಕಿತ್ತು. ಆದರೆ, 1,53,049 ರೈತರಿಗೆ ₹ 1,116.73 ಕೋಟಿ ಪಾವತಿಸಲಾಗಿದೆ. 1,20,987 ರೈತರ ಖಾತೆಗಳಿಗೆ ಇನ್ನೂ ಹಣ ಪಾವತಿ ಆಗಿಲ್ಲ.



'ಚೀನಾದಿಂದ ಶಂಕಾಸ್ಪದ ಬಿತ್ತನೆ ಬೀಜ'

ಕಲಬುರ್ಗಿ: 'ಚೀನಾದಿಂದ ಬಿತ್ತನೆ ಬೀಜಗಳನ್ನು ಬೇರೆ ಬೇರೆ ದೇಶಗಳಿಗೆ ಕಳಿಸಲಾಗುತ್ತಿದೆ. ಈ ಬೀಜಗಳು ಕೀಟ ಮತ್ತು ರೋಗಾಣುಗಳಿಂದ ಕೂಡಿದ್ದು, ಅವುಗಳನ್ನು ಬಿತ್ತನೆ ಮಾಡಿದರೆ ತಿಂಗಳಲ್ಲಿಯೇ ಬೆಳೆ ಸಂಪೂರ್ಣ ನಾಶವಾಗುತ್ತದೆ. ಅನಾಮಧೇಯರಿಂದ ಬೀಜ ಬಂದರೆ ರೈತರು ಸ್ವೀಕರಿಸಬಾರದು' ಎಂದು ಜಂಟಿ ಕೃಷಿ ನಿರ್ದೇಶಕ ಡಾ.ರತೇಂದ್ರನಾಥ ಸೂಗುರ ರೈತರಿಗೆ ಮನವಿ ಮಾಡಿದ್ದಾರೆ.

'ಈಗಾಗಲೇ ಇಂಗ್ಲೆಂಡ್, ಕೆನಡಾದಲ್ಲಿ ಅನೇಕ ರೈತರಿಗೆ ಇಂತಹ ಬೀಜಗಳನ್ನು ಕಳಿಸಲಾಗಿದೆ. ವಿವಿಧ ತಳಿಗಳ ಬಿತ್ತನೆ ಬೀಜದ ಈ ಪೊಟ್ಟಣಗಳನ್ನು ಯಾರು, ಎಲ್ಲಿಂದ ಕಳುಹಿಸುತ್ತಾರೆ ಎಂಬ ವಿವರಗಳೇ ಇರುವುದಿಲ್ಲ. ಈ ಬೀಜಗಳ ಬಳಕೆಯಿಂದ ಕೃಷಿಯ ಮೇಲೆ ವ್ಯತಿರಿಕ್ತ ಪರಿಣಾಮವಾಗಲಿದೆ. ಕ್ರಮೇಣ ಭೂಮಿಯೇ ಬಂಜರಾಗುವ ಸಾಧ್ಯತೆಯೂ ಇದೆ' ಎಂದೂ ಅವರು ಎಚ್ಚರಿಸಿದ್ದಾರೆ.

'ಇಂತಹ ಬಿತ್ತನೆ ಬೀಜದ ಪೊಟ್ಟಣಗಳ ಪಾರ್ಸಲ್ ಬಂದರೆ ರೈತರು ವಾಪಸ್ ಕಳುಹಿಸಬೇಕು. ಒಂದು ವೇಳೆ ಸ್ವೀಕರಿಸಿದರೂ ಪೊಟ್ಟಣದ ಸಮೇತ ಅದನ್ನು ಸುಟ್ಟು ಹಾಕಬೇಕು, ಇಲ್ಲವೆ ಸಮೀಪದ ಕೃಷಿ ಇಲಾಖೆಯ ಅಧಿಕಾರಿಗಳಿಗೆ ಅಥವಾ ಹತ್ತಿರದ ಪೊಲೀಸ್ ಠಾಣೆಗೆ ಮಾಹಿತಿ ನೀಡಬೇಕು' ಎಂದು ತಿಳಿಸಿದ್ದಾರೆ.

'ರಾಜ್ಯದಲ್ಲಿ ಇಂತಹ ಬೀಜಗಳು ಬಂದಿರುವ ಬಗ್ಗೆ ವರದಿಯಾಗಿಲ್ಲ. ಮುನ್ನೆಚ್ಚರಿಕೆಯಾಗಿ ರೈತರಿಗೆ ಈ ಬಗ್ಗೆ ಮಾಹಿತಿ ನೀಡಿದ್ದೇವೆ' ಎಂದು ಸೂಗುರ ಹೇಳಿದ್ದಾರೆ.

ರಾಜ್ಯದ ವಿವಿಧೆಡೆ ಉತ್ತಮ ಮಳೆ

ಬೆಂಗಳೂರು: ಕಲ್ಯಾಣ ಕರ್ನಾಟಕದ ಬೀದರ್, ಕಲಬುರ್ಗಿ ಹಾಗೂ ಕರಾವಳಿ ಜಿಲ್ಲೆಗಳಲ್ಲಿ ಮಂಗಳವಾರ ಮಳೆಯಾಗಿದೆ.

ಕಲಬುರ್ಗಿ ನಗರ, ಚಿಂಚೋಳಿ ಪಟ್ಟಣ ಹಾಗೂ ಸುತ್ತಮುತ್ತಲಿನ ಗ್ರಾಮಗಳಲ್ಲಿ ಸುಮಾರು 20 ನಿಮಿಷ ಉತ್ತಮ ಮಳೆಯಾಗಿದೆ. ಬೀದರ್ ಜಿಲ್ಲೆ ಔರಾದ್ ತಾಲ್ಲೂಕಿನ ಚಿಂತಾಕಿಯಲ್ಲಿ ಬಿರುಗಾಳಿಗೆ ಮರಗಳು ಉರುಳಿದಿವೆ. ಯನಗುಂದಾ, ಬರದಾಪುರದಲ್ಲಿ ಆಲಿಕಲ್ಲು ಮಳೆ ಬಿದ್ದಿದೆ.

ಮಂಗಳೂರು ನಗರ ಸೇರಿದಂತೆ ದಕ್ಷಿಣ ಕನ್ನಡ ಜಿಲ್ಲೆಯ ಹಲವೆಡೆ ಧಾರಾಕಾರ ಮಳೆ ಸುರಿದಿದೆ. ಮುಂಗಾರು ಪ್ರವೇಶಿಸುವ ಸಂದರ್ಭದಲ್ಲಿಯೇ ಮಳೆ ಆರಂಭವಾಗಿರುವುದು ಜಿಲ್ಲೆಯ ಕೃಷಿಕರಲ್ಲಿ ಸಂತಸ ಮೂಡಿಸಿದೆ. ಹಲವೆಡೆ ತಗ್ಗು ಪ್ರದೇಶಗಳಲ್ಲಿ ನೀರುನಿಂತಿತ್ತು.

ದಕ್ಷಿಣ ಕನ್ನಡದ ಮೂಲ್ಕಿ, ಬೆಳ್ತಂಗಡಿಯಲ್ಲಿ ಸಾಧಾರಣ ಮಳೆಯಾಗಿದೆ. ಉಡುಪಿ ಜಿಲ್ಲೆಯ ಕಟಪಾಡಿಯಲ್ಲಿ ಹುಣಸೆ ಮರವೊಂದು ವಿದ್ಯುತ್ ತಂತಿ, ಮನೆಯ ಮೇಲೆ ಬಿದ್ದಿದೆ.

ಉಡುಪಿ ಜಿಲ್ಲೆಯ ಖೋಣಿಯಲ್ಲಿ 6.5 ಸೆಂ.ಮೀ., ದಕ್ಷಿಣ ಕನ್ನಡ ಜಿಲ್ಲೆಯ ಕಿನ್ಯದಲ್ಲಿ 5.3 ಸೆಂ.ಮೀ. ಮಳೆ ದಾಖಲಾಗಿದೆ.

ಸಿದ್ದರಾಮಯ್ಯಗೆ ಜ್ವರ: ಆಸ್ಪತ್ರೆಗೆ ದಾಖಲು

ಬೆಂಗಳೂರು: ತೀವ್ರ ಜ್ವರದಿಂದ ಬಳಲುತ್ತಿರುವ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರು ನಗರದ ಮಣಿಪಾಲ್ ಆಸ್ಪತ್ರೆಗೆ ದಾಖಲಾಗಿದ್ದಾರೆ. ಸೋಮವಾರ ರಾತ್ರಿ ಮತ್ತು ಮಂಗಳವಾರ ಬೆಳಿಗ್ಗೆ ಅವರಿಗೆ ಜ್ವರ ಕಾಣಿಸಿಕೊಂಡಿತ್ತು.

ಕೋವಿಡ್ ತಪಾಸಣೆಗೆ ಒಳಪಡಿಸಲಾಗಿದ್ದು, ನೆಗೆಟಿವ್ ವರದಿ ಬಂದಿದೆ. ಜ್ವರ ಕಡಿಮೆ ಆಗದ ಕಾರಣ ಮಧ್ಯಾಹ್ನದ ವೇಳೆಗೆ ವೈದ್ಯರ ಸಲಹೆಯಂತೆ ಹೆಚ್ಚಿನ ಆರೋಗ್ಯ ತಪಾಸಣೆಗಾಗಿ ಅವರು ಆಸ್ಪತ್ರೆಗೆ ದಾಖಲಾಗಿದ್ದಾರೆ.

'ವೈರಾಣು ಜ್ವರ ಇರುವ ಶಂಕೆ ಇದೆ. ಎರಡು ದಿನ ಆಸ್ಪತ್ರೆಯಲ್ಲೇ ಇದ್ದು, ಚಿಕಿತ್ಸೆ ಪಡೆಯಲು ಸಲಹೆ ಮಾಡಲಾಗಿದೆ. ಅವರು ಭಾಗವಹಿಸಲಿದ್ದ ಎಲ್ಲ ಕಾರ್ಯಕ್ರಮಗಳನ್ನು ರದ್ದುಪಡಿಸಲಾಗಿದೆ' ಎಂದು ಆಪ್ತ ಮೂಲಗಳು ಮಾಹಿತಿ ನೀಡಿವೆ.

ಬುದ್ನಿ ಪಿಎಂ ಗ್ರಾಮ: ಗುಣಮಟ್ಟದ ಫಸಲಿಗೆ ಉತ್ತಮ ದರ ಪಡೆದ ರೈತ

ಬಾಳೆಕಾಯಿ ರಫ್ತು: ಉತ್ತಮ ಆದಾಯ

• ಉದಯ ಕುಲಕರ್ಣಿ

ಮುಧೋಳ (ಬಾಗಲಕೋಟೆ): ಲಾಕ್‌ಡೌನ್ ಸಂಕಷ್ಟದ ದಿನಗಳಲ್ಲೂ ತೋಟದಲ್ಲಿ ಬೆಳೆದಿದ್ದ ಬಾಳೆಕಾಯಿಯನ್ನು ವಿದೇಶಕ್ಕೆ ರಫ್ತು ಮಾಡಿ ಮುಧೋಳ ತಾಲ್ಲೂಕಿನ ಬುದ್ನಿ ಪಿಎಂ ಗ್ರಾಮದ ಕಣಬೂರ ಕುಟುಂಬ ಉತ್ತಮ ದರ ಪಡೆಯುತ್ತಿದೆ.

ಗ್ರಾಮದ ರಮೇಶ ಕಣಬೂರ ಹಾಗೂ ಪುತ್ರರಾದ ಲಕ್ಷ್ಮಣ ಕಣಬೂರ, ಶಂಕರ ಕಣಬೂರ ಸಹೋದರನ ಪುತ್ರ ಸದಾಶಿವ ಕಣಬೂರ ಯಶಸ್ವಿ ಕೃಷಿಕರು.

ರಮೇಶ ಕಣಬೂರ ಅವರಿಗೆ 15.5 ಎಕರೆ ಜಮೀನಿದ್ದು 7 ಎಕರೆಯಲ್ಲಿ ಜಿ-9 ತಳಿಯ ಬಾಳೆ ಬೆಳೆದಿದ್ದಾರೆ. ಫಸಲು ಸಮೃದ್ಧವಾಗಿದೆ. ಲಾಕ್‌ಡೌನ್‌ನಿಂದ ಮಾರುಕಟ್ಟೆಯಲ್ಲಿ ಬೆಲೆ ಇಲ್ಲದ ಸ್ಥಿತಿ. ಮೇ ತಿಂಗಳಲ್ಲಿ ಕಟಾವು ಆಗಿದ್ದು, ಆಗ ಮಾರುಕಟ್ಟೆಯಲ್ಲಿ ಕೆ.ಜಿಗೆ ₹4.5 ದಿಂದ ₹ 6 ಮಾತ್ರ ದರವಿತ್ತು.

ರಸಗೊಬ್ಬರ, ಸಿಂಪಡಣೆಗೆ ಎಕರೆಗೆ ₹1 ಲಕ್ಷ ವೆಚ್ಚ ಮಾಡಿದ್ದರು. ಗುಜರಾತ್‌ನ ನವಸಾರಿಯ ದೇಸಾಯಿ ಅಗ್ರಿ ಫುಡ್ಸ್ ಕಂಪನಿಯನ್ನು ಸಂಪರ್ಕಿಸಿದರು. ಅವರು ಫಸಲು ವೀಕ್ಷಿಸಿ ಪ್ರತಿ ಕೆ.ಜಿಗೆ ₹9 ರಂತೆ ಕೊಂಡುಕೊಂಡು 'ಹ್ಯಾಪಿ ಬನಾನಾ' ಹೆಸರಿನಲ್ಲಿ ಅರಬ್ ರಾಷ್ಟ್ರಗಳಿಗೆ ರಫ್ತು ಮಾಡಿದ್ದಾರೆ.

'ಕಟಾವು ಹಾಗೂ ಸಾಗಣೆ ವೆಚ್ಚವನ್ನು ಕಂಪನಿ ಭರಿಸಲಿದೆ. ಪ್ರತಿ ಬಾಳೆ ಗಿಡದಲ್ಲಿ 28 ರಿಂದ 30 ಕೆ.ಜಿ ಬರುತ್ತಿದೆ. 9 ಸಾವಿರ ಗಿಡವಿದ್ದು, ₹ 23 ಲಕ್ಷದ ಆದಾಯ ನಿರೀಕ್ಷಿಸಿದ್ದೇವೆ. ಆಗಿದ್ದ ₹ 7 ಲಕ್ಷ ವೆಚ್ಚ ತೆಗೆದರೆ ₹16 ಲಕ್ಷ ಆದಾಯ ದೊರೆಯಲಿದೆ' ಎಂದು ಸದಾಶಿವ ಕಣಬೂರ ಸಂತಸ ವ್ಯಕ್ತಪಡಿಸಿದರು.

'ರಫ್ತು ಉದ್ದೇಶಕ್ಕಾಗಿ ನಾವು ಗುಣಮಟ್ಟದ ಬಾಳೆ ಖರೀದಿಸುತ್ತೇವೆ. ಕಂಪನಿಯೇ ಕಟಾವು, ಸಾಗಣೆ ಮಾಡಿಸಲಿದೆ. 4ರಿಂದ 8 ದಿನಗಳಲ್ಲಿ ರೈತರಿಗೆ ಹಣ ಸಂದಾಯವಾಗುತ್ತದೆ. ತಾಲ್ಲೂಕಿನ ಶಿರೋಳ, ಮಳ್ಳಿಗೇರಿ, ಮಂಟೂರ ಹಾಗೂ ಬುದ್ನಿ ಪಿಎಂ ಗ್ರಾಮಗಳಲ್ಲಿ ಕಟಾವು ನಡೆಯುತ್ತಿದೆ. ಕಳೆದ ವರ್ಷ 62 ಸಾವಿರ ಮೆಟ್ರಿಕ್ ಟನ್ ಬಾಳೆಕಾಯಿಯನ್ನು ಖರೀದಿಸಿದ್ದೆವು' ಎಂದು ದೇಸಾಯಿ ಅಗ್ರಿ ಫುಡ್ಸ್ ಕಂಪನಿಯ ಪ್ರತಿನಿಧಿ ಅಕ್ಷಯ ಗುರವ ಹೇಳುತ್ತಾರೆ.

ಮುಧೋಳ ತಾಲ್ಲೂಕು ಬುದ್ನಿ ಪಿಎಂ ಗ್ರಾಮದ ರಮೇಶ ಕಣಬೂರ ಬಾಳೆತೋಟದಲ್ಲಿ ಕುಟುಂಬದ ಸದಸ್ಯರು

ರೈತರ ಸಂಪರ್ಕಕ್ಕೆ ಮಾಹಿತಿ

ರೈತರು ಹೆಚ್ಚಿನ ಮಾಹಿತಿಗಾಗಿ ಲಕ್ಷ್ಮಣ ಕಣಬೂರ (ಬಾಳೆ ಬೆಳೆಗಾರ) 76765 94404, ಅಕ್ಷಯ ಗುರವ (ಕಂಪನಿ ಪ್ರತಿನಿಧಿ) 93138 00395, ಪ್ರಮೋದ (ಮಾರಾಟಗಾರ) 93800 71125 ಅವರನ್ನು ಸಂಪರ್ಕಿಸಬಹುದು.

ಪ್ರಜಾವಾಣಿ
ಗ್ರೀನ್ ಟಾಕ್ | ಪ್ರಕೃತಿ ಮಡಿಲ ಮಾತು

ಕ್ಷಣ ಕ್ಷಣವೂ ಪರಿಸರ ನಮ್ಮದಾಗಲಿ...
ಪರಿಸರ ಎಂಬುದು ನಮ್ಮ ಪೂರ್ತಿ ಅಂಗಾಂಗಗಳಲ್ಲಿ, ಮೈಮನಗಳಲ್ಲಿ ಇದ್ದಾಗ ಮಾತ್ರ ಪರಿಸರ ಉಳಿಯುತ್ತೆ ಎನ್ನುತ್ತಾರೆ ನಟ, ನಿರ್ದೇಶಕ, ಪರಿಸರ ತಜ್ಞ ಸುರೇಶ್ ಹೆಬ್ಳೀಕರ್

ಪ್ರಜಾವಾಣಿ LIVE
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರ ಪ್ರಸಾರ
ಸಂವಾದ ಕನ್ನಡ ಸಿನಿಮಾ ಮತ್ತು ಓಟಿಟಿ
ಸಂವಾದದಲ್ಲಿ ಭಾಗವಹಿಸುವವರು



ಎಸ್.ವಿ.ರಾಜೇಂದ್ರಸಿಂಗ್ ಬಾಬು, ಹಿರಿಯ ನಿರ್ದೇಶಕ



ಜಯಮಾಲಾ, ನಟಿ, ನಿರ್ಮಾಪಕಿ

ಕೆ.ವಿ.ಚಂದ್ರಶೇಖರ್, ಅಧ್ಯಕ್ಷರು, ಚಿತ್ರಪ್ರದರ್ಶಕರ ಸಂಘ

ಗುರುವಾರ, 3- 6-2021 ಸಮಯ- ಮಧ್ಯಾಹ್ನ 12 ರಿಂದ 1

ಸುತ್ತೂರು ಶ್ರೀ ಜೊತೆ ಚರ್ಚೆ • ಸಿನಿಮಾದಲ್ಲೂ, ರಾಜಕೀಯದಲ್ಲೂ ನಾನು ನಾಯಕ –ಯೋಗೇಶ್ವರ್

'ಖಳನಾಯಕನಂತೆ ಬಿಂಬಿಸುತ್ತಿದ್ದಾರೆ, ನೋವಾಗಿದೆ'

ಪ್ರಜಾವಾಣಿ ವಾರ್ತೆ

ಮೈಸೂರು: 'ರಾಜ್ಯದಲ್ಲಿನ ಆಡಳಿತದ ಬಗ್ಗೆ ವೈಯಕ್ತಿಕ ಅಭಿಪ್ರಾಯ ಹಂಚಿಕೊಂಡ ನನ್ನನ್ನು, ಎರಡ್ಮೂರು ದಿನಗಳಿಂದ ಖಳನಾಯಕನಂತೆ ಬಿಂಬಿಸಲಾಗುತ್ತಿದೆ. ಸ್ನೇಹಿತರ ಮಾತಿನಿಂದ ನೋವಾಗಿದೆ' ಎಂದು ಸಚಿವ ಸಿ.ಪಿ. ಯೋಗೇಶ್ವರ್ ಮಂಗಳವಾರ ರಾತ್ರಿ ಇಲ್ಲಿ ಹೇಳಿದರು.

ಇಲ್ಲಿನ ಸುತ್ತೂರು ಶಾಖಾ ಮಠಕ್ಕೆ ಪೊಲೀಸ್ ಬೆಂಗಾವಲು ಇಲ್ಲದೆ, ಖಾಸಗಿ ಕಾರಿನಲ್ಲಿ ದಿಢೀರ್ ಭೇಟಿ ನೀಡಿದ ಸಚಿವರು, ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಜೊತೆ ಗೋಪ್ಯ ಮಾತುಕತೆ ನಡೆಸಿ, ಆ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದರು.

'ನನ್ನ ಮನಸ್ಸಿನ ನೋವನ್ನು ಸ್ವಾಮೀಜಿ ಬಳಿ ಹೇಳಿಕೊಂಡೆ. ಮನಸ್ಸು ಹಗುರವಾಯಿತು. ಧಾರ್ಮಿಕ ಕ್ಷೇತ್ರದಲ್ಲಿ ರಾಜಕೀಯ ಮಾತನಾಡಲ್ಲ' ಎಂದು ಕೈ ಮುಗಿದರು.



ಯೋಗೇಶ್ವರ್

'ಸರ್ಕಾರಿ ಕಾರಿನಲ್ಲಿ ಬರಲಿಲ್ಲ ಎಂದರೆ ನಾನು ಸಚಿವನಲ್ಲವಾ?' ಎಂದ ಯೋಗೇಶ್ವರ್ ಅವರು, 'ನಾನು ಸಿನಿಮಾದಲ್ಲೂ ನಾಯಕ; ರಾಜಕೀಯದಲ್ಲೂ ನಾಯಕ' ಎಂದರು. ಪತ್ರಕರ್ತರ ಬೇರಾವ ಪ್ರಶ್ನೆಗೂ ಉತ್ತರಿಸದೇ ಬೇಸರದಿಂದಲೇ ಮಠದಿಂದ ತೆರಳಿದರು.

ಯೋಗೇಶ್ವರ್ ಭೇಟಿಗೂ ಮುನ್ನವೇ ಶಿಕ್ಷಣ ಸಚಿವ ಎಸ್.ಸುರೇಶ್‌ಕುಮಾರ್ ಹಾಗೂ ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಪ್ರತ್ಯೇಕವಾಗಿ ಮಠಕ್ಕೆ ಭೇಟಿ ನೀಡಿ, ಸ್ವಾಮೀಜಿ ಆಶೀರ್ವಾದ ಪಡೆದರು. ಕೆಲ ಹೊತ್ತು ಮಾತುಕತೆ ನಡೆಸಿದರು ಎಂಬುದು ಗೊತ್ತಾಗಿದೆ.

'ಈಗ ಬಿಎಸ್‌ವೈ ಸಿ.ಎಂ, ಭವಿಷ್ಯ ಗೊತ್ತಿಲ್ಲ'

ಸಿ.ಟಿ.ರವಿ

ಮೈಸೂರು: 'ಈಗ ಬಿ.ಎಸ್.ಯಡಿಯೂರಪ್ಪ ಅವರೇ ನಮ್ಮ ಮುಖ್ಯಮಂತ್ರಿ. ಈ ವಿಚಾರದಲ್ಲಿ ಗೊಂದಲ ಇಲ್ಲ. ಆದರೆ, ಭವಿಷ್ಯ ಏನೆಂಬುದು ಗೊತ್ತಿಲ್ಲ' ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಹೇಳಿದರು.

'ಯಾರು, ಏಕೆ ದೆಹಲಿಗೆ ಹೋಗುತ್ತಿದ್ದಾರೆ ಎಂಬುದು ಗೊತ್ತಿಲ್ಲ. ವೈಯಕ್ತಿಕ ಕಾರಣಗಳಿಗೆ ಬಿ.ವೈ.ವಿಜಯೇಂದ್ರ ಹೋಗಿರಬಹುದು. ಸದ್ಯ ದೆಹಲಿಯಲ್ಲಿ ಪಕ್ಷದಿಂದ ಯಾವುದೇ ಸಭೆ ನಡೆದಿಲ್ಲ' ಎಂದು ಮಂಗಳವಾರ ಇಲ್ಲಿ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

'ಆಯಾಯ ಕಾಲಕ್ಕೆ ರಾಜ್ಯ ಮತ್ತು ಪಕ್ಷದ ಹಿತವನ್ನು ಗಮನಕ್ಕೆ ತೆಗೆದುಕೊಂಡು ಪಕ್ಷ ನಿರ್ಣಯ ಕೈಗೊಳ್ಳುತ್ತದೆ. ಅದೇ ಹಿತವನ್ನು ಗಮನದಲ್ಲಿಟ್ಟುಕೊಂಡು ಯಡಿಯೂರಪ್ಪ ಅವರನ್ನು ಮುಖ್ಯಮಂತ್ರಿ ಮಾಡಲಾಗಿದೆ' ಎಂದರು.

'ಕೋವಿಡ್‌ನ ಸಂದರ್ಭದಲ್ಲಿ ಎಲ್ಲ ಶಾಸಕರು, ಸಚಿವರು ಶಕ್ತಿ ಮೀರಿ ಕೆಲಸ ಮಾಡಬೇಕು. ಜನ ಮತ ನೀಡಿರುವುದು ವೈಯಕ್ತಿಕ ಕೆಲಸ ಮಾಡಿಕೊಳ್ಳಲು ಅಲ್ಲ. ಜನರ ಸಂಕಷ್ಟಕ್ಕೆ ಸ್ಪಂದಿಸಬೇಕು' ಎಂದು ಸಲಹೆ ನೀಡಿದರು.

'ಅಧಿಕಾರದಾಹಿಗಳ ಬಗ್ಗೆ ಮಾತನಾಡುವುದಿಲ್ಲ'

ಶಿವಕುಮಾರ್

ಬೆಂಗಳೂರು: 'ಅಧಿಕಾರ ದಾಹಿಗಳ ಬಗ್ಗೆ ಮಾತನಾಡುವುದಿಲ್ಲ. ಎರಡು- ಮೂರು ಪಕ್ಷ ಸುತ್ತಿದವರನ್ನು (ಯೋಗೇಶ್ವರ್) ತಮ್ಮ ಮನೆಗೆ ಯಡಿಯೂರಪ್ಪ ಕರೆದುಕೊಂಡು ಹೋದರು. ಈಗ ಅನುಭವಿಸಲಿ ಬಿಡಿ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಹೇಳಿದರು.

ಸುದ್ದಿಗಾರರ ಜೊತೆ ಮಂಗಳವಾರ ಮಾತನಾಡಿದ ಅವರು, ವಿಜಯೇಂದ್ರ ಅವರು ದೆಹಲಿಗೆ ಹೋಗಿರುವ ಬಗ್ಗೆ ಮಾಧ್ಯಮದವರು ಪ್ರಶ್ನಿಸಿದಾಗ ಹೀಗೇ ಪ್ರತಿಕ್ರಿಯಿಸಿದರು.

'ನಾವು ಕೂಡ ಹಿಂದೆ ಇದೇ ತಪ್ಪು ಮಾಡಿದ್ದೆವು. ಅದಕ್ಕೆ ಪ್ರತಿಫಲ ಅನುಭವಿಸಿದ್ದೇವೆ. ಈಗ ಯಡಿಯೂರಪ್ಪನವರ ಸರದಿ. ಇದು ಎರಡು, ಮೂರು ಪಕ್ಷಗಳ ಸರ್ಕಾರವೆಂದು ಮಾತನಾಡಲು ಅವರಿಗೆ ಶಕ್ತಿ ಕೊಟ್ಟವರು ಯಾರು. ಯಡಿಯೂರಪ್ಪ ಅಲ್ಲವೇ? ತಪ್ಪು ಮಾಡಿದವರೆಲ್ಲ ಅನುಭವಿಸಲೇಬೇಕು' ಎಂದು ಅವರು ಹೇಳಿದರು.

ಜಿಲ್ಲಾಧಿಕಾರಿ ಸಿಂಧೂರಿ ವಿರುದ್ಧ ಪ್ರತಾಪಸಿಂಹ ಮತ್ತೆ ವಾಗ್ದಾಳಿ

ಮೈಸೂರು: 'ಕೋವಿಡ್ ನಿರ್ವಹಣೆಗೆ ಖರ್ಚು ಮಾಡಿದ ಹಣದ ಬಗ್ಗೆ ಲೆಕ್ಕ ಕೇಳಿದ್ದೆ. ಎಲ್ಲದಕ್ಕೂ ಲೆಕ್ಕ ಕೊಟ್ಟಿದ್ದಾರಾ? ಈ ಸಂದರ್ಭದಲ್ಲಿ ಸಾರ್ವಜನಿಕರ ಹಣ ದುಂದುವೆಚ್ಚ ಆಗಬಾರದು. ಹೀಗಾಗಿ, ಈಜುಕೊಳ ನಿರ್ಮಾಣಕ್ಕೆ ಬಳಸಿದ ಹಣ ಯಾವುದೆಂದು ಕೇಳಿದ್ದೆ. ಅದಕ್ಕೆ ಲೆಕ್ಕ ಕೊಟ್ಟಿದ್ದಾರಾ?' ಎಂದು ಸಂಸದ ಪ್ರತಾಪಸಿಂಹ, ಜಿಲ್ಲಾಧಿಕಾರಿ ರೋಹಿಣಿ ಸಿಂಧೂರಿ ವಿರುದ್ಧ ಮಂಗಳವಾರ ಮತ್ತೆ ಮುಗಿಬಿದ್ದಿದ್ದಾರೆ.

ಪ್ರತಾಪಸಿಂಹ

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಮಾರ್ಗಸೂಚಿ ಅನುಸರಿಸದೇ ಸ್ಟೆಪ್‌ಡೌನ್ ಆಸ್ಪತ್ರೆಗಳಿಗೆ ಅನುಮತಿ ಕೊಟ್ಟಿದ್ದು ಏಕೆ ಎಂಬುದಾಗಿ ಕೇಳಿದೆ. ಉತ್ತರ ಸಿಕ್ಕಿದೆಯೇ? ಬೆಡ್, ಊಟ, ಕೊಠಡಿ ಬಾಡಿಗೆಗೆ ಇಷ್ಟಾಯಿತು ಎಂದು ಲೆಕ್ಕ ತೋರಿಸಿ ₹ 4 ಕೋಟಿ, 3, 2, 5 ಕೋಟಿ ಎಂದು ಬರೆದರೆ ಹೇಗೆ? ವಸ್ತು ಮತ್ತು ವೆಚ್ಚ ಹೇಳಬೇಕು. ಇದು ಎನ್‌ಡಿಆರ್‌ಎಫ್, ಎಸ್‌ಡಿಆರ್‌ಎಫ್ ಅನುದಾನ. ಕೇಂದ್ರ ಸರ್ಕಾರದ ಪ್ರತಿನಿಧಿಯಾಗಿ ಲೆಕ್ಕ ಕೇಳಲೇಬೇಕಾಗುತ್ತದೆ' ಎಂದರು.

'ಹಿಂದಿನ ಜಿಲ್ಲಾಧಿಕಾರಿ ಅಭಿರಾಂ ಜಿ.ಶಂಕರ್ ಇದ್ದಾಗ ಅವರ ಬಳಿ ಯಾರೂ ಲೆಕ್ಕ ಕೇಳಿಲ್ಲ. ಏಕೆಂದರೆ ಪಾರದರ್ಶಕವಾಗಿ ನಡೆದುಕೊಂಡರು. ಪ್ರಶ್ನೆ ಮಾಡುವ ಸಂದರ್ಭವೇ ಉದ್ಭವಿಸಲಿಲ್ಲ. ಇದು ಯಾರ ವಿರುದ್ಧದ ವೈಯಕ್ತಿಕ ದಾಳಿಯೂ ಅಲ್ಲ. ನಾನೇನು ಖಾಸಗಿ ಬದುಕಿನ ಬಗ್ಗೆ ಕೇಳಿದ್ದೇನೆಯೇ? ಅವರ ಆಸ್ತಿ ಬಗ್ಗೆ ಕೇಳಿದ್ದೇನೆಯೇ? ಸಾರ್ವಜನಿಕ ಹಣದ ಬಗ್ಗೆ ಪ್ರಶ್ನಿಸುತ್ತಿದ್ದೇನೆ ಅಷ್ಟೆ' ಎಂದು ಹೇಳಿದರು.

'ಇನ್ನು ಮುಂದೆ ನಾನು ಯಾರ ಬಗ್ಗೆಯೂ ಮಾತನಾಡುವುದಿಲ್ಲ. ನನಗೆ ನೀಡಿರುವ ಜವಾಬ್ದಾರಿಯನ್ನು ನಿಭಾಯಿಸುತ್ತೇನೆ. ಜಿಲ್ಲೆಯಲ್ಲಿ ಎಲ್ಲರಿಗೂ ಲಸಿಕೆ ಕೊಡಿಸುವ ಜವಾಬ್ದಾರಿ ನನ್ನದು' ಎಂದು ತಿಳಿಸಿದರು.

'ಸಾವಿನ ಲೆಕ್ಕದಲ್ಲಿ ವ್ಯತ್ಯಾಸವಿದೆ'

'ಮೈಸೂರು ಜಿಲ್ಲೆಯ ಹಲವು ಕಡೆ ಪ್ರವಾಸ ಮಾಡುತ್ತಿದ್ದು, ಜನರು ದೂರು ನೀಡುತ್ತಿದ್ದಾರೆ. ಕೋವಿಡ್‌ನಿಂದ ಹೆಚ್ಚು ಸಾವು ಸಂಭವಿಸುತ್ತಿರುವ ಬಗ್ಗೆ ವರದಿಗಳು ಬರುತ್ತಿವೆ. ನಿತ್ಯ 15ರಿಂದ 20 ಸಾವುಗಳು ಸಂಭವಿಸುತ್ತಿವೆ. ಸಭೆಯಲ್ಲೂ ಈ ವಿಚಾರ ಪ್ರಸ್ತಾಪಿಸಿದ್ದೆ. ಸಾವಿನ ಲೆಕ್ಕದಲ್ಲಿ ವ್ಯತ್ಯಾಸ ಕಂಡುಬರುತ್ತಿದೆ' ಎಂದು ಎಂದು ಪ್ರತಾಪಸಿಂಹ ಹೇಳಿದರು.

ಸಚಿವ ಸಂಪುಟ ಪುನರ್ ರಚನೆ?

ಒಂದನೇ ಪುಟದಿಂದ

ಪಕ್ಷ ಮುಖಂಡರು, ಪದಾಧಿಕಾರಿಗಳು, ಕಾರ್ಯಕರ್ತರು ಕೊರೊನಾದಿಂದ ಸಂಕಷ್ಟಕ್ಕೀಡಾದ ರಾಜ್ಯದ ಜನರ ನೆರವಿಗೆ ಬಾರದಿರುವುದು ವರಿಷ್ಠರ ಆಕ್ರೋಶಕ್ಕೆ ಕಾರಣವಾಗಿದೆ. ಅಂತೆಯೇ ಬಿಜೆಪಿಯ ರಾಜ್ಯ ಘಟಕಕ್ಕೆ ಪುನಶ್ಚೇತನ ನೀಡುವ ಸಲುವಾಗಿ ಸಂಘಟನೆಯ ಪುನರ್ ರಚನೆಗೆ ಆದ್ಯತೆ ನೀಡಲು ನಿರ್ಧರಿಸಲಾಗಿದೆ ಎಂದು ತಿಳಿದುಬಂದಿದೆ.

ಪ್ರಧಾನ ಕಾರ್ಯದರ್ಶಿ ಸೇರಿದಂತೆ ಬಹುತೇಕ ಪದಾಧಿಕಾರಿಗಳನ್ನು ಕೈಬಿಟ್ಟು, ಪುನರ್ ರಚಿಸುವ ಸಾಧ್ಯತೆ ಇದೆ ಎಂದು ಹೇಳಲಾಗಿದೆ.

'ನಮ್ಮ ಪಕ್ಷವೇ ಅಧಿಕಾರದಲ್ಲಿದ್ದರೂ ಸಂಕಷ್ಟದಲ್ಲಿ ಇದ್ದವರಿಗೆ ನಿರೀಕ್ಷೆಯಂತೆ ನೆರವು ದೊರೆಯಲಿಲ್ಲ. ಆಸ್ಪತ್ರೆಗಳಲ್ಲಿ ಹಾಸಿಗೆ, ಔಷಧಿ, ಆಮ್ಲಜನಕ ಲಭ್ಯತೆ ಬಗ್ಗೆ ಗಮನ ಹರಿಸಲಿಲ್ಲ. ಕಡೆಯ ಪಕ್ಷ ಗೌರವಯುತ ಅಂತ್ಯಸಂಸ್ಕಾರಕ್ಕೂ ನೆರವು ನೀಡಲಿಲ್ಲ ಎಂಬ ದೂರುಗಳು ಬಂದಿವೆ' ಎಂದು ಅರುಣ್ ಸಿಂಗ್ ಅವರು ವಿಜಯೇಂದ್ರ ಎದುರು ಬೇಸರ ವ್ಯಕ್ತಪಡಿಸಿದರು ಎನ್ನಲಾಗಿದೆ.

ಅರುಣ್ ಸಿಂಗ್ ಜೊತೆ ವಿಜಯೇಂದ್ರ ರಹಸ್ಯ ಚರ್ಚೆ

ಒಂದನೇ ಪುಟದಿಂದ

ಆದರೆ, 'ವಿಜಯೇಂದ್ರ ಅವರ ದೆಹಲಿ ಭೇಟಿಯ ವಿಷಯವಾಗಲೀ, ಸಚಿವ ಸಿ.ಪಿ. ಯೋಗೇಶ್ವರ್ ನೀಡಿರುವ ಹೇಳಿಕೆಗಳ ಕುರಿತಾಗಲೀ, ತಮಗೆ ಯಾವುದೇ ಮಾಹಿತಿ ಇಲ್ಲ' ಎಂದು ಅರುಣ್ ಸಿಂಗ್ ಸುದ್ದಿಗಾರರಿಗೆ ಪ್ರತಿಕ್ರಿಯೆ ನೀಡಿದ್ದಾರೆ.

ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಹಾಗೂ ಗೃಹ ಸಚಿವ ಅಮಿತ್ ಶಾ ಅವರ ಭೇಟಿಗೆ ವಿಜಯೇಂದ್ರ ಸಮಯಾವಕಾಶ ಕೋರಿದ್ದು, ಅವರ ಪ್ರಯತ್ನ ಫಲಕಾರಿಯಾಗಿಲ್ಲ. ಬುಧವಾರ ಸಂಜೆಯವರೆಗೆ ಇಲ್ಲೇ ಇದ್ದು, ವರಿಷ್ಠರೊಂದಿಗೆ ಚರ್ಚಿಸುವ ಸಾಧ್ಯತೆ ಇದೆ ಎಂದು ತಿಳಿದುಬಂದಿದೆ.

ರಾಜ್ಯದಲ್ಲಿ ನಾಯಕತ್ವ ಬದಲಾವಣೆ ಆಗುವ ಸಾಧ್ಯತೆ ಇದೆ ಎಂಬ ಮಾತುಗಳು ಇತ್ತೀಚೆಗಷ್ಟೇ ಕೇಳಿ ಬಂದಿದ್ದ ಹಿನ್ನೆಲೆಯಲ್ಲಿ, ವಿಜಯೇಂದ್ರ ಅವರ ಈ ದಿಢೀರ್ ಭೇಟಿಯು ರಾಜಕೀಯ ವಲಯದಲ್ಲಿ ತೀವ್ರ ಕುತೂಹಲ ಕೆರಳಿಸಿದೆ.

ಮೇ ಎರಡನೇ ವಾರದಲ್ಲೂ ಸಚಿವ ಬಸವರಾಜ ಬೊಮ್ಮಾಯಿ ಅವರೊಂದಿಗೆ ದೆಹಲಿಗೆ ಬಂದಿದ್ದ ವಿಜಯೇಂದ್ರ, ಬಿಜೆಪಿ ವರಿಷ್ಠರನ್ನು ಭೇಟಿ ಮಾಡಿ ಚರ್ಚಿಸಿದ್ದರು. ಕಳೆದ ವಾರವಷ್ಟೇ ದೆಹಲಿಗೆ ಬಂದಿದ್ದ ಸಚಿವ ಸಿ.ಪಿ. ಯೋಗೇಶ್ವರ್, ಶಾಸಕ ಅರವಿಂದ್ ಬೆಲ್ಲದ್ ಮತ್ತಿತರರು ವರಿಷ್ಠರ ಭೇಟಿಗೆ ಯತ್ನಿಸಿದ್ದರು.

ಜೆಡಿಎಸ್ ಕಚೇರಿಯಲ್ಲಿ ದೇವೇಗೌಡರಿಗೆ ಅಭಿನಂದನೆ

'ಪಕ್ಷಕ್ಕೆ ಶಕ್ತಿ ತುಂಬುವುದೇ ಗುರಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಜೆಡಿಎಸ್ ಪಕ್ಷಕ್ಕೆ ಶಕ್ತಿ ತುಂಬುವುದೇ ನನ್ನ ಮುಂದಿರುವ ಗುರಿ. ಇನ್ನು ನನ್ನ ಎಲ್ಲ ಶ್ರಮವನ್ನೂ ಅದಕ್ಕಾಗಿ ಮಾತ್ರ ಮೀಸಲಿಡುತ್ತೇನೆ' ಎಂದು ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ. ದೇವೇಗೌಡ ಹೇಳಿದರು.

ತಾವು ದೇಶದ ಪ್ರಧಾನಿಯಾಗಿ ಅಧಿಕಾರ ಸ್ವೀಕರಿಸಿ 25 ವರ್ಷಗಳಾದ ಪ್ರಯುಕ್ತ ಜೆಡಿಎಸ್ ಪ್ರಧಾನ ಕಚೇರಿ ಜೆ.ಪಿ. ಭವನದಲ್ಲಿ ಮಂಗಳವಾರ ಪಕ್ಷದ ಮುಖಂಡರಿಂದ ಅಭಿನಂದನೆ ಸ್ವೀಕರಿಸಿದ ಬಳಿಕ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು.

'ಎಲ್ಲ ಮುಖಂಡರನ್ನೂ ಒಟ್ಟಾಗಿ ಸೇರಿಸಿ ಪಕ್ಷವನ್ನು ಬಲಪಡಿಸುವ ನಿರ್ಣಯವನ್ನು ಈ ದಿನ ಮಾಡುತ್ತಿದ್ದೇನೆ' ಎಂದು ಅವರು ತಿಳಿಸಿದರು.

'ನಮ್ಮದು ಪ್ರಾದೇಶಿಕ ಪಕ್ಷ. ಎರಡು ರಾಷ್ಟ್ರೀಯ ಪಕ್ಷಗಳ ನಡುವೆಯೇ ನಾವು ಬೆಳೆಯಬೇಕಿದೆ. ಪಕ್ಷವನ್ನು ತ್ಯಜಿಸಿ ಹೋದವರ ಕುರಿತು ಮಾತನಾಡುವುದಿಲ್ಲ. ಆದರೆ, ಜೆಡಿಎಸ್ ಎಂದರೆ ದೇವೇಗೌಡ ಮತ್ತು ಕುಮಾರಸ್ವಾಮಿ ಇಬ್ಬರೇ ಎಂದಾಗಬಾರದು. ಇರುವ ಸಮರ್ಥ ನಾಯಕರನ್ನು ಸರಿಯಾಗಿ ಬಳಸಿಕೊಳ್ಳಬೇಕಿದೆ. ಕುಮಾರಸ್ವಾಮಿ ಜತೆ ಚರ್ಚಿಸಿ ಪಕ್ಷದ ಎಲ್ಲ ಘಟಕಗಳಲ್ಲೂ ಬದಲಾವಣೆ ತರಲಾಗುವುದು' ಎಂದು ಹೇಳಿದರು.



ದೇವೇಗೌಡ

ಪಕ್ಷದ ರಾಜ್ಯ ಘಟಕವನ್ನೂ ಬಲಪಡಿಸಲಾಗುವುದು. ಎರಡು ತಿಂಗಳಿನಲ್ಲಿ ಹೊಸ ಘಟಕಗಳು ಅಸ್ತಿತ್ವಕ್ಕೆ ಬರಲಿವೆ. ಸಾಮೂಹಿಕ ನಾಯಕತ್ವದ ಅಡಿಯಲ್ಲಿ ಪಕ್ಷ ಸಂಘಟನೆ ಮಾಡಲಾಗುವುದು ಎಂದರು.

'ಲಾಕ್‌ಡೌನ್ ಮುಂದುವರಿದರೆ ಉತ್ತಮ'

'ಲಾಕ್‌ಡೌನ್ ಮುಂದುವರಿಸುವುದರಿಂದ ಕೋವಿಡ್ ನಿಯಂತ್ರಣ ಸಾಧ್ಯವಿದೆ. ಮೂವರು ಸಚಿವರು, ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಎಲ್ಲರೂ ಲಾಕ್‌ಡೌನ್ ಮುಂದುವರಿಸುವಂತೆ ಹೇಳಿದ್ದಾರೆ. ಅದಕ್ಕೆ ನನ್ನ ಸಹಮತವೂ ಇದೆ' ಎಂದು ಎಚ್.ಡಿ. ದೇವೇಗೌಡ ಹೇಳಿದರು.

ಚಿತ್ರರಂಗದ ಕಾರ್ಮಿಕರಿಗೆ ನಟ ಯಶ್ ₹1.50 ಕೋಟಿ ನೆರವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ನಿಯಂತ್ರಣಕ್ಕಾಗಿ ಜಾರಿಗೊಳಿಸಲಾಗಿರುವ ಲಾಕ್‌ಡೌನ್ ಕಾರಣದಿಂದಾಗಿ ಸಿನಿಮಾ ಚಿತ್ರೀಕರಣ ಕಳೆದ ನಾಲ್ಕು ತಿಂಗಳಿಂದ ಸಂಪೂರ್ಣ ಸ್ತಬ್ಧವಾಗಿದ್ದು, ಸಾವಿರಾರು ಕಲಾವಿದರು, ತಂತ್ರಜ್ಞರು ಹಾಗೂ ಕಾರ್ಮಿಕರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಇಂಥವರ ನೆರವಿಗೆ ಇದೀಗ ನಟ ಯಶ್ ಕೂಡಾ ಮುಂದಾಗಿದ್ದಾರೆ. ಮೂರು ಸಾವಿರಕ್ಕೂ ಅಧಿಕ ಚಿತ್ರರಂಗದ ಕಲಾವಿದರು, ಕಾರ್ಮಿಕರ ಖಾತೆಗೆ ತಲಾ ₹5 ಸಾವಿರ ಆರ್ಥಿಕ ನೆರವನ್ನು ನೀಡಲು ನಿರ್ಧರಿಸಿದ್ದಾರೆ.

'ಕಣ್ಣಿಗೆ ಕಾಣದ ವೈರಸ್ ಮನುಷ್ಯನ ಬದುಕನ್ನು ಹೆಚ್ಚುಕಮ್ಮಿ ಬುಡಮೇಲು ಮಾಡಿದೆ. ಅದರಲ್ಲೂ ಕಳೆದೊಂದು ವರ್ಷದಿಂದ ನನ್ನ ಸಿನಿಮಾ ಕುಟುಂಬ ಅಸಹಾಯಕತೆಯಿಂದ ಕೈಕಟ್ಟಿ ಕುಳಿತಿದೆ. ಹೌದು, ಇದು ಬರೀ ಮಾತನಾಡುವ ಸಮಯವಲ್ಲ. ಸಂಕಷ್ಟದಲ್ಲಿರುವ ಸಿನಿಮಾ ಕುಟುಂಬದ ಜೊತೆ ನಿಲ್ಲುವ ಸಮಯ. ಹಾಗಾಗಿ ಚಿತ್ರರಂಗದ 21 ವಿಭಾಗಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸುಮಾರು 3,000ಕ್ಕೂ ಹೆಚ್ಚಿರುವ ನಮ್ಮ ಸಿನಿಮಾ ಕಲಾವಿದರು, ತಂತ್ರಜ್ಞರು, ಕಾರ್ಮಿಕರ ಅಧಿಕೃತ ಖಾತೆಗಳಿಗೆ ತಲಾ ₹5 ಸಾವಿರವನ್ನು ನನ್ನ ಸಂಪಾದನೆಯ ಹಣದಿಂದ ಭರಿಸಲು ನಿರ್ಧರಿಸಿದ್ದೇನೆ' ಎಂದು ಯಶ್ ತಿಳಿಸಿದ್ದಾರೆ.

ಯಶ್

'ಈಗಾಗಲೇ ನಮ್ಮ ಒಕ್ಕೂಟದ ಅಧ್ಯಕ್ಷರಾದ ಸಾ.ರಾ.ಗೋವಿಂದ್ ಮತ್ತು ಪ್ರಧಾನ ಕಾರ್ಯದರ್ಶಿಗಳಾದ ರವೀಂದ್ರನಾಥ್ ಅವರೊಂದಿಗೆ ಚರ್ಚಿಸಿದ್ದೇನೆ. ನಮ್ಮ ಕಲಾವಿದರು, ತಂತ್ರಜ್ಞರು ಮತ್ತು ಕಾರ್ಮಿಕರ ಅಧಿಕೃತ ಬ್ಯಾಂಕ್ ವಿವರ ತಲುಪಿದ ತಕ್ಷಣವೇ ಇದು ಕಾರ್ಯರೂಪಕ್ಕೆ ಬರಲಿದೆ' ಎಂದು ಹೇಳಿದ್ದಾರೆ.

'ಈ ಸಣ್ಣ ಸಹಾಯ ಈಗ ಎದುರಾಗಿರುವ ಎಲ್ಲ ಕಷ್ಟಗಳಿಗೂ ಪರಿಹಾರ ಎಂಬುವುದು ನನ್ನ ಭಾವನೆಯಲ್ಲ. ಬದಲಿಗೆ ಶಕ್ತಿ ಇರುವ ಹೃದಯವಂತರು ತಮ್ಮ ತಮ್ಮ ಕ್ಷೇತ್ರಗಳಲ್ಲಿ ಸಂಕಷ್ಟದಲ್ಲಿರುವ ಜನಸಮುದಾಯದ ಜೊತೆ ಹೆಗಲಿಗೆ ಹೆಗಲು ಕೊಟ್ಟು ನಿಂತು ಸಹಾಯ ಮಾಡಿದರೆ, ನಾನು ಮಾಡಿದ ಪ್ರಯತ್ನಕ್ಕೂ ಸಾರ್ಥಕತೆ ಬರುತ್ತದೆ ಎನ್ನುವುದು ನನ್ನ ಆಶಯ' ಎಂದು ತಮ್ಮ ಇನ್‌ಸ್ಟಾಗ್ರಾಂ ಪೋಸ್ಟ್‌ನಲ್ಲಿ ಉಲ್ಲೇಖಿಸಿದ್ದಾರೆ.

ಈಗಾಗಲೇ ನಟರಾದ ಉಪೇಂದ್ರ, ಸುದೀಪ್, ಸಾಧುಕೋಕಿಲ ಮುಂತಾದವರು ಸಂಕಷ್ಟದಲ್ಲಿರುವ ಚಿತ್ರರಂಗದ ಕಲಾವಿದರು, ತಂತ್ರಜ್ಞರು ಹಾಗೂ ಕಾರ್ಮಿಕರಿಗೆ ಆರ್ಥಿಕ ನೆರವು ಹಾಗೂ ದಿನಸಿ ಕಿಟ್‌ಗಳನ್ನು ವಿತರಿಸಿದ್ದಾರೆ.

ಅನಾಥ ಮಕ್ಕಳಿಗೆ ಉಚಿತ ಶಿಕ್ಷಣ, ವಸತಿ

ಭಾಲ್ಕಿ (ಬೀದರ್): ಕೋವಿಡ್‌ನಿಂದಾಗಿ ತಂದೆ–ತಾಯಿ ಕಳೆದುಕೊಂಡ ಅನಾಥ ಮಕ್ಕಳಿಗೆ ತಾಲ್ಲೂಕಿನ ಚಳಕಾಪೂರ ಗ್ರಾಮದ ಬ್ರಹ್ಮ ವಿದ್ಯಾಶ್ರಮ ಶ್ರೀಸಿದ್ಧಾರೂಢ ಮಠದಲ್ಲಿ ಉಚಿತ ಶಿಕ್ಷಣ ಮತ್ತು ವಸತಿಸೌಲಭ್ಯ ನೀಡಲಿದೆ ಎಂದು ಚಿದಂಬರ ಶಿಕ್ಷಣ ಸಂಸ್ಥೆ ಅಧ್ಯಕ್ಷ ಡಾ.ಶಿವಕುಮಾರ ಸ್ವಾಮೀಜಿ ತಿಳಿಸಿದ್ದಾರೆ.

ಮಾಹಿತಿಗೆ ಶಂಕರಾನಂದ ಸ್ವಾಮೀಜಿ ಮೊ. 9535839913, 9019536879 ಅವರನ್ನು ಸಂಪರ್ಕಿಸಬಹುದು.



ಆಪ್ಟಿಕಲ್ ಫೈಬರ್ ಮಿಂಚಿನ ವೇಗದ ಸಂವಹನಕ್ಕೆ

ಶಶಾಂಕ ಪರಾಶರ

ಸುಮಾರು ಒಂದು ವರ್ಷ ಕಳೆದ ನಂತರವೂ ಜಗತ್ತಿನಾದ್ಯಂತ ಸಾಕಷ್ಟು ಉದ್ಯೋಗಿಗಳು ಮನೆಯಿಂದಲೇ ಕೆಲಸದ ನಿರ್ವಹಣೆಯನ್ನು ಮುಂದುವರೆಸುತ್ತಿರುವುದು ಹೊಸ ವಿಷಯವಾಗಿ ಉಳಿದಿಲ್ಲ. ಇದಕ್ಕೆ ಕಾರಣ ಎಲ್ಲರಿಗೂ ತಿಳಿದಿರುವುದೇ - ಕೊರೊನಾ ಸೋಂಕು ಎಲ್ಲ ದೇಶಗಳನ್ನೂ ಬಾಧಿಸುತ್ತಿರುವುದು. ಈ ಕೊರೊನಾದ ಪ್ರಭಾವದಿಂದ ಜನರು ಮನೆಯಿಂದಲೇ ಕೆಲಸ ಮಾಡುವಂಥ ಸನ್ನಿವೇಶ ಪ್ರಾರಂಭವಾದಾಗ, ಇಂಟರ್ನೆಟ್ ಸಂಸ್ಥೆಗಳು ಒಂದು ಜಾಹೀರಾತನ್ನು ಮನೆಮನೆಗೂ ತಲುಪಿಸಿದ್ದನ್ನು ನೀವು ಗಮನಿಸಿರಬಹುದು. ಆ ಜಾಹೀರಾತಿನ ಸಾರಾಂಶ ಇಷ್ಟು: ಮನೆಯಿಂದಲೇ ಕೆಲಸ ಮಾಡುವವರಿಗೆ ನಮ್ಮ ಸಂಸ್ಥೆ 'ಫೈಬರ್' ನ ಮೂಲಕ ವೇಗದ ಇಂಟರ್ನೆಟನ್ನು ನೀಡುತ್ತದೆ.

ಇದನ್ನು ನೋಡಿದವರಲ್ಲಿ ಒಂದು ಪ್ರಶ್ನೆ ಎದ್ದಿರಬಹುದು, 'ಈ ಫೈಬರ್ ತಂತ್ರಜ್ಞಾನ ಎಂದರೆ ಏನು' ಎಂದು. ಈ ಫೈಬರ್‌ನ ವೈಜ್ಞಾನಿಕ ಹೆಸರು ಆಪ್ಟಿಕಲ್ ಫೈಬರ್ ಕೇಬಲ್. ಹಾಗೆಂದರೇನು ಎಂಬುದನ್ನು ನೋಡೋಣ.

ಅಂತರ್ಜಾಲ ಎಂಬುವುದನ್ನು ಸುಲಭವಾಗಿ ವಿವರಿಸಬೇಕಾದರೆ ಅದನ್ನು ಜಗತ್ತಿನಾದ್ಯಂತ ಇರುವ ಕಂಪ್ಯೂಟರ್‌ಗಳನ್ನು ಪರಸ್ಪರ ಬೆಸೆಯುವ ಜಾಲ ಎಂದು ಹೇಳಬಹುದು. ಹೀಗೆ ಜಗತ್ತಿನಾದ್ಯಂತ ಇರುವ ಕಂಪ್ಯೂಟರ್‌ಗಳನ್ನು ಬೆಸೆಯುವುದು ಈ ಆಪ್ಟಿಕಲ್ ಕೇಬಲ್‌ಗಳು. ಇವು ಮನುಷ್ಯನ ಕೂದಲಿನಷ್ಟು ದಪ್ಪವಿರುವ ಶುದ್ಧವಾದ ಗಾಜಿನ ಕೊಳವೆಗಳು. ಸುಮಾರು ಆಪ್ಟಿಕಲ್ ಫೈಬರ್‌ಗಳ ಒಂದು ಗುಚ್ಛವನ್ನು ಒಂದು ಫೈಬರ್ ಕೇಬಲ್‌ನ ಒಳಗೆ ಸೇರಿಸಿರುತ್ತಾರೆ.

ಈ ಆಪ್ಟಿಕಲ್ ಫೈಬರ್‌ನ ಒಳಗೆ ಬೆಳಕಿನ ಕಿರಣಗಳು ಸಾಗುವುದು ಸಂಪೂರ್ಣ ಆಂತರಿಕ ಪ್ರತಿಫಲನ (Total Internal Reflection) ಎನ್ನುವ ಒಂದು ಭೌತಶಾಸ್ತ್ರದ ನಿಯಮದ ಅನುಸಾರವಾಗಿ. ಒಂದು ಗಾಜಿನ ಲೋಟದಲ್ಲಿ ನೀರನ್ನು ತುಂಬಿ ಅದರೊಳಗೆ ಒಂದು ಕಡ್ಡಿಯನ್ನು ಮುಳುಗಿಸಿದರೆ ಅದನ್ನು ನಾವು ನೋಡಿದಾಗ ಆ ಕಡ್ಡಿ ಡೊಂಕಾಗಿ ಕಾಣುವುದನ್ನು ನಾವೆಲ್ಲರೂ ಗಮನಿಸಿದ್ದೇವೆ ಅಲ್ಲವೇ? ಇದಕ್ಕೆ ಕಾರಣ ಎರಡು ವಿಭಿನ್ನ ಮಾಧ್ಯಮಗಳಾದ ನೀರು ಮತ್ತು ಗಾಳಿ ಸಂಧಿಸುವ ಸ್ಥಳದಿಂದ ಬೆಳಕು ಹಾದು ಹೋದಾಗ ಅದು ಬಾಗಿದಂತೆ ಕಾಣುವುದು. ಹೀಗೆ ಆಪ್ಟಿಕಲ್ ಫೈಬರ್‌ನ ಒಳಗೆ ಬೆಳಕಿನ ಕಿರಣಗಳು ಪ್ರವೇಶಿಸಿದಾಗ ಅವೂ ಬಾಗುತ್ತವೆ. ಈ ಬಾಗುವಿಕೆ ಎಷ್ಟು ತೀವ್ರವಾಗಿರುತ್ತದೆ ಎಂದರೆ, ಅದರೊಳಗೆ ನುಗ್ಗುವ ಬೆಳಕು ಸಂಪೂರ್ಣವಾಗಿ ಪ್ರತಿಫಲನಗೊಳ್ಳುತ್ತದೆ. ಇದೇ ಸಂಪೂರ್ಣ ಆಂತರಿಕ ಪ್ರತಿಫಲನ. ಹೀಗೆ ಪ್ರತಿಫಲನಗೊಳ್ಳುತ್ತ ಬೆಳಕು ಆಪ್ಟಿಕಲ್ ಫೈಬರ್‌ನಲ್ಲಿ ಸಾಗಿ ಇನ್ನೊಂದು ಬದಿಯಲ್ಲಿ ಹೊರಬರುತ್ತದೆ.

ತಾಮ್ರದ ತಂತಿಗಳ ಮೂಲಕ ಸಾಗುವ ಸಂದೇಶಗಳು ಹೊರಗಿನ ವಿದ್ಯುತ್ಕಾಂತೀಯ ಅಲೆಗಳ ಕಾರಣದಿಂದ ಹಾಗೂ ಇನ್ನೂ ಹಲವು ಕಾರಣಗಳಿಂದ ಆಪ್ಟಿಕಲ್ ಫೈಬರ್‌ನಲ್ಲಿ ಚಲಿಸುವಷ್ಟು ವೇಗವಾಗಿ ಚಲಿಸಲು ಸಾಧ್ಯವಾಗುವುದಿಲ್ಲ. ಮಾತ್ರವಲ್ಲ, ನೂರಾರು ಮೈಲಿಗಳ ಆಚೆ ಇರುವ ಬೇರೆ ದೇಶಗಳನ್ನು ಸಂಪರ್ಕಿಸಲು ಆಪ್ಟಿಕಲ್ ಫೈಬರ್ ಕೇಬಲ್‌ಗಳನ್ನು ಸಮುದ್ರದ ಅಡಿಯಲ್ಲಿಯೂ ಹುದುಗಿಸಿ ಸಂಪರ್ಕವನ್ನು ಸಾಧಿಸಬಹುದು. ಈ ಎಲ್ಲ ಕಾರಣಗಳಿಂದ ಆಪ್ಟಿಕಲ್ ಫೈಬರ್ ಗ್ರಾಹಕರ ಮತ್ತು ತಂತ್ರಜ್ಞರ ಅಚ್ಚುಮೆಚ್ಚಿನ ಸಂಪರ್ಕಸಾಧನವಾಗಿದೆ ❖

ಸ್ಯಾಮ್‌ಸಂಗ್ ಗ್ಯಾಲಕ್ಸಿ ಎಂ-42

ಭರ್ಜರಿ ಬ್ಯಾಟರಿಯ 5ಜಿ ಫೋನ್

ಅವಿನಾಶ್ ಬಿ.

ಸ್ಯಾಮ್‌ಸಂಗ್ ಇತ್ತೀಚೆಗೆ ಮಧ್ಯಮ ಬಜೆಟ್‌ನಲ್ಲಿ ಎಂ ಸರಣಿಯ ಗ್ಯಾಲಕ್ಸಿ ಎಂ-42 ಸ್ಮಾರ್ಟ್‌ಫೋನ್ ಸಾಧನವನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದೆ. ಪವರ್-ಗೇಮ್ ಬಳಕೆದಾರರನ್ನೇ ಗುರಿಯಾಗಿರಿಸಿಕೊಂಡು ಸಿದ್ಧವಾಗಿರುವ ಈ ಫೋನ್ ಹೇಗಿದೆ?

> ದೊಡ್ಡ ಸ್ಕ್ರೀನ್, ಆದರೆ ಸ್ಲಿಮ್ ಆಗಿರಬೇಕು; ಹೆಚ್ಚು ಬ್ಯಾಟರಿ ಇರಬೇಕು, ಆದರೆ ತೂಕ ಜಾಸ್ತಿ ಇರಬಾರದು; 5ಜಿ ತಂತ್ರಜ್ಞಾನಕ್ಕೆ ಸಿದ್ಧವಾಗಿರಬೇಕು. ಈ ವೈಶಿಷ್ಟ್ಯಗಳನ್ನು ಬಯಸುವವರಿಗೆ ಸ್ಯಾಮ್‌ಸಂಗ್ ಗ್ಯಾಲಕ್ಸಿ ಎಂ042 ಇಷ್ಟವಾಗಬಹುದು.

ವಿನ್ಯಾಸ

ಫೋನ್ ಮೊದಲ ನೋಟಕ್ಕೇ ಗಮನ ಸೆಳೆಯುವುದು ಅದರ ಗಾತ್ರ. 5000 mAh ಬ್ಯಾಟರಿ ಇದ್ದರೂ ಸ್ಲಿಮ್ ಆಗಿ ಸ್ಟೈಲಿಶ್ ಆಗಿದೆ. ತೂಕ ಕಡಿಮೆ ಮಾಡುವ ನಿಟ್ಟಿನಲ್ಲಿ ಪ್ಲಾಸ್ಟಿಕ್ ಬಾಡಿ ಬಳಸಲಾಗಿದೆ. ಎದುರುಭಾಗದಲ್ಲಿ 6.6 ಇಂಚಿನ HD+ 720x1600 ಪಿಕ್ಸೆಲ್ ರೆಸೊಲ್ಯುಶನ್ ಡಿಸ್‌ಪ್ಲೇ ಇದೆ. ಯುಎಸ್‌ಬಿ ಟೈಪ್-ಸಿ ಚಾರ್ಜಿಂಗ್ ಪೋರ್ಟ್ ಇದ್ದು, 1ಟಿಬಿವರೆಗೂ ಮೈಕ್ರೋ ಎಸ್‌ಡಿ ಕಾರ್ಡ್ ಮೂಲಕ ಸ್ಟೋರೇಜ್ ವಿಸ್ತರಿಸಬಹುದು. ತೂಕ 193 ಗ್ರಾಂ.

ಕಾರ್ನಿಂಗ್ ಗೊರಿಲ್ಲಾ ಗ್ಲಾಸ್ ಇರುವುದರಿಂದ, ಗೀರು ಆಗಲಾರದು. AMOLED ಡಿಸ್‌ಪ್ಲೇ ಮೂಲಕ ಬಣ್ಣಗಳು ಅತ್ಯಂತ ಸುಂದರವಾಗಿ, ಪ್ರಖರವಾಗಿ ಕಾಣಿಸುತ್ತವೆ. ಹೈಡೆಫಿನಿಶನ್ (ಹೆಚ್‌ಡಿ) ಗುಣಮಟ್ಟದ ವಿಡಿಯೊಗಳು ತುಂಬ ಚೆನ್ನಾಗಿ ಮೂಡಿಬರುತ್ತವೆ. ಎಂ ಸರಣಿಯಲ್ಲೇ ಮೊದಲ ಬಾರಿಗೆ ಡಿಸ್‌ಪ್ಲೇ (ಸ್ಕ್ರೀನ್) ಮೇಲೆಯೇ ಫಿಂಗರ್‌ಪ್ರಿಂಟ್ ಸೆನ್ಸರ್ ಅಳವಡಿಸಲಾಗಿದ್ದು, ಲಾಗಿನ್ ಸುರಕ್ಷಿತವಾಗಿರಿಸುತ್ತದೆ. ಆಂಡ್ರಾಯ್ಡ್ 11 ಆಧಾರಿತ ಒನ್ ಯುಐ ಕಾರ್ಯಾಚರಣ ವ್ಯವಸ್ಥೆಯಿದೆ.

ಎಡ್ಜ್ ಪ್ಯಾನೆಲ್ಸ್ ವ್ಯವಸ್ಥೆಯಿದ್ದು, ಸ್ಕ್ರೀನ್‌ನ ಎಡಭಾಗದಲ್ಲಿ ನಮಗೆ ಬೇಕಾದ ಫಲಕಪಟ್ಟಿಯನ್ನು ಡಿಸ್‌ಪ್ಲೇಯಲ್ಲೇ ಪ್ರದರ್ಶಿಸಬಹುದು.



ಸ್ಯಾಮ್‌ಸಂಗ್ ಎಂ42ನಿಂದ ತೆಗೆದ ಚಿತ್ರ. ಬಣ್ಣಗಳು ಸುಂದರವಾಗಿ ಮೂಡಿವೆ.

ಕ್ಯಾಮೆರಾ

48 ಮೆಗಾಪಿಕ್ಸೆಲ್‌ನ ಪ್ರಧಾನ ಸೆನ್ಸರ್ ಜೊತೆಗೆ ನಾಲ್ಕು ಲೆನ್ಸ್‌ಗಳ ಕ್ಯಾಮೆರಾ ಸೆಟಪ್ ಹಿಂಭಾಗದಲ್ಲಿದೆ. 8MP ಅಲ್ಟ್ರಾ-ವೈಡ್ ಆ್ಯಂಗಲ್ ಲೆನ್ಸ್, 5MP ಡೆಪ್ತ್ ಹಾಗೂ 5MP ಮ್ಯಾಕ್ರೋ ಸೆನ್ಸರ್‌ಗಳಿವೆ. 20 ಮೆಗಾಪಿಕ್ಸೆಲ್‌ನ ಸೆಲ್ಫೀ ಕ್ಯಾಮೆರಾವಿದ್ದು, ಉತ್ತಮ ಫೋಟೊಗಳನ್ನು ಒದಗಿಸುತ್ತದೆ. ಚಿತ್ರಗಳು ತೀರಾ ಸ್ಪಷ್ಟವಾಗಿ, ಬಣ್ಣಗಳು ಕೂಡ ನಿಖರವಾಗಿರುವಷ್ಟರ ಮಟ್ಟಿಗೆ ಸ್ಕ್ರೀನ್‌ನಲ್ಲಿ ಕಾಣಿಸಿದವು. ಕೈ ತೋರಿಸಿದರೆ ಸೆಲ್ಫೀ ಕ್ಲಿಕ್ ಆಗುವ ವ್ಯವಸ್ಥೆ ಇದರಲ್ಲಿದೆ.

ಕಾರ್ಯನಿರ್ವಹಣೆ ಹೇಗಿದೆ?

6GB RAM ಹಾಗೂ ಒಕ್ಟಾ ಕೋರ್ ಕ್ವಾಲ್ಕಂ ಸ್ನ್ಯಾಪ್‌ಡ್ರ್ಯಾಗನ್ 750ಜಿ ಪ್ರೊಸೆಸರ್, 128ಜಿಬಿ ಮೆಮೊರಿ - ಈ ಸ್ಪೆಸಿಫಿಕೇಶನ್ ಜೊತೆ ಸ್ಯಾಮ್‌ಸಂಗ್ ಗ್ಯಾಲಕ್ಸಿ ಎಂ042ನ ಕಾರ್ಯನಿರ್ವಹಣೆ ವೇಗವಾಗಿದೆ. ವಿಡಿಯೊ ಪ್ಲೇ ಆಗುವಾಗ ಮತ್ತು ವಿಶೇಷವಾಗಿ ಹೆಚ್ಚು ತೂಕದ (ಗ್ರಾಫಿಕ್ಸ್ ಇರುವ) ಗೇಮ್ಸ್ ಆಡುವಲ್ಲಿಯೂ ಯಾವುದೇ ವಿಳಂಬ (ಲ್ಯಾಗ್) ಆದ ಸಂದರ್ಭ ಎದುರಾಗಿಲ್ಲ. ಖಾಸಗಿತನದ ಸುರಕ್ಷತೆಗಾಗಿ ಅಂತರ್-ನಿರ್ಮಿತ ಆ್ಯಪ್ ಇದೆ. 5000 mAh ಬ್ಯಾಟರಿ ಜೊತೆಗೆ 15W ವೇಗದ ಚಾರ್ಜಿಂಗ್ ವ್ಯವಸ್ಥೆಯಿದೆ. 0ಯಿಂದ 100%ವರೆಗೆ ಪೂರ್ತಿಯಾಗಿ ಚಾರ್ಜ್ ಆಗಲು ಸುಮಾರು 2 ಗಂಟೆ ಬೇಕಾಗುತ್ತದೆ.

ಒಟ್ಟಾರೆ ಹೇಗಿದೆ?

ದೊಡ್ಡ ಸ್ಕ್ರೀನ್, ಆದರೆ ಸ್ಲಿಮ್ ಆಗಿರಬೇಕು; ಹೆಚ್ಚು ಬ್ಯಾಟರಿ ಇರಬೇಕು. ಆದರೆ ತೂಕ ಜಾಸ್ತಿ ಇರಬಾರದು; 5ಜಿ ತಂತ್ರಜ್ಞಾನಕ್ಕೆ ಸಿದ್ಧವಾಗಿರಬೇಕು. ಈ ಸ್ಪೆಸಿಫಿಕೇಶನ್‌ಗಳನ್ನು ಬಯಸುವವರಿಗೆ ಸೂಕ್ತವಾಗಿದೆ ಈ ಫೋನ್. ಬೆಲೆ. ರೂ. 21,999. ❖

ಕೋವಿಡ್-19 ಪರೀಕ್ಷೆಯ ಕಿಟ್

ಯಾರಿಗೆ? ಹೇಗೆ? ಏನು?

ಡಾ. ಕಿರಣ್ ವಿ. ಎಸ್.

ಪುಣೆಯ ಖಾಸಗಿ ಸಂಸ್ಥೆಯೊಂದು ಮನೆಯಲ್ಲೇ ಕೋವಿಡ್-19 ಪತ್ತೆ ಮಾಡಬಹುದಾದ ಕಿಟ್ ತಯಾರಿಸಿದೆ. ಇದೇನೂ ಹೊಸ ತಂತ್ರಜ್ಞಾನವಲ್ಲ. ಗರ್ಭಧಾರಣೆಯನ್ನು ಮನೆಯಲ್ಲೇ ಅರಿಯಬಹುದಾದ ಕಿಟ್ ಬಹಳ ಕಾಲದಿಂದ ಬಳಕೆಯಲ್ಲಿದೆ. ಆಗಾಗ ಪ್ರಯೋಗಾಲಯಕ್ಕೆ ಹೋಗುವ ಕಷ್ಟದ ನಿವಾರಣೆಗಾಗಿ ಕಿಟ್ ಬಳಸಿ ಮನೆಯಲ್ಲೇ ಕೋವಿಡ್-19 ಪತ್ತೆ ಮಾಡುವುದು ಬಹಳ ಅನುಕೂಲ.

ಯಾರಿಗೆ?: ಕೋವಿಡ್-19 ಕಾಯಿಲೆಯ ರೋಗಲಕ್ಷಣಗಳು ಇರುವವರು ಈ ಕಿಟ್ ಬಳಸಿ ಮನೆಯಲ್ಲೇ ಪರೀಕ್ಷೆ ಮಾಡಿಕೊಳ್ಳಬಹುದು. ಕೋವಿಡ್-19 ಕಾಯಿಲೆ ಬಂದಿರುವ ರೋಗಿಯ ಸಂಪರ್ಕದಲ್ಲಿ ಇರುವ ವ್ಯಕ್ತಿಗಳೂ ಕಿಟ್ ಮೂಲಕ ತಮಗೂ ಕಾಯಿಲೆ ಬಂದಿದೆಯೇ ಎಂಬುದನ್ನು ಪತ್ತೆ ಮಾಡಬಹುದು. ಕಾಯಿಲೆಯ ಯಾವುದೇ ಸೂಚನೆ ಇಲ್ಲದವರು ವೃಥಾ ಕುತೂಹಲಕ್ಕಾಗಿ ಈ ಕಿಟ್ ಬಳಸಬಾರದು.

ಹೇಗೆ?: ಕಿಟ್ ಬಳಸುವ ಮುನ್ನ ಅದಕ್ಕೆ ಸಂಬಂಧಿಸಿದ app ಅನ್ನು ಸ್ಮಾರ್ಟ್-ಫೋನಿಗೆ ಇಳಿಸಿಕೊಂಡು, ಪರೀಕ್ಷೆ ಮಾಡಿಸಿಕೊಳ್ಳುವವರ ವಿವರಗಳನ್ನು ನೋಂದಾಯಿಸಬೇಕು. App ವಿವರಗಳು ಕಿಟ್ ಜೊತೆಯಲ್ಲೇ ಇರುತ್ತವೆ. ಕೈಗಳನ್ನು ಸಾಬೂನಿನಿಂದ ಚೆನ್ನಾಗಿ ತೊಳೆದುಕೊಂಡು ಕಿಟ್ ತೆರೆಯಬೇಕು. ಕಿಟ್ ಅನ್ನು ಬಳಸುವ ಸಚಿತ್ರ ವಿವರಗಳು ಅದರ ಜೊತೆಯಲ್ಲಿರುತ್ತವೆ. ಕಿಟ್ ಒಳಗೆ, ಒಂದು ತುದಿಯಲ್ಲಿ ಹತ್ತಿ ಸುತ್ತಿದ ಉದ್ದನೆಯ ಕಡ್ಡಿ, ವಿಶೇಷ ದ್ರಾವಣದ ಸಣ್ಣ ಶೀಷೆ, ಪರೀಕ್ಷೆಯ ಪಟ್ಟಿ ಮತ್ತು ಪರೀಕ್ಷೆಯ ನಂತರ ಇವನ್ನು ಸುರಕ್ಷಿತವಾಗಿ ಸೇರಿಸಿ, ತ್ಯಾಜ್ಯಕ್ಕೆ ನೀಡುವ ಚೀಲ ಇರುತ್ತವೆ.

ಒಂದು ತುದಿಯಲ್ಲಿ ಹತ್ತಿ ಸುತ್ತಿದ ಉದ್ದನೆಯ ಕಡ್ಡಿಯನ್ನು ಮೊದಲು ಜೋಪಾನವಾಗಿ ತೆಗೆದುಕೊಳ್ಳಬೇಕು. ಯಾವ ಕಾರಣಕ್ಕೂ ಹತ್ತಿಯನ್ನು ಕೈಯಿಂದ ಮುಟ್ಟಬಾರದು. ಹತ್ತಿಯ ತುದಿಯನ್ನು ನಾಜೂಕಾಗಿ ಮೂಗಿನ ಒಂದು ಹೊಳ್ಳೆಯೊಳಗೆ 1.5-2 ಇಂಚು ಆಳಕ್ಕೆ ಸ್ವಲ್ಪ ತಡೆ ಭಾಸವಾಗುವವರೆಗೆ ಏರಿಸಿ, ಕಡ್ಡಿಯನ್ನು ಐದು ಬಾರಿ ವರ್ತುಲವಾಗಿ ತಿರುಗಿಸಬೇಕು. ಕಡ್ಡಿಯನ್ನು ನಾಜೂಕಾಗಿ ಹೊರತೆರೆದು, ಮತ್ತೊಂದು ಹೊಳ್ಳೆಯಲ್ಲಿ ಏರಿಸಿ ಇಡೀ ಪ್ರಕ್ರಿಯೆಯನ್ನು ಮಾಡಬೇಕು. ಹತ್ತಿಯ ಭಾಗವನ್ನು ಕೈಯಿಂದ ಮುಟ್ಟದೆ, ಅದನ್ನು ವಿಶೇಷ ದ್ರಾವಣದ ಸಣ್ಣ ಶೀಷೆಯಲ್ಲಿ ಸೇರಿಸಿ, ಕಡ್ಡಿಯನ್ನು ಹತ್ತಾರು ಬಾರಿ ಸುರಳಿಯಂತೆ ತಿರುವಬೇಕು. ಪರೀಕ್ಷೆ ಮಾಡಿದವರ ಮೂಗಿನಲ್ಲಿ ಇರಬಹುದಾದ ಕೋವಿಡ್-19 ವೈರಸ್ ಈ ದ್ರಾವಣದಲ್ಲಿ ಸೇರಿರುತ್ತದೆ. ಈಗ ದ್ರಾವಣವನ್ನು ಪರೀಕ್ಷೆ-ಪಟ್ಟಿಯಲ್ಲಿ ಸೂಚಿತವಾಗಿರುವ ಸ್ಥಾನದಲ್ಲಿ ಹನಿಹನಿಯಾಗಿ ಹಾಕಬೇಕು. ಹದಿನೈದು ನಿಮಿಷಗಳ ನಂತರ app ಗಂಟೆ ಬಾರಿಸುತ್ತದೆ. ಆಗ ಫಲಿತಾಂಶ ನೋಡಬಹುದು. ಪರೀಕ್ಷೆ-ಪಟ್ಟಿಯ ಫೋಟೋ ತೆಗೆದು app ನಲ್ಲಿ ಸೇರಿಸಬೇಕು. ಪರೀಕ್ಷೆಯ ಫಲಿತಾಂಶವನ್ನು app ತನ್ನಲ್ಲಿ ಸೇರಿಸಿಕೊಂಡು ಗೌಪ್ಯವಾಗಿ ಇಡುತ್ತದೆ. ಪರೀಕ್ಷೆ ಮುಗಿದ ನಂತರ ಕಿಟ್‌ನ ಎಲ್ಲಾ ವಸ್ತುಗಳನ್ನೂ ಚೀಲದಲ್ಲಿ ಇಟ್ಟು, ತ್ಯಾಜ್ಯಕ್ಕೆ ಸೇರಿಸಿ, ಮತ್ತೊಮ್ಮೆ ಚೆನ್ನಾಗಿ ಕೈತೊಳೆಯಬೇಕು.

ಏನು?: ಕೋವಿಡ್-19 ವೈರಸ್ ಶ್ವಾಸಮಾರ್ಗದ ಜೀವಕೋಶಗಳನ್ನು ಆಕ್ರಮಿಸುತ್ತದೆ. ವೈರಸ್ಸಿನ ಮೇಲ್ಮೈ ಪ್ರೊಟೀನ್ ಪ್ರತಿಜನಕಗಳನ್ನು ಪತ್ತೆ ಮಾಡಿದರೆ, ಅದರ ಇರುವಿಕೆ ತಿಳಿಯುತ್ತದೆ. ಕೋವಿಡ್-19 ಪರೀಕ್ಷೆಯ ಕಿಟ್ ಇಂತಹ ಪ್ರತಿಜನಕಗಳನ್ನು ಸರಳವಾಗಿ, ಶೀಘ್ರವಾಗಿ ಪತ್ತೆ ಮಾಡುತ್ತದೆ. ನೈಟ್ರೊಸೆಲ್ಯುಲೋಸ್ ಪದರದ ಮೇಲೆ ಕೋವಿಡ್-19 ಪ್ರತಿಕಾಯಗಳನ್ನು ಸಮ್ಮಿಶ್ರಗೊಳಿಸಿ ಕಿಟ್‌ನ ಪರೀಕ್ಷೆ-ಪಟ್ಟಿಯಲ್ಲಿ ಕೂರಿಸಲಾಗುತ್ತದೆ. ಕೋವಿಡ್-19 ಮಿಶ್ರವಾದರೆ ಪದರದಲ್ಲಿನ ಪ್ರತಿಕಾಯಗಳು ವೈರಸ್ಸಿನ ಪ್ರೊಟೀನ್ ಪ್ರತಿಜನಕಗಳ ಜೊತೆ ಕೂಡಿಕೊಂಡು ಸಂಯುಕ್ತಗಳಾಗುತ್ತವೆ. ಈ ಸಂಯುಕ್ತಗಳ ಜೊತೆ ಬೆಸೆದುಕೊಳ್ಳುವ ಚಿನ್ನದ ನ್ಯಾನೋಕಣಗಳನ್ನು T-ಗುರುತಿನ ಗೆರೆಗೆ ಸೇರಿಸಲಾಗಿದೆ. ಅದರ ಜೊತೆಯಲ್ಲಿ 'ಕಿಟ್ ಸರಿಯಾಗಿ ಕೆಲಸ ಮಾಡುತ್ತಿದೆ' ಎಂದು ಸೂಚಿಸುವ C-ಹೆಸರಿನ ಮತ್ತೊಂದು ಗೆರೆ ಇರುತ್ತದೆ. ಪರೀಕ್ಷೆ ಮಾಡಿದವರ ಮೂಗಿನಲ್ಲಿ ಕೋವಿಡ್-19 ವೈರಸ್ ಇದ್ದರೆ, C ಮತ್ತು T ಎರಡೂ ಗೆರೆಗಳೂ ಕಾಣುತ್ತವೆ. ಅದು ಪಾಸಿಟಿವ್ ಫಲಿತಾಂಶ – ಕಾಯಿಲೆ ಪಕ್ಕಾ. C ಗೆರೆ ಮಾತ್ರ ಕಂಡು T ಗೆರೆ ಕಾಣದೇ ಇದ್ದರೆ ನೆಗಟಿವ್ ಫಲಿತಾಂಶ. ಅಂತಹವರಿಗೆ ರೋಗಲಕ್ಷಣಗಳು ಇದ್ದರೆ RT-PCR ಪರೀಕ್ಷೆ ಮಾಡಿಸಬೇಕು. T ಗೆರೆ ಮಾತ್ರ ಕಂಡು, C ಗೆರೆ ಕಾಣದೇ ಇದ್ದರೆ ಕಿಟ್ ಸಮರ್ಪಕವಲ್ಲ; ಮತ್ತೊಂದು ಕಿಟ್ ಬಳಸಬೇಕು.



ಮನೆಯಲ್ಲೇ ಪರೀಕ್ಷಿಸುವ ಅನುಕೂಲ ಇದರ ಅತಿ ದೊಡ್ಡ ಲಾಭ. ಇದು ಕೋವಿಡ್-19 ವೈರಸ್ ಇರುವಿಕೆಯನ್ನು ಮಾತ್ರ ತಿಳಿಸುತ್ತದೆಯೇ ಹೊರತು, ಕಾಯಿಲೆಯ ತೀವ್ರತೆಯನ್ನಲ್ಲ. ಹೀಗಾಗಿ, ಪಾಸಿಟಿವ್ ಫಲಿತಾಂಶ ಬಂದರೆ ಕೂಡಲೇ ವೈದ್ಯರನ್ನು ಸಂಪರ್ಕಿಸಬೇಕು. ಕಾಯಿಲೆ ಇದ್ದರೂ ನಾನಾ ಕಾರಣಗಳಿಂದ ಫಲಿತಾಂಶ ನೆಗಟಿವ್ ಬರುವ ಸಾಧ್ಯತೆಗಳಿವೆ. ಹೀಗಾಗಿ, ರೋಗಲಕ್ಷಣಗಳು ಇದ್ದವರು ನೆಗಟಿವ್ ಬಂದರೆ ಸಂಭ್ರಮಿಸಬಾರದು.

ಕೋವಿಡ್-19 ವಿರುದ್ಧದ ಸಂಘಟಿತ ಹೋರಾಟದಲ್ಲಿ ಇಂತಹ ಸರಳ ತಂತ್ರಜ್ಞಾನಗಳ ಪಾತ್ರ ಮಹತ್ವದ್ದು. ಸೂಕ್ತವಾಗಿ ಬಳಸಿದರೆ ಇಂತಹ ಕಿಟ್‌ಗಳು ಕಾಯಿಲೆಯ ನಿರ್ವಹಣೆಯಲ್ಲಿ ಪ್ರಮುಖ ಪಾತ್ರವನ್ನು ವಹಿಸಲು ಸಾಧ್ಯ.

(ಲೇಖಕರು ವೈದ್ಯ)

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ದ್ರಾವಣಗಳು

ರಸಾಯನ ಶಾಸ್ತ್ರ

ಸಾಮಾನ್ಯ ಜೀವನದಲ್ಲಿ ಶುದ್ಧ ವಸ್ತುಗಳನ್ನು ನಾವು ವಿರಳವಾಗಿ ಕಾಣುತ್ತೇವೆ. ಇವುಗಳಲ್ಲಿ ಬಹಳಷ್ಟು ಎರಡು ಅಥವಾ ಹೆಚ್ಚು ಶುದ್ಧ ವಸ್ತುಗಳನ್ನು ಒಳಗೊಂಡಿರುವ ಮಿಶ್ರಣಗಳಾಗಿರುತ್ತವೆ. ಜೀವನದಲ್ಲಿ ಅವುಗಳ ಬಳಕೆ ಮತ್ತು ಪ್ರಾಮುಖ್ಯತೆ, ಅವುಗಳಲ್ಲಿನ ಸಂಯೋಜನೆಯನ್ನು ಅವಲಂಬಿಸಿರುತ್ತವೆ.

ಉದಾಹರಣೆಗಳು: ಹಿತ್ತಾಳೆಯ (ತಾಮ್ರ ಮತ್ತು ಸತುವಿನ ಮಿಶ್ರಣ) ಗುಣಲಕ್ಷಣಗಳು, ಜರ್ಮನ್ ಬೆಳ್ಳಿ (ತಾಮ್ರ, ಸತು ಮತ್ತು ನಿಕ್ಕಲ್ ಮಿಶ್ರಣ) ಅಥವಾ ಕಂಚು (ತಾಮ್ರ ಮತ್ತು ತವರಗಳ ಮಿಶ್ರಣ) ಗಳಿಗಿಂತ ಸಾಕಷ್ಟು ಭಿನ್ನವಾಗಿರುತ್ತವೆ.

ದ್ರಾವಣಗಳ ವಿಧಗಳು

ದ್ರಾವಣಗಳು ಎರಡು ಅಥವಾ ಎರಡಕ್ಕಿಂತ ಹೆಚ್ಚು ಘಟಕಗಳ ಸಮಾಂಗೀಯ (ಸಮಜ್ಯಾತ) ಮಿಶ್ರಣಗಳಾಗಿವೆ (Homogeneous mixtures). ಸಮಾಂಗೀಯ ಮಿಶ್ರಣಗಳೆಂದರೆ ಮಿಶ್ರಣದುದ್ದಕ್ಕೂ ಇದರ ಸಂಯೋಜನೆ ಮತ್ತು ಗುಣಲಕ್ಷಣಗಳು ಏಕರೂಪವಾಗಿರುವುದು ಎಂದರ್ಥ. ಸಾಮಾನ್ಯವಾಗಿ ಪ್ರಮಾಣದಲ್ಲಿ ಹೆಚ್ಚಿಗೆ ಇರುವ ಘಟಕವನ್ನು ದ್ರಾವಕ ಎನ್ನುವರು. ದ್ರಾವಣವು ಯಾವ ಭೌತಿಕ ಸ್ಥಿತಿಯಲ್ಲಿದೆ ಎಂಬುದನ್ನು ದ್ರಾವಕವು ನಿರ್ಧರಿಸುತ್ತದೆ.

ದ್ರಾವಕವನ್ನು ಹೊರತುಪಡಿಸಿ, ದ್ರಾವಣದಲ್ಲಿ ಇರುವ ಒಂದು ಅಥವಾ ಹೆಚ್ಚು ಘಟಕಗಳನ್ನು ದ್ರವ್ಯಗಳು ಎನ್ನುವರು. ಈ ಘಟಕದಲ್ಲಿ ನಾವು ದ್ವಿಘಟಕ ದ್ರಾವಣಗಳನ್ನು (ಅಂದರೆ ಎರಡು ಘಟಕಗಳನ್ನು ಹೊಂದಿರುವುದು) ಮಾತ್ರ ಪರಿಗಣಿಸೋಣ. ಇಲ್ಲಿ ಪ್ರತೀ ಘಟಕವು, ಘನ, ದ್ರವ, ಅಥವಾ ಅನಿಲ ಸ್ಥಿತಿಯಲ್ಲಿ ಇರಬಹುದಾಗಿದೆ.

ದ್ರಾವಣಗಳು	ದ್ರವ್ಯ	ದ್ರಾವಕ	ಉದಾಹರಣೆ
ಅನಿಲ ದ್ರಾವಣಗಳು	ಅನಿಲ	ಅನಿಲ	ಆಮ್ಲಜನಕ ಮತ್ತು ಸಾರಜನಕ ಅನಿಲಗಳ ಮಿಶ್ರಣ
	ದ್ರವ	ಅನಿಲ	ಸಾರಜನಕ ಅನಿಲದೊಂದಿಗೆ ಮಿಶ್ರಿತವಾಗಿರುವ ಕ್ಲೋರೋಫಾರಂ
	ಘನ	ಅನಿಲ	ಸಾರಜನಕ ಅನಿಲದಲ್ಲಿರುವ ಕರ್ಪೂರ
ದ್ರವ ದ್ರಾವಣಗಳು	ಅನಿಲ	ದ್ರವ	ನೀರಿನಲ್ಲಿ ವಿಲೀನಗೊಂಡಿರುವ ಆಮ್ಲಜನಕ
	ದ್ರವ	ದ್ರವ	ನೀರಿನಲ್ಲಿ ವಿಲೀನಗೊಂಡಿರುವ ಎಥನೋಲ್
	ಘನ	ದ್ರವ	ನೀರಿನಲ್ಲಿ ವಿಲೀನ ಗೊಂಡಿರುವ ಗ್ಲುಕೋಸ್
ಘನ ದ್ರಾವಣಗಳು	ಅನಿಲ	ಘನ	ಪೆಲ್ಲಾಡಿಯುಂನಲ್ಲಿ ಜಲಜನಕ ದ್ರಾವಣ
	ದ್ರವ	ಘನ	ಸೋಡಿಯಂನೊಂದಿಗೆ ಜಲಜನಕ ದ್ರಾವಣ
	ಘನ	ಘನ	ಸೋಡಿಯಂನೊಂದಿಗೆ ಚಿನ್ನದಲ್ಲಿ ವಿಲೀನ ಗೊಂಡಿರುವ ತಾಮ್ರ

ದ್ರಾವಣಗಳ ಸಾರತೆಯನ್ನು ವ್ಯಕ್ತಪಡಿಸುವುದು

ದ್ವಿತೀಯ ಪಿಯುಸಿ

ದ್ರಾವಣವೊಂದರ ಸಂಯೋಜನೆಯು ಇದರ ಸಾರತೆಯನ್ನು ವ್ಯಕ್ತಪಡಿಸುತ್ತದೆ. ಸಾರತೆಯು ಗುಣಾತ್ಮಕವಾಗಿ ಅಥವಾ ಪರಿಮಾಣಾತ್ಮಗಳೆರಡೂ ರೀತಿಯಲ್ಲಿ ವ್ಯಕ್ತಪಡುತ್ತದೆ.

ಉದಾಹರಣೆ: ದ್ರಾವಣವು ಸಾರರಿಕ್ತ (ಅಂದರೆ, ಸಾಪೇಕ್ಷವಾಗಿ ಅತಿ ಕಡಿಮೆ ಪ್ರಮಾಣದ ದ್ರವ್ಯವಿರುವುದು) ಅಥವಾ ಸಾರೀಕೃತ (ಅಂದರೆ, ಸಾಪೇಕ್ಷವಾಗಿ ಅತಿ ಹೆಚ್ಚು ಪ್ರಮಾಣದ ದ್ರವ್ಯವಿರುವುದು) ಎಂದು ಗುಣಾತ್ಮಕವಾಗಿ ನಾವು ಹೇಳುತ್ತೇವೆ.

ಪರಿಮಾಣಾತ್ಮಕವಾಗಿ, ದ್ರಾವಣದ ಸಾರತೆಯನ್ನು ವಿವರಿಸಲು ಅನೇಕ ಮಾರ್ಗಗಳಿವೆ.

1) ಶೇಕಡವಾರು ದ್ರವ್ಯರಾಶಿ ($^{w}/_{w}$)

ಒಂದು ದ್ರಾವಣದ ಘಟಕವೊಂದರ ಶೇಕಡಾವಾರು ದ್ರವ್ಯರಾಶಿಯನ್ನು ಹೀಗೆ ವ್ಯಾಖ್ಯಾನಿಸಬಹುದು.

$$\text{ಒಂದು ಘಟಕದ ಶೇಕಡಾವಾರು ದ್ರವ್ಯರಾಶಿ} = \frac{\text{ದ್ರಾವಣದಲ್ಲಿರುವ ಘಟಕದ ದ್ರವ್ಯರಾಶಿ}}{\text{ದ್ರಾವಣದ ಒಟ್ಟು ದ್ರವ್ಯರಾಶಿ}} \times 100$$

(ಮುಂದುವರಿಯುವುದು)

ಬಿಂದು ನ್ಯೂನತೆಗಳು ಮತ್ತು ಅದರ ವಿಧಗಳು

(ಮುಂದುವರಿದ ಭಾಗ)

ರಸಾಯನ ಶಾಸ್ತ್ರ

2) ಅಶುದ್ಧ ನ್ಯೂನತೆಗಳು

ಸ್ವಲ್ಪ ಪ್ರಮಾಣದ $Srcl_2$ ಹೊಂದಿರುವ ಕರಗಿದ Nacl ಸ್ಫಟಿಕೀಕರಣಗೊಂಡರೆ ಅಯಾನ್‌ಗಳ ಕೆಲವು ಸ್ಥಳಗಳನ್ನು Sr^{2+} ಆಕ್ರಮಿಸುತ್ತದೆ. ಪ್ರತಿ Sr^{2+} ಎರಡು Na^{+} ಅಯಾನ್‌ಗಳನ್ನು ಬದಲಿಸುತ್ತದೆ. ಇದು ಒಂದು ಅಯಾನ್ ಜಾಗವನ್ನು ಆಕ್ರಮಿಸುತ್ತದೆ ಮತ್ತು ಇನ್ನೊಂದು ಖಾಲಿಯಾಗಿ ಉಳಿಯುತ್ತದೆ. ಹೀಗೆ ತಯಾರಾದ ಧನ ಅಯಾನ್‌ಗಳ ಖಾಲಿ ಜಾಗವು Sr^{2+} ಅಯಾನ್‌ಗಳಿಗೆ ಸಮನಾಗಿರುತ್ತದೆ.

ಉದಾಹರಣೆ: cd cl2 and Agcl



ಚಿತ್ರ 1.27 Na^{+} ನ ಪರ್ಯಾಯವಾಗಿ Sr^{2+}ಅನ್ನು NaCl ಗೆ ಹಾಕಿದಾಗ ಉಂಟಾಗುವ ಧನ ಅಯಾನಿನ ಖಾಲಿ ಜಾಗ

3) ರಸಗಣಿತವಲ್ಲದ ನ್ಯೂನತೆಗಳು

ಸ್ಫಟಿಕ ರಚನೆಗಳಲ್ಲಿನ ನ್ಯೂನತೆಗಳ ಕಾರಣದಿಂದಾಗಿ ಬಹಳಷ್ಟು ರಸಗಣಿತವಲ್ಲದ ನಿರವಯವ ಘನಗಳು, ರಸಗಣಿತ ಇಲ್ಲದ ಅನುಪಾತದಲ್ಲಿ ಘಟಕ ಕಣಗಳು ನಿಕಟಗೊಂಡಿರುತ್ತವೆ. ಈ ನ್ಯೂನತೆಗಳು ಎರಡು ವಿಧಗಳಾಗಿವೆ.

ಎ) ಲೋಹದ ಹೆಚ್ಚುವರಿ ನ್ಯೂನತೆ

ಋಣ ಅಯಾನ್‌ಗಳ ಖಾಲಿ ಜಾಗದ ಕಾರಣದಿಂದ ಲೋಹ ಹೆಚ್ಚುವರಿ ನ್ಯೂನತೆ: Nacl ಮತ್ತು kcl ನಂತಹ ಕ್ಷಾರ ಹ್ಯಾಲೈಡ್ ಈ ರೀತಿಯ ನ್ಯೂನತೆಯನ್ನು ತೋರಿಸುತ್ತದೆ.

Nacl ನ ಹರಳುಗಳು ಸೋಡಿಯಂ ಆವಿಯ ವಾತಾವರಣದಲ್ಲಿ ಕಾಯಿಸಿದಾಗ, ಸೋಡಿಯಂ ಪರಮಾಣುಗಳನ್ನು ಸ್ಫಟಿಕದ ಮೇಲ್ಮೈಯಲ್ಲಿ ಇಡಲಾಗುತ್ತದೆ. cl ಅಯಾನ್ ಸ್ಫಟಿಕದ ಮೇಲ್ಮೈಗೆ ಹರಡುತ್ತದೆ ಮತ್ತು Nacl ಅನ್ನು ನೀಡಲು Na^{+} ಪರಮಾಣುಗಳೊಂದಿಗೆ ಸಂಯೋಜಿಸುತ್ತವೆ. Na ಪರಮಾಣುಗಳ ಎಲೆಕ್ಟ್ರಾನ್ ನಷ್ಟದಿಂದ Na^{+} ಅಯಾನ್ ರೂಪುಗೊಳ್ಳುತ್ತವೆ. ಬಿಡುಗಡೆಯಾದ ಎಲೆಕ್ಟ್ರಾನ್‌ಗಳು ಸ್ಫಟಿಕದೊಳಗೆ ಹರಡುತ್ತವೆ ಮತ್ತು ಋಣ ಅಯಾನ್‌ಗಳ ಖಾಲಿ ಜಾಗವನ್ನು ಆಕ್ರಮಿಸುತ್ತವೆ.

ಜೋಡಿಯಾಗದ ಎಲೆಕ್ಟ್ರಾನ್‌ಗಳು ಆಕ್ರಮಿಸಿಕೊಂಡಿರುವ ಋಣ ಅಯಾನ್‌ಗಳ ಖಾಲಿ ಜಾಗವನ್ನು F - ಕೇಂದ್ರಗಳು ಎಂದು ಕರೆಯಲಾಗುತ್ತದೆ.

ಅವು ಸ್ಫಟಿಕ Nacl ಗೆ ಹಳದಿ ಬಣ್ಣವನ್ನು ನೀಡುತ್ತವೆ. ಸ್ಫಟಿಕಗಳ ಮೇಲೆ ಬೀಳುವ ಗೋಚರ ಬೆಳಕಿನಿಂದ ಶಕ್ತಿಯನ್ನು ಹೀರಿಕೊಳ್ಳುವಾಗ ಈ ಎಲೆಕ್ಟ್ರಾನ್‌ಗಳ ಪ್ರಚೋದನೆಯಿಂದ ಬಣ್ಣವು ಉಂಟಾಗುತ್ತದೆ. ಲಿಥಿಯಂನ ಪ್ರಮಾಣವು Li ಸ್ಫಟಿಕಗಳಿಗೆ ಗುಲಾಬಿ ಮತ್ತು ಪೊಟ್ಯಾಷಿಯಂ ಅನ್ನು ಹೆಚ್ಚಿನ K ಪ್ರಮಾಣವು ಸ್ಫಟಿಕಗಳಿಗೆ ನೇರಳೆ (ಅಥವಾ ನೀಲಕ) ಬಣ್ಣವನ್ನು ನೀಡುತ್ತದೆ.



ಚಿತ್ರ 1.28 ಸ್ಫಟಿಕದಲ್ಲಿನ F- ಕೇಂದ್ರ

ಬಿ) ತೆರಪಿನ ಸ್ಥಳಗಳಲ್ಲಿ ಹೆಚ್ಚುವರಿ ಧನ ಅಯಾನ್‌ಗಳಿಂದ ಲೋಹದ ಹೆಚ್ಚುವರಿ ನ್ಯೂನತೆ

ಸತುವಿನ ಆಕ್ಸೈಡ್ ಕೋಣೆಯ ಉಷ್ಣಾಂಶದಲ್ಲಿ ಬಿಳಿ ಬಣ್ಣದಲ್ಲಿರುತ್ತದೆ. ಬಿಸಿ ಮಾಡಿದಾಗ ಇದು ಆಮ್ಲಜನಕವನ್ನು ಕಳೆದುಕೊಳ್ಳುತ್ತದೆ ಮತ್ತು ಹಳದಿ ಬಣ್ಣಕ್ಕೆ ತಿರುಗುತ್ತದೆ.

$$Zno \xrightarrow{\text{ಕಾಯಿಸಿದಾಗ}} Zn^{2+} + \frac{1}{2}0_2 + 2e^{-1}$$

ಸಿ) ಲೋಹ ಕೊರತೆಯ ನ್ಯೂನತೆ

ರಸಗಣಿತ ಸಂಯೋಜನೆಯಲ್ಲಿ ತಯಾರಿಸಲು ಕಷ್ಟಕರವಾದ ಅನೇಕ ಘನವಸ್ತುಗಳಿವೆ ಮತ್ತು ರಸಗಣಿತ ಪ್ರಮಾಣಕ್ಕೆ ಹೋಲಿಸಿದರೆ ಕಡಿಮೆ ಪ್ರಮಾಣದ ಲೋಹವನ್ನು ಹೊಂದಿರುತ್ತವೆ.

ಉದಾಹರಣೆ: Feo ❖

ಸುಭಾಷಿತ

ಎಲ್ಲರೂ ನಿಮ್ಮನ್ನು ಪ್ರೀತಿಸುವವರೇ ಆದರೆ ಏನೋ ತಪ್ಪಾಗಿದೆ ಎಂದರ್ಥ. ನಿಮ್ಮನ್ನು ಎಚ್ಚರವಾಗಿ ಇರಿಸಲು ಕನಿಷ್ಠ ಒಬ್ಬರಾದರೂ ಶತ್ರು ನಿಮಗೆ ಇರುವಂತೆ ನೋಡಿಕೊಳ್ಳಿ.

–ಪಾಲೊ ಕೊಎಲೊ

ಜಿಡಿಪಿ ಕುಸಿತ: ಹೂಡಿಕೆ, ಬೇಡಿಕೆಗೆ ಸಿಕ್ಕೀತೇ ಉತ್ತೇಜನ?

ಅತಿಕೆಟ್ಟ ಸಾಂಕ್ರಾಮಿಕವೊಂದನ್ನು, ತೀವ್ರವಾದ ಆರೋಗ್ಯ ಬಿಕ್ಕಟ್ಟನ್ನು ಕಂಡ ಆರ್ಥಿಕ ವರ್ಷವಾದ 2020–21ರಲ್ಲಿ ದೇಶದ ಒಟ್ಟು ಆಂತರಿಕ ಉತ್ಪಾದನೆಯ (ಜಿಡಿಪಿ) ಬೆಳವಣಿಗೆ ಎಷ್ಟಿತ್ತು ಎಂಬುದನ್ನು ಕೇಂದ್ರ ಸರ್ಕಾರದ ರಾಷ್ಟ್ರೀಯ ಸಾಂಖ್ಯಿಕ ಕಚೇರಿಯು (ಎನ್‌ಎಸ್‌ಒ) ಬಹಿರಂಗ ಪಡಿಸಿದೆ. ನಾಲ್ಕು ದಶಕಗಳಲ್ಲಿ ಇದೇ ಮೊದಲ ಬಾರಿಗೆ ದೇಶದ ಜಿಡಿಪಿಯು ಒಂದಿಡೀ ವರ್ಷದಲ್ಲಿ ಶೂನ್ಯಕ್ಕಿಂತ ಕೆಳಗಿನ ಮಟ್ಟ (ಶೇಕಡ –7.3) ತಲುಪಿದೆ. ಮಾರ್ಚ್ 31ಕ್ಕೆ ಕೊನೆಗೊಂಡ ಆರ್ಥಿಕ ವರ್ಷದ ಮೊದಲ ಎರಡು ತ್ರೈಮಾಸಿಕಗಳಲ್ಲಿ ಜಿಡಿಪಿ ಕುಸಿದಿದೆ, ನಂತರದ ಎರಡು ತ್ರೈಮಾಸಿಕಗಳಲ್ಲಿ ಅಲ್ಪ ಏರಿಕೆ ದಾಖಲಿಸಿದೆ. ಲಾಕ್‌ಡೌನ್, ಆರ್ಥಿಕ ಚಟುವಟಿಕೆಗಳ ಮೇಲಿನ ನಿರ್ಬಂಧ, ಸಾಂಕ್ರಾಮಿಕವು ತೀವ್ರಗತಿಯಲ್ಲಿ ಹರಡಿದ್ದು, ಅದನ್ನು ನಿಭಾಯಿಸಲು ಅಗತ್ಯವಿರುವ ಆರೋಗ್ಯ ಮೂಲಸೌಕರ್ಯ ದೇಶದಲ್ಲಿ ಇಲ್ಲದಿದ್ದುದು... ಇವೆಲ್ಲವೂ ಜಿಡಿಪಿಯ ಈ ಪರಿ ಕುಸಿತಕ್ಕೆ ಕಾರಣಗಳು. ಸಾಂಕ್ರಾಮಿಕವೊಂದು ದಿಢೀರ್ ಎಂದು ಎದುರಾದ ಕಾರಣಕ್ಕೆ ಜಿಡಿಪಿ ಹೀಗೆ ಕುಸಿಯಿತೇ ಅಥವಾ ಸಾಂಕ್ರಾಮಿಕವನ್ನು ನಿಭಾಯಿಸುವಲ್ಲಿನ ವೈಫಲ್ಯಗಳು ಈ ಸ್ಥಿತಿಗೆ ಕಾರಣವಾದವೇ, ನಿಭಾಯಿಸುವ ಬಗೆ ಇನ್ನಷ್ಟು ವೈಜ್ಞಾನಿಕವಾಗಿ ಇದ್ದಿದ್ದರೆ ಜಿಡಿಪಿ ಕುಸಿತ ಈ ಪ್ರಮಾಣದಲ್ಲಿ ಇರುತ್ತಿತ್ತೇ ಎಂಬುದನ್ನು ಇತಿಹಾಸವು ನಿಕಷಕ್ಕೆ ಒಡ್ಡಲಿದೆ. ಈಗಿನ ಕುಸಿತವು ನಿರೀಕ್ಷಿತ. ಆದರೆ, ಅಚ್ಚರಿಗೆ ಕಾರಣವಾಗುವಂಥದ್ದು ಮೇಲ್ನೋಟಕ್ಕೆ ಏನೂ ಕಾಣುತ್ತಿಲ್ಲ. ಈಗ ಕೋವಿಡ್‌ನ ಎರಡನೆಯ ಅಲೆಯು ದೇಶದಾದ್ಯಂತ ಆರ್ಥಿಕ ಚಟುವಟಿಕೆಗಳಿಗೆ ಅಡ್ಡಿ ಉಂಟುಮಾಡಿದೆ. ಇದರ ಪರಿಣಾಮವು ಮುಂದಿನ ದಿನಗಳಲ್ಲಿ ಸ್ಪಷ್ಟವಾಗಲಿದೆ. ಉದ್ಯೋಗ ನಷ್ಟ, ವೇತನ ಕಡಿತದ ವರದಿಗಳು ಕೆಲವು ಕಡೆಗಳಿಂದ ಈಗಾಗಲೇ ಬಂದಿವೆ. 2020–21ರಲ್ಲಿನ ಸರಿ-ತಪ್ಪುಗಳನ್ನು ವಿಮರ್ಶಿಸುತ್ತಲೇ, ಅರ್ಥವ್ಯವಸ್ಥೆಯಲ್ಲಿ ಹೊಸ ಚೈತನ್ಯ ಮೂಡುವಂತೆ ಮಾಡಬೇಕಿರುವ ಸಂದರ್ಭ ಇದು. ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಈಚೆಗೆ ಬಿಡುಗಡೆ ಮಾಡಿರುವ ವಾರ್ಷಿಕ ವರದಿಯಲ್ಲಿ ಈ ವಿಚಾರವಾಗಿ ಕೆಲವೊಂದಿಷ್ಟು ಹೊಳಹುಗಳು ಸಿಗುತ್ತವೆ. 'ಸಾಂಕ್ರಾಮಿಕದ ಅಲೆಯು ತಗ್ಗಿದ ನಂತರದಲ್ಲಿ ಆರ್ಥಿಕ ಬೆಳವಣಿಗೆ ಸುಸ್ಥಿರ ಆಗಬೇಕು ಎಂದಾದರೆ ಮಾರುಕಟ್ಟೆಯಲ್ಲಿ ಸಾರ್ವಜನಿಕರಿಂದ ಬೇಡಿಕೆ ಹೆಚ್ಚಾಗಬೇಕು' ಎಂದು ಆರ್‌ಬಿಐ ಹೇಳಿದೆ. ಆರ್ಥಿಕ ಕುಸಿತವನ್ನು ಅನುಭವಿಸುತ್ತಿದ್ದೇವೆ. ಈಗ ಪುನಶ್ಚೇತನದ ಕಡೆ ಮುಖ ಮಾಡಬೇಕಿದೆ.

ಜನಸಾಮಾನ್ಯರಿಂದ ಮಾರುಕಟ್ಟೆಯಲ್ಲಿ ಬೇಡಿಕೆ ಜಾಸ್ತಿ ಆಗಬೇಕು ಎಂದಾದರೆ ಹಣದುಬ್ಬರ ನಿಯಂತ್ರಣಕ್ಕೆ ಬರಲೇಬೇಕು, ಜನರಿಗೆ ತಮ್ಮ ಆರ್ಥಿಕ ಜೀವನ ಸುಭದ್ರವೆಂದು ಅನ್ನಿಸಬೇಕು

ಆದರೆ, ವಾಸ್ತವದಲ್ಲಿ ಬೇಡಿಕೆ ಹೆಚ್ಚುವುದು ಎಂಬ ಪ್ರಶ್ನೆ ಇದೆ. ಕೋವಿಡ್‌ನ ಮೂರನೆಯ ಅಲೆ ಬರುತ್ತದೆ ಎಂದು ಕೆಲವು ವರ್ಗಗಳಿಂದ ಅಭಿಪ್ರಾಯ ಬಂದಿದೆ. ಮೂರನೆಯ ಅಲೆಯು ಒಂದು ವೇಳೆ ಅಪ್ಪಳಿಸಿದರೆ, ಆಗ ಸರ್ಕಾರಗಳು ಅಥವಾ ಸ್ಥಳೀಯ ಆಡಳಿತಗಳು ಮತ್ತೆ ಲಾಕ್‌ಡೌನ್ ಮೊರೆ ಹೋಗುವುದಿಲ್ಲವೇ? ಕೋವಿಡ್ ತಡೆಯಲು ಮತ್ತೆ ಮತ್ತೆ ಲಾಕ್‌ಡೌನ್ ಮೊರೆ ಹೋಗುವುದರಲ್ಲಿ ಆರ್ಥಿಕ ಪುನಶ್ಚೇತನ ಎಂಬ ಮಾತಿಗೆ ಹೆಚ್ಚಿನ ಅರ್ಥ ಇರುವುದಿಲ್ಲ. ಸಾಂಕ್ರಾಮಿಕ ತಡೆಯಲು ಲಾಕ್‌ಡೌನ್ ಹೊರತಾದ ಮಾರ್ಗೋಪಾಯಗಳನ್ನು ರೂಪಿಸಬೇಕಿದೆ. ಇದು ರೂಪಿಸಿಕೊಂಡಿರುವ ಮುಕ್ತ ಮಾರುಕಟ್ಟೆ ವ್ಯವಸ್ಥೆಗೆ ಲಾಕ್‌ಡೌನ್ ಅತ್ಯಂತ ಮಾರಕ ಎಂಬ ಅರಿವು ನೀತಿ ನಿರೂಪಕರಿಗೆ ಬರಬೇಕು. ಮಾರುಕಟ್ಟೆಯಲ್ಲಿ ಬೇಡಿಕೆ ಹೆಚ್ಚಿಸುವುದು ಮಾತ್ರವೇ ಅಲ್ಲದೆ, ಹೂಡಿಕೆಯನ್ನು ಹೆಚ್ಚು ಮಾಡುವ ಮೂಲಕ ಕೂಡ ಅರ್ಥ ವ್ಯವಸ್ಥೆಯಲ್ಲಿ ಶಕ್ತಿಸಂಚಯ ಸಾಧ್ಯ. ಈಗಿನ ಸಂದರ್ಭದಲ್ಲಿ ಖಾಸಗಿ ವಲಯದಿಂದ ಹೆಚ್ಚಿನ ಹೂಡಿಕೆಯನ್ನು ನಿರೀಕ್ಷಿಸುವಂತಿಲ್ಲ. ಹೂಡಿಕೆಗಳು ಸರ್ಕಾರಗಳ ಕಡೆಯಿಂದಲೇ ಆಗಬೇಕಿರುವುದು ಅಪೇಕ್ಷಣೀಯ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಎಷ್ಟರಮಟ್ಟಿಗೆ ಹೂಡಿಕೆಗೆ ಮುಂದಾಗುತ್ತವೆ ಎಂಬುದನ್ನು ಆಧರಿಸಿ ಆರ್ಥಿಕ ಪುನಶ್ಚೇತನದ ಪ್ರಮಾಣ ತೀರ್ಮಾನವಾಗುತ್ತದೆ. ಸಾಮಾನ್ಯರಿಂದ ಮಾರುಕಟ್ಟೆಯಲ್ಲಿ ಬೇಡಿಕೆ ಜಾಸ್ತಿ ಆಗಬೇಕು ಎಂದಾದರೆ ಹಣದುಬ್ಬರ ನಿಯಂತ್ರಣಕ್ಕೆ ಬರಲೇಬೇಕು, ಜನರಿಗೆ ತಮ್ಮ ಆರ್ಥಿಕ ಜೀವನ ಸುಭದ್ರವೆಂದು ಅನ್ನಿಸಬೇಕು. ಆದರೆ, ತೈಲ ಬೆಲೆ ಪ್ರತಿದಿನವೂ ಜಾಸ್ತಿ ಆಗುತ್ತಿದೆ. ಅದನ್ನು ಹಿತಕರ ಮಟ್ಟದಲ್ಲಿ ಇರಿಸುವ ಮನಸ್ಸು ಕೇಂದ್ರ ಸರ್ಕಾರಕ್ಕೂ ರಾಜ್ಯ ಸರ್ಕಾರಗಳಿಗೂ ಇದ್ದಂತೆ ಕಾಣುತ್ತಿಲ್ಲ. ಹೀಗಿರುವಾಗ ಹಣದುಬ್ಬರ ನಿಯಂತ್ರಣಕ್ಕೆ ಬರುವ ಸಾಧ್ಯತೆ ಕ್ಷೀಣ. ಹಣದುಬ್ಬರವನ್ನು ನಿಯಂತ್ರಿಸುವುದು ಆರ್‌ಬಿಐನ ಕೆಲಸ ಎಂದು ಸರ್ಕಾರಗಳು ಭಾವಿಸಿರುವಂತಿದೆ. ಇದು ಪ್ರಗತಿಗೆ ಪೂರಕವಾದ ಕ್ರಮವಲ್ಲ. ಕೋವಿಡ್ ಎರಡನೆಯ ಅಲೆಯಿಂದಾಗಿ ದೇಶದ ಉದ್ಯಮ ವಲಯದ ವಿಶ್ವಾಸ ಕುಂದಿದೆ. ಕಾರ್ಮಿಕ, ಉದ್ಯಮಿ, ಕೃಷಿಕ, ವರ್ತಕ ವರ್ಗಗಳಲ್ಲಿ ವಿಶ್ವಾಸ ಹೆಚ್ಚಿಸಿ, ಆ ಮೂಲಕ ಹಣದ ಚಲಾವಣೆ ಹೆಚ್ಚುವಂತೆ ಮಾಡುವುದು ಸದ್ಯದ ತುರ್ತುಗಳಲ್ಲಿ ಒಂದು.

ದಿನದ ಟ್ವೀಟ್

ಸಾಕಾರವಾದ ಅರಿಕೆ!

ಪರೀಕ್ಷೆಗಳು ಪವಾಡಸದೃಶ ರೀತಿಯಲ್ಲಿ ರದ್ದಾಗಲಿ ಎಂದು, ನಾವು ಮಕ್ಕಳಾಗಿದ್ದಾಗ ದೇವರ ಮುಂದೆ ನಿಂತು ಹೇಗೆ ಪ್ರಾರ್ಥಿಸುತ್ತಿದ್ದೆವು ಎಂಬುದು ನೆನಪಿದೆಯೇ? 2021ರ ಬ್ಯಾಚ್‌ನವರ ವಿಷಯದಲ್ಲಿ ಅದು ಸಾಕಾರವಾಗಿದೆ!
#cbseboardexams

ಡಾ. ಮೋನಿಕಾ, ಪಿಎಚ್‌ಡಿ ಪದವೀಧರೆ

25 ವರ್ಷಗಳ ಹಿಂದೆ

ಭಾನುವಾರ, 2-6-1996

• **ದೇವೇಗೌಡರು ಈಗ ಪ್ರಧಾನಿ**

ನವದೆಹಲಿ, ಜೂನ್ 1– ಕನ್ನಡ ನಾಡಿನ ಮಣ್ಣಿನ ಮಗ ಹರದನಹಳ್ಳಿ ದೊಡ್ಡೇಗೌಡ ದೇವೇಗೌಡ ಅವರು ಇಂದು ಹನ್ನೆರಡನೇ ಪ್ರಧಾನ ಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸುವ ಮೂಲಕ ಕನ್ನಡಿಗರೊಬ್ಬರು ದೇಶದ ಆಡಳಿತದ ಸೂತ್ರಧಾರರಾದರು.

ದೇವೇಗೌಡ ಅವರ ಸಂಪುಟದ ಸಚಿವರ ಖಾತೆಗಳನ್ನು ಇಂದು ಮಧ್ಯರಾತ್ರಿ ಪ್ರಕಟಿಸಲಾಗಿದ್ದು, ಮಹತ್ವದ ಗೃಹ ಖಾತೆ, ಕೃಷಿ, ಸಿಬ್ಬಂದಿ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಅಣುಶಕ್ತಿ ಖಾತೆಗಳನ್ನು ತಮ್ಮ ಬಳಿಯೇ ಉಳಿಸಿಕೊಂಡಿದ್ದಾರೆ. ಮುಲಾಯಂ ಸಿಂಗ್ ಯಾದವ್ ಅವರು ನೂತನ ರಕ್ಷಣಾ ಸಚಿವರಾಗಿದ್ದಾರೆ. ಕಾಂಗ್ರೆಸ್‌ನಿಂದ ಹೊರಬಂದು ತಮಿಳು ಮಾನಿಲ ಕಾಂಗ್ರೆಸ್ ಪಕ್ಷ ರಚನೆಯಲ್ಲಿ ಪಾತ್ರ ವಹಿಸಿದವರಲ್ಲಿ ಒಬ್ಬರಾಗಿದ್ದ ಪಿ. ಚಿದಂಬರಂ ಅವರಿಗೆ ಹಣಕಾಸು ಖಾತೆಯ ಜೊತೆಗೆ ಕಾನೂನು, ನ್ಯಾಯಾಂಗ ಮತ್ತು ಕಂಪನಿ ವ್ಯವಹಾರ ಖಾತೆ ವಹಿಸಲಾಗಿದೆ.

• **ರಾಷ್ಟ್ರಪತಿ ಭವನದಲ್ಲಿ ಪಸರಿಸಿದ ಕನ್ನಡದ ಕಂಪು**

ನವದೆಹಲಿ, ಜೂನ್ 1–ರಾಷ್ಟ್ರಪತಿ ಭವನದ ಅಶೋಕ ಹಾಲ್‌ನಲ್ಲಿ ಇಂದು ಪ್ರಮಾಣವಚನ ಸ್ವೀಕಾರ ಸಮಾರಂಭಕ್ಕೆ ಹನ್ನೊಂದು ಗಂಟೆಯಿಂದಲೇ ಗಣ್ಯರು ಮತ್ತು ಪತ್ರಕರ್ತರು ಜಮಾಯಿಸಿದರು. ಕರ್ನಾಟಕದ 'ಮಣ್ಣಿನ ಮಗ' ಪ್ರಧಾನಿಯಾಗಿ ಪ್ರಮಾಣವಚನ ಸ್ವೀಕಾರ ಮಾಡುವವರಿದ್ದರಿಂದ ಹೆಚ್ಚು ಕಡಿಮೆ ಕನ್ನಡದ ವಾತಾವರಣ ಇತ್ತು.

ದೇವೇಗೌಡ ಅವರ ಆಯ್ಕೆ ವಿಧಾನದ ಬಗೆಗೆ ಬಹಿರಂಗವಾಗಿ ಅಸಮಾಧಾನ ವ್ಯಕ್ತಪಡಿಸಿದ್ದ ಜನತಾದಳದ ಅಗ್ರಗಣ್ಯ ನಾಯಕರಲ್ಲೊಬ್ಬರಾದ ರಾಜ್ಯಸಭೆ ಸದಸ್ಯ ರಾಮಕೃಷ್ಣ ಹೆಗಡೆ ಮತ್ತು ಬಿಜು ಪಟ್ನಾಯಕ್ ಗೈರುಹಾಜರಾಗಿದ್ದದ್ದು ಅನೇಕರ ಗಮನ ಸೆಳೆಯಿತು. ಅವರಿಗಾಗಿ ಪತ್ರಕರ್ತರ ಕಣ್ಣು ಕೊನೆಯವರೆಗೂ ಸುತ್ತ ಮುತ್ತ ಹೊರಳಿತಾದರೂ ಅವರು ಕಾಣಲಿಲ್ಲ.

50 ವರ್ಷಗಳ ಹಿಂದೆ

ಬುಧವಾರ, 2-6-1971

• **ಬಿಹಾರ: ಕರ್ಪೂರಿ ಠಾಕೂರ್ ಸಂಪುಟದ ಅಧಿಕಾರ ತ್ಯಾಗ**

ಪಟ್ನಾ, ಜೂನ್ 1– ಬಿಹಾರದಲ್ಲಿ 163 ದಿನಗಳಿಂದ ಅಧಿಕಾರದಲ್ಲಿದ್ದ ಎಸ್.ಎಸ್.ಪಿ. ನಾಯಕತ್ವದ ಸಂಯುಕ್ತ ವಿಧಾಯಕ ದಳದ ಕರ್ಪೂರಿ ಠಾಕೂರ್ ನೇತೃತ್ವದ ಸಂಪುಟವು ಹೆಚ್ಚುಹೆಚ್ಚು ಪಕ್ಷಾಂತರಗಳ ಪರಿಣಾಮವಾಗಿ ಇಂದು ಬೆಳಿಗ್ಗೆ ನಿರ್ಗಮಿಸಿತು.

ಶ್ರೀ ಭೋಲಾ ಪಾಸ್ವಾನ್ ಶಾಸ್ತ್ರಿ ಅವರ ನಾಯಕತ್ವದಲ್ಲಿ ಪ್ರಗತಿಶೀಲ ವಿಧಾಯಕ ದಳದ ಹೊಸ ಸಂಪುಟವೊಂದು ನಾಳೆ ಬೆಳಿಗ್ಗೆ ಪ್ರಮಾಣವಚನ ಸ್ವೀಕರಿಸುತ್ತದೆ. ಹೊಸ ಮಂತ್ರಿಮಂಡಲದಲ್ಲಿ ಆಡಳಿತ ಕಾಂಗ್ರೆಸ್, ಸಿಪಿಐ, ಪಿಎಸ್‌ಪಿ ಮತ್ತು ಪಕ್ಷೇತರರು ಇರುವ ನಿರೀಕ್ಷೆ ಇದೆ.

• **ಪಿಯುಸಿಯಲ್ಲಿ ವೃತ್ತಿಶಿಕ್ಷಣ ತರಗತಿ ಉದ್ದೇಶ**

ಬೆಂಗಳೂರು, ಜೂನ್ 1– ರಾಜ್ಯದಲ್ಲಿ ಈ ವರ್ಷದಿಂದ ಆರಂಭವಾಗಲಿರುವ ಎರಡು ವರ್ಷಗಳ ಪಿಯುಸಿ ಶಿಕ್ಷಣದಲ್ಲಿ ಕೆಲವೊಂದು ವೃತ್ತಿಶಿಕ್ಷಣ ತರಗತಿಗಳನ್ನು ಆರಂಭಿಸಲು ಉದ್ದೇಶಿಸಲಾಗಿದೆ.

ಮಣ್ಣಿನ ಮಾಲಿನ್ಯ ಸಮಸ್ಯೆ ಎದುರಿಸುತ್ತಿರುವವರಲ್ಲಿ ಜಗತ್ತಿನ ಎಲ್ಲರೂ ಪಾಲುದಾರರು

ಈಗ ವಿಶ್ವ ಮಣ್ಣಿನ ಪಾಲುದಾರಿಕೆ

ವಿಶ್ಲೇಷಣೆ

ಟಿ.ಆರ್.ಅನಂತರಾಮು

ದೊಡ್ಡ ಉದ್ಯಮಗಳಲ್ಲಿ ದೇಶ ದೇಶಗಳ ನಡುವೆ ಪಾಲುದಾರಿಕೆ ಮಾಡಿಕೊಳ್ಳುವುದು ಜಾಗತೀಕರಣದ ಹಿನ್ನೆಲೆಯಲ್ಲಿ ಹೊಸತೇನಲ್ಲ. ಇಲ್ಲಿ ಪಾಲುದಾರಿಕೆ ಎಂದರೆ ನೇರ ಹಣಹೂಡಿಕೆ, ಅಷ್ಟೇ. ವಿಶ್ವ ಮಣ್ಣಿನ ಪಾಲುದಾರಿಕೆ ಎಂದಾಗ, ಫಲವತ್ತಾದ ಮಣ್ಣು ಯಾವ ದೇಶದಲ್ಲೇ ಇರಲಿ ಅದನ್ನು ಹಂಚಿಕೊಳ್ಳಲು ವಿದೇಶಿ ಬಂಡವಾಳ ಹರಿದು ಬರುತ್ತದೆಂಬ ಅನುಮಾನ ಮೂಡುವ ಸಾಧ್ಯತೆ ಇದೆ. ಇಲ್ಲಿ ಹಣದ ವಹಿವಾಟಿಲ್ಲ, ಬಂಡವಾಳವೆಂದರೆ ಅದು ಜ್ಞಾನದ ಬಂಡವಾಳವನ್ನು ಹೂಡುವುದು.

ಈ ಪರಿಕಲ್ಪನೆಯನ್ನು 2012ರಲ್ಲಿ ವಿಶ್ವಸಂಸ್ಥೆಯ ಅಂಗಸಂಸ್ಥೆಯಾದ ಆಹಾರ ಮತ್ತು ಕೃಷಿ ವಿಭಾಗ ಹುಟ್ಟುಹಾಕಿದಾಗ ಬಂಡವಾಳದ ಪ್ರಶ್ನೆ ಎದ್ದಿರಲಿಲ್ಲ; ಈಗಲೂ ಇಲ್ಲ. ಮುಖ್ಯವಾಗಿ ಜಾಗತಿಕ ಮಟ್ಟದಲ್ಲಿ ಮಣ್ಣಿನ ಫಲವತ್ತತೆಯ ಸ್ಥಿತಿ ಅರಿಯುವುದು, ಅದನ್ನು ನಿಭಾಯಿಸುವ ಪರಿ ಕುರಿತು ಎಲ್ಲ ರಾಷ್ಟ್ರಗಳೂ ಒಂದಾಗಬೇಕು ಎಂಬುದು ಆಶಯ.

ಒಂದೆಡೆ ಜನಸಂಖ್ಯಾ ಒತ್ತಡ, ಆಹಾರದ ಬೇಡಿಕೆಯಲ್ಲಿ ಅನೂಹ್ಯ ಪ್ರಮಾಣದ ಏರಿಕೆ, ಜೊತೆಗೆ ನೆಲಬಳಕೆಯ ಪ್ರವೃತ್ತಿಯಲ್ಲಿ ಆಸೆಬುರುಕತನ ಇವೆಲ್ಲವೂ ಮಣ್ಣಿನ ಫಲವತ್ತತೆಗೆ ದೊಡ್ಡ ಪ್ರಮಾಣದಲ್ಲಿ ಕಂಟಕ ತರುತ್ತವೆ ಎಂಬುದು ಸಮೀಕ್ಷೆ ಮಾಡಿದಾಗ ಹೊರಬಂತು. ಈ ಸಮೀಕ್ಷೆಯ ಫಲವಾಗಿಯೇ ತಿಳಿದುಬಂದ ಕಳವಳದ ಅಂಶವೆಂದರೆ, ಈಗಾಗಲೇ ಜಗತ್ತಿನ ಮಣ್ಣಿನ ಶೇ 33ರಷ್ಟು ಭಾಗ ಅವನತಿ ಹೊಂದಿರುವುದು- ಅಂದರೆ ಫಲವತ್ತತೆಯನ್ನು ಕಳೆದುಕೊಂಡಿರುವುದು. ಫಲವತ್ತಾದ ಮಣ್ಣು, ಅದಕ್ಕೆ ತಕ್ಕ ನೀರಿನ ಪೂರೈಕೆಯು ಆಹಾರೋತ್ಪಾದನೆಯ ಮೇಲೆ ನೇರ ಪರಿಣಾಮ ಬೀರುತ್ತವೆಂಬುದು ಜಗತ್ತಿನ ಎಲ್ಲ ರೈತರಿಗೂ ಗೊತ್ತು. ಆದರೆ ಮಣ್ಣು ಅದರ ಪೋಷಕಾಂಶಗಳನ್ನು ಕಳೆದುಕೊಳ್ಳುತ್ತಿರುವ ವಸ್ತುಸ್ಥಿತಿ ಢಾಳಾಗಿ ಗೋಚರಿಸುತ್ತಿದೆ. ಈ ಅಪಾಯ ಎಂದಿಗಿಂತ ಇಂದು ಹೆಚ್ಚು ತೀವ್ರವಾಗಿದೆ ಎಂಬುದು ಆರ್ಥಿಕ ತಜ್ಞರ ಅಭಿಪ್ರಾಯವೂ ಹೌದು.

ವಿಶ್ವ ಮಣ್ಣಿನ ಪಾಲುದಾರಿಕೆ ಎಂದರೆ ಆಯಾ ದೇಶಗಳಲ್ಲಿ ಮಣ್ಣಿನ ಸವಕಳಿ ಯಾವ ಪ್ರಮಾಣದಲ್ಲಿ ಆಗುತ್ತಿದೆ, ಉಪ್ಪು ಮತ್ತು ಚೌಳು ಮಣ್ಣು ಎಷ್ಟು ನೆಲವನ್ನು ತಿಂದಿವೆ, ಇಳುವರಿಗೆ ಅವು ಹೇಗೆ ಅಡ್ಡ ಬರುತ್ತವೆ ಎಂಬುದನ್ನು ತಜ್ಞರು ರೈತರಿಗೆ ಮನದಟ್ಟು ಮಾಡಿಕೊಡುವುದು, ವಿಜ್ಞಾನದ ಅನ್ವೇಷಣೆಗಳು ಆಹಾರೋತ್ಪಾದನೆಗೆ ಹೇಗೆ ಪೂರಕವಾಗುತ್ತವೆ ಎನ್ನುವುದನ್ನು ರೈತನ ಸಮ್ಮುಖದಲ್ಲೇ ಚರ್ಚಿಸುವುದು.

ಮಣ್ಣಿನ ಫಲವತ್ತತೆ ಪ್ರಧಾನವಾಗಿ ಎರಡು ಅಂಶಗಳ ಮೇಲೆ ನಿರ್ಧಾರವಾಗುತ್ತದೆ. ಯಾವ ಶಿಲೆಯಿಂದ ಮಣ್ಣು ಉತ್ಪನ್ನವಾಗುತ್ತದೆ ಎಂಬುದು ಒಂದಂಶವಾದರೆ, ಅಲ್ಲಿರುವ ಹವಾಗುಣ ಹೇಗೆ ಮಣ್ಣಿನ ಉತ್ಪಾದನೆಯ ಮೇಲೆ ಪರಿಣಾಮ ಬೀರುತ್ತದೆ ಎಂಬುದು ಇನ್ನೊಂದು. ಭಾರತದಲ್ಲೇ ಗಮನಿಸಿದರೆ, ಹಿಮಾಚಲ ಪ್ರದೇಶದಲ್ಲಿರುವ ಹವಾಗುಣ ಮತ್ತು ಮಣ್ಣೇ ಬೇರೆ. ಹತ್ತಿ ಬೆಳೆಯುವ ರಾಯಚೂರಿನ ಕಪ್ಪು ಮಣ್ಣಿನ ಗುಣಲಕ್ಷಣಗಳೇ ಬೇರೆ, ವಾತಾವರಣವೇ ಬೇರೆ.

ಜಾಗತಿಕ ಮಟ್ಟದಲ್ಲಿ ವಿಶ್ವಸಂಸ್ಥೆ ಇದನ್ನು ಗಂಭೀರವಾಗಿ ಪರಿಗಣಿಸಿ, ವಿಶಾಲ ತಳಹದಿಯ ಮೇಲೆ ಚರ್ಚೆಗೆ ವೇದಿಕೆಯನ್ನು ನಿರ್ಮಿಸುತ್ತಿದೆ. ಸರ್ಕಾರಿ ಸಂಸ್ಥೆಗಳು, ಸ್ವಯಂಸೇವಾ ಸಂಸ್ಥೆಗಳು, ಕೃಷಿ ವಿಶ್ವವಿದ್ಯಾಲಯಗಳು, ಕೃಷಿ ವಿಜ್ಞಾನಿಗಳು, ರೈತ ಸಂಸ್ಥೆಗಳು ಇವೆಲ್ಲವೂ ಒಟ್ಟುಗೂಡಿಯೇ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬೇಕು.

ದೊಡ್ಡ ದೊಡ್ಡ ವೈಜ್ಞಾನಿಕ ಪರಿಕಲ್ಪನೆಗಳ ಕುರಿತು ರೈತರ ಮಟ್ಟಕ್ಕೆ ಇಳಿದು ಅವರಿಗೆ ಅರ್ಥವಾಗುವ ಭಾಷೆಯಲ್ಲಿ ಹೇಳುವ ಜವಾಬ್ದಾರಿ ತಜ್ಞರಿಗಿದೆ. ಉಪ್ಪುಮಣ್ಣು, ಚೌಳುಮಣ್ಣು ಎಂದೊಡನೆ ರೈತರಿಗೆ ಎಲ್ಲವೂ ಸ್ಪಷ್ಟವಾಗುತ್ತವೆ. ಜಾಗತಿಕ ಹವಾಗುಣ ಬದಲಾವಣೆಯು ಮಣ್ಣಿನ ಸಾರದ ಮೇಲೆ ಅತೀವ ಪ್ರಭಾವ ಬೀರಿರುವುದು ಸ್ಪಷ್ಟ. ನೀರು ಇಂಗುವುದರಿಂದ ತೊಡಗಿ, ಪೌಷ್ಟಿಕಾಂಶಗಳು ಕೊಚ್ಚಿ ಹೋಗುತ್ತಿರುವುದರವರೆಗೆ ಎಲ್ಲವೂ ಕಣ್ಣಿಗೆ ಕಾಣುತ್ತಿವೆ. ಒಂದೆಡೆ, ರೈತರು ಅಧಿಕ ಇಳುವರಿ ಪಡೆಯಲು ಅತಿಯಾಗಿ ಯೂರಿಯ ಬಳಸಿ ಅದೇ ಮುಂದೆ ಫಸಲಿಗೆ ಕಂಟಕವಾಗುವ ಸಂಗತಿಯೂ ಹೊಸತೇನಲ್ಲ. ಇನ್ನೊಂದೆಡೆ, ರಸಗೊಬ್ಬರಗಳ ಬಗ್ಗೆ ರೈತರಿಗೆ ತಿಳಿದಿರುವಷ್ಟು ಮಣ್ಣಿನ ಜೈವಿಕ ವೈವಿಧ್ಯದ ಬಗ್ಗೆ ತಿಳಿಯದು.

ಮಣ್ಣಿನ ಜೀವಿವೈವಿಧ್ಯದ ಬಗ್ಗೆ ಕಳೆದ ಏಪ್ರಿಲ್ 19ರಿಂದ 22ರವರೆಗೆ ರೋಮ್‌ನಲ್ಲಿ ವಿಶ್ವಸಂಸ್ಥೆಯ ನೆರವಿನೊಂದಿಗೆ ನಡೆದ ಜಾಲಗೋಷ್ಠಿಯಲ್ಲಿ 161 ದೇಶಗಳ 5,000 ಮಂದಿ ಭಾಗವಹಿಸಿದ್ದರೆಂಬುದು ಮೆಚ್ಚಬೇಕಾದ ವಿಚಾರ ಎನ್ನುವ ಬದಲು, ಸಮಸ್ಯೆಯ ಸ್ವರೂಪ ಎಷ್ಟು ತೀವ್ರವಾದದ್ದು ಎಂಬುದರ ಸೂಚಕ ಎನ್ನಬಹುದು. ಅಲ್ಲಿನ ಚರ್ಚೆಗಳು ಕೋಟ್ಯಂತರ ರೈತರು ಮತ್ತು ತಜ್ಞರನ್ನು ಮುಟ್ಟಿದವು. ಇದಕ್ಕೆ ಕಾರಣವೂ ಇದೆ. ಮಣ್ಣು ಹಿಂದೆಂದಿಗಿಂತ ಅತಿ ಹೆಚ್ಚು ಮಾಲಿನ್ಯಕ್ಕೆ ಒಳಗಾಗಿದೆ. ಬೆಳೆಯ ಇಳುವರಿಗೆ ಇದು ಅಡ್ಡಬರುತ್ತಿದೆ. ಅತ್ತ ಇಥಿಯೋಪಿಯಾದಿಂದ ತೊಡಗಿ, ಇತ್ತ ಸ್ವಿಟ್ಜರ್‌ಲ್ಯಾಂಡ್‌ವರೆಗೂ ಅದೇ ಸ್ಥಿತಿ. ಒಂದೇ ಜಗತ್ತು, ಒಂದೇ ದೊಡ್ಡ ಸಮಸ್ಯೆ, ಅಂದರೆ ಜಗತ್ತಿನ ಎಲ್ಲರೂ ಪಾಲುದಾರರೇ.

ಇದೇ ಸಂದರ್ಭದಲ್ಲಿ ಮಾಸ್ಕೊದ ಜಗತ್ಪ್ರಸಿದ್ಧ ಮಣ್ಣಿನ ಮ್ಯೂಸಿಯಮ್ಮನ್ನು ಕೂಡ ವೆಬಿನಾರ್ ಮೂಲಕವೇ ದರ್ಶನ ಮಾಡಿಸಲಾಯಿತು. ವಿಶೇಷವೆಂದರೆ, ಉತ್ತರ ಧ್ರುವ ಭಾಗದಿಂದ ತೊಡಗಿ, ಇತ್ತ ಉಷ್ಣವಲಯದವರೆಗೆ ಸಂಗ್ರಹಿಸಿದ್ದ 2,500 ಬಗೆಯ ಮಣ್ಣನ್ನು ಪ್ರದರ್ಶಿಸಲಾಗಿತ್ತು. ಮಣ್ಣಿನ ಬಗ್ಗೆ ನಮಗಿರುವ ಜ್ಞಾನ ಎಷ್ಟೆಂಬುದರ ಪರೀಕ್ಷೆ ಇದಾಗಿತ್ತು. ಹಾಗಾದರೆ ಆಯಾ ದೇಶದ ಕೃಷಿ ಇಲಾಖೆಗಳು ಈ ನಿಟ್ಟಿನಲ್ಲಿ ಯೋಚಿಸಿಲ್ಲವೇ? ಖಂಡಿತ ಯೋಚಿಸಿವೆ. ಆದರೆ ಬದಲಾಗುತ್ತಿರುವ ಹವಾಗುಣವು ಕೃಷಿ ಮೇಲೆ ಬೀರಿರುವ ಪರಿಣಾಮದ ಕುರಿತು ಆಗಬೇಕಾದಷ್ಟು ಚರ್ಚೆ ಆಗಿಲ್ಲ.

ಇದೇ ತಿಂಗಳು ವಿಶ್ವಸಂಸ್ಥೆಯ ಆಹಾರ ಮತ್ತು ಕೃಷಿ ವಿಭಾಗ 'ಗ್ಲೋಬಲ್ ಅಸೆಸ್‌ಮೆಂಟ್ ಆಫ್ ಸಾಯಿಲ್ ಪೊಲ್ಯೂಷನ್' ಎಂಬ ಸಮೀಕ್ಷಾ ವರದಿಯನ್ನು ಬಿಡುಗಡೆ ಮಾಡುತ್ತಿದೆ (ಇದೇ 4ರಂದು). ಇದರಲ್ಲಿ ಆಯಾ ದೇಶಗಳ ಮಣ್ಣಿನ ಆರೋಗ್ಯದ ಕುರಿತು ನಿಖರ ಅಂಕಿ ಅಂಶಗಳಿರುತ್ತವೆ.

ಭಾರತ ಸರ್ಕಾರವು ರೈತರಿಗೆ 2014ರಿಂದಲೂ 'ಹೆಲ್ತ್ ಕಾರ್ಡ್' ನೀಡುವ ಯೋಜನೆಯನ್ನು ಹಮ್ಮಿಕೊಂಡಿದೆ. ಈ ದಿಸೆಯಲ್ಲಿ ಬಹಳಷ್ಟು ಕೆಲಸಗಳೂ ಆಗಿವೆ. ಇದರಲ್ಲಿ ಮಣ್ಣಿನ ಆರೋಗ್ಯದ ಕುರಿತು ಯಾವ ರಾಸಾಯನಿಕಗಳ ಕೊರತೆ ಇದೆ, ಯಾವ ಪ್ರಮಾಣದಲ್ಲಿ ಪೋಷಕಗಳನ್ನು ಕೊಡಬೇಕು, ಮಣ್ಣಿನ ಗುಣಮಟ್ಟ ಯಾವ ಬಗೆಯದು ಎಂಬೆಲ್ಲ ವಿವರಗಳು ಇರುತ್ತವೆ.

ನಮ್ಮ ರಾಜ್ಯದ ಪ್ರತೀ ಜಿಲ್ಲೆಯಲ್ಲೂ ಮಣ್ಣಿನ ಆರೋಗ್ಯ ಕೇಂದ್ರಗಳಿವೆ. ಅವಕ್ಕೆ ಹೊಂದಿಕೊಂಡಂತೆ ಮಣ್ಣಿನ ಪರೀಕ್ಷಾ ಪ್ರಯೋಗಾಲಯಗಳೂ ಇವೆ. ರೈತರು ನಿರೀಕ್ಷಿತ ಮಟ್ಟದಲ್ಲಿ ಪ್ರಯೋಜನ ಪಡೆದುಕೊಳ್ಳುತ್ತಿರುವುದರ ಬಗ್ಗೆ ಅನುಮಾನಗಳಿವೆ. ಇದರ ಜೊತೆಗೆ ಕೆಲವು ತಜ್ಞರು ಸ್ವಯಂಪ್ರೇರಿತರಾಗಿ ರೈತರಿಗೆ ಮಣ್ಣಿನ ಫಲವತ್ತತೆಯ ಬಗ್ಗೆ ಉಪಯುಕ್ತ ಮಾಹಿತಿ ನೀಡುತ್ತಿದ್ದಾರೆ. ಇಂಥವರಲ್ಲಿ ಒಬ್ಬರು 'ಸಾಯಿಲ್ ವಾಸು' ಎಂದೇ ನಾಡಿನಾದ್ಯಂತ ಖ್ಯಾತರಾದ ಪಿ.ಶ್ರೀನಿವಾಸ್. ಅವರು ಜಿಲ್ಲಾ ಕೇಂದ್ರಗಳಲ್ಲಿ ಮಾಡುವ ಮಣ್ಣಿನ ಪರೀಕ್ಷೆಯ ಬಗ್ಗೆ ಇನ್ನೊಂದು ಅಂಶವನ್ನು ಸೇರಿಸಬೇಕು ಎನ್ನುತ್ತಾರೆ. ಇಂಥ ಕೇಂದ್ರಗಳಲ್ಲಿ ಮಣ್ಣಿನ ರಾಸಾಯನಿಕ ಧಾತುಗಳ ಕೊರತೆ ಅಥವಾ ಹೆಚ್ಚುವರಿ ಬಗ್ಗೆ ಮಾಹಿತಿ ಸಿಕ್ಕುತ್ತದೆಯೇ ಹೊರತು ಮಣ್ಣಿನ ಬಹುಮುಖ್ಯ ಭೌತಿಕ ಘಟಕದ ಬಗ್ಗೆಯಾಗಲೀ ಅಥವಾ ಜೈವಿಕ ಘಟಕದ ಬಗ್ಗೆಯಾಗಲೀ ಮಾಹಿತಿ ನೀಡುವ ಪರಿಪಾಟ ಅಲ್ಲಿಲ್ಲ ಎನ್ನುತ್ತಾರೆ.

ಒಂದು ಎಕರೆ ಖುಷ್ಕಿಯಲ್ಲಿ 14 ಬಗೆಯ ವಿವಿಧ ಬೆಳೆಗಳನ್ನು ಬೆಳೆದು ರೈತರಿಗೆ ಹೊಸ ಹುರುಪು ತುಂಬಿದ್ದಾರೆ. ಹೊಲಗಳಿಗೆ ಹೋಗಿ ರೈತರ ಸಮ್ಮುಖದಲ್ಲಿ ಮಣ್ಣಿನ ಮಾದರಿ ಸಂಗ್ರಹಿಸಿ ಅದರಲ್ಲಿ ಜೈವಿಕ ಘಟಕ ಯಾವುದು ಎಂಬುದನ್ನು ಪರಿಚಯ ಮಾಡಿಸಿಕೊಡುತ್ತಿದ್ದಾರೆ. ಲಾಭ- ನಷ್ಟ ಯೋಚಿಸದೆ ರೈತರ ಬದುಕನ್ನೇ ಗುರಿ ಮಾಡಿಕೊಂಡ ಇಂಥವರೇ ರೈತಮಿತ್ರರು.

ಚುರುಮುರಿ



ವೈರಸ್‌ಗೂ ಗಡಿನಿರ್ಬಂಧ

• ಸುಧೀಂದ್ರ

ಬೆಳಿಗ್ಗೆ ಫೋನ್ ಎತ್ತಿದ ಕೂಡಲೇ 'ಇವತ್ತಿನ ಪೇಪರ್ ನೋಡಿದ್ಯಾ? ಕೊರೊನಾ ವೈರಸ್ ಓಡಿಸೋಕೆ ವಿಮಾನದಿಂದಲೇ ಔಷಧ ಸಿಂಪಡಣೆ ಮಾಡ್ತಾರಂತೆ, ಮಾರ್ಕೆಟ್‌ಗೆ ಹೋಗ್ಬೇಕಾದ್ರೆ ತಲೆಗೊಂದು ಟೋಪಿ ಹಾಕ್ಕೋ. ಔಷಧ ಬಿದ್ದು, ಇರೋ ನಾಲ್ಕು ಕೂದಲೂ ಉದುರಿಹೋಗತ್ವೆ' ಎಂದು ರೇಗಿಸಿದ ಗೆಳೆಯ ಸೀನ.

'ಏನಂತೆ ಸೀನಣ್ಣನ ಕತೆ?' ಎನ್ನುತ್ತಾ ಮಡದಿ ಬಂದಳು. ವಿಷಯ ಕೇಳಿ, 'ವಿಮಾನದಿಂದ ಔಷಧಿ ಸಿಂಪಡಿಸಿದ್ರೆ ಕೊರೊನಾ ವೈರಸ್ ನಿಜವಾಗಲೂ ಸಾಯತ್ವಾ? ಮನುಷ್ಯರೆತ್ತರದಲ್ಲಿ ಒಂದಷ್ಟು ದೂರ ಮುಂದೆ ಹೋಗೋ ವೈರಸ್‌ಗಳಿಗೆ ಆ ಔಷಧ ತಲುಪುತ್ತಾ?' ಪ್ರಶ್ನೆಗಳನ್ನು ಸುರಿಸಿದಳು.

'ನನಗೂ ಗೊತ್ತಿಲ್ಲ, ಅದಕ್ಕೆ ಪರ್ಮಿಷನ್ ಕೊಟ್ಟಿರೋರಿಗಂತೂ ಖಂಡಿತಾ ಗೊತ್ತಿರೋದಿಲ್ಲ. ಇದೆಲ್ಲಾ ಬಿಸಿನೆಸ್ ಕಳೆದುಕೊಂಡಿರುವ ವಿಮಾನ ಕಂಪನಿಗಳ ಕರಾಮತ್ತಿರಬೇಕು' ಎಂದೆ.

'ಈ ಔಷಧದ ತುಂತುರಿಗೆ ಸಿಕ್ಕೊಂಡು ಒಂದಷ್ಟು ವೈರಸ್‌ಗಳು ಸಾಯಬಹುದೂಂತ್ಲೇ ಅಂದ್ಕೊಳ್ಳೋಣ. ಆದರೆ, ವಿಮಾನ ಬೀಸೋ ರಭಸಕ್ಕೆ ಔಷಧ ಸೇರ್ಕೊಂಡಿರೋ ಗಾಳಿ, ಒಂದಷ್ಟು ವೈರಸ್‌ಗಳನ್ನ ಬೇರೆ ಊರಿನತ್ತ ತಳ್ಳಬಹುದಲ್ವಾ?' ಎಂಬ ಲಾ ಪಾಯಿಂಟ್ ಹಾಕಿದಳು.

'ಹೇಗೋ ಒಂದು, ಪೀಡೆ ತೊಲಗಿದರೆ ಸಾಕು' ಎಂದು ಸೀರಿಯಸ್ಸಾಗಿ ಉತ್ತರಿಸಿದೆ.

'ನೆರೆ ರಾಜ್ಯದವರು ಯಾರಾದರೂ ನಾಳೆ ಕೋರ್ಟಿನಲ್ಲಿ ಕೇಸ್ ಹಾಕಬಹುದು. ಕರ್ನಾಟಕದಿಂದ ವಿಮಾನದ ಮೂಲಕ ಓಡಿಸಿದ ವೈರಸ್‌ಗಳು ನಮ್ಮ ರಾಜ್ಯಕ್ಕೆ ನುಗ್ಗಿ ಹಾವಳಿ ನಡೆಸುತ್ತಿವೆ, ಅಲ್ಲಿಂದ ನಮಗೆ ಪರಿಹಾರ ಕೊಡಿಸಿ ಎಂದರೆ ಏನ್ಮಾಡೋದು? ಮೋಡ ಬಿತ್ತನೆ ಮಾಡಿ ನಮ್ಮಲ್ಲಿನ ಮಳೆ ಕಸಿದುಕೊಂಡರು ಎಂದು ಕೆಲವರು ಆರೋಪ ಮಾಡಿರ್ಲಿಲ್ವಾ?' ಎಂದಳು.

'ರಾಜ್ಯಗಳ ಮಧ್ಯೆ ಹೆದ್ದಾರಿ ಬ್ಲಾಕ್ ಮಾಡಿದ ಹಾಗೆ, ಏರ್‌ಸ್ಪೇಸ್ ಬಂದ್ ಮಾಡಬಹುದೇನೋ, ನಮ್ಮ ಸೈಂಟಿಸ್ಟ್‌ಗಳನ್ನು ಕೇಳಿ ನೋಡ್ತೀನಿ' ಎಂದೆ.

'ಇನ್ನರ್ಧ ಗಂಟೆಯೊಳಗೆ ಸ್ನಾನ ಮಾಡಿ ಬರದಿದ್ರೆ ನನ್ನ ಅಡುಗೆ ಮನೆ ಲಾಕ್‌ಡೌನ್ ಆಗತ್ತೆ. ತಿಂಡಿ ಸಿಗೋಲ್ಲ' ಎನ್ನುತ್ತಾ ಮಡದಿ ಮುಗುಳ್ನಕ್ಕಳು.

ಸಂಗತ

ಆಗಲಿ ಶಿಕ್ಷಣದ ಪುನರ್‌ವ್ಯಾಖ್ಯಾನ

ಶೈಕ್ಷಣಿಕ ವ್ಯವಸ್ಥೆ ಹಾಗೂ ಮೌಲ್ಯಮಾಪನದ ವಿಧಾನವನ್ನು ಬದಲಾಯಿಸುವ ಬಗ್ಗೆ ಗಂಭೀರವಾದ ಚಿಂತನೆಗಳು ನಡೆಯಬೇಕಿದೆ

• ಡಾ. ಅರ್ಚನಾ ಆರ್.

ಕೊರೊನಾ ವೈರಸ್ಸಿನ ಕಾರಣದಿಂದ ಜಗತ್ತು ಹಿಂದೆಂದೂ ಕಂಡು ಕೇಳರಿಯದಂತೆ ಬದಲಾಗಿದೆ. ಇಂತಹ ಬಿಕ್ಕಟ್ಟಿನ ಈ ಸಮಯವು ಶೈಕ್ಷಣಿಕವಾಗಿಯೂ ಹೊಸ ಹೊಸ ದೃಷ್ಟಿಕೋನಗಳ ಅಳವಡಿಕೆಗೆ, ಅರ್ಥಪೂರ್ಣ ಮತ್ತು ಮೌಲ್ಯಾಧಾರಿತ ಶಿಕ್ಷಣದ ಪುನರ್‌ವ್ಯಾಖ್ಯಾನಕ್ಕೆ ನಮಗೆ ದೊರೆತ ಸದವಕಾಶವಾಗಿದೆ.

ಪುಸ್ತಕದ ಪರಿಧಿಗಷ್ಟೇ ಸೀಮಿತವಾಗಿ ಕಲಿಯುವುದು, ಕಲಿಸುವುದು, ಕಂಠಪಾಠ ಮಾಡುವುದಷ್ಟೇ ಶಿಕ್ಷಣವಾಗಿದೆ. ಹೀಗೆ ಉರು ಹೊಡೆದದ್ದನ್ನು ಕೇವಲ ಮೂರು ಗಂಟೆ ನೆನಪಿಸಿಕೊಂಡು ಪರೀಕ್ಷೆ ಬರೆಯುವ ಮತ್ತು ಒತ್ತಡದ ಕಲಿಕಾ ವ್ಯವಸ್ಥೆಯಲ್ಲಿ ಸಿಲುಕಿಕೊಂಡು ನರಳುತ್ತಿರುವ ಸದ್ಯದ ವ್ಯವಸ್ಥೆಯಿಂದ ವಿದ್ಯಾರ್ಥಿಗಳನ್ನು ಪಾರು ಮಾಡಲು ಬದಲಾವಣೆಯೊಂದನ್ನು ತುರ್ತಾಗಿ ತರಬಾರದೇಕೆ? ಉನ್ನತ ಶಿಕ್ಷಣ ವ್ಯವಸ್ಥೆಯಲ್ಲಿ ಈ ಹಿಂದೆಯೇ ಹೊಸ ಹೊಸ ಪರೀಕ್ಷಾ ನೀತಿಗಳು, ಮೌಲ್ಯಮಾಪನ ವಿಧಾನಗಳನ್ನು ಜಾರಿಗೆ ತರಲಾಗಿದೆ. ಅಂತೆಯೇ ಈಗಿನ ಸಂದಿಗ್ಧ ಸ್ಥಿತಿಯಲ್ಲಿ ಬೋರ್ಡ್ ಪರೀಕ್ಷೆಗಳನ್ನು ನಡೆಸುವ ಅಥವಾ ಮುಂದೂಡುವ ಕುರಿತು ಕೇವಲ ಚರ್ಚೆಗಳು ನಡೆಯುತ್ತಿವೆಯೇ ಹೊರತು, ಅದಕ್ಕೆ ಬದಲಿ ವ್ಯವಸ್ಥೆಯನ್ನು ಕಲ್ಪಿಸುವ ಬಗ್ಗೆ ಗಂಭೀರವಾದ ಚಿಂತನೆಗಳು ನಡೆದೇ ಇಲ್ಲ.

ಶೈಕ್ಷಣಿಕ ಕ್ಷೇತ್ರದ ಅನೇಕ ಸಮಸ್ಯೆಗಳಿಗೆ ಪರ್ಯಾಯ ವ್ಯವಸ್ಥೆಯನ್ನು ಕಂಡುಕೊಳ್ಳಲು ಇದು ಸಕಾಲ. ಶೈಕ್ಷಣಿಕ ವ್ಯವಸ್ಥೆ ಹಾಗೂ ಮೌಲ್ಯಮಾಪನದ ವಿಧಾನವನ್ನು ಬದಲಾಯಿಸುವ ಬಗ್ಗೆ ಗಂಭೀರವಾದ ಚಿಂತನೆಗಳು ನಡೆಯಬೇಕಿದೆ. ಇದಕ್ಕೆ ಬದಲಾಗಿ ಸರ್ಕಾರಗಳು ಇನ್ನೂ ಹಳೆಯ ಮಾದರಿಯ ಪರೀಕ್ಷಾ ಪದ್ಧತಿಗೇ ಅಂಟಿಕೊಂಡು ಆಲೋಚಿಸುತ್ತಿರುವುದು ದುರದೃಷ್ಟಕರ. ಇಂತಹ ಪದ್ಧತಿಯಿಂದ ಮಕ್ಕಳು ಮತ್ತು ಪೋಷಕರಲ್ಲಿ ಇಂದು ಒತ್ತಡ ಇನ್ನಷ್ಟು ಹೆಚ್ಚಾಗಿದೆ.

ಹೀಗಿರುವಾಗ, ದೇಶದ ಉನ್ನತ ಶಿಕ್ಷಣ ಸಂಸ್ಥೆಗಳು, ಶೈಕ್ಷಣಿಕ ಸಮಿತಿಗಳು ವಿದ್ಯಾರ್ಥಿಗಳ ಕಲಿಕೆಯ ದಿಸೆಯಲ್ಲಿ ಹೊಸ ದೃಷ್ಟಿಕೋನವನ್ನು ಕಂಡುಕೊಳ್ಳಲು ಪ್ರಯತ್ನಿಸುತ್ತಿಲ್ಲವೇಕೆ? ಆನ್‌ಲೈನ್ ಪರೀಕ್ಷೆಗಳನ್ನು ನಡೆಸಲು ನಮ್ಮಲ್ಲಿ ಹಲವಾರು ಸಮಸ್ಯೆಗಳಿವೆ ಎಂಬುದನ್ನು ದೊಡ್ಡದು ಮಾಡಲಾಗಿದೆ. ನೆಟ್‌ವರ್ಕ್ ಸಮಸ್ಯೆ ಇರುವುದು ನಿಜ. ಅಂತೆಯೇ ತಾಂತ್ರಿಕ ವಲಯದಲ್ಲಿ ಭಾರತವು ಇತರ ದೇಶಗಳಂತೆಯೇ ಹಲವಾರು ಪ್ರಯೋಗಗಳನ್ನು ನಡೆಸಿ ಮುನ್ನುಗ್ಗುತ್ತಿರುವಾಗ, ಶಿಕ್ಷಣ ವಲಯದಲ್ಲಿ ದೊಡ್ಡ ದೊಡ್ಡ ತಾಂತ್ರಿಕ ಕಂಪನಿಗಳೊಡನೆ ಕೈಜೋಡಿಸಬಾರದೇಕೆ?

ಹಾಗೆಯೇ ಇನ್ನೊಂದು ಬಹುಮುಖ್ಯ ಆತಂಕವೆಂದರೆ, ಆನ್‌ಲೈನ್ ಪರೀಕ್ಷೆಗಳನ್ನು ನಡೆಸಿದರೆ ನಕಲು ಮಾಡಲು ಅವಕಾಶವಾಗುತ್ತದೆ ಎಂಬುದು. ಇದು ಮೌಲ್ಯಮಾಪನಕ್ಕೆ ಎದುರಾಗಿರುವ ದೊಡ್ಡ ಸವಾಲೇ ಆಗಿದೆ. ಆದರೆ ವಿದ್ಯಾರ್ಥಿಗಳು ಸೃಜನಾತ್ಮಕವಾಗಿ, ವಿಮರ್ಶಾತ್ಮಕವಾಗಿ ಯೋಚಿಸಿಯೇ ಉತ್ತರಿಸಬೇಕಾದ ರೀತಿಯಲ್ಲಿ ಪ್ರಶ್ನೆಪತ್ರಿಕೆಗಳನ್ನು ವಿನ್ಯಾಸಗೊಳಿಸಿದಾಗ, ನಕಲು ಮಾಡುವುದು ಅಸಾಧ್ಯವಾಗುತ್ತದೆ.

ಹಾಗೆಯೇ ವಿದ್ಯಾರ್ಥಿಗಳ ಕಲಿಕಾ ಜ್ಞಾನದ ಮಟ್ಟದ ಮೌಲ್ಯಮಾಪನವನ್ನು ಶೈಕ್ಷಣಿಕ ವರ್ಷದ ಉದ್ದಕ್ಕೂ ಮಾಡುವಂತೆ ಶಿಕ್ಷಕರಿಗೆ ಸೂಚಿಸಬಹುದು. ಕೇವಲ ಲಿಖಿತ ಪರೀಕ್ಷೆಯಲ್ಲದೆ ವಿವಿಧ ಕೌಶಲಗಳನ್ನು ರೂಢಿಸುವ ಉತ್ತಮ ಹೋಮ್‌ವರ್ಕ್, ಅಸೆಸ್‌ಮೆಂಟ್‌ಗಳನ್ನು ನೀಡುತ್ತಾ ಆಂತರಿಕ ಮೌಲ್ಯಮಾಪನದ ಅಂಕ ನೀಡುವ ಪದ್ಧತಿ ಈಗಾಗಲೇ ಹಲವು ಶೈಕ್ಷಣಿಕ ಹಂತಗಳಲ್ಲಿದೆ. ಅದನ್ನು ಇನ್ನಷ್ಟು ನಿಷ್ಪಕ್ಷಪಾತವಾಗಿ ಮಾಡುವಂತೆ ಶಿಕ್ಷಕರಿಗೆ ಸೂಚಿಸಬಹುದು.

ಶಾಲೆಗಳು ತಮ್ಮ ವಿದ್ಯಾರ್ಥಿಗಳ ಸಾಧನೆಯನ್ನು ಉತ್ಪ್ರೇಕ್ಷಿಸಿ ಫಲಿತಾಂಶ ನೀಡುತ್ತವೆ ಎಂದಾದಲ್ಲಿ, ಶಾಲೆಗಳ ಒಂದು ಗುಂಪನ್ನು ರಚಿಸಿ ಮೌಲ್ಯಮಾಪನವನ್ನು ಪರಸ್ಪರ ವಿನಿಮಯ ಮಾಡಿಕೊಳ್ಳಬಹುದು. ಅಲ್ಲದೆ ವಿದ್ಯಾರ್ಥಿಗಳ ಕಾಲೇಜು ಪ್ರವೇಶಾವಕಾಶಕ್ಕೆ ಸಿದ್ಧ ಮಾದರಿಯ ಆನ್‌ಲೈನ್ ಪರೀಕ್ಷೆಗಳನ್ನು ನಡೆಸಲು ಉನ್ನತ ಶಿಕ್ಷಣ ಸಂಸ್ಥೆಗಳ ನೆರವು ಪಡೆಯಬಹುದು. ವಿದ್ಯಾರ್ಥಿಗಳನ್ನು ಸ್ವಯಂ ಮೌಲ್ಯಮಾಪನ ಮತ್ತು ತನ್ನ ಸಹಪಾಠಿಯ ಮೌಲ್ಯಮಾಪನದಲ್ಲಿ ತೊಡಗಿಸುವುದು, ಅಂತಿಮವಾಗಿ ಅವರಲ್ಲಿ ಉತ್ತಮ ವ್ಯಕ್ತಿತ್ವ ರೂಪಿಸುವುದು ಶಿಕ್ಷಣದ ಗುರಿಯಾಗಬೇಕು.

ಶೈಕ್ಷಣಿಕವಾದ ಸಾಧನೆ ಮಾತ್ರವೇ ವಿದ್ಯಾರ್ಥಿಯ ಬೆಳವಣಿಗೆಯ ಮಾನದಂಡವಾಗಬೇಕೆ ಅಥವಾ ಸಾಮಾಜಿಕ, ಭಾವನಾತ್ಮಕ ಹಾಗೂ ನೈತಿಕ ನೆಲೆಯಲ್ಲಿಯೂ ಯಶಸ್ಸನ್ನು ಹೊಂದುವಂತೆ ಪ್ರೇರೇಪಿಸಲು ಸಾಧ್ಯವಿಲ್ಲವೇ ಎಂಬುದು ನಾವು ಪರಿಗಣಿಸಬೇಕಾದ ಪ್ರಶ್ನೆಯಾಗಿದೆ. ಶಿಕ್ಷಣ ಮತ್ತು ಮೌಲ್ಯಮಾಪನದಲ್ಲಿ ಬದಲಾವಣೆಗಳನ್ನು ಪ್ರೋತ್ಸಾಹಿಸುವ, ಸಂಘಟಿಸುವ, ಅಲ್ಲದೆ ಅವುಗಳನ್ನು ಕಾರ್ಯರೂಪಕ್ಕೆ ತರಲು ವಿದ್ಯಾರ್ಥಿಗಳು, ಶಿಕ್ಷಕರು, ಶಿಕ್ಷಣ ತಜ್ಞರು, ತಾಂತ್ರಿಕ ವರ್ಗದವರು ಹಾಗೂ ಸಂಶೋಧಕರನ್ನು ಒಳಗೊಂಡ ಶೈಕ್ಷಣಿಕ ಸಮಿತಿಗಳಿಗೆ ಸಂಪೂರ್ಣ ಸ್ವಾಯತ್ತತೆಯನ್ನು ನೀಡುವ ಕಾರ್ಯ ಆಗಬೇಕು.

ಉನ್ನತ ಶಿಕ್ಷಣ ಸಂಸ್ಥೆಗಳು ನಡೆಸುವ ಮೌಲ್ಯಮಾಪನಗಳ ಮೂಲಕ ಮೌಲ್ಯಮಾಪನದ ಗುಣಮಟ್ಟವನ್ನು ಹೆಚ್ಚಿಸಿದಾಗ, ನಮ್ಮ ಯುವಜನ ಅಂತರರಾಷ್ಟ್ರೀಯ ವಿಶ್ವವಿದ್ಯಾಲಯಗಳಿಗೆ ವಲಸೆ ಹೋಗುವುದನ್ನು ತಡೆಯಲು ಸಾಧ್ಯ. ಬಿಕ್ಕಟ್ಟಿನ ಈ ಸಂದರ್ಭವನ್ನು ನಿಜಕ್ಕೂ ಒಂದು ಹೊಸ ಅವಕಾಶವೆಂದೇ ಪರಿಗಣಿಸಿದಲ್ಲಿ, ದೇಶದ ಸವಾಲುಗಳನ್ನು ಎದುರಿಸಲು ಸಾಧ್ಯವಾಗುವಂತೆ ಯುವಜನರನ್ನು ಸಿದ್ಧಗೊಳಿಸಿ, ಸದೃಢ ಭಾರತ ನಿರ್ಮಾಣದ ಕನಸನ್ನು ಸಾಕಾರಗೊಳಿಸಬಹುದು.

ಲೇಖಕಿ: ಸಹಾಯಕ ಪ್ರಾಧ್ಯಾಪಕಿ, ವಿಜಯ ಕಾಲೇಜು, ಬೆಂಗಳೂರು

ವಾಚಕರ ವಾಣಿ

ಲಸಿಕೆ ನಿರ್ವಹಣೆ ಸಮರ್ಪಕವಾಗಲಿ

ದೇಶದಲ್ಲಿ ಕೋವಿಡ್ ಲಸಿಕೆ ಅಗತ್ಯ ಪ್ರಮಾಣದಲ್ಲಿ ಲಭ್ಯವಿಲ್ಲದೆ ಜನ ಆಸ್ಪತ್ರೆಗಳ ಮುಂದೆ ಸರದಿ ಸಾಲಿನಲ್ಲಿ ನಿಂತು ಪರದಾಡುತ್ತಿದ್ದಾರೆ. ಈಗಾಗಲೇ ಮೊದಲ ಡೋಸ್ ಪಡೆದವರ ಮೊಬೈಲ್ ಫೋನಿಗೆ ಎರಡನೇ ಡೋಸ್ ಪಡೆಯುವಂತೆ ಸಂದೇಶ ಬರುವ ಕಾರಣ, ಬಹಳಷ್ಟು ಮಂದಿ ಆ ದಿನ ತಮ್ಮ ಕೆಲಸಗಳನ್ನು ಬಿಟ್ಟು ಆಸ್ಪತ್ರೆಗಳಿಗೆ ತೆರಳುತ್ತಾರೆ. ಆದರೆ ಅಲ್ಲಿ ಲಸಿಕೆ ಲಭ್ಯ ಇರುವುದಿಲ್ಲ. ಆಗ ಸಿಬ್ಬಂದಿ ಜೊತೆ ಜಗಳ ಮಾಡಿ ಅವರನ್ನು ಶಪಿಸುತ್ತಾ ಹೈರಾಣಾಗಿ ವಾಪಸಾಗುತ್ತಾರೆ. ಮತ್ತೆ ಯಾವಾಗ ಹೋಗಬೇಕು ಎನ್ನುವ ಗೊಂದಲ ಮೂಡುತ್ತದೆ. ಇದರಿಂದ ಲಸಿಕೆಯ ಲಭ್ಯತೆ ಮತ್ತು ಫಲಾನುಭವಿಗಳ ಸರದಿ ಬಗ್ಗೆ ತಂತ್ರಾಂಶದಲ್ಲಿ ದಾಖಲೀಕರಣ ಹಾಗೂ ನಿರ್ವಹಣೆ ಸಮರ್ಪಕವಾಗಿ ಇಲ್ಲವೆಂಬುದು ತಿಳಿಯುತ್ತಿದೆ.

ಉದಾಹರಣೆಗೆ, ನಾನು, ನನ್ನ ಪತ್ನಿ ಈಗಾಗಲೇ ಎರಡೂ ಡೋಸ್ ಲಸಿಕೆಯನ್ನು ಪಡೆದಿದ್ದೇವೆ. 'ನಿಮ್ಮ ಎಲ್ಲಾ ಡೋಸ್‌ಗಳು ಯಶಸ್ವಿಯಾಗಿ ಮುಗಿದಿವೆ' ಎಂಬ ಸಂದೇಶ ಸಹ ನಮಗೆ ಈಗಾಗಲೇ ಬಂದಿದೆ. ಆದರೆ ಜೂನ್ 1ರಂದು ಬೆಳಿಗ್ಗೆ ನಮ್ಮ ಮೊಬೈಲ್ ಫೋನಿಗೆ 'ನಿಮ್ಮ ಎರಡನೇ ಡೋಸ್ ಲಸಿಕೆ ಬಾಕಿ ಇದೆ, ಜೂನ್ 4ರಂದು ನೀವು ಲಸಿಕೆ ಪಡೆಯಲು ಬರಬಹುದು' ಎಂಬ ಸಂದೇಶ ಬಂದಿದೆ. ಲಸಿಕೆ ಪಡೆದ ಬಗೆಗಿನ ವಿವರಗಳು ಸರಿಯಾಗಿ ದಾಖಲಾಗುತ್ತಿಲ್ಲ ಎಂಬುದು ಇದರಿಂದ ಸ್ಪಷ್ಟವಾಗಿ ತಿಳಿಯುತ್ತದೆ. ಲಕ್ಷಾಂತರ ಕೋಟಿ ರೂಪಾಯಿಗಳ ವ್ಯವಹಾರ ನಿರ್ವಹಣೆಯು ಕೇವಲ ತಂತ್ರಾಂಶದ ಮೂಲಕ ಕೈ ಬೆರಳಿನಲ್ಲಿ ಯಶಸ್ವಿಯಾಗಿ ನಡೆಯುತ್ತಿರುವ ಈ ಕಾಲದಲ್ಲಿ, ಅಮೂಲ್ಯ ಲಸಿಕೆಯ ಬಗ್ಗೆ ಇಂತಹ ಅಸಮರ್ಪಕ ನಿರ್ವಹಣೆ ವಿಷಾದಕರ. ಇನ್ನಾದರೂ ಸರಿಹೋಗಬಹುದೇ?

ವಿ.ತಿಪ್ಪೇಸ್ವಾಮಿ, ಹಿರಿಯೂರು

ಸ್ಮಾರ್ಟ್ ಫೋನ್ ಉಚಿತವಾಗಿ ವಿತರಿಸಿ

ಕೋವಿಡ್ ಸಂಕಷ್ಟದ ಸಮಯದಲ್ಲಿ ಎಸ್‌ಎಸ್‌ಎಲ್‌ಸಿ ಮಕ್ಕಳಿಗಾಗಿ ರಾಜ್ಯದ ಹಲವು ಶೈಕ್ಷಣಿಕ ಜಿಲ್ಲೆಗಳಲ್ಲಿ ಶಿಕ್ಷಣ ಇಲಾಖೆಯ ಅಧಿಕಾರಿಗಳ ತಂಡ ಗೂಗಲ್ ಫಾರ್ಮ್ ಮೂಲಕ ವಿಷಯವಾರು ರಸಪ್ರಶ್ನೆಗಳನ್ನು ತಯಾರಿಸಿ, ವಿದ್ಯಾರ್ಥಿಗಳು ಉತ್ತರಿಸುವಂತೆ ಮಾಡುತ್ತಿರುವುದು ಉತ್ತಮ ಕ್ರಮ. ಆದರೆ ಎಲ್ಲ ವಿದ್ಯಾರ್ಥಿಗಳು ಇದರಲ್ಲಿ ಪಾಲ್ಗೊಳ್ಳುವಂತೆ ಮಾಡಬೇಕೆಂದು ಶಿಕ್ಷಕರ ಮೇಲೆ ಒತ್ತಡ ಹೇರುತ್ತಿರುವುದು ಸರಿಯಲ್ಲ. ಸರ್ಕಾರಿ ಶಾಲಾ ವಿದ್ಯಾರ್ಥಿಗಳ ಪೋಷಕರಲ್ಲಿ ಹೆಚ್ಚಿನವರ ಬಳಿ ಸ್ಮಾರ್ಟ್ ಫೋನ್ ಇರುವುದಿಲ್ಲ. ಒಂದು ವೇಳೆ ಇದ್ದರೂ ದುಡಿಮೆಯಿಲ್ಲದ ಕಾರಣ ಡೇಟಾ ಪ್ಯಾಕ್ ರಿಚಾರ್ಜ್ ಮಾಡಿಸುವಷ್ಟು ಹಣ ಹೊಂದಿರುವುದಿಲ್ಲ.

ಈ ಬಗ್ಗೆ ಪೋಷಕರ ಮನವೊಲಿಸಲು ಹೋದರೆ 'ಹೊಟ್ಟೆಗೆ ಹಿಟ್ಟಿಲ್ಲ, ಜುಟ್ಟಿಗೆ ಮಲ್ಲಿಗೆ ಹೂವು ಅಂದಂಗೆ ಸ್ವಾಮಿ' ಎನ್ನುತ್ತಾರೆ. ಹಾಗಾಗಿ ಶಿಕ್ಷಣ ಇಲಾಖೆಯು ಸರ್ಕಾರಿ ಶಾಲೆಯ ಮಕ್ಕಳಿಗೆ ಸ್ಮಾರ್ಟ್ ಫೋನ್‌ಗಳನ್ನು ಉಚಿತವಾಗಿ ವಿತರಿಸುವುದರ ಜೊತೆಗೆ ಪರೀಕ್ಷೆ ಮುಗಿಯುವವರೆಗೆ ಉಚಿತ ಡೇಟಾ ಪ್ಯಾಕ್ ನೀಡಿ ಸಹಕರಿಸಲಿ. ಇದರಿಂದ ಅಧಿಕಾರಿಗಳ ಶ್ರಮಕ್ಕೆ ಬೆಲೆ ಸಿಗುತ್ತದೆ. ಶಿಕ್ಷಕರು ಒತ್ತಡರಹಿತವಾಗಿ ಕಾರ್ಯನಿರ್ವಹಿಸಬಹುದು ಹಾಗೂ ಎಲ್ಲ ವಿದ್ಯಾರ್ಥಿಗಳಿಗೂ ತಂತ್ರಜ್ಞಾನ ಆಧಾರಿತ ಕಲಿಕೆಯ ಪ್ರಯೋಜನ ದೊರಕುತ್ತದೆ.

ಪುಟ್ಟದಾಸು, ಮಂಡ್ಯ

ವ್ಯಾಪಾರಿಗಳ ನಡುವೆ ತಾರತಮ್ಯವೇಕೆ?

ಲಾಕ್‌ಡೌನ್‌ನ ಈ ಸಮಯದಲ್ಲಿ ಕಿರಾಣಿ, ಕಾಯಿಪಲ್ಲೆ, ಕಟ್ಟಡ ನಿರ್ಮಾಣ ಸಾಮಗ್ರಿ, ಮಾಂಸ ಮತ್ತು ಮದ್ಯದಂತಹ ಕೆಲವು ಅಂಗಡಿಗಳಿಗೆ ವ್ಯಾಪಾರಕ್ಕೆ ಕೆಲವೇ ತಾಸುಗಳ ಅವಕಾಶ ಕಲ್ಪಿಸಲಾಗಿದೆ. ಉಳಿದ ವ್ಯಾಪಾರಸ್ಥರು ತಮ್ಮ ಅಂಗಡಿಗಳನ್ನು ಪೂರ್ತಿಯಾಗಿ ಬಂದ್ ಮಾಡಬೇಕಾಗಿದೆ. ಆದರೆ ಇ-ಕಾಮರ್ಸ್ ಸಂಸ್ಥೆಗಳು ಮಾತ್ರ ತಮ್ಮ ವಸ್ತುಗಳನ್ನು ದಿನವಿಡೀ ಜನರಿಗೆ ಪೂರೈಸುತ್ತಿದ್ದು ಅವುಗಳ ವ್ಯಾಪಾರ ವೃದ್ಧಿಯಾಗಿದೆ. ಭವಿಷ್ಯದಲ್ಲಿ ಜನರಿಗೆ ಇದೇ ರೂಢಿಯಾಗಿ, ಸಣ್ಣ ಪುಟ್ಟ ವ್ಯಾಪಾರಸ್ಥರಿಗೆ ವಹಿವಾಟಿನಲ್ಲಿ ತೀವ್ರ ಹೊಡೆತ ಬೀಳುವ ಆತಂಕ ಮನೆ ಮಾಡುತ್ತಿದೆ. ಈ ನೀತಿಯು ಇ– ಕಾಮರ್ಸ್ ವ್ಯಾಪಾರಿಗಳು ಮತ್ತು ಸಾಮಾನ್ಯ ವ್ಯಾಪಾರಸ್ಥರ ನಡುವೆ ತಾರತಮ್ಯ ಉಂಟು ಮಾಡುತ್ತಿದೆ.

ದೇಶದಲ್ಲಿ ಕೃಷಿಯ ನಂತರ ಹೆಚ್ಚಿನ ಜನರಿಗೆ ಉದ್ಯೋಗ ಕೊಡುವುದು ಚಿಲ್ಲರೆ ವ್ಯಾಪಾರ. ಕೋವಿಡ್ ಸಾಂಕ್ರಾಮಿಕದ ಈ ಸಂದರ್ಭದಲ್ಲಿ ವ್ಯಾಪಾರಸ್ಥರ ಹಿತ ಕಾಯುವ ನೀತಿಗಳನ್ನು ರೂಪಿಸುವಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಮಹತ್ವದ ಪಾತ್ರ ವಹಿಸಬೇಕು.

ಉದಯ ಮ. ಯಂಡಿಗೇರಿ, ಧಾರವಾಡ

ಸುಂದರ ತಾಣದಲ್ಲಿ ಸಲ್ಲದ ನಿಯಮ

ಪ್ರಧಾನಿ ನರೇಂದ್ರ ಮೋದಿಯವರ ಆಪ್ತರು ಎನ್ನಲಾದ ಪ್ರಫುಲ್ ಖೋಡಾ ಪಟೇಲ್ ಅವರನ್ನು ಲಕ್ಷದ್ವೀಪದ ಆಡಳಿತಾಧಿಕಾರಿಯನ್ನಾಗಿ ನೇಮಕ ಮಾಡಿ, ಕೇಂದ್ರ ಸರ್ಕಾರ ತನ್ನ ನಿಲುವಿಗೆ ಪೂರಕವಾದ ನಿಯಮಗಳನ್ನು ಅಲ್ಲಿ ಜಾರಿ ಮಾಡುತ್ತಿದೆ. ಗೋಮಾಂಸದ ಉತ್ಪನ್ನಗಳ ಮೇಲೆ ನಿಷೇಧ ಹೇರಲಾಗಿದೆ, ಮದ್ಯ ಮಾರಾಟಕ್ಕೆ ಇದ್ದ ನಿಷೇಧವನ್ನು ತೆರವುಗೊಳಿಸಲಾಗಿದೆ, ಪಂಚಾಯಿತಿ ಚುನಾವಣೆಯಲ್ಲಿ ಭಾಗವಹಿಸುವವರು ಇಬ್ಬರಿಗಿಂತ ಹೆಚ್ಚು ಮಕ್ಕಳನ್ನು ಹೊಂದಿರಬಾರದು ಎಂಬ ನಿಯಮವನ್ನು ಜಾರಿಗೊಳಿಸಲಾಗಿದೆ. ಈ ಕಾನೂನನ್ನು ಎಲ್ಲರಿಗೂ ಅನ್ವಯ ಮಾಡಿದರೆ ದೇಶದ ಎಷ್ಟೋ ಸಂಸದರು ರಾಜೀನಾಮೆ ನೀಡಿ ಮನೆಗೆ ಹೋಗಬೇಕಾಗುತ್ತದೆ. ಮೊದಲು ಈ ಕಾನೂನನ್ನು ಸಂಸತ್ತಿಗೆ ಅನ್ವಯಿಸಿ, ಬಳಿಕ ಲಕ್ಷದ್ವೀಪದಲ್ಲಿ ಜಾರಿಗೊಳಿಸಲಿ.

ಭೂಲೋಕದ ಸ್ವರ್ಗದಂತಿರುವ ಈ ಸುಂದರವಾದ ದ್ವೀಪದಲ್ಲಿ ಈವರೆಗೆ 5 ಸಾವಿರ ಕೋವಿಡ್ ಪ್ರಕರಣಗಳು ದಾಖಲಾಗಿವೆ. ಆದರೂ ಸೂಕ್ತ ಔಷಧಿಗಳು ಲಭ್ಯವಿಲ್ಲ, ಆಸ್ಪತ್ರೆಗಳ ಕೊರತೆ ಇದೆ, ಸುಧಾರಿಸಿದ ಸವಲತ್ತುಗಳಿಲ್ಲ. ಅಲ್ಲಿನ ಜನರ ಪ್ರಮುಖ ಉದ್ಯೋಗ ಮೀನುಗಾರಿಕೆ. ಹೀಗಿದ್ದರೂ ಸ್ಥಳೀಯರು ಕರಾವಳಿಯಲ್ಲಿ ನಿರ್ಮಿಸಿದ್ದ ಮೀನುಗಾರಿಕಾ ಶೆಡ್‌ಗಳನ್ನು ನಾಶ ಮಾಡಲಾಗಿದೆ, ಅವರ ಸಲಕರಣೆಗಳನ್ನು ಧ್ವಂಸ ಮಾಡಲಾಗಿದೆ. ಇದಕ್ಕೆಲ್ಲ ಪ್ರಮುಖ ಕಾರಣ, ಅಲ್ಲಿ ಶೇ 95ರಷ್ಟು ಮುಸ್ಲಿಮರು ವಾಸಿಸುತ್ತಿರುವುದು. ಸುಂದರ ನಿಸರ್ಗತಾಣದಲ್ಲಿ ಕೋಮುವಾದ ಹರಡುವ ಪ್ರಯತ್ನ ಮೊದಲು ನಿಲ್ಲಲಿ.

ಡಾ. ಕೆ.ಷರೀಫಾ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಒಕ್ಕೂಟದೊಳಗೆ ತಿಕ್ಕಾಟ

ರಾಜ್ಯಗಳ ಒಕ್ಕೂಟವಾದ ಭಾರತದಲ್ಲಿ ಒಕ್ಕೂಟ ಅಥವಾ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳ ಅಧಿಕಾರ ವ್ಯಾಪ್ತಿ ಏನು ಎಂಬುದನ್ನು ಸಂವಿಧಾನದಲ್ಲಿ ಸ್ಪಷ್ಟವಾಗಿ ನಮೂದಿಸಲಾಗಿದೆ. ನಮ್ಮದು ಸಹಕಾರಿ ಒಕ್ಕೂಟ ವ್ಯವಸ್ಥೆ ಎಂದು ಬಣ್ಣಿಸಲಾಗುತ್ತದೆ. ಆದರೆ, ಇದು ಸಂಘರ್ಷಾತ್ಮಕ ವ್ಯವಸ್ಥೆಯಾಗಿ ಪರಿವರ್ತನೆಯಾದ ಹಲವು ನಿದರ್ಶನಗಳು ಇವೆ. ಕೇಂದ್ರದಲ್ಲಿ ಒಂದು ಪಕ್ಷ ಮತ್ತು ರಾಜ್ಯದಲ್ಲಿ ಮತ್ತೊಂದು ಪಕ್ಷದ ಸರ್ಕಾರ ಇದ್ದಾಗ ಎರಡೂ ಸರ್ಕಾರಗಳ ನಡುವೆ ಹಲವು ಬಾರಿ ತಿಕ್ಕಾಟ ನಡೆದಿವೆ.

ಸಂವಿಧಾನದ 356ನೇ ವಿಧಿಯನ್ನು ಬಳಸಿಕೊಂಡು ಹಲವು ರಾಜ್ಯಗಳ ಸರ್ಕಾರಗಳನ್ನೇ ಕೇಂದ್ರವು ವಜಾ ಮಾಡಿದೆ. ಇದಲ್ಲದೆ, ಅಧಿಕಾರ ವ್ಯಾಪ್ತಿಯ ವಿಚಾರದಲ್ಲಿ ಸಂಘರ್ಷ ಆಗಿರುವುದೂ ಇದೆ. ದೈನಂದಿನ ಆಳ್ವಿಕೆಯ ವಿಚಾರದಲ್ಲಿಯೂ ಕೇಂದ್ರ ಮತ್ತು ಕೆಲವು ರಾಜ್ಯ ಸರ್ಕಾರಗಳು ಜಗಳ ಮಾಡಿಕೊಂಡಿವೆ. 356ನೇ ವಿಧಿ ಅಡಿಯಲ್ಲಿ ರಾಷ್ಟ್ರಪತಿ ಆಳ್ವಿಕೆ ಹೇರಿಕೆಯು ರಾಷ್ಟ್ರಪತಿಗೆ ಇರುವ ಅನಿರ್ಬಂಧಿತ ಅಧಿಕಾರ ಅಲ್ಲ ಎಂದು ಎಸ್. ಆರ್. ಬೊಮ್ಮಾಯಿ ಸರ್ಕಾರ ವಜಾ ಪ್ರಕರಣದ ತೀರ್ಪಿನಲ್ಲಿ ಸುಪ್ರೀಂ ಕೋರ್ಟ್ 1994ರಲ್ಲಿ ಹೇಳಿತ್ತು. ಅದಾದ ಬಳಿಕವೇ 356ನೇ ವಿಧಿಯ ಬಳಕೆ ಕಡಿಮೆಯಾಗಿದ್ದು.

ಕೇಂದ್ರ ಸರ್ಕಾರವು ರಾಜ್ಯಗಳ ನಡುವೆ ತಾರತಮ್ಯ ಮಾಡುತ್ತಿದೆ ಎಂಬ ಆರೋಪ ಕೋವಿಡ್–19ರ ಎರಡನೇ ಅಲೆಯ ಸಂದರ್ಭದಲ್ಲಿ ತೀವ್ರವಾಗಿ ಕೇಳಿ ಬಂದಿತ್ತು. ಲಸಿಕೆ, ವೈದ್ಯಕೀಯ ಆಮ್ಲಜನಕ ಹಂಚಿಕೆಯಲ್ಲಿ ತಾರತಮ್ಯ ಆಗಿದೆ ಎಂದು ಬಿಜೆಪಿಯೇತರ ಪಕ್ಷಗಳು ಅಧಿಕಾರದಲ್ಲಿರುವ ಹಲವು ರಾಜ್ಯಗಳು ಆಕ್ಷೇಪ ವ್ಯಕ್ತಪಡಿಸಿವೆ.

ಹೀಗೆ, ರಾಜಕೀಯ ಹಾಗೂ ಸೈದ್ಧಾಂತಿಕ ಭಿನ್ನತೆಗಳು ಮತ್ತು ನಾಯಕರ ಪ್ರತಿಷ್ಠೆಯ ಕಾರಣಗಳಿಂದ ಕೇಂದ್ರ–ರಾಜ್ಯದ ಸಂಘರ್ಷ ಹಿಂದೆಯೂ ಇತ್ತು, ಈಗಲೂ ಇದೆ.

ಪಶ್ಚಿಮ ಬಂಗಾಳ ತಾರಕಕ್ಕೇರಿದ ಸಂಘರ್ಷ

ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆಗೂ ಮುನ್ನ ಕೇಂದ್ರ ಮತ್ತು ಪಶ್ಚಿಮ ಬಂಗಾಳ ಸರ್ಕಾರದ ಮಧ್ಯೆ ಆರಂಭವಾದ ಸಂಘರ್ಷ ಈಗ ತಾರಕಕ್ಕೆ ಏರಿದೆ.

2020ರ ಡಿಸೆಂಬರ್‌ನಲ್ಲಿ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಮತ್ತು ಹಲವು ನಾಯಕರು, ಪಶ್ಚಿಮ ಬಂಗಾಳದ ಡೈಮಂಡ್ ಹಾರ್ಬರ್ ಪ್ರದೇಶದಲ್ಲಿ ಪ್ರಚಾರಕ್ಕೆ ಹೋಗುತ್ತಿದ್ದಾಗ ಅವರ ಮೇಲೆ ದಾಳಿ ನಡೆದಿತ್ತು. 'ನಡ್ಡಾ ಅವರಿಗೆ ನೀಡಲಾಗಿದ್ದ ಝಡ್ ಪ್ಲಸ್ ಭದ್ರತೆಯಲ್ಲಿ ಲೋಪವಾಗಿದೆ. ಟಿಎಂಸಿ ಗೂಂಡಾಗಳು ನಡ್ಡಾ ಅವರ ನಿಯೋಗದ ಮೇಲೆ ದಾಳಿ ನಡೆಸಿದ್ದಾರೆ' ಎಂದು ಬಿಜೆಪಿ ಆರೋಪಿಸಿತ್ತು.

ಅದರ ಬೆನ್ನಲ್ಲೇ, ರಾಜ್ಯದ ಮುಖ್ಯ ಕಾರ್ಯದರ್ಶಿ-ಯಾಗಿದ್ದ ಆಲಾಪನ್ ಬಂದೋಪಾಧ್ಯಾಯ ಮತ್ತು ರಾಜ್ಯ ಪೊಲೀಸ್ ಮಹಾ ನಿರ್ದೇಶಕ ವೀರೇಂದ್ರ ಅವರಿಗೆ ಕೇಂದ್ರ ಗೃಹ ಸಚಿವಾಲಯ ಸಮನ್ಸ್ ಜಾರಿ ಮಾಡಿತ್ತು. 'ಭದ್ರತೆ ಲೋಪ ಸಂಬಂಧ ವಿವರಣೆ ನೀಡಲು, ಕೇಂದ್ರ ಗೃಹ ಸಚಿವಾಲಯದ ಕಚೇರಿಗೆ ಹಾಜರಾಗಿ' ಎಂದು ಇಬ್ಬರು ಅಧಿಕಾರಿಗಳಿಗೂ ಸೂಚನೆ ನೀಡಿತ್ತು.

'ರಾಜ್ಯ ಸೇವೆಯಲ್ಲಿರುವ ಅಖಿಲ ಭಾರತ ಸೇವೆಯ ಅಧಿಕಾರಿಗಳ ವಿರುದ್ಧ ಕ್ರಮ ತೆಗೆದುಕೊಳ್ಳುವ ಮುನ್ನ, ಆ ರಾಜ್ಯ ಸರ್ಕಾರದ ಜತೆ ಚರ್ಚೆ ನಡೆಸಿ ಸಮ್ಮತಿ ಪಡೆಯಬೇಕು' ಎಂದು ಅಖಿಲ ಭಾರತ ಸೇವೆಯ (ಶಿಸ್ತು ಮತ್ತು ಮೇಲ್ಮನವಿ) ನಿಯಮಗಳು-1969 ಹೇಳುತ್ತದೆ. 'ಸಮನ್ಸ್ ನೀಡುವಲ್ಲಿ ಕೇಂದ್ರ ಸರ್ಕಾರವು ಈ ನಿಯಮಗಳನ್ನು ಉಲ್ಲಂಘಿಸಿದೆ. ರಾಜ್ಯದ ಅಧಿಕಾರಿಗಳು ಕೇಂದ್ರ ಗೃಹ ಸಚಿವಾಲಯಕ್ಕೆ ಉತ್ತರದಾಯಿಗಳಲ್ಲ. ವಿವರಣೆ ನೀಡಲು ನಮ್ಮ ಅಧಿಕಾರಿಗಳನ್ನು ಕಳುಹಿಸುವುದಿಲ್ಲ' ಎಂದು ಪಶ್ಚಿಮ ಬಂಗಾಳ ಸರ್ಕಾರ ಉತ್ತರಿಸಿತ್ತು.

'ರಾಜ್ಯಗಳಲ್ಲಿ ಸೇವೆಯಲ್ಲಿರುವ ಐಎಎಸ್ ಅಧಿಕಾರಿಗಳನ್ನು ವರ್ಗಾವಣೆ ಮತ್ತು ನಿಯೋಜನೆ ಮಾಡಲು ಕೇಂದ್ರ ಸರ್ಕಾರವು, ರಾಜ್ಯ ಸರ್ಕಾರದ ಸಮ್ಮತಿ ಪಡೆದು ಕ್ರಮ ತೆಗೆದುಕೊಳ್ಳಬೇಕು. ಈ ಕ್ರಮವನ್ನು ತಿರಸ್ಕರಿಸುವ ಅಥವಾ ಪುರಸ್ಕರಿಸುವ ಅಧಿಕಾರ ರಾಜ್ಯ ಸರ್ಕಾರಕ್ಕೆ ಇದೆ. ಇದಕ್ಕೆ ಸಂಬಂಧಿಸಿದಂತೆ ಭಿನ್ನಾಭಿಪ್ರಾಯಗಳಿದ್ದರೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಚರ್ಚಿಸಬಹುದು' ಎಂದು ಅಖಿಲ ಭಾರತ ಸೇವಾ (ಕೇಡರ್) ನಿಯಮ 1954ರ ಸೆಕ್ಷನ್ 6(1) ಹೇಳುತ್ತದೆ.

ಆಲಾಪನ್ ಅವರನ್ನು ಕೇಂದ್ರ ಸೇವೆಗೆ ಕರೆಸಿಕೊಳ್ಳುವ ನಿರ್ಧಾರ ತೆಗೆದುಕೊಳ್ಳುವ ಮೊದಲು ಕೇಂದ್ರ ಸರ್ಕಾರವು ಪಶ್ಚಿಮ ಬಂಗಾಳ ಸರ್ಕಾರದ ಜತೆ ಚರ್ಚಿಸಿಲ್ಲ. ಹೀಗಾಗಿಯೇ ಈ ಆದೇಶವನ್ನು ಪಾಲಿಸುವುದಿಲ್ಲ ಎಂದು ಮಮತಾ ಬ್ಯಾನರ್ಜಿ ಅವರು ಪ್ರಧಾನಿ ನರೇಂದ್ರ ಮೋದಿಗೆ ಬರೆದಿದ್ದ ಪತ್ರದಲ್ಲಿ ಉಲ್ಲೇಖಿಸಿದ್ದರು.

'ಕೇಂದ್ರ ಸರ್ಕಾರದ ಈ ಕ್ರಮಗಳು ದೇಶದ ಒಕ್ಕೂಟ ವ್ಯವಸ್ಥೆಗೆ ಆಗುತ್ತಿರುವ ಧಕ್ಕೆ. ಒಕ್ಕೂಟ ವ್ಯವಸ್ಥೆಯಲ್ಲಿ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಪರಸ್ಪರ ಸಹಕಾರದಿಂದ ಕಾರ್ಯನಿರ್ವಹಿಸಬೇಕು' ಎಂದು ಮಮತಾ ತಮ್ಮ ಪತ್ರದಲ್ಲಿ ಹೇಳಿದ್ದರು.

ಈ ಬೆಳವಣಿಗೆಗಳ ಮಧ್ಯೆಯೇ ಭಾರತ ಸರ್ಕಾರವನ್ನು ಕೇಂದ್ರ ಸರ್ಕಾರ ಎನ್ನಬಾರದು. ಬದಲಿಗೆ ಒಕ್ಕೂಟ ಸರ್ಕಾರ ಎಂದೇ ಕರೆಯಬೇಕು ಎಂಬ ಪ್ರತಿಪಾದನೆ ಸಾಮಾಜಿಕ ಜಾಲತಾಣಗಳಲ್ಲಿಗೆ ಚರ್ಚೆಯಾಗುತ್ತಿದೆ. ಭಾರತ ಸರ್ಕಾರದ ಅಧಿಕೃತ ದಾಖಲೆಗಳಲ್ಲೂ ಭಾರತೀಯ ಒಕ್ಕೂಟ ಸರ್ಕಾರ (ಯೂನಿಯನ್ ಗವರ್ನಮೆಂಟ್ ಆಫ್ ಇಂಡಿಯಾ) ಎಂದೇ ಇರುತ್ತದೆ.

ತಮಿಳುನಾಡಿನಲ್ಲಿ ಡಿಎಂಕೆ ನೇತೃತ್ವದಲ್ಲಿ ಹೊಸದಾಗಿ ಅಸ್ತಿತ್ವಕ್ಕೆ ಬಂದ ಸರ್ಕಾರವನ್ನು ಅಭಿನಂದಿಸುವಾಗ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ತಮ್ಮ ಟ್ವೀಟ್‌ನಲ್ಲಿ, 'ಕೇಂದ್ರ ಸರ್ಕಾರ' ಎಂದು ಬಳಸಿದ್ದರು. ಇದಕ್ಕೆ ಪ್ರತಿಕ್ರಿಯೆ ನೀಡಿದ್ದ ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಅವರು ತಮ್ಮ ಟ್ವೀಟ್‌ನಲ್ಲಿ, 'ಒಕ್ಕೂಟ ಸರ್ಕಾರ' ಎಂದು ಬರೆದಿದ್ದರು.



ಕೇಂದ್ರ– ಕೇಜ್ರಿವಾಲ್ ಜಗಳ

ಅರವಿಂದ ಕೇಜ್ರಿವಾಲ್ ನೇತೃತ್ವದ ದೆಹಲಿ ಸರ್ಕಾರ ಮತ್ತು ಕೇಂದ್ರದ ನಡುವಿನ ಕಿತ್ತಾಟವು ತುಂಬಾ ಹಳೆಯದು. 2014ರಲ್ಲೇ ಆರಂಭವಾಗಿದ್ದ ಈ ಸಂಘರ್ಷವು 2015ರ ದೆಹಲಿ ವಿಧಾನಸಭಾ ಚುನಾವಣೆಯ ನಂತರ ತೀವ್ರಗೊಂಡಿತು.

ದೆಹಲಿ ಸರ್ಕಾರಕ್ಕೆ ಇನ್ನಷ್ಟು ಅಧಿಕಾರ ನೀಡಬೇಕು ಎಂಬುದು ಆರಂಭದಿಂದಲೇ ಕೇಜ್ರಿವಾಲ್ ಅವರ ಒತ್ತಾಯವಾಗಿತ್ತು. ಆದರೆ, ರಾಷ್ಟ್ರೀಯ ರಾಜಧಾನಿ ಪ್ರದೇಶ (ತಿದ್ದುಪಡಿ) ಮಸೂದೆ–2021 ಮೂಲಕ ಕೇಂದ್ರವು ಮುಖ್ಯಮಂತ್ರಿಗೆ ಇದ್ದ ಅಧಿಕಾರವನ್ನೂ ಮೊಟಕುಗೊಳಿಸಿದೆ. ಈ ಮಸೂದೆಯು ಕೇಂದ್ರದ ಸಚಿವರು ಮತ್ತು ಲೆಫ್ಟಿನೆಂಟ್ ಗವರ್ನರ್ ಅವರಿಗೆ ಹೆಚ್ಚಿನ ಅಧಿಕಾರವನ್ನು ನೀಡಿದೆ. ಇದು ಸಂಘರ್ಷ ಹೆಚ್ಚುವಂತೆ ಮಾಡಿದೆ.

ಸಂಘರ್ಷದ ಕೆಲವು ಕಾರಣಗಳು...

- ಎಎಪಿ ಅಧಿಕಾರಕ್ಕೆ ಬರುತ್ತಿದ್ದಂತೆಯೇ ಅಂದಿನ ಲೆಫ್ಟಿನೆಂಟ್ ಗವರ್ನರ್ ನಜೀಬ್ ಜಂಗ್ ಅವರು ಆಡಳಿತಕ್ಕೆ ಸಂಬಂಧಿಸಿದ ಎಲ್ಲಾ ಕಡತಗಳು ತಮ್ಮ ಮೂಲಕವೇ ಹೋಗಬೇಕು ಎಂಬ ಆದೇಶ ನೀಡಿದ್ದರು. ಇದು ಎಎಪಿಗೆ ಒಪ್ಪಿತವಾಗಿರಲಿಲ್ಲ.
- ಕೇಜ್ರಿವಾಲ್ ಅವರ ಕಚೇರಿಯಲ್ಲೇ ದೆಹಲಿಯ ಮುಖ್ಯ ಕಾರ್ಯದರ್ಶಿಯು ಎಎಪಿಯ ಶಾಸಕರ ಮೇಲೆ ಹಲ್ಲೆ ನಡೆಸಿದ್ದಾರೆ ಎಂಬ ಆರೋಪ ಕೇಳಿ ಬಂದಿತ್ತು.
- ಕೇಜ್ರಿವಾಲ್ ಅವರ ಮುಖ್ಯ ಕಾರ್ಯದರ್ಶಿ ರಾಜೇಂದ್ರ ಕುಮಾರ್ ಅವರ ಮನೆಯಲ್ಲಿ 2015ರಲ್ಲಿ ಎಸಿಬಿ ಅಧಿಕಾರಿಗಳು ಶೋಧ ನಡೆಸಿದ್ದರು. ತಮ್ಮ ಕಚೇರಿ ಮೇಲೆ ಸಿಬಿಐ ಅಧಿಕಾರಿಗಳು ದಾಳಿ ನಡೆಸಿದ್ದಾರೆ ಎಂದು ಆಗ ಕೇಜ್ರಿವಾಲ್ ಆರೋಪಿಸಿದ್ದರು.
- ತಮ್ಮ ಅಧಿಕಾರವನ್ನು ಕಿತ್ತುಕೊಳ್ಳುವ ಪ್ರಯತ್ನವನ್ನು ಲೆಫ್ಟಿನೆಂಟ್ ಗವರ್ನರ್ ಮಾಡುತ್ತಿದ್ದಾರೆ ಎಂದು ಆರೋಪಿಸಿದ ಕೇಜ್ರಿವಾಲ್, ನಜೀಬ್ ಜಂಗ್ ಅವರ ಮನೆಯ ಮುಂದೆ ಪ್ರತಿಭಟನೆ ನಡೆಸುವಂತೆ ದೆಹಲಿಯ ಸಚಿವರಿಗೆ 2018ರಲ್ಲಿ ಕರೆ ನೀಡಿದ್ದರು.
- ತೈಲ ಬೆಲೆ ನಿಗದಿ ಪ್ರಕರಣಕ್ಕೆ ಸಂಬಂಧಿಸಿದಂತೆ 2014ರ ಫೆಬ್ರುವರಿಯಲ್ಲಿ ಕೇಂದ್ರದ ಮಾಜಿ ಸಚಿವರೂ ಸೇರಿದಂತೆ ಕೆಲವರ ವಿರುದ್ಧ ದೂರು ದಾಖಲಿಸಿ ತನಿಖೆ ನಡೆಸುವಂತೆ ಕೇಜ್ರಿವಾಲ್ ಅವರು ಎಸಿಬಿಗೆ ಆದೇಶಿಸಿದ್ದರು.
- ದೆಹಲಿ ಸರ್ಕಾರಕ್ಕೆ ಅಧಿಕಾರಿಗಳನ್ನು ನೇಮಕ ಮಾಡುವ ಅಧಿಕಾರವನ್ನು ಕೇಂದ್ರವು 2015ರಲ್ಲಿ ಲೆಫ್ಟಿನೆಂಟ್ ಗವರ್ನರ್ ಅವರಿಗೆ ನೀಡಿತು.
- 'ಲೆಫ್ಟಿನೆಂಟ್ ಗವರ್ನರ್ ಅವರು ಆಡಳಿತದ ಮುಖ್ಯಸ್ಥರೇ ಆದರೂ, ದಿನನಿತ್ಯದ ಆಡಳಿತದಲ್ಲಿ ಮಧ್ಯಪ್ರವೇಶಿಸುವ ಮೂಲಕ ಸರ್ಕಾರದ ಕೆಲಸಗಳಿಗೆ ಅಡ್ಡಿ ಪಡಿಸುವಂತಿಲ್ಲ' ಎಂದು ಸುಪ್ರೀಂ ಕೋರ್ಟ್ 2018ರ ಜುಲೈಯಲ್ಲಿ ಸ್ಪಷ್ಟಪಡಿಸಿತು.
- ಕೋರ್ಟ್ ತೀರ್ಪಿನಿಂದ ಲೆಫ್ಟಿನೆಂಟ್ ಗವರ್ನರ್ ಹಾಗೂ ಮುಖ್ಯಮಂತ್ರಿ ಅವರ ಅಧಿಕಾರ ವ್ಯಾಪ್ತಿಯ ಬಗ್ಗೆ ಸ್ವಲ್ಪಮಟ್ಟಿನ ಸ್ಪಷ್ಟತೆ ಬಂದಿತಾದರೂ, ಅನೇಕ ವಿಚಾರಗಳಲ್ಲಿ ಗೊಂದಲ ಮುಂದುವರಿದಿದೆ.

ತನಿಖಾ ಸಂಸ್ಥೆ ವಿರುದ್ಧವೇ 'ತನಿಖೆ'

ಚಿನ್ನ ಸಾಗಣೆ ಪ್ರಕರಣವು ಕೇರಳ ಸರ್ಕಾರ ಮತ್ತು ಕೇಂದ್ರದ ನಡುವಿನ ಜಿದ್ದಾಜಿದ್ದಿಗೆ ಕಾರಣವಾಗಿತ್ತು. 'ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಮತ್ತು ಸಚಿವರ ವಿರುದ್ಧ ಹೇಳಿಕೆ ನೀಡುವಂತೆ ತಮ್ಮ ಮೇಲೆ ಒತ್ತಡವಿದೆ' ಎಂಬುದಾಗಿ ಆರೋಪಿಗಳಾದ ಸಂದೀಪ್ ನಾಯರ್ ಮತ್ತು ಸ್ವಪ್ನಾ ಸುರೇಶ್ ಅವರು ಹೇಳಿಕೆ ನೀಡಿದ್ದಾರೆ ಎನ್ನಲಾಗಿದೆ. ಇದನ್ನು ಗಂಭೀರವಾಗಿ ಪರಿಗಣಿಸಿದ ರಾಜ್ಯ ಸರ್ಕಾರವು, ಪ್ರಕರಣದ ತನಿಖೆ ನಡೆಸುತ್ತಿರುವ ಜಾರಿ ನಿರ್ದೇಶನಾಲಯದ (ಇ.ಡಿ) ವಿರುದ್ಧ ತನಿಖೆಯ ಅಸ್ತ್ರ ಪ್ರಯೋಗಿಸಿದೆ. ಕೇಂದ್ರೀಯ ತನಿಖಾ ಸಂಸ್ಥೆಯ ವಿರುದ್ಧ ನ್ಯಾಯಾಂಗ ತನಿಖೆ ನಡೆಸಲೂ ಒಪ್ಪಿಗೆ ನೀಡಿತು. ಕೇರಳ ವಿಧಾನಸಭಾ ಚುನಾವಣೆಗೆ ಮುನ್ನ, ಆಡಳಿತ ಪಕ್ಷ ಮುಖಂಡರ ಮೇಲೆ ಇ.ಡಿ ಶೋಧ ನಡೆಸಿದ್ದು ಸಹ ರಾಜ್ಯವನ್ನು ಕೆರಳಿಸಿತ್ತು.

ತನಿಖೆ ನಡೆಸುವ ಮೂಲಕ ಕೇಂದ್ರೀಯ ತನಿಖಾ ಸಂಸ್ಥೆಗಳ ಬಲ ಕುಗ್ಗಿಸಲು ಕೇರಳ ಸರ್ಕಾರ ಯತ್ನಿಸುತ್ತಿದೆ ಎಂದು ಕೇಂದ್ರ ಸರ್ಕಾರ ಆರೋಪಿಸಿದೆ. ಆದರೆ ರಾಜ್ಯ ಸರ್ಕಾರಗಳನ್ನು ಅಸ್ಥಿರಗೊಳಿಸಲು ಮತ್ತು ಚುನಾವಣೆಯಲ್ಲಿ ಗೆಲ್ಲುವ ಸಲುವಾಗಿ ಕೇಂದ್ರ ಸರ್ಕಾರವು ತನಿಖಾ ಸಂಸ್ಥೆಗಳನ್ನು ಬಳಸಿಕೊಳ್ಳುತ್ತಿದೆ ಎಂಬುದು ಕೇರಳದ ಆರೋಪ.

ಲಕ್ಷದ್ವೀಪದಲ್ಲೂ ಜಟಾಪಟಿ



ಪಕ್ಕದ ಲಕ್ಷದ್ವೀಪದಲ್ಲಿ ಕೇಂದ್ರ ಸರ್ಕಾರ ನೇಮಿಸಿರುವ ಆಡಳಿತಾಧಿಕಾರಿ ಹೊರಡಿಸಿರುವ ಆದೇಶಗಳ ವಿರುದ್ಧ ಕೇರಳ ಕೆಂಡಕಾರಿದೆ. ಪಿಣರಾಯಿ ವಿಜಯನ್ ಅವರು ವಿಧಾನಸಭೆಯಲ್ಲಿ ನಿರ್ಣಯವೊಂದನ್ನು ಮಂಡಿಸಿ ಕೇಂದ್ರಕ್ಕೆ ತಿರುಗೇಟು ನೀಡಿದ್ದಾರೆ. ಹಿಂಬಾಗಿಲಿನ ಮೂಲಕ 'ಕೇಸರಿ ಪಡೆಯ ಕಾರ್ಯಸೂಚಿ'ಯನ್ನು ಜಾರಿಗೆ ತರುವ ಪ್ರಯತ್ನ ನಡೆಯುತ್ತಿದೆ ಎಂದು ಆರೋಪಿಸಿದ್ದಾರೆ. ಕೇರಳ ಸರ್ಕಾರದ ಈ ನಡೆಯು ಕೇಂದ್ರವನ್ನು ಸಿಟ್ಟಿಗೇಳಿಸಿದೆ.

ಅರ್ನಬ್ ಬಂಧನ ಎಬ್ಬಿಸಿದ ಬಿರುಗಾಳಿ

ಹಳೆಯ ಪ್ರಕರಣವೊಂದನ್ನು ಮರು ತನಿಖೆಗೆ ಒಳಪಡಿಸುವ ಮೂಲಕ ರಿಪಬ್ಲಿಕ್ ಟಿ.ವಿ ಸಂಪಾದಕ ಅರ್ನಬ್ ಗೋಸ್ವಾಮಿ ಅವರನ್ನು ಮಹಾರಾಷ್ಟ್ರ ಸರ್ಕಾರ ಕಂಬಿ ಹಿಂದೆ ಕಳುಹಿಸಿತು. ಇದನ್ನು ಖಂಡಿಸಿ ಕೇಂದ್ರ ಸಚಿವರು ಬೀದಿಗಿಳಿದರು. ಇದು ಕೇಂದ್ರ–ರಾಜ್ಯ ಸರ್ಕಾರಗಳ ನಡುವೆ ಜಟಾಪಟಿಗೆ ಕಾರಣವಾಯಿತು.

'ಅರ್ನಬ್ ಬಂಧನವು ತುರ್ತು ಪರಿಸ್ಥಿತಿ ನೆನಪಿಸುವಂತಿದೆ. ಇದು ಮಾಧ್ಯಮಗಳ ವಾಕ್ ಸ್ವಾತಂತ್ರ್ಯದ ಮೇಲಿನ ಹಲ್ಲೆ' ಎಂದು ಖಂಡಿಸಲಾಯಿತು. ಇದಕ್ಕೆ ತಿರುಗೇಟು ನೀಡಿದ ಸರ್ಕಾರ, 'ಕಾನೂನು ತನ್ನ ಕ್ರಮ ಜರುಗಿಸುತ್ತದೆ. ಇದರಲ್ಲಿ ರಾಜಕೀಯ ಇಲ್ಲ' ಎಂದು ಸ್ಪಷ್ಟಪಡಿಸಿತು.

ಕಂಗನಾಗೆ ಕೇಂದ್ರದ ಬೆಂಬಲ

'ಮುಂಬೈ ನಗರವು ಪಾಕ್ ಆಕ್ರಮಿತ ಕಾಶ್ಮೀರದ ರೀತಿ ಕಾಣುತ್ತದೆ' ಎಂದು ಬಾಲಿವುಡ್ ನಟಿ ಕಂಗನಾ ರನೌತ್ ಅವರು ಹೇಳಿದ್ದಾರೆ ಎನ್ನಲಾದ ಮಾತು ಶಿವಸೇನಾವನ್ನು ಕೆರಳಿಸಿತು. ಮುಂಬೈ ಪೊಲೀಸರನ್ನು ಅಪಮಾನ ಮಾಡಿದ ಕಂಗನಾ ನಗರಕ್ಕೆ ಕಾಲಿಡಬಾರದು ಎಂದು ಸಂಜಯ್ ರಾವುತ್ ಬೆದರಿಕೆ ಹಾಕಿದ್ದರು. ಶಿವಸೇನಾಗೆ ತಿರುಗೇಟು ಕೊಟ್ಟ ಕೇಂದ್ರ, ಕಂಗನಾಗೆ ವೈ ದರ್ಜೆಯ ಭದ್ರತೆ ನೀಡಿ ಕಾಳಗಕ್ಕೆ ಇನ್ನಷ್ಟು ಪುಷ್ಟಿ ನೀಡಿತು.

ತಾವು ಸಮಯ ಕೇಳಿದರೆ ಇಲ್ಲ ಎನ್ನುವ ರಾಜ್ಯಪಾಲರು ಬಾಲಿವುಡ್ ನಟಿಗೆ ಸಮಯ ಕೊಟ್ಟಿದ್ದು ಹೇಗೆ ಎಂದು ಶಿವಸೇನಾ ಪ್ರಶ್ನಿಸಿತು. ಕಂಗನಾ ವಿರುದ್ಧ ಜಿದ್ದಿಗೆ ಬಿದ್ದ ಸರ್ಕಾರ, ಅವರ ಮುಂಬೈನಲ್ಲಿರುವ ಕಚೇರಿಯು ಅಕ್ರಮ ಜಾಗದಲ್ಲಿ ನಿರ್ಮಾಣವಾಗಿದೆ ಎಂಬ ಕಾರಣ ನೀಡಿ, ಅದನ್ನು ತೆರವು ಮಾಡಲು ನಿರ್ದೇಶನ ನೀಡಿತ್ತು. ಇದಕ್ಕೆ ಕಂಗನಾ ಕೋರ್ಟ್ ತಡೆಯಾಜ್ಞೆ ತಂದಿದ್ದರು.

ಕೋಶಿಯಾರಿ–ಠಾಕ್ರೆ ಜಟಾಪಟಿ

ಮಹಾರಾಷ್ಟ್ರದಲ್ಲಿ ರಾಜ್ಯಪಾಲ ಭಗತ್‌ಸಿಂಗ್ ಕೋಶಿಯಾರಿ ಮತ್ತು ಮುಖ್ಯಮಂತ್ರಿ ಉದ್ಧವ್ ಠಾಕ್ರೆ ನಡುವಿನ ಗುದ್ದಾಟ ಹೊಸದಲ್ಲ. ಸರ್ಕಾರ ರಚನೆಗೆ ಸಮಯ ಕೇಳಿದ್ದರೂ, ರಾಜ್ಯದಲ್ಲಿ ರಾಷ್ಟ್ರಪತಿ ಆಡಳಿತ ಹೇರಲು ಕೋಶಿಯಾರಿ ಅವರು ಕೇಂದ್ರಕ್ಕೆ ಶಿಫಾರಸು ಮಾಡಿದ್ದು ಠಾಕ್ರೆ ಮತ್ತು ರಾಜ್ಯಪಾಲರ ನಡುವೆ ವೈಮನಸ್ಸಿಗೆ ಕಾರಣ.

ಕೋವಿಡ್ ಮೊದಲನೇ ಅಲೆಯ ಬಳಿಕ ಮುಚ್ಚಲಾಗಿದ್ದ ದೇವಸ್ಥಾನಗಳಿಗೆ ಪುನಃ ಪ್ರವೇಶಾತಿ ನೀಡುವ ಸಂಬಂಧ ಠಾಕ್ರೆ ಮತ್ತು–ಕೋಶಿಯಾರಿ ನಡುವೆ ಜಟಾಪಟ ನಡೆದಿತ್ತು. 'ಹಿಂದುತ್ವವಾದಿ ಠಾಕ್ರೆ ಜಾತ್ಯತೀತವಾದಿ'ಯಾಗಿ ಬದಲಾದರೇ ಎಂದು ರಾಜ್ಯಪಾಲರು ಪ್ರಶ್ನಿಸಿದ್ದರು. ಠಾಕ್ರೆ ಅವರು ರಾಜ್ಯಪಾಲರಿಗೆ ಹಿಂದುತ್ವದ ಪಾಠ ಮಾಡಿದ್ದರು.

ಕೋವಿಡ್ 'ವೈಫಲ್ಯ' ಹಾನಿ ತಡೆಗೆ ಕಸರತ್ತು

ಪ್ರಜಾವಾಣಿ ವಾರ್ತೆ

ಲಖನೌ: ಕೋವಿಡ್ ನಿರ್ವಹಣೆಯಲ್ಲಿ ಉತ್ತರ ಪ್ರದೇಶ ಸರ್ಕಾರ ಎಡವಿದೆ ಎಂಬ ವರದಿಗಳಿದ್ದು, ಇದರಿಂದ ಉಂಟಾಗಬಹುದಾದ ಸಂಭವನೀಯ ಹಾನಿ ತಡೆಗಟ್ಟುವ ಕುರಿತು ಬಿಜೆಪಿ ನಾಯಕರು ಮಂಗಳವಾರ ಇಲ್ಲಿ ಚಿಂತನ–ಮಂಥನ ನಡೆಸಿದರು.



ಎರಡು ದಿನಗಳ ಭೇಟಿಗೆ ಇಲ್ಲಿಗೆ ಬಂದಿರುವ ಬಿಜೆಪಿ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್. ಸಂತೋಷ್, ರಾಜ್ಯ ಸರ್ಕಾರದ 10ಕ್ಕೂ ಹೆಚ್ಚು ಸಚಿವರು, ಪಕ್ಷದ ಹಿರಿಯ ಮುಖಂಡರ ಜತೆ ಸಭೆ ನಡೆಸಿದರು. ಉಪಮುಖ್ಯಮಂತ್ರಿಗಳಾದ ಕೇಶವ್ ಪ್ರಸಾದ್ ಮೌರ್ಯ, ದಿನೇಶ್ ಶರ್ಮಾ ಜೊತೆಗೂ ಚರ್ಚೆ ನಡೆಸಿದರು. ಕೋವಿಡ್ ನಿರ್ವಹಣೆ ವಿಚಾರದಲ್ಲಿ ಪಕ್ಷಕ್ಕೆ ಆಗಬಹುದಾದ ಸಂಭವನೀಯ ಹಾನಿ ಕುರಿತು ಸಚಿವರು, ಮುಖಂಡರಿಂದ ಸಂತೋಷ್ ಅವರು ಮಾಹಿತಿ ಪಡೆದರು ಎಂದು ಮೂಲಗಳು ತಿಳಿಸಿವೆ.

ಸೋಲಿಗೆ ಕಾರಣ ಹುಡುಕಾಟ: ರಾಜ್ಯದಲ್ಲಿ ಇತ್ತೀಚೆಗೆ ನಡೆದ ಪಂಚಾಯಿತಿ ಚುನಾವಣೆಯಲ್ಲಿ ಪಕ್ಷ ಹಿನ್ನಡೆ ಕಾಣಲು ಕಾರಣವಾದ ಅಂಶಗಳು ಹಾಗೂ ಜನರ ಚಿತ್ತ ಎತ್ತ ಇದೆ ಎಂಬುದನ್ನು ಪಕ್ಷದ ರಾಷ್ಟ್ರೀಯ ನಾಯಕತ್ವ ತಿಳಿಯಬಯಸಿದೆ ಎಂದು ಮೂಲಗಳು ಹೇಳಿವೆ.

'ಕೋವಿಡ್ ನಿರ್ವಹಣೆ, ಪಂಚಾಯಿತಿ ಚುನಾವಣೆ ಫಲಿತಾಂಶ ಹಾಗೂ ರಾಜ್ಯ ಸರ್ಕಾರದ ಕಾರ್ಯವೈಖರಿ ಬಗ್ಗೆ ಅಸಮಾಧಾನಗೊಂಡಿರುವ ಪಕ್ಷದ ಕೆಲವು ಶಾಸಕರ ವಿಚಾರಗಳು ಚರ್ಚೆಗೆ ಬಂದವು' ಎಂದು ಹೆಸರು ಹೇಳಲಿಚ್ಛಿಸದ ಬಿಜೆಪಿ ಮುಖಂಡರೊಬ್ಬರು ಮಾಹಿತಿ ನೀಡಿದ್ದಾರೆ.

ಜನರನ್ನು, ಅದರಲ್ಲೂ ಗ್ರಾಮೀಣ ಭಾಗದಲ್ಲಿ ಕೋವಿಡ್‌ನಿಂದ ತೊಂದರೆಗೆ ಒಳಗಾದವರನ್ನು ಸಂಪರ್ಕಿಸಿ ಅಗತ್ಯವಿರುವ ಸೌಲಭ್ಯಗಳನ್ನು ನೀಡಬೇಕು ಎಂದು ಸಂತೋಷ್ ಸೂಚಿಸಿದರು.

'ಉತ್ತರ ಪ್ರದೇಶ ವಿಧಾನಸಭಾ ಚುನಾವಣೆಗೆ ಬಹಳ ಸಮಯ ಉಳಿದಿಲ್ಲ. ಜನರನ್ನು ಸಂಪರ್ಕಿಸಿ, ಈ ಕಠಿಣ ಪರಿಸ್ಥಿತಿಯಲ್ಲಿ ನಿಮ್ಮ ಜೊತೆ ನಾವಿದ್ದೇವೆ ಎಂಬ ಭರವಸೆಯನ್ನು ತುಂಬಬೇಕಿದೆ' ಎಂದು ಮುಖಂಡರೊಬ್ಬರು ಹೇಳಿದ್ದಾರೆ.

ಆರ್‌ಎಸ್‌ಎಸ್ ಪ್ರಧಾನ ಕಾರ್ಯದರ್ಶಿ ದತ್ತಾತ್ರೇಯ ಹೊಸಬಾಳೆ ಅವರು ಇತ್ತೀಚೆಗೆ ಇಲ್ಲಿಗೆ ಭೇಟಿ ನೀಡಿ, ರಾಜ್ಯದ ಕೋವಿಡ್ ಪರಿಸ್ಥಿತಿ ನಿರ್ವಹಣೆ ಮತ್ತು ಸಂಘವು ಜನರಿಗೆ ನೀಡಿದ ಸಹಾಯದ ಬಗ್ಗೆ ಚರ್ಚಿಸಿದ್ದರು. ಸಂಘದ ಜೊತೆ ಗುರುತಿಸಿಕೊಂಡಿರುವ ವೈದ್ಯರ ಜೊತೆಗೂ ಮಾತುಕತೆ ನಡೆಸಿದ್ದರು.

ಪುದುಚೇರಿ: ಸಂಪುಟ ವಿಸ್ತರಣೆಗೆ ಬಿಜೆಪಿ ಪಟ್ಟು ಅಡ್ಡಿ

ಚೆನ್ನೈ: ಆಲ್ ಇಂಡಿಯಾ ಎನ್.ಆರ್ ಕಾಂಗ್ರೆಸ್ (ಎಐಎನ್‌ಆರ್‌ಸಿ) ಮುಖ್ಯಸ್ಥ ಎನ್. ರಂಗಸ್ವಾಮಿ ಅವರು ಪುದುಚೇರಿಯ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡು ಒಂದು ತಿಂಗಳಾದರೂ ಅವರ ಸಂಪುಟ ವಿಸ್ತರಣೆಯಾಗಿಲ್ಲ. ಮಿತ್ರಪಕ್ಷ ಬಿಜೆಪಿ ಜತೆಗೆ ಉಂಟಾಗಿರುವ ಭಿನ್ನಮತವೇ ಇದಕ್ಕೆ ಕಾರಣ ಎಂದು ಹೇಳಲಾಗುತ್ತಿದೆ.

ಉಪಮುಖ್ಯಮಂತ್ರಿ ಸೇರಿದಂತೆ ಒಟ್ಟು ಮೂರು ಸಚಿವ ಸ್ಥಾನಗಳಿಗಾಗಿ ಬಿಜೆಪಿ ಪಟ್ಟು ಹಿಡಿದಿದೆ. ಸ್ಪೀಕರ್ ಹುದ್ದೆಯನ್ನೂ ತಮ್ಮ ಪಕ್ಷದವರಿಗೆ ಬಿಟ್ಟುಕೊಡಬೇಕು ಎಂದು ಬಿಜೆಪಿ ಒತ್ತಾಯಿಸುತ್ತಿದೆ. ಬಿಜೆಪಿಯ ಈ ಬೇಡಿಕೆಗೆ ಎನ್.ಆರ್. ಕಾಂಗ್ರೆಸ್‌ನ ಮುಖಂಡರು ತೀವ್ರ ವಿರೋಧ ವ್ಯಕ್ತಪಡಿಸುತ್ತಿದ್ದಾರೆ ಎಂದು ಮೂಲಗಳು ತಿಳಿಸಿವೆ.

ರಂಗಸ್ವಾಮಿ ಅವರು ಕೋವಿಡ್‌ಗೆ ಚಿಕಿತ್ಸೆ ಪಡೆಯುತ್ತಿದ್ದ ಸಂದರ್ಭದಲ್ಲಿ, ಮುಖ್ಯಮಂತ್ರಿಯ ಜತೆಗೆ ಮಾತುಕತೆಯನ್ನೂ ನಡೆಸದೆ ಬಿಜೆಪಿಯು ವಿಧಾನಸಭೆಗೆ ಮೂವರು ಸದಸ್ಯರನ್ನು ನಾಮನಿರ್ದೇಶನ ಮಾಡಿತ್ತು. ರಂಗಸ್ವಾಮಿ ಅವರ ಅಸಮಾಧಾನಕ್ಕೆ ಇದು ಕಾರಣ ಎನ್ನಲಾಗಿದೆ.

ಈಚೆಗೆ ನಡೆದ ಚುನಾವಣೆಯಲ್ಲಿ ಎಐಎನ್‌ಆರ್‌ಸಿಯು 10 ಹಾಗೂ ಬಿಜೆಪಿ 6 ಕ್ಷೇತ್ರಗಳಲ್ಲಿ ಜಯಗಳಿಸಿತ್ತು. ಮೂವರು ಸದಸ್ಯರ ನಾಮನಿರ್ದೇಶನದಿಂದ ವಿಧಾನಸಭೆಯಲ್ಲಿ ಬಿಜೆಪಿಯ ಶಕ್ತಿಯು 9ಕ್ಕೆ ಏರಿದೆ.

'ಬಿಜೆಪಿಗೆ ಎರಡು ಸಚಿವ ಸ್ಥಾನಗಳನ್ನು ನೀಡಲಾಗುವುದು ಮತ್ತು ಉಳಿದ ಮೂರು ಸ್ಥಾನಗಳನ್ನು ತಮ್ಮ ಪಕ್ಷದ ಸದಸ್ಯರಿಗೆ ನೀಡಲಾಗುವುದು. ಸ್ಪೀಕರ್ ಹುದ್ದೆಯನ್ನು ಯಾವ ಕಾರಣಕ್ಕೂ ಬಿಜೆಪಿಗೆ ಬಿಟ್ಟು ಕೊಡಲಾಗದು ಎಂದು ರಂಗಸ್ವಾಮಿ ತಮ್ಮ ನಿಲುವನ್ನು ಸ್ಪಷ್ಟಪಡಿಸಿದ್ದಾರೆ' ಎಂದು ಎಐಎನ್‌ಆರ್‌ಸಿ ಮುಖಂಡರೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

'ಸೋನಿಯಾ ಗಾಂಧಿ ಅವರ ಪುಸ್ತಕದ ಕಪಾಟಿನಲ್ಲಿ How to convert India into Christian nation, Holy bible ಮತ್ತು @ noconversion ಎಂಬ ಪುಸ್ತಕಗಳು ಇವೆ. ಚಿತ್ರವನ್ನು ದೊಡ್ಡದು ಮಾಡಿ ನೋಡಿ, ಇವರ ಉದ್ದೇಶ ಏನು ಎಂಬುದನ್ನು ಅರ್ಥ ಮಾಡಿಕೊಳ್ಳಲು ಬೇರೆ ಸಾಕ್ಷ್ಯ ಬೇಕೆ?' ಎಂಬ ಹೇಳಿಕೆ ಇರುವ ಪೋಸ್ಟ್‌ಗಳು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿವೆ.

ಬಿಹಾರ ಚುನಾವಣೆ ಪ್ರಚಾರ ಸಭೆಯಲ್ಲಿ ಸೋನಿಯಾ ಗಾಂಧಿ ಅವರು 2020ರ ಮೇ 27ರಂದು ಮಾತನಾಡಿದ್ದ ವಿಡಿಯೊವನ್ನು ಕಾಂಗ್ರೆಸ್ ತನ್ನ ಟ್ವಿಟರ್ ಖಾತೆಯಲ್ಲಿ ಟ್ವೀಟ್ ಮಾಡಿತ್ತು. ಆ ವಿಡಿಯೊವಿನ ಸ್ಕ್ರೀನ್‌ಶಾಟ್ ಅನ್ನು ಪಿಟಿಐ ಪ್ರಕಟಿಸಿತ್ತು. ವೈರಲ್ ಆಗಿರುವ ಚಿತ್ರದಲ್ಲಿ ಗುರುತು ಮಾಡಿರುವ ಪುಸ್ತಕಗಳು ಮೂಲ ಚಿತ್ರದಲ್ಲಿ ಇಲ್ಲ. ಆ ಪುಸ್ತಕಗಳನ್ನು ಎಡಿಟ್ ಮಾಡಿ ಚಿತ್ರದಲ್ಲಿ ಸೇರಿಸಲಾಗಿದೆ. ತಿರುಚಲಾದ ಚಿತ್ರವನ್ನು ಬಳಸಿಕೊಂಡು, ಸೋನಿಯಾ ಗಾಂಧಿ ಅವರ ಬಗ್ಗೆ ಅಪಪ್ರಚಾರ ಮಾಡಲಾಗುತ್ತಿದೆ.

ಗುಂಡಣ್ಣ

ಬೆರಗಿನ ಬೆಳಕು

ಗುರುರಾಜ ಕರಜಗಿ

ಪುಸತಿಯ ಜನ್ಮ

ಹಿಂದೆ ವಿಪಶ್ಯೀ ಎಂಬ ಶಾಸ್ತರು ಭೂಮಿಯಲ್ಲಿ ಅವತರಿಸಿದರು. ಅವರು ಬಂಧುವತಿ ಎಂಬ ನಗರದ ಉದ್ಯಾನವನದಲ್ಲಿ ವಿಹಾರ ಮಾಡುತ್ತಿದ್ದಾಗ, ಆ ನಗರದ ರಾಜ ಬಂಧುಮರಾಜನಿಗೆ ಶ್ರೀಮಂತನೊಬ್ಬ ಅತ್ಯಂತ ಅಪೂರ್ವವಾದ ಚಂದನದ ತುಂಡನ್ನು ಮತ್ತು ಲಕ್ಷ ಬೆಲೆಬಾಳುವ ಬಂಗಾರದ ಮಾಲೆಯನ್ನು ಕಾಣಿಕೆಯಾಗಿ ಇತ್ತ. ರಾಜನಿಗೆ ಇಬ್ಬರು ಹೆಣ್ಣುಮಕ್ಕಳು. ರಾಜ ಚಂದನವನ್ನು ಹಿರಿಯಳಿಗೆ ಮತ್ತು ಸುವರ್ಣಮಾಲೆಯನ್ನು ಕಿರಿಯಳಿಗೆ ಕೊಟ್ಟ. ಅವರಿಬ್ಬರೂ ಧರ್ಮಿಷ್ಠರು. ಅವುಗಳನ್ನು ತಮ್ಮ ದೇಹದ ಮೇಲೆ ಧರಿಸಲು ಇಚ್ಛಿಸದೆ. ಅದನ್ನು ಶಾಸ್ತರಿಗೆ ಅರ್ಪಿಸಬೇಕೆಂದು ತೀರ್ಮಾನಿಸಿದರು. ಹಿರಿಯ ಮಗಳು ಚಂದನವನ್ನು ಅರೆಸಿ, ಅದನ್ನು ಚಿನ್ನದ ಪೆಟ್ಟಿಗೆಯಲ್ಲಿ ತೆಗೆದುಕೊಂಡು ಉದ್ಯಾನವನಕ್ಕೆ ಹೋದಳು. ತಂಗಿ ಸುವರ್ಣಮಾಲೆಯನ್ನು ಚಿನ್ನದ ಪೆಟ್ಟಿಗೆಯಲ್ಲಿಟ್ಟು ಅಲ್ಲಿಗೇ ಬಂದಳು.

ಅಕ್ಕ ಗಂಧದ ಪುಡಿಯನ್ನು ಶಾಸ್ತರ ಸುವರ್ಣಕಾಂತಿಯ ಮೈಗೆ ಲೇಪಿಸಿ, ಉಳಿದದ್ದನ್ನು ಅವರ ಸುತ್ತ ಹರಡಿ, 'ಭಂತೇ ನಾನು ಮುಂದೆ ನಿನ್ನಂಥ ಬುದ್ಧನ ತಾಯಿಯಾಗುವಂತೆ ಅನುಗ್ರಹಿಸಿ' ಎಂದು ಕೇಳಿದಳು. ತಂಗಿ 'ಭಂತೇ, ನಾನು ಅರ್ಹತ್ವವನ್ನು ಪಡೆಯುವವರೆಗೆ ಈ ಸುವರ್ಣಮಾಲೆ ನನ್ನ ದೇಹದಲ್ಲೇ ಇರುವಂತೆ ಕರುಣಿಸಿ' ಎಂದು ಬೇಡಿದಳು. ಶಾಸ್ತರು ಇಬ್ಬರಿಗೂ ಅನುಮೋದನೆ ಕೊಟ್ಟರು. ಅಕ್ಕ ಮುಂದೆ ಜನ್ಮಾಂತರಗಳಲ್ಲಿ ದೇಹ ಧರಿಸುತ್ತ ಕೊನೆಗೆ ಬುದ್ಧನ ತಾಯಿ ಮಾಯಾದೇವಿಯಾದಳು. ತಂಗಿಯೂ ಅನೇಕ ಜನ್ಮಗಳನ್ನು ಪಡೆದಳು. ಆಕೆ ಹಿಂದೆ ಶಾಸ್ತರನ್ನು ಪೂಜಿಸಿದ್ದರಿಂದ ಆಕೆ ಕಾಂತಿಯುತ ದೇಹದವಳಾಗಿ ಮುಂದೆ ಶಕ್ರದೇವರಾಜನ ಪಟ್ಟದರಸಿಯಾಗಿ ಹುಟ್ಟಿದಳು. ಎಷ್ಟೋ ಕಾಲ ದೇವಲೋಕದಲ್ಲಿ ಇದ್ದ ಮೇಲೆ, ಶಕ್ರನಿಗೆ ಆಕೆಯ ಆಯಸ್ಸು ಅಲ್ಲಿ ಮುಗಿಯುತ್ತ ಬಂದದ್ದು ತಿಳಿಯಿತು. ಆಕೆಯನ್ನು ಶಕ್ರ ತನ್ನ ನಂದನವನಕ್ಕೆ ಕರೆದೊಯ್ದು ಕುಳ್ಳಿರಿಸಿ ಹೇಳಿದ, 'ಪ್ರಿಯೆ, ಈಗ ನೀನು ಸ್ವರ್ಗದಲ್ಲಿರುವ ಸಮಯ ಮುಗಿಯುತ್ತ ಬಂದಿದೆ. ನೀನು ಮತ್ತೆ ಭೂಲೋಕಕ್ಕೆ ಮರಳಿ ಹೋಗಬೇಕಾಗುತ್ತದೆ'. ಆಕೆಗೆ ಚಿಂತೆಯಾಯಿತು. 'ದೇವರಾಜ, ನನ್ನನ್ನು ಇಂಥ ರಮಣಿಯವಾದ ಸ್ವರ್ಗದಿಂದ ಕಳಿಸುವಂತಹ ಯಾವ ಅಪರಾಧವನ್ನು ಮಾಡಿದ್ದೇನೆ? ಬಿರುಗಾಳಿ ಮರವನ್ನು ಬೀಳಿಸುವಂತೆ ಯಾಕೆ ನನ್ನನ್ನು ಕೆಳಗೆ ತಳ್ಳುತ್ತಿದ್ದೀರಿ?' ಎಂದು ಕೇಳಿದಳು. ಶಕ್ರ ಹೇಳಿದ, 'ಪ್ರಿಯೆ, ನಿನ್ನಿಂದ ಯಾವ ಪಾಪವೂ ಆಗಿಲ್ಲ. ನೀನು ನನಗೆ ಅಪ್ರಿಯಳೂ ಅಲ್ಲ. ಆದರೆ ನಿನ್ನ ಪುಣ್ಯ ಮುಗಿದುಹೋಗುತ್ತಿದೆ. ಪುಣ್ಯ ಮುಗಿದ ಯಾರೂ ಇಲ್ಲಿ ಇರುವಂತಿಲ್ಲ'. 'ಹಾಗಾದರೆ ಮುಂದೆ ನನ್ನ ಗತಿ ಏನು? ನಾನು ಎಲ್ಲಿಗೆ ಹೋಗಬೇಕು?' ಎಂದು ಕೇಳಿದಳು. ಶಕ್ರ, 'ನಿನಗೆ ಯಾವ ವರವನ್ನು ಬೇಕಾದರೂ ಕೊಡುತ್ತೇನೆ. ಅವುಗಳನ್ನು ಪಡೆದು ಭೂಲೋಕದಲ್ಲಿ ಸುಖವಾಗಿರು' ಎಂದ.

ಹಾಗಾದರೆ ತನ್ನ ಅವಧಿ ಮುಗಿಯಿತು ಎಂದರಿತು, 'ದೇವರಾಜ, ನನಗೆ ಸಿವಿರಾಜನ ಅರಮನೆಯಲ್ಲಿ ಪಟ್ಟದರಸಿಯಾಗುವ ವರ ಕೊಡು. ನನಗೆ ನೀಲಿ ಕಣ್ಣುಗಳು, ನೀಲಿ ಹುಬ್ಬುಗಳಿರಲಿ, ನನಗೆ ಅತ್ಯಂತ ಉದಾರಿಯಾದ, ಜಗತ್ತಿಗೆ ಗುರುವಾಗುವ ಮಗ ಜನಿಸಲಿ, ನನ್ನ ಹೆಸರು ಪುಸತಿ ಎಂದಾಗಲಿ, ನನ್ನ ಸ್ತನಗಳು ಎಂದಿಗೂ ಜೋತು ಬೀಳದಂತೆ ಬಿಗಿಯಾಗಿರಲಿ, ನನ್ನ ದೇಹಕ್ಕೆ ಮುಪ್ಪು ಬಾರದಿರಲಿ ಮತ್ತು ನನಗೆ ಸದಾಕಾಲ ಜನರ ಪ್ರೀತಿ ದೊರಕಲಿ' ಎಂದ ಬೇಡಿದಳು. ಶಕ್ರ ವರಕೊಟ್ಟೆ ಎಂದು ಅನುಮೋದನೆ ಮಾಡಿ ಆಕೆ ಮದ್ರರಾಜನ ಪಟ್ಟದರಸಿಯ ಗರ್ಭದಲ್ಲಿ ಜನಿಸುವಂತೆ ಮಾಡಿದ. ❖

ದಿನ ಭವಿಷ್ಯ

ಬುಧವಾರ ಜೂನ್ 2, 2021

ಶ್ರೀಪ್ಲವ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ವೈಶಾಖ ಮಾಸ ಕೃಷ್ಣ ಪಕ್ಷ ಮಳೆ ನಕ್ಷತ್ರ ರೋಹಿಣಿ ಅಷ್ಟಮೀ ಗಂ. 57-22 (ರಾ. 4-58) ಬುಧವಾರ ನಿತ್ಯ ನಕ್ಷತ್ರ ಶತಭಿಷ ಗಂ. 37-39 (ರಾ. 9-04) ವೈಧೃತಿ ನಾಮ ಯೋಗ ಗಂ. 3-24 ಬಾಲವ ಕರಣ ಗಂ. 27-36 ವಿಷ ಗಂ. 54-5 ಅಮೃತ ಗಂ. 19-53 : ರಾಹುಕಾಲ: ಮ. ಗಂ. 12-00 ರಿಂದ 1-30 ಗುಳಿಕ ಕಾಲ ಬೆ. ಗಂ 10-30 ರಿಂದ 12-00 ಯಮಗಂಡ ಕಾಲ ಬೆ. ಗಂ 7-30 ರಿಂದ 9-00 ಸೂರ್ಯೋದಯ: 5-56 ಸೂರ್ಯಾಸ್ತ: 6-39 ಅದೃಷ್ಟ ಸಂಖ್ಯೆ 5 6

ಮೇಷ: ಪ್ರತಿಭೆಗೆ ತಕ್ಕ ಅವಕಾಶಗಳು ಒದಗಲಿವೆ. ನಿಮ್ಮ ವೈಯಕ್ತಿಕ ಕೆಲಸಗಳ ಬಗ್ಗೆ ಹೆಚ್ಚಿನ ಗಮನ ಹರಿಸುವುದು ಉತ್ತಮ. ಗೃಹ ಕಲಹ ಉಂಟಾದೀತು. ಗೃಹಿಣಿಯರು ತಾಳ್ಮೆಯಿಂದ ವ್ಯವಹರಿಸುವುದು ಉತ್ತಮ.

ವೃಷಭ: ವ್ಯವಹಾರದಲ್ಲಿ ಬಂಧುಗಳೊಂದಿಗೆ ಭಿನ್ನಾಭಿಪ್ರಾಯ ಉಂಟಾಗುವ ಸಾಧ್ಯತೆ. ಹೊಸ ವಸ್ತು ಖರೀದಿಯ ಬಗ್ಗೆ ಎಚ್ಚರದಿಂದಿರಿ. ಅನಾರೋಗ್ಯದ ಸಮಸ್ಯೆ ತಲೆದೋರಬಹುದು.

ಮಿಥುನ: ಕೃಷಿಕರಿಗೆ ಆದಾಯದಲ್ಲಿ ಅನಿಶ್ಚಿತತೆ ಸಾಧ್ಯತೆ. ಜಾಮೀನು ಮುಂತಾದ ತೊಂದರೆಗೆ ಸಿಕ್ಕಿಹಾಕಿಕೊಳ್ಳುವ ಸಾಧ್ಯತೆ. ವ್ಯವಹಾರದಲ್ಲಿ ಗಡಿಬಿಡಿ ಬೇಡ. ಮಹಿಳೆಯರಿಂದ ಸಹಕಾರ.

ಕರ್ಕಾಟಕ: ಮಹಿಳೆಯರಿಗೆ ಸಾಮಾಜಿಕ ಸ್ಥಾನಮಾನಗಳು ಲಭ್ಯ. ಅಸ್ತಮ ಮುಂತಾದ ಉಸಿರಾಟ ಸಂಬಂಧಿ ರೋಗಗಳು ಉಲ್ಬಣಗೊಳ್ಳುವ ಸಾಧ್ಯತೆ. ವೃತ್ತಿ ಸಮಸ್ಯೆಗಳು ಪರಿಹಾರವಾಗಿ ನೆಮ್ಮದಿ.

ಸಿಂಹ: ವ್ಯಾಪಾರ ವ್ಯವಹಾರಗಳಲ್ಲಿ ಮಹತ್ವದ ಏರುಪೇರು ಕಂಡುಬರುವ ಸಾಧ್ಯತೆ. ಸಾಮಾಜಿಕ ಕಾರ್ಯಗಳಲ್ಲಿ ಉತ್ಸಾಹದಿಂದ ತೊಡಗಿಕೊಳ್ಳುವಿರಿ. ಬಂಧುಗಳ ಸಹಕಾರದಿಂದ ದಾಂಪತ್ಯ ಜೀವನದ ಸಮಸ್ಯೆ ದೂರವಾಗಲಿದೆ.

ಕನ್ಯಾ: ವೃಥಾ ಅಪವಾದಗಳನ್ನು ಎದುರಿಸುವ ಸಾಧ್ಯತೆ. ಹಿತಶತ್ರುಗಳಿಂದ ದೂರವಿರುವುದು ಉತ್ತಮ. ಗೃಹ ನಿರ್ಮಾಣ ಕಾರ್ಯಗಳನ್ನು ದಿನದ ಮಟ್ಟಿಗೆ ಮುಂದೂಡುವುದು ಉತ್ತಮ.

ತುಲಾ: ಮಕ್ಕಳಿಂದ ನೆಮ್ಮದಿ ತರುವ ಸುದ್ದಿ. ಸಹೋದರ ವರ್ಗದವರಿಂದ ಸಹಾಯ ದೊರೆತು ಕೈಗೊಂಡ ಕೆಲಸಗಳು ಸುಗಮ. ಆಯುಧಗಳ ವಿಚಾರದಲ್ಲಿ ಎಚ್ಚರಿಕೆ ಇರಲಿ. ಆರೋಗ್ಯದಲ್ಲಿ ಏರುಪೇರಾಗುವ ಸಾಧ್ಯತೆ.

ವೃಶ್ಚಿಕ: ಕೃಷಿ ಕೆಲಸಗಳಲ್ಲಿ ಪ್ರಗತಿ ಮತ್ತು ಲಾಭ ಪ್ರಾಪ್ತಿ. ನ್ಯಾಯಾಲಯದ ತೀರ್ಪು ಮುಂದೂಡುವ ಸಾಧ್ಯತೆ. ದುಡುಕು ಬೇಡ ಸ್ಥಿಮಿತ ಕಾಯ್ದುಕೊಳ್ಳಿ.

ಧನು: ಉದ್ಯೋಗ ಕ್ಷೇತ್ರದಲ್ಲಿನ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವಿರಿ. ಅಧಿಕಾರಿ ವರ್ಗದವರಿಂದ ಸಹಕಾರ ದೊರಕುವುದು. ಕೃಷಿ ಕ್ಷೇತ್ರದಲ್ಲಿ ತೊಡಗಿ-ಕೊಂಡವರಿಗೆ ಕೆಲಸ ಕಾರ್ಯಗಳಲ್ಲಿ ಎಚ್ಚರಿಕೆ ಅಗತ್ಯ.

ಮಕರ: ಹೊಸ ವ್ಯವಹಾರದಲ್ಲಿ ತೊಡಗುವುದು ಸೂಕ್ತವಲ್ಲ. ಶುಭ ಕಾರ್ಯಗಳು ಕೂಡಿಬರುವ ಸಾಧ್ಯತೆ. ನ್ಯಾಯಾಲಯದ ವ್ಯವಹಾರಗಳಲ್ಲಿ ಯಶಸ್ಸು. ಪ್ರಿಯ ವ್ಯಕ್ತಿಗಳ ಆಗಮನದಿಂದ ಸಂತಸ ನೆಮ್ಮದಿ.

ಕುಂಭ: ವೃತ್ತಿಯಲ್ಲಿ ಸಮಸ್ಯೆ ತಲೆದೋರಬಹುದು. ದೂರಾಲೋಚನೆಯಿಂದಾಗಿ ಸಮಸ್ಯೆಗಳಿಗೆ ಪರಿಹಾರ ಕಂಡುಬರುವುದು. ಸಂತೃಪ್ತಿಯ ದಾಂಪತ್ಯ ಜೀವನ. ಮನರಂಜನಾ ಕಾರ್ಯಕ್ರಮದಲ್ಲಿ ಭಾಗವಹಿಸುವ ಸಾಧ್ಯತೆ.

ಮೀನ: ಮನೆಯಲ್ಲಿನ ಸಮಸ್ಯೆಗಳು ಸುಲಭವಾಗಿ ಬಗೆಹರಿಯುವವು. ಮಕ್ಕಳಿಂದ ನೆಮ್ಮದಿ ದೊರಕುವುದು. ಮಹಿಳೆಯರಿಗೆ ಉದ್ಯೋಗದಲ್ಲಿ ಬಡ್ತಿ ಸಾಧ್ಯತೆ. ಅಧಿಕಾರಿಗಳಿಂದ ಪ್ರಶಂಸೆ ದೊರಕುವುದು.

ನಿಮ್ಮ ಜನ್ಮದಿನ 2-ಜೂನ್ ಈ ದಿನವು ಅತ್ಯಂತ ಶುಭಕರವಾಗಿದ್ದು, ಮೃದು ಮನಸ್ಸನ್ನು ಹೊಂದಿದವರಾದರೂ ವ್ಯವಹಾರದಲ್ಲಿ ನಿಷ್ಠೂರತೆ ಹೊಂದಿರುವಿರಿ. ಸದಾ ಅಚ್ಚುಕಟ್ಟುತನವನ್ನು ನೀವು ರೂಢಿಸಿಕೊಂಡವರಾಗಿದ್ದು, ಬಹುಮುಖ ಪ್ರತಿಭೆ ಇದ್ದರೂ ಏಕಚಿತ್ತದಿಂದ ಕಾರ್ಯನಿರ್ವಹಿಸಿದಲ್ಲಿ ಮಾತ್ರ ಯಶಸ್ಸನ್ನು ಗಳಿಸಲು ಸಾಧ್ಯ.

ಪದಬಂಧ 4615

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಅದೇ ತಾನೆ ಮೂಡುತ್ತಿರುವ ಸೂರ್ಯ (4)
3.ಇಸ್ಲಾಂ ಮತಕ್ಕೆ ಸೇರಿದವನು (4)
5.ದೇವರಿಗೆ ಅರ್ಪಿಸಿ ಪಡೆದುದು (3)
7.ಸರಸದಲ್ಲಿರುವ ದ್ರವ! (2)
9.ನಾಟಕದ ಒಂದು ಭಾಗ (2)
10.ಕೈ ಕೊನೆಗಿದ್ದರೆ ಹಿಂದಿಯವನ ಆಡು ಕಾಣಿಸೀತೇ? (3)
11.ಹೆರಿಗೆಯ ಕಸ (2)
12.ಮತ ಹಾಕುವಾಗ ಆವರಿಸಿದ ಕತ್ತಲು (2)
14.ಮಡಿಯಿಂದ ಏರಿದ ಅಟ್ಟ (3)
16.ಜೈನ ತೀರ್ಥಂಕರರಲ್ಲಿ ಕೊನೆಯವನು (4)
17.ಯಾವುದೇ ಕಳಂಕವಿಲ್ಲದ್ದು (4)

ಮೇಲಿಂದ ಕೆಳಕ್ಕೆ
1.ಹೊರದೂಡಲ್ಪಟ್ಟವನು (3)
2.ಅವಿರತ ಪ್ರಯತ್ನದಲ್ಲಿರುವ ಬ್ರಾಹ್ಮಣ (2)
3.ಮುನಿದವನ ನೋಡಿದರೆ ಈ ಸಂತೋಷ! (2)
4.ಪಾಪಿಗಳ ಲೋಕ (3)
6.ಒಟ್ಟಿಗೆ ನಡೆದ ಮದುವೆ (7)
8.ಮಧುರವಾದ ಸ್ವಪ್ನ (5)
9.ಸಂಖ್ಯೆಗಳ ಮೂಲಕ ಮಾಡುವ ಗಣಿತ (5)
11.ಮಾವನಲ್ಲಿರುವ ಕೋಮಲತೆಕಾಣುತ್ತಿದೆಯೇ? (3)
13.ಕರುವಿಗೆ ತೋರಿದ ದಯೆ (3)
14ಮನಸ್ಸು ಇಲ್ಲಿ ಚಿಕ್ಕದಾಗಿದೆಯಲ್ಲಾ? (2)
15.ಹನ್ನೆರಡು ಅಂಗುಲದ ಉದ್ದಳತೆಯು ಉಲ್ಟಾ ಆಗಿದೆ (2)



4614ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ತರಂಗ 3.ಹಲಗೆ 5.ಒಲೆ 6.ತರಾಟೆ 7.ಯಮ 9.ನಿಜ 11.ಒನಪು 13.ಆಳು 14.ಕಡಿಮೆ 15.ಕಷಾಯ

ಮೇಲಿಂದ ಕೆಳಕ್ಕೆ: 1.ತಪ್ಪಲೆ 2.ಗಣಿತ 3.ಹರಟೆ 4.ಗೆಳೆಯ 5.ಒಡಕುದನಿ 8.ಮದುಮಗಳು 10.ಜನಕ 11.ಒಲುಮೆ 12.ಪುಳಕ 13.ಆಲಯ

ಸುಡೊಕು 5001

6		4		9		1		8
	1			3			6	
		7	4		1	3		9
2	9				4	6		
1	4							
							9	4
3		9			5		7	1
	8			1		9		3
4		1	3		9		8	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5000 ಸುಡೊಕು

3	4	8	2	7	9	6	5	1
9	6	1	5	8	3	2	7	4
5	7	2	1	6	4	3	9	8
6	9	4	7	3	5	1	8	2
2	8	5	6	9	1	7	4	3
1	3	7	4	2	8	9	6	5
8	5	9	3	1	6	4	2	7
7	1	6	8	4	2	5	3	9
4	2	3	9	5	7	8	1	6

ಕೋವಿಡ್: ಮರಣ ಶೇ 3.24ಕ್ಕೆ ಏರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಎರಡು ವಾರಗಳಿಂದ ಕೋವಿಡ್ ದೃಢ ಪ್ರಮಾಣ ದರ ಇಳಿಕೆ ಕಂಡರೂ ಮರಣ ಪ್ರಮಾಣ ದರ ನಿಯಂತ್ರಣಕ್ಕೆ ಬಂದಿಲ್ಲ. ಸೋಂಕಿತರಲ್ಲಿ ಮತ್ತೆ 464 ಮಂದಿ ಮೃತಪಟ್ಟಿರುವುದು ದೃಢಪಟ್ಟಿದ್ದು, ಮರಣ ಪ್ರಮಾಣ ದರ ಶೇ 3.24ಕ್ಕೆ ಏರಿದೆ.

ರಾಜ್ಯದಲ್ಲಿ ಕೋವಿಡ್ ಹೊಸ ಪ್ರಕರಣಗಳ ಸಂಖ್ಯೆ ಮತ್ತಷ್ಟು ಇಳಿಕೆ ಕಂಡಿದ್ದು, 14,304 ಮಂದಿ ಸೋಂಕಿತರಾಗಿರುವುದು ದೃಢಪಟ್ಟಿದೆ. ಒಂದು ದಿನದ ಅವಧಿಯಲ್ಲಿ 1.16 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. ಸೋಂಕು ದೃಢ ಪ್ರಮಾಣವು ಶೇ 12.30ಕ್ಕೆ ಇಳಿಕೆಯಾಗಿದೆ. ಈವರೆಗೆ ಸೋಂಕಿತರಾದವರ ಸಂಖ್ಯೆ 26.18 ಲಕ್ಷ ದಾಟಿದೆ.

ಕೋವಿಡ್ ಪೀಡಿತರಲ್ಲಿ ಮತ್ತೆ 29,271 ಮಂದಿ ಗುಣಮುಖರಾಗಿದ್ದಾರೆ. ಚೇತರಿಕೆ ಹೊಂದಿದವರ ಸಂಖ್ಯೆ 22.90 ಲಕ್ಷ ದಾಟಿದೆ. ಸಕ್ರಿಯ ಪ್ರಕರಣಗಳ ಸಂಖ್ಯೆ ಮತ್ತಷ್ಟು ಇಳಿಕೆ ಕಂಡಿದ್ದು, 2.98 ಲಕ್ಷ ಸೋಂಕಿತರು ಆಸ್ಪತ್ರೆ ಸೇರಿದಂತೆ ವಿವಿಧೆಡೆ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ.

ಬೆಂಗಳೂರಿನಲ್ಲಿ ಮತ್ತೆ 276 ಮಂದಿ ಮೃತಪಟ್ಟಿದ್ದಾರೆ. ಬೆಳಗಾವಿಯಲ್ಲಿ 19, ಮೈಸೂರಿನಲ್ಲಿ 15, ಬಳ್ಳಾರಿಯಲ್ಲಿ 14, ಶಿವಮೊಗ್ಗದಲ್ಲಿ 13, ಹಾಸನ ಹಾಗೂ ಬೆಂಗಳೂರು ಗ್ರಾಮಾಂತರದಲ್ಲಿ ತಲಾ 11 ಮಂದಿ ಸಾವಿಗೀಡಾಗಿರುವುದು ದೃಢಪಟ್ಟಿದೆ. ಉಳಿದ ಜಿಲ್ಲೆಗಳಲ್ಲಿ ಹೊಸ ಮರಣ ಪ್ರಕರಣಗಳ ಸಂಖ್ಯೆ ಹತ್ತಕ್ಕಿಂತ ಕಡಿಮೆ ವರದಿಯಾಗಿದೆ. ಈವರೆಗೆ ಕೋವಿಡ್‌ಗೆ ಮೃತಪಟ್ಟವರ ಸಂಖ್ಯೆ 29,554ಕ್ಕೆ ತಲುಪಿದೆ.

ಮೂರು ಜಿಲ್ಲೆಗಳಲ್ಲಿ ಮಾತ್ರ ಸಾವಿರಕ್ಕೂ ಅಧಿಕ ಪ್ರಕರಣಗಳು ಹೊಸದಾಗಿ ವರದಿಯಾಗಿವೆ. ಬೆಂಗಳೂರಿನಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಮತ್ತಷ್ಟು ಇಳಿದಿದ್ದು, 24 ಗಂಟೆಯಲ್ಲಿ 3,418 ಮಂದಿ ಸೋಂಕಿತರಾಗಿದ್ದಾರೆ. ಮೈಸೂರು (1,153), ಹಾಸನ (1,127) ಜಿಲ್ಲೆಯಲ್ಲಿ ಅಧಿಕ ಪ್ರಕರಣ ವರದಿಯಾಗಿವೆ. ಉಳಿದ ಜಿಲ್ಲೆಗಳಲ್ಲಿ ಸಾವಿರಕ್ಕಿಂತ ಕಡಿಮೆ ಸಂಖ್ಯೆಯಲ್ಲಿ ಹೊಸ ಪ್ರಕರಣಗಳು ದೃಢಪಟ್ಟಿವೆ.

ಕಪ್ಪು ಶಿಲೀಂಧ್ರ ಸೋಂಕು: ರಾಜ್ಯದ 51 ಮಂದಿ ಮರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಪ್ಪು ಶಿಲೀಂಧ್ರ ಸೋಂಕಿಗೆ ಒಳಗಾಗುವವರ ಸಂಖ್ಯೆ ರಾಜ್ಯದಲ್ಲಿ ಏರಿಕೆ ಕಂಡಿದೆ. ಆರೋಗ್ಯ ಇಲಾಖೆಯ ಮಾಹಿತಿ ಪ್ರಕಾರ 1,370 ಮಂದಿಯಲ್ಲಿ ಈ ಸೋಂಕು ಕಾಣಿಸಿಕೊಂಡಿದ್ದರೆ, ಅವರ ಪೈಕಿ 51 ಮಂದಿ ಮೃತಪಟ್ಟಿದ್ದಾರೆ.

ಕೋವಿಡ್ ಪೂರ್ವದಲ್ಲಿ ಅಪರೂಪವಾಗಿದ್ದ ಶಿಲೀಂಧ್ರ ಸೋಂಕು, ಈಗ ಮಕ್ಕಳು ಸೇರಿದಂತೆ ವಿವಿಧ ವಯೋಮಾನದವರಲ್ಲಿ ಕಾಣಿಸಿಕೊಳ್ಳುತ್ತಿದೆ.

ಕೇವಲ ಎರಡು ದಿನಗಳಲ್ಲಿಯೇ 100ಕ್ಕೂ ಅಧಿಕ ಪ್ರಕರಣಗಳು ವರದಿಯಾಗಿದ್ದು, 10ಕ್ಕೂ ಅಧಿಕ ಮಂದಿ ಮೃತಪಟ್ಟಿದ್ದಾರೆ. ಕೊಡಗು ಹಾಗೂ ಚಾಮರಾಜನಗರ ಹೊರತುಪಡಿಸಿ ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಕಪ್ಪು ಶಿಲೀಂಧ್ರ ಸೋಂಕು ಪ್ರಕರಣಗಳು ವರದಿಯಾಗಿವೆ.

ಇದೇ ವೇಳೆ, ಬೌರಿಂಗ್ ಸೇರಿದಂತೆ ರಾಜ್ಯದ ವಿವಿಧ ಆಸ್ಪತ್ರೆಗಳಲ್ಲಿ 'ಲಿಪೋಸೋಮಲ್ ಆ್ಯಂಪೊಟೆರಿಸಿನ್ ' ಔಷಧದ ಕೊರತೆ ಮುಂದುವರೆದಿದೆ.

5 ಜಿಲ್ಲೆಗಳಲ್ಲಿ 50ಕ್ಕೂ ಅಧಿಕ ಪ್ರಕರಣ: ಬೆಂಗಳೂರು ನಗರದಲ್ಲಿ 521, ಧಾರವಾಡದಲ್ಲಿ 119, ಕಲಬುರ್ಗಿಯಲ್ಲಿ 102, ಬಾಗಲಕೋಟೆಯಲ್ಲಿ 68, ವಿಜಯಪುರದಲ್ಲಿ 57 ಕಪ್ಪು ಶಿಲೀಂಧ್ರ ಸೋಂಕು ಪ್ರಕರಣಗಳು ವರದಿಯಾಗಿವೆ. ಕೋಲಾರದಲ್ಲಿ 42, ಶಿವಮೊಗ್ಗದಲ್ಲಿ 38, ರಾಯಚೂರಿನಲ್ಲಿ 36, ಮೈಸೂರು ಹಾಗೂ ಬೆಳಗಾವಿಯಲ್ಲಿ ತಲಾ 35, ಚಿತ್ರದುರ್ಗದಲ್ಲಿ 33, ದಕ್ಷಿಣ ಕನ್ನಡದಲ್ಲಿ 24, ದಾವಣಗೆರೆ ಹಾಗೂ ಬೆಂಗಳೂರು ಗ್ರಾಮಾಂತರದಲ್ಲಿ ತಲಾ 21 ಪ್ರಕರಣಗಳು ದೃಢಪಟ್ಟಿವೆ. ಉಳಿದ ಜಿಲ್ಲೆಗಳಲ್ಲಿ ಪ್ರಕರಣಗಳ ಸಂಖ್ಯೆ 20ಕ್ಕಿಂತ ಕಡಿಮೆಯಿದೆ.

ರಾಜ್ಯದ 16 ಜಿಲ್ಲೆಗಳಲ್ಲಿ ಮರಣ ಪ್ರಕರಣಗಳು ವರದಿಯಾಗಿವೆ. ಧಾರವಾಡದಲ್ಲಿ 14 ಮಂದಿ, ಬೆಂಗಳೂರು ನಗರದಲ್ಲಿ 6 ಮಂದಿ, ಶಿವಮೊಗ್ಗ ಹಾಗೂ ಕಲಬುರ್ಗಿಯಲ್ಲಿ ತಲಾ 5 ಮಂದಿ, ದಕ್ಷಿಣ ಕನ್ನಡದಲ್ಲಿ 4 ಮಂದಿ, ಬೆಂಗಳೂರು ಗ್ರಾಮಾಂತರ, ದಾವಣಗೆರೆ, ಕೋಲಾರ ಹಾಗೂ ಕೊಪ್ಪಳದಲ್ಲಿ ತಲಾ ಇಬ್ಬರು, ಬಾಗಲಕೋಟೆ, ಬೆಳಗಾವಿ, ಬೀದರ್, ಚಿಕ್ಕಮಗಳೂರು, ರಾಯಚೂರು ಹಾಗೂ ಯಾದಗಿರಿಯಲ್ಲಿ ತಲಾ ಒಬ್ಬರು ಸಾವಿಗೀಡಾಗಿರುವುದು ದೃಢಪಟ್ಟಿದೆ.

ಸೋಂಕಿತರಲ್ಲಿ ಸದ್ಯ 1,292 ಮಂದಿ ವಿವಿಧ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ. ಈವರೆಗೆ 27 ಮಂದಿ ಕಾಯಿಲೆಯಿಂದ ಚೇತರಿಸಿಕೊಂಡಿದ್ದಾರೆ.

ಚರ್ಮದ ಮೇಲೆ ಕಪ್ಪು ಶಿಲೀಂಧ್ರ!

ಚಿತ್ರದುರ್ಗ: ಕೋವಿಡ್‌ನಿಂದ ಗುಣಮುಖರಾಗಿದ್ದ ಚಿತ್ರದುರ್ಗದ 54 ವರ್ಷದ ವ್ಯಕ್ತಿಯೊಬ್ಬರ ಕಿವಿಯಲ್ಲಿ ಕಪ್ಪು ಶಿಲೀಂಧ್ರ ಕಾಣಿಸಿಕೊಂಡಿದೆ. ಚರ್ಮದ ಮೇಲೆ ಶಿಲೀಂಧ್ರ ಬೆಳೆದ ಮೊದಲ ಪ್ರಕರಣ ಇದಾಗಿದೆ.

ಚಿತ್ರದುರ್ಗದ ವ್ಯಕ್ತಿಯೊಬ್ಬರ ಬಲ ಕಿವಿಯ ಮೇಲೆ ಬೆಳೆದ ಕಪ್ಪು ಶಿಲೀಂಧ್ರ.

ಕಪ್ಪು ಶಿಲೀಂಧ್ರದಿಂದ ಹಾಳಾಗಿದ್ದ ಚರ್ಮವನ್ನು ಡಾ.ಎನ್.ಬಿ. ಪ್ರಹ್ಲಾದ್ ನೇತೃತ್ವದ ವೈದ್ಯರ ತಂಡ ಶಸ್ತ್ರಚಿಕಿತ್ಸೆ ನಡೆಸಿ ತೆಗೆದಿದೆ. ಹಾನಿಗೊಂಡಿರುವ ಚರ್ಮವನ್ನು ಸಂಪೂರ್ಣ ತೆಗೆದು ಚರ್ಮದ ಕಸಿ ಮಾಡಲು ಸಿದ್ಧತೆ ನಡೆಸಿದೆ.

ರೋಗಿಗೆ ಮಧುಮೇಹ ಇದ್ದು, ತಿಂಗಳ ಹಿಂದೆ ಕೋವಿಡ್‌ನಿಂದ ಗುಣಮುಖರಾಗಿದ್ದರು. ಬಲಭಾಗದ ಕಿವಿಯ ಮೇಲ್ಭಾಗದ ಚರ್ಮವೂ ಕಪ್ಪಾಗಿತ್ತು. ಇದರಿಂದ ಅತೀವ ನೋವು ಕಾಣಿಸಿಕೊಂಡು, ಚಿಕಿತ್ಸೆಗಾಗಿ ಕರ್ನಾಟಕ ಕಿವಿ, ಮೂಗು ಹಾಗೂ ಗಂಟಲು ಆಸ್ಪತ್ರೆಗೆ ಬಂದಾಗ ಕಪ್ಪು ಶಿಲೀಂಧ್ರ ಎಂಬುದು ಖಚಿತವಾಗಿದೆ.

'ಕಪ್ಪು ಶಿಲೀಂಧ್ರ ಸಾಮಾನ್ಯವಾಗಿ ಮೂಗಿನಿಂದ ಆರಂಭವಾಗಿ ಕಣ್ಣು ಹಾಗೂ ಮಿದುಳಿಗೆ ವ್ಯಾಪಿಸುತ್ತದೆ. ಉತ್ತರ ಭಾರತದ ಕೆಲವೆಡೆ ಶ್ವಾಸಕೋಶಕ್ಕೂ ಹಾನಿಯುಂಟು ಮಾಡಿದೆ. ಆದರೆ, ಇದೇ ಮೊದಲ ಬಾರಿಗೆ ಚರ್ಮದ ಮೇಲೆ ಶಿಲೀಂಧ್ರ ಬೆಳೆದಿದೆ. ಮಾಸ್ಕ್ ಧರಿಸಿದ್ದರಿಂದ ಚರ್ಮ ಕಪ್ಪಾಗಿರಬಹುದು ಎಂದು ರೋಗಿ ನಿರ್ಲಕ್ಷ್ಯ ಮಾಡಿದ್ದರಿಂದ ರೋಗದ ತೀವ್ರತೆ ಹೆಚ್ಚಾಗಿದೆ' ಎಂದು ವೈದ್ಯ ಡಾ.ಎನ್.ಬಿ. ಪ್ರಹ್ಲಾದ್ ತಿಳಿಸಿದ್ದಾರೆ.

'ಕಪ್ಪು ಶಿಲೀಂಧ್ರಕ್ಕೆ ಔಷಧ ಕೊರತೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಮೂರನೇ ಅಲೆ ಎದುರಿಸುವುದಕ್ಕಾಗಿ ಎಲ್ಲ ಜಿಲ್ಲಾ ಆಸ್ಪತ್ರೆಗಳಲ್ಲಿ 70ರಿಂದ 80 ಹಾಸಿಗೆಗಳ ಪ್ರತ್ಯೇಕ ಮಕ್ಕಳ ಚಿಕಿತ್ಸಾ ವಿಭಾಗಗಳನ್ನು ಆರಂಭಿಸಲಾಗುವುದು ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ತಿಳಿಸಿದರು.

ಆರೋಗ್ಯ ಇಲಾಖೆಯ ಹಿರಿಯ ಅಧಿಕಾರಿಗಳ ಜತೆ ಮಂಗಳವಾರ ಚರ್ಚಿಸಿದ ಬಳಿಕ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಅವರು, 'ಕೋವಿಡ್ ಮೂರನೆ ಅಲೆ ಎದುರಿಸಲು ರಾಜ್ಯ ಸರ್ಕಾರ ಸಿದ್ಧತೆ ಆರಂಭಿಸಿದೆ. ಮಕ್ಕಳ ಚಿಕಿತ್ಸೆಗೆ ಸೌಲಭ್ಯಗಳನ್ನು ಹೆಚ್ಚಿಸುವ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ' ಎಂದರು.

ಕೆಲವೆಡೆ ಈಗಾಗಲೇ ಇರುವ 20 ಹಾಸಿಗೆಗಳ ಮಕ್ಕಳ ವಿಭಾಗವನ್ನು 80 ಹಾಸಿಗೆಗಳಿಗೆ ಮೇಲ್ದರ್ಜೆಗೇರಿಸಲಾಗುವುದು. ಮಕ್ಕಳ ವಿಭಾಗಕ್ಕೆ ಅಗತ್ಯ ಸಂಖ್ಯೆಯ ತಜ್ಞ ವೈದ್ಯರು, ನರ್ಸಿಂಗ್ ಸಿಬ್ಬಂದಿಯನ್ನು ಒದಗಿಸಲಾಗುವುದು. ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಮೂಲಕ ಅವರಿಗೆ ತರಬೇತಿ ನೀಡಲಾಗುವುದು ಎಂದರು.

ಡಾ.ಕೆ. ಸುಧಾಕರ್

ಪ್ರಯೋಗಾಲಯ ಆರಂಭ: ಎರಡನೆ ಅಲೆಯಲ್ಲಿ ಕಂಡುಬಂದಿರುವ ರೂಪಾಂತರಿ ವೈರಾಣು ವಿನ ವಂಶವಾಹಿ ಕುರಿತು ಅಧ್ಯಯನ ನಡೆಸಲು ರಾಜ್ಯದ ಐದು ವೈದ್ಯಕೀಯ ಕಾಲೇಜುಗಳು, ಮಂಗಳೂರಿನ ವೆನ್ಲಾಕ್ ಮತ್ತು ವಿಜಯಪುರದ ಸರ್ಕಾರಿ ಆಸ್ಪತ್ರೆ ಸೇರಿದಂತೆ ಏಳು ಜಿನೋಮಿಕ್ ಪ್ರಯೋಗಾಲಯಗಳನ್ನು ಆರಂಭಿಸಲಾಗುವುದು ಎಂದು ಸಚಿವರು ಹೇಳಿದರು.

ಔಷಧಿ ಕೊರತೆ ಇದೆ: ಕಪ್ಪು ಶಿಲೀಂಧ್ರ ಸೋಂಕಿತರಿಗೆ ಚಿಕಿತ್ಸೆ ನೀಡಲು ಬಳಸುವ ಆ್ಯಂಫೋಟೆರಿಸಿನ್ ಚುಚ್ಚುಮದ್ದಿನ ಕೊರತೆ ಇದೆ. ಕೇಂದ್ರ ಸರ್ಕಾರ 1,300 ವಯಲ್ಸ್ ಹಂಚಿಕೆ ಮಾಡಿದ್ದು, ರಾಜ್ಯದಲ್ಲಿರುವ ರೋಗಿಗಳ ಸಂಖ್ಯೆಗೆ ಹೋಲಿಸಿದರೆ ಸಾಕಾಗುವುದಿಲ್ಲ. ಕೇಂದ್ರ ಸಚಿವರನ್ನು ಸಂಪರ್ಕಿಸಿ ಹೆಚ್ಚಿನ ವಯಲ್ಸ್ ಪಡೆಯಲು ಪ್ರಯತ್ನಿಸಲಾಗುವುದು ಎಂದು ಹೇಳಿದರು.

ಕಪ್ಪು ಶಿಲೀಂಧ್ರ ಕಣ್ಣಿಗೆ ತಲುಪಿದ ಬಳಿಕ ಅದು ಮೆದುಳನ್ನು ಪ್ರವೇಶಿಸದಂತೆ ತಡೆಯಲು ಕಣ್ಣನ್ನೇ ತೆಗೆಯಲಾಗುತ್ತಿದೆ. ನೇತ್ರ ತಜ್ಞರು, ದಂತ ವೈದ್ಯರು ಸೇರಿದಂತೆ ತಜ್ಞ ವೈದ್ಯರ ತಂಡ ಸೇರಿ ಈ ತೀರ್ಮಾನ ಕೈಗೊಳ್ಳುತ್ತಿದೆ. ಇದು ಔಷಧಿ ಕೊರತೆಯಿಂದ ಆದ ಸಮಸ್ಯೆ ಅಲ್ಲ ಎಂದರು.

ರಾಜ್ಯಕ್ಕೆ 5.76 ಲಕ್ಷ ಡೋಸ್ ಕೋವಿಶೀಲ್ಡ್ ಲಸಿಕೆ

ಬೆಂಗಳೂರು: 'ಕೇಂದ್ರ ಸರ್ಕಾರವು ರಾಜ್ಯಕ್ಕೆ ಮಂಗಳವಾರ 5.76 ಲಕ್ಷ ಡೋಸ್ 'ಕೋವಿಶೀಲ್ಡ್' ಲಸಿಕೆ ಪೂರೈಸಿದೆ' ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ತಿಳಿಸಿದ್ದಾರೆ.

ಈ ಬಗ್ಗೆ ಅವರು ಟ್ವೀಟ್ ಮಾಡಿದ್ದು, 'ಕೇಂದ್ರ ಸರ್ಕಾರದಿಂದ ಈವರೆಗೆ ಒಟ್ಟು 1.14 ಕೋಟಿ ಡೋಸ್ ಕೋವಿಶೀಲ್ಡ್ ಲಸಿಕೆ ಪೂರೈಕೆಯಾಗಿದೆ. ರಾಜ್ಯ ಸರ್ಕಾರವು ನೇರವಾಗಿ ಉತ್ಪಾದನಾ ಕಂಪನಿಯಿಂದ 13.54 ಲಕ್ಷ ಡೋಸ್ ಲಸಿಕೆಯನ್ನು ಖರೀದಿಸಿದೆ' ಎಂದು ತಿಳಿಸಿದ್ದಾರೆ.

ಲಸಿಕೆಯ ಕೊರತೆ ಕಾರಣ ಸರ್ಕಾರಿ ಆರೋಗ್ಯ ಕೇಂದ್ರಗಳಲ್ಲಿ 45 ವರ್ಷ ಮೇಲ್ಪಟ್ಟವರಿಗೆ ಮಾತ್ರ ಲಸಿಕೆ ಒದಗಿಸಲಾಗುತ್ತಿದೆ. 18ರಿಂದ 44 ವರ್ಷದವರಿಗೆ ತಾತ್ಕಾಲಿಕವಾಗಿ ಲಸಿಕೆ ವಿತರಣೆ ಸ್ಥಗಿತ ಮಾಡಲಾಗಿದೆ. ಈ ವಯೋಮಿತಿಯಲ್ಲಿ ಬರುವ ಕೋವಿಡ್ ಮುಂಚೂಣಿ ಕಾರ್ಯಕರ್ತರಿಗೆ ಲಸಿಕೆ ನೀಡಲಾಗುತ್ತಿದೆ.

ಆರೋಗ್ಯ ಇಲಾಖೆಯ ಮಾಹಿತಿ ಪ್ರಕಾರ ರಾಜ್ಯದಲ್ಲಿ ಈವರೆಗೆ 7.20 ಲಕ್ಷ ಆರೋಗ್ಯ ಕಾರ್ಯಕರ್ತರು ಮೊದಲ ಡೋಸ್ ಲಸಿಕೆ ಪಡೆದುಕೊಂಡಿದ್ದಾರೆ. ಅವರಲ್ಲಿ 4.72 ಲಕ್ಷ ಆರೋಗ್ಯ ಕಾರ್ಯಕರ್ತರು ಎರಡನೇ ಡೋಸ್ ಪೂರ್ಣಗೊಳಿಸಿದ್ದಾರೆ. 45 ವರ್ಷ ಮೇಲ್ಪಟ್ಟವರಲ್ಲಿ 85.48 ಲಕ್ಷ ಮಂದಿ ಮೊದಲ ಡೋಸ್ ಹಾಗೂ 20.82 ಲಕ್ಷ ಮಂದಿ ಎರಡನೇ ಡೋಸ್ ಲಸಿಕೆ ಪಡೆದಿದ್ದಾರೆ. 18ರಿಂದ 44 ವರ್ಷದವರಲ್ಲಿ 11.90 ಲಕ್ಷ ಮಂದಿ ಮೊದಲ ಡೋಸ್ ಲಸಿಕೆ ಹಾಕಿಸಿಕೊಂಡಿದ್ದಾರೆ. ಈವರೆಗೆ 1.38 ಕೋಟಿ ಡೋಸ್ ಲಸಿಕೆಯನ್ನು ಫಲಾನುಭವಿಗಳಿಗೆ ನೀಡಲಾಗಿದೆ.

ಕೋವಿಡ್ : ₹500 ಕೋಟಿ ರಾಜಧನ ಬಳಕೆ

ಮುರುಗೇಶ ನಿರಾಣಿ

ಬಾಗಲಕೋಟೆ: 'ರಾಜ್ಯದಲ್ಲಿ ಗಣಿಗಾರಿಕೆಯಿಂದ ಸಂಗ್ರಹಿಸಿದ ರಾಜಧನದಲ್ಲಿ ಶೇ 33ರಷ್ಟು ಅನ್ನು ಕೋವಿಡ್ ವಿಪತ್ತು ಎದುರಿಸಲು ಅಗತ್ಯವಿರುವ ವೈದ್ಯಕೀಯ ಉಪಕರಣಗಳ ಖರೀದಿಗೆ ಬಳಸಲು ಕೇಂದ್ರ ಸರ್ಕಾರ ಒಪ್ಪಿಗೆ ನೀಡಿದೆ' ಎಂದು ಗಣಿ ಮತ್ತು ಭೂವಿಜ್ಞಾನ ಸಚಿವ ಮುರುಗೇಶ ನಿರಾಣಿ ಹೇಳಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಅವರು, 'ರಾಜ್ಯದಲ್ಲಿ ಕಳೆದ ಮೂರು ವರ್ಷಗಳಿಂದ ₹2,400 ಕೋಟಿ ಸಂಗ್ರಹವಾಗಿದೆ. ಅದರಲ್ಲಿ ₹800 ಕೋಟಿ ಅನ್ನು ಗಣಿ ಬಾಧಿತ ಪ್ರದೇಶಗಳಲ್ಲಿ ಮೂಲಸೌಕರ್ಯ ಕಲ್ಪಿಸಲು ಕ್ರಿಯಾಯೋಜನೆ ರೂಪಿಸಲಾಗಿದೆ. ಉಳಿದ ಹಣದಲ್ಲಿ ಶೇ 33ರಷ್ಟು (₹500 ಕೋಟಿ) ಕೋವಿಡ್ ನಿರ್ವಹಣೆಗೆ ಬಳಕೆ ಮಾಡಲಾಗುವುದು' ಎಂದರು.

'ಈ ಹಣವನ್ನು ಆಯಾ ಜಿಲ್ಲಾಧಿಕಾರಿಗಳ ಮೂಲಕವೇ ಖರ್ಚು ಮಾಡಲಾಗುವುದು. ಪರಿಕರಗಳ ಖರೀದಿಗೆ ಅವರಿಗೆ ಅಧಿಕಾರ ನೀಡಲಾಗುವುದು' ಎಂದು ಹೇಳಿದರು.

ಕೈಗಾರಿಕಾ ಕ್ಷೇತ್ರಕ್ಕೆ ₹ 20 ಸಾವಿರ ಕೋಟಿ ಪ್ಯಾಕೇಜ್‌ಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಲಾಕ್‌ಡೌನ್‌ನಿಂದ ಆರ್ಥಿಕ ಸಂಕಷ್ಟಕ್ಕೆ ಸಿಲುಕಿರುವ ರಾಜ್ಯದ ಮಧ್ಯಮ, ಸಣ್ಣ ಮತ್ತು ಅತಿ ಸಣ್ಣ ಕೈಗಾರಿಕೆಗಳಿಗೆ (ಎಂಎಸ್‌ಎಂಇ) ₹ 20,000 ಕೋಟಿ ಮೊತ್ತದ ಪರಿಹಾರ ಪ್ಯಾಕೇಜ್ ನೀಡುವಂತೆ ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾ ಸಂಸ್ಥೆ (ಎಫ್‌ಕೆಸಿಸಿಐ) ಕೈಗಾರಿಕಾ ಸಚಿವರ ಜಗದೀಶ ಶೆಟ್ಟರ್ ಅವರನ್ನು ಆಗ್ರಹಿಸಿದೆ.

ಎಫ್‌ಕೆಸಿಸಿಐ ಅಧ್ಯಕ್ಷ ಪೆರಿಕ್ಕಲ್ ಎಂ. ಸುಂದರ್ ನೇತೃತ್ವದ ನಿಯೋಗ ಮಂಗಳವಾರ ಕೈಗಾರಿಕಾ ಸಚಿವರನ್ನು ಭೇಟಿ ಮಾಡಿ ಬೇಡಿಕೆ ಪತ್ರ ಸಲ್ಲಿಸಿದೆ.

'ಸರಕು ಮತ್ತು ಸೇವಾ ತೆರಿಗೆ ರೂಪದಲ್ಲಿ ₹ 84,000 ಕೋಟಿ ಮತ್ತು ₹ 1.20 ಲಕ್ಷ ಕೋಟಿ ಆದಾಯ ತೆರಿಗೆ ಸೇರಿದಂತೆ ₹ 2.04 ಲಕ್ಷ ಕೋಟಿ ತೆರಿಗೆ ಪಾವತಿಸುತ್ತಿರುವ ಕೈಗಾರಿಕಾ ಕ್ಷೇತ್ರವನ್ನು ಆರ್ಥಿಕ ಬಿಕ್ಕಟ್ಟಿನಿಂದ ಪಾರುಮಾಡಲು ತಕ್ಷಣವೇ ಪ್ಯಾಕೇಜ್ ಪ್ರಕಟಿಸಬೇಕು' ಎಂದು ಒತ್ತಾಯಿಸಿದೆ.

'ಕನಿಷ್ಠ ವಿದ್ಯುತ್ ಶುಲ್ಕದ ಬಾಬ್ತು ₹ 360 ಕೋಟಿ ವಿನಾಯ್ತಿ ಬಿಬಿಎಂಪಿ ಮತ್ತು ಇತರ ನಗರ ಸ್ಥಳೀಯ ಸಂಸ್ಥೆಗಳಿಗೆ ಪಾವತಿಸಬೇಕಾದ ಆಸ್ತಿ ತೆರಿಗೆ ಹಾಗೂ ಉದ್ಯಮ ಪರವಾನಗಿ ಶುಲ್ಕದಲ್ಲಿ ಶೇ 20ರಷ್ಟು (₹ 8,000 ಕೋಟಿ) ರಿಯಾಯ್ತಿ ನೀಡಬೇಕು. ಕೈಗಾರಿಕೆಗಳ ನೌಕರರ ಮೂರು ತಿಂಗಳ ವೇತನದ ಬಾಬ್ತು ₹ 6,000 ಕೋಟಿಯ ನೆರವು ನೀಡಬೇಕು. ಬ್ಯಾಂಕ್‌ಗಳು ಮತ್ತು ಇತರ ಹಣಕಾಸು ಸಂಸ್ಥೆಗಳಿಂದ ಪಡೆದಿರುವ ಸಾಲದ ಮೇಲಿನ ಅರ್ಧ ವರ್ಷದ ಬಡ್ಡಿಯ ಮೊತ್ತ ₹ 7,190 ಕೋಟಿಯನ್ನೂ ಸರ್ಕಾರ ಭರಿಸಬೇಕು' ಎಂಬ ಬೇಡಿಕೆಯನ್ನು ಎಫ್‌ಕೆಸಿಸಿಐ ಮುಂದಿಟ್ಟಿದೆ.

ಬೇಡಿಕೆ ಪಟ್ಟಿಯಲ್ಲಿರುವ ಎಲ್ಲವೂ ಸೇರಿದರೆ ₹ 21,550 ಕೋಟಿ ಮೊತ್ತ ಬೇಕಾಗುತ್ತದೆ. ₹ 20,000 ಕೋಟಿಯಷ್ಟಾದರೂ ಪರಿಹಾರ ನೀಡಬೇಕು. ಕೈಗಾರಿಕೆಗಳ ನೌಕರರು, ಕಾರ್ಮಿಕರಿಗೆ ಆದ್ಯತೆ ಮೇಲೆ ಕೋವಿಡ್ ಲಸಿಕೆ ನೀಡಬೇಕು. ಲಸಿಕೆ ಪಡೆದಿರುವ ನೌಕರರು ಕೆಲಸಕ್ಕೆ ಹಾಜರಾಗಲು ಅವಕಾಶ ನೀಡಬೇಕು ಎಂದು ಸಂಸ್ಥೆ ಒತ್ತಾಯಿಸಿದೆ.

ಎಫ್‌ಕೆಸಿಸಿಐ ಉಪಾಧ್ಯಕ್ಷ ಉಲ್ಲಾಸ್ ಕಾಮತ್, ಸಣ್ಣ ಕೈಗಾರಿಕೆಗಳ ಸಂಘದ ಅಧ್ಯಕ್ಷ ಕೆ.ಬಿ. ಅರಸಪ್ಪ ನಿಯೋಗದಲ್ಲಿದ್ದರು.

ಪ್ರಜಾವಾಣಿ DH DECCAN HERALD
ಕೋವಿಡ್ ಪರಿಹಾರ ನಿಧಿ

ಆಸ್ಪತ್ರೆಗಳ ಮುಂದೆ ಏದುಸಿರು ಬಿಡುವ ರೋಗಿಗಳನ್ನು ಹೊತ್ತುನಿಂತ ಆಂಬುಲೆನ್ಸ್‌ಗಳು, ಆಪ್ತರ ಜೀವ ಉಳಿಸಲು ಪ್ರಾಣವಾಯುವಿಗಾಗಿ ಅಂಗಲಾಚುವವರು, ಚಿತಾಗಾರಗಳ ಮುಂದೆ ಸಾಲು ಸಾಲು ಮೃತದೇಹಗಳು... ರಾಜ್ಯದಲ್ಲಿ ಕಳೆದ ಕೆಲವು ವಾರಗಳಿಂದ ಇಂತಹದ್ದೇ ಹೃದಯವಿದ್ರಾವಕ ನೋಟಗಳು. ಕೋವಿಡ್–19 ಕಾಣಿಸಿಕೊಂಡ ದಿನದಿಂದ ಇಲ್ಲಿಯವರೆಗೂ 26 ಲಕ್ಷಕ್ಕೂ ಅಧಿಕ ಜನ ಕಾಯಿಲೆಪೀಡಿತರಾಗಿದ್ದು, 29 ಸಾವಿರಕ್ಕೂ ಅಧಿಕ ಜನ ಮೃತಪಟ್ಟಿದ್ದಾರೆ. ಈ ಅಂಕಿ–ಸಂಖ್ಯೆಗಳು ಅಧಿಕೃತ ಮಾಹಿತಿಯಷ್ಟೆ. ನೈಜ ಚಿತ್ರಣ ಇನ್ನೂ ಕರಾಳವಾಗಿದೆ. ಎರಡನೇ ಅಲೆ ಪ್ರಾರಂಭವಾಗಿ ಈಗಾಗಲೇ ಎರಡು ತಿಂಗಳಿಗೂ ಅಧಿಕ ಸಮಯ ಕಳೆದಿದೆ.

ಇಂತಹ ಸನ್ನಿವೇಶದಲ್ಲಿ, ಕೋವಿಡ್ ಪರಿಹಾರ ಕಾರ್ಯದಲ್ಲಿ ತೊಡಗಿಸಿಕೊಂಡಿರುವ ಸ್ವಯಂಸೇವಾ ಸಂಸ್ಥೆಗಳಿಗೆ 'ಡೆಕ್ಕನ್ ಹೆರಾಲ್ಡ್' ಹಾಗೂ 'ಪ್ರಜಾವಾಣಿ' ಪತ್ರಿಕೆಗಳು ಬೆಂಬಲ ನೀಡಲು ನಿರ್ಧರಿಸಿವೆ. ನೀವು ನೀಡುವ ದೇಣಿಗೆಯ ಪ್ರತೀ ಪೈಸೆಯೂ ಸಂಕಷ್ಟಕ್ಕೆ ಒಳಗಾಗಿರುವ ಅರ್ಹ ಫಲಾನುಭವಿಗೆ ನೇರವಾಗಿ ಸೇರಿ, ಅವರ ಕಣ್ಣೀರು ಒರೆಸಲು ನೆರವಾಗಲಿದೆ.

₹ 1000 ಮತ್ತು ಅದಕ್ಕಿಂತ ಹೆಚ್ಚಿನ ದೇಣಿಗೆ ನೀಡಿದವರ ಹೆಸರನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುವುದು. ಈ ದೇಣಿಗೆಗೆ 80ಜಿ ಅನ್ವಯ ಆದಾಯ ತೆರಿಗೆಯಲ್ಲಿ ವಿನಾಯಿತಿ ಸಿಗಲಿದೆ.

ಹೀಗಾಗಿ, ನಿಮ್ಮ ಕೈಲಾದ ದೇಣಿಗೆಯನ್ನು (ಅದರ ಪ್ರಮಾಣ ಎಷ್ಟೇ ಇರಲಿ) ನೀಡಿ ಸಂಕಷ್ಟದಲ್ಲಿ ಸಿಲುಕಿದವರ ಬೆಂಬಲಕ್ಕೆ ನಿಲ್ಲುವ ಮಾನವೀಯ ಕಾರ್ಯದಲ್ಲಿ ಕೈಜೋಡಿಸುವಂತೆ ಕೋರುತ್ತೇವೆ.

ಆನ್‌ಲೈನ್ ಹಣ ವರ್ಗಾವಣೆ ಮೂಲಕ ಡೆಕ್ಕನ್ ಹೆರಾಲ್ಡ್–ಪ್ರಜಾವಾಣಿ ಪರಿಹಾರ ನಿಧಿ ಟ್ರಸ್ಟ್‌ಗೆ ದೇಣಿಗೆ ನೀಡಬಹುದು:
(Canara Bank, Cantonment Branch; A/C NO.0404101200385, IFSC CODE : CNRB0000404)

ದೇಣಿಗೆದಾರರು ತಾವು ನೀಡಿದ ದೇಣಿಗೆ ವಿವರದ ಜತೆಗೆ ಹೆಸರು, ವಿಳಾಸ ಹಾಗೂ ಸಂಪರ್ಕ ಸಂಖ್ಯೆಯನ್ನು dept.finc@printersmysore.co.in ಈ ಇ–ಮೇಲ್‌ಗೆ ಕಳುಹಿಸಲು ವಿನಂತಿ. ಇದರಿಂದ ದೇಣಿಗೆದಾರರಿಗೆ ರಸೀದಿ ಕಳಿಸಲು ಅನುಕೂಲವಾಗುತ್ತದೆ.

ದೇಣಿಗೆ ಕೊಟ್ಟವರ ವಿವರ

ಸಂ	ಹೆಸರು, ವಿಳಾಸ	ದೇಣಿಗೆ ₹ಗಳಲ್ಲಿ
1.	**ಮನು ಕೊಂಬಾಡಿ** 118, ಆರ್‌ಎಂವಿ ಎಕ್ಸ್‌ಟೆನ್ಷನ್, 2ನೇ ಹಂತ , 1ನೇ ಬ್ಲಾಕ್ , ಬೆಂಗಳೂರು	25,000
2.	**ಡಾ. ಅಮರನಾರಾಯಣ್ ಡಿ.**, ಮುಖ್ಯ ವೈದ್ಯಾಧಿಕಾರಿ, ರಾಷ್ಟ್ರೀಯ ಏರೋಸ್ಪೇಸ್ ಪ್ರಯೋಗಾಲಯ, ಎಚ್.ಎ.ಎಲ್.ಏರ್‌ಪೋರ್ಟ್ ರಸ್ತೆ, ಬೆಂಗಳೂರು	10,000
3.	**ವೆಂಕಟಗಿರಿ ರಾವ್ ಎಸ್.** # 292, 60 ಅಡಿ ಮುಖ್ಯ ರಸ್ತೆ, 5 ನೇ ಬ್ಲಾಕ್, ಸರ್ ಎಂವಿ ಲೇಔಟ್, ಬೆಂಗಳೂರು	10,000
4.	**ವಿ.ಪದ್ಮನಾಭನ್** 202, ಶ್ರೀ ಕೃಷ್ಣ ಅಪಾರ್ಟ್‌ಮೆಂಟ್, ರುಸ್ತುಮ್ ಬಾಗ್ ಮುಖ್ಯ ರಸ್ತೆ, ಬೆಂಗಳೂರು	10,000
5.	**ಎಚ್. ವಿ. ಸುಧಾ ದೇವಿ,** # 14, 2 ನೇ ಮಹಡಿ, ಕೆ.ಎಚ್.ಬಿ ಕ್ವಾಟರ್ಸ್, ಬ್ಲಾಕ್ -4, 20 ನೇ ಕ್ರಾಸ್ ಜಯನಗರ 1 ಮತ್ತು 3 ನೇ ಬ್ಲಾಕ್, ಬೆಂಗಳೂರು	10,000
6.	**ಚಂದ್ರಮೌಳಿ ಎಚ್.ಎಸ್.** ಬೆಂಗಳೂರು	5,001
7.	**ಎನ್. ಗುರುಪ್ರಕಾಶ್,** ನಂ 6, ಐಶ್ವರ್ಯ, 1ನೇ ಮೇನ್ 1ನೇ ಕ್ರಾಸ್, ರಾಘವೇಂದ್ರ ಲೇಔಟ್, ಅರೆಕೆರೆ, ಬನ್ನೇಘಟ್ಟ ರಸ್ತೆ, ಬೆಂಗಳೂರು	5,000
8.	**ಟಿ.ತಮೇಂದ್ರನ್,** ಫ್ಲಾಟ್ 402 ಎ, ಶಿವರಂಜನಿ ಅಪಾರ್ಟ್‌ಮೆಂಟ್, 1ನೇ ಈಸ್ಟ್ , ಐಟಿಐ ಲೇಔಟ್, ಬನಶಂಕರಿ 3ನೇ ಹಂತ ಬೆಂಗಳೂರು	5,000
9.	**ವಿಷ್ಣು ಎಂ.**, # 26, 6 ನೇ ಕ್ರಾಸ್, ಶಾರದಾಂಬ ನಗರ, ಜಾಲಹಳ್ಳಿ ಗ್ರಾಮ, ಬೆಂಗಳೂರು	5,000
10.	**ಡಾ. ಕೆ. ಕಾಳಚನ್ನೇಗೌಡ** # 2329,12 ಮುಖ್ಯ ರಸ್ತೆ, 2 ನೇ ಹಂತ, ವಿಜಯನಗರ, ಮೈಸೂರು	5,000
11.	**ಬಸವರಾಜು ಎಂ.** 113, 6ನೇ ಮುಖ್ಯ ರಸ್ತೆ, 2ನೇ ಸಿ–ಕ್ರಾಸ್, ನಾಗೇಂದ್ರ ಬ್ಲಾಕ್, ಬೆಂಗಳೂರು	5,000
12.	**ನಾಗರಾಜ ಯಂಕಣ್ಣವರ**- ಎಲ್‌ಐಸಿ ಆಫ್ ಇಂಡಿಯಾ-ಗೋಕಾಕ	5,000
13.	**ಕೆ.ಸಿ. ಕೃಷ್ಣಮೂರ್ತಿ,** 1456, 17 ನೇ ಬಿ– ಮುಖ್ಯ, ಜೆ.ಪಿ. ನಗರ 2ನೇ ಹಂತ ಬೆಂಗಳೂರು	3,000
14.	**ರಾಜೇಂದ್ರ ನಾಡಗೌಡ,** 3 55 / ಬಿ 2ನೇ ಮುಖ್ಯ 1ನೇ ಕ್ರಾಸ್, ಲಕ್ಷ್ಮಿನಗರ ಬಸವೇಶ್ವರನಗರ, ಬೆಂಗಳೂರು	2,100
15.	**ಶೋಭಾ ಎ.ಜಿ.,** ಎಂಇಐ ಲೇಔಟ್, ಬೆಂಗಳೂರು	2,000
16.	**ಕುಮಾರ್ ಎಲ್. ಮಹಾನಾಯಕ,** ಹಾಗಲಕೆರೆ, ಹೊಸದುರ್ಗ, ಚಿತ್ರದುರ್ಗ ಜಿಲ್ಲೆ	1,111
17.	**ವಾಸುದೇವ ಅರುಣ್ ರಾವ್,** ಸಂಖ್ಯೆ 8, 8ನೇ ಕ್ರಾಸ್, 5ನೇ ಮುಖ್ಯ ರಸ್ತೆ, ಹಂಪಿನಗರ, ಬೆಂಗಳೂರು	1,001
18.	**ವಾಸುದೇವ ರಾವ್ ಪಿ.ಜಿ.,** ನಂ 8, 8ನೇ ಕ್ರಾಸ್, 5ನೇ ಮುಖ್ಯ ರಸ್ತೆ, ಹಂಪಿನಗರ, ಬೆಂಗಳೂರು	1,001
19.	**ಉಷಾ ಬಾಯಿ,** ಸಂಖ್ಯೆ 8, 8ನೇ ಕ್ರಾಸ್, 5ನೇ ಮುಖ್ಯ ರಸ್ತೆ, ಹಂಪಿನಗರ, ಬೆಂಗಳೂರು	1,001
20.	**ನಾಗರಾಜ್ ಎಸ್.** 1036/22, 2ನೇ ಮೇನ್, ಸಾರ್ವಜನಿಕ ಹಾಸ್ಟೆಲ್ ರಸ್ತೆ ವಿದ್ಯಾರಣ್ಯಪುರ, ಮೈಸೂರು	1,000
21.	**ಸುನಿಲ್ ದಾಸ್ ಎನ್.ವಿ,** ಸಿ-306, ನೋಟ್ ಮುದ್ರಣ ನಗರ, ಮೈಸೂರು	1,000
22.	**ಸ್ವಾತಿ ಕೆ.,** 53, ಕೆ.ಎಚ್.ಬಿ 3 ನೇ ಹಂತ, ಜೆಟಿಕೆ ಲೇಔಟ್, ಕುವೆಂಪುನಗರ, ಮೈಸೂರು	1,000
23.	**ಅಮರೇಶ ಪುಂಡಿ ಕೊಟ್ರೆಗೌಡ,** 4ನೇ ವಾರ್ಡ್, ಊರಮ್ಮ ದೇವಾಲಯದ ಹತ್ತಿರ ಅರಸಿಕೇರೆ	1,000
24.	**ವಿ.ವಿಜಯ ಕುಮಾರ್** # 3054, 14 'ಎ' ಮುಖ್ಯರಸ್ತೆ, 8 'ಎ' ಕ್ರಾಸ್, ಆರ್‌ಪಿಸಿ ಲೇಔಟ್, ವಿಜಯನಗರ ಎರಡನೇ ಹಂತ, ಬೆಂಗಳೂರು	1,000
	ಒಟ್ಟು ಹಣ	1,16,215
	ಒಟ್ಟು ಸಂಗ್ರಹವಾಗಿರುವ ಮೊತ್ತ	54,21,000

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಭವಿಷ್ಯ
Astrology

★||ಸ್ತ್ರೀವಶೀಕರಣ ಸ್ಪೆಷಲಿಸ್ಟ್||★ ಕೇರಳ ಅಘೋರಿ_ನಾಗಸಾಧು, ಕಾಳಿಕಾದೇವಿ ದಿವ್ಯಶಕ್ತಿಯಿಂದ ನಿಮ್ಮ ಸಮಸ್ಯೆಗಳಿಗೆ ಶೀಘ್ರದಲ್ಲಿ ಪರಿಹಾರ. ಇದುನಿಜ ನಂಬಿ_ಕರೆಮಾಡಿ. ಪಂಡಿತ್.ರಾವ್. 9901724082

★||ಶ್ರೀಶಾಕಂಬರಿದೇವಿ||★ ಜ್ಯೋತಿಷ್ಯರು ಸ್ತ್ರೀಪುರುಷ ವಶೀಕರಣ, ಸಂಭೋಗ ವಶೀಕರಣ ಇನ್ನೂಯಾವುದೇ ಸಮಸ್ಯೆಗಳಿಗೆ 11 ನಿಮಿಷದಲ್ಲಿ ಶಾಶ್ವತ ಪರಿಹಾರ. ಡಾ||.ವಿವೇಕಾನಂದಜೋಶಿ. 9008968867

★ನುಡಿದಂತೆ ನಡೆಯುವುದು★ "ವಂಶಪಾರಂಪರಿಕ ಜ್ಯೋತಿಷ್ಯರು," ಆರೋಗ್ಯ, ಸಂತಾನ. ಸ್ತ್ರೀಪುರುಷ ವಶೀಕರಣ, ಗಂಡಹೆಂಡತಿ ಕಲಹ, ನಾಗಸಾಧುಗಳ ಭಾನಮತಿ ಪ್ರಯೋಗದಿಂದ 100%ಪರಿಹಾರ. 7829724990

ಉಚಿತ ಭವಿಷ್ಯ ಶ್ರೀ ಕೇರಳ ದುರ್ಗಾಂಬಿಕಾದೇವಿ ಆರಾಧಕರು ಪ್ರಧಾನ ತಾಂತ್ರಿಕರು ಮೋಡಿ ಮಾಂತ್ರಿಕರು. ದೈವಶಕ್ತಿ ಜ್ಯೋತಿಷ್ಯರು ಪಂಡಿತ್ ಗುರೂಜಿ ವಶೀಕರಣ ಸ್ಪೆಷಲಿಸ್ಟ್ ನಿಮ್ಮಾವುದೇ ಸುಖದುಃಖ ಮನನೊಂದ ಯಾವುದೇ ಗುಪ್ತಸಮಸ್ಯೆಗಳಿಗೂ 1ದಿನದಲ್ಲಿ ಪರಿಹಾರ.9743010743

ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 9591580089.

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ 100% ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್.ಉಚಿತ ಭವಿಷ್ಯ ಖಚಿತ ಪರಿಹಾರ ಶ್ರೀಕ್ಷೇತ್ರ ಧರ್ಮಸ್ಥಳ. 7022443071

★ಅಂಭಭವಾನಿ ಜ್ಯೋತಿಷ್ಯಾಲಯ★ ಕೊಳ್ಳೆಗಾಲದ ನಂ.1 ವಶೀಕರಣ ಸ್ಪೆಷಲಿಸ್ಟ್ ದೇವಿಪ್ರಸಾದ್ (ಉಚಿತ ಭವಿಷ್ಯ ಖಚಿತ ಪರಿಹಾರ)ನಿಮ್ಮ ಸಮಸ್ಯೆಗಳೇನೆಯಿರಲಿ 2ದಿನದಲ್ಲಿ ಪರಿಹಾರ. 9886755306

★||ಸಿಗಂದೂರು ಚೌಡೇಶ್ವರಿ||★ ವಶೀಕರಣಆಗಬೇಕಾದವರಿಗೆ ಹಚ್ಚುವುದಾಗಲಿ,ತಿನ್ನಿಸುವುದಾಗಲಿ, ಬಟ್ಟೆ,ಫೋಟೋ, ಕೂದಲು ಇಲ್ಲದಿದ್ದರೂ ಸ್ತ್ರೀಪುರುಷ ಲೈಂಗಿಕ ವಶೀಕರಣ, ಸ್ತ್ರೀಯರಿಗೆ 7ಗಂಟೆಗಳಲ್ಲಿ ಉಚಿತ ಪರಿಹಾರ.9845153558

★ವಶೀಕರಣ ಸ್ಪೆಷಲಿಸ್ಟ್ ಗುರೂಜಿ. 9663631199★ ಓಂ ಶ್ರೀ ದುರ್ಗಾದೇವಿ ಅನುಗ್ರಹ ಜ್ಯೋತಿಷ್ಯಾಲಯ ಕಟೀಲು ದುರ್ಗಾಪರಮೇಶ್ವರಿ ಅಮ್ಮನವರ ಆರಾಧಕರು. ಪಂಡಿತ್ ಮೋಹನ್ ದಾಸ್ ಶರ್ಮ ಗುರೂಜಿ (ಉಡುಪಿ) ನಿಮ್ಮ ಕುಟುಂಬದ ಸಮಸ್ಯೆಗಳಾದ ನಿಮ್ಮ ಮಕ್ಕಳ ವಿದ್ಯಾಭ್ಯಾಸದಲ್ಲಿ ಬುದ್ಧಿ ಜ್ಞಾನಶಕ್ತಿ ಆರೋಗ್ಯ ಸಮಸ್ಯೆ ತೊಂದರೆ ಇದ್ದರೆ, ನಿಮ್ಮ ಗಂಡ ಪರಸ್ತ್ರೀಯಿಂದ ನಿಮ್ಮ ಸಂಸಾರದಲ್ಲಿತೊಂದರೆ, ನಿಮ್ಮ ಅತ್ತೆ, ಸೊಸೆ, ನಾದಿನಿಯಿಂದ ನಿಮ್ಮ ಸಂಸಾರದಲ್ಲಿ ತೊಂದರೆ ಆಗುತ್ತಿದೆಯೇ? ಪ್ರೀತಿಯಲ್ಲಿ ನಂಬಿ ಮೋಸ ಹೋಗಿದ್ದೀರಾ, ನೀವು ಇಷ್ಟಪಟ್ಟಂತಹ ಸ್ತ್ರೀ/ಪುರುಷ ನಿಮ್ಮಂತೆ ವಶೀಕರಣ ಆಗಲು ನಿಮ್ಮ ಜನ್ಮಲಗ್ನದಲ್ಲಿ ಮದುವೆ ವಿಚಾರದಲ್ಲಿ ಕಂಕಣ ತೊಂದರೆ ಆಗುತ್ತಿದ್ದರೆ,ಗಂಡಹೆಂಡತಿ ಕಿರಿಕಿರಿ ಇಂದ ಡೈವರ್ಸ್ ಪ್ರಾಬ್ಲಮ್ ಇರುವುದರಿಂದ ನಿಮ್ಮ ಸಂಸಾರ ಹಾಳಾಗುತ್ತಿದೆ , ಅಣ್ಣ- ತಮ್ಮಂದಿರ ಅಸ್ತಿಯಲ್ಲಿ ತೊಂದರೆ, ಶತ್ರುಗಳಿಂದ ನಿಮ್ಮ ಕುಟುಂಬಕ್ಕೆ ತೊಂದರೆ,ನಿಮ್ಮ ಕುಟುಂಬದಲ್ಲಿ ಮಾಟ ಮಂತ್ರ ಪ್ರಯೋಗದಿಂದ ನಿಮ್ಮ ಕುಟುಂಬ ಸರ್ವನಾಶ ಆಗುತ್ತಿದೆ, ನಿಮ್ಮ ಎಲ್ಲಾ ಕಠಿಣ ಸಮಸ್ಯೆಗಳಿಗೂ ತಾಯಿ ಕೇರಳ ಭಗವತಿ ದೇವಿ ಮತ್ತು ಕಟೀಲು ದುರ್ಗಾಪರಮೇಶ್ವರಿದೇವಿ ಅಮ್ಮನವರ ಪೂಜಾ ಶಕ್ತಿಯಿಂದ ಅಮಾವಾಸ್ಯೆ ಹುಣ್ಣಿಮೆ ಸೂರ್ಯಚಂದ್ರ ಗ್ರಹಣದಿಂದ ಜಪ ಸಿದ್ದಿಗಳಿಂದ ಕೇವಲ ೧ದಿನದಲ್ಲಿ ೧೦೦% ಶಾಶ್ವತ ಪರಿಹಾರ ಮಾಡುತ್ತಾರೆ. ಮಲ್ಲೇಶ್ವರಂ, ಬೆಂಗಳೂರು

ಉದ್ಯೋಗಾವಕಾಶ
General

WORK FROM home, MNC jobs - Anudip Foundation 7605058338, 8884606485

Part-Time Jobs

ಮನೆಯಿಂದಲೇ ಕುಳಿತು ಆಫ್‌ಲೈನ್ ಡೇಟಾ ಎಂಟ್ರಿ, ಕನ್ನಡ,ಇಂಗ್ಲೀಷ್ ಬುಕ್ ರೈಟಿಂಗ್ ಫಾರಂ ಫಿಲ್ಲಿಂಗ್ ಕೆಲಸ ಗಳಿಸಿ 15,000-18,000/-. ಕೊರಿಯರ್,ಬುಕ್,ಪೆನ್ ಚಾರ್ಜಸ್ ನಾವೇ ಕೊಡುತ್ತೇವೆ.9686114647, 9900229091

ಪ್ರಜಾವಾಣಿ ಕ್ಲಾಸಿಫೈಡ್ಸ್
BOOK YOUR AD FOR SUNDAY & GET 50% OFF ON WEEKDAYS
For Lineage & Single/ Multi Column Classifieds Display ads
For more information Contact:
9880856233
9845114560
9606912256

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Tanveer : 9886213331
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ scan the QR code ಸ್ಕ್ಯಾನ್ ಮಾಡಿ ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಭಾವ ಪೂರ್ಣ ಶ್ರದ್ಧಾಂಜಲಿ

ಶ್ರೀ ಕೆ. ಆತ್ಮಾನಂದ
ಇವರು ನಮ್ಮ ಬ್ಯಾಂಕಿನ ನಿರ್ದೇಶಕರಾಗಿದ್ದು ದಿನಾಂಕ: 31–05–2021 ರಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ಮೃತರ ಆತ್ಮಕ್ಕೆ ಶಾಂತಿ ಕೋರುವ:
ಅಧ್ಯಕ್ಷರು, ನಿರ್ದೇಶಕರು ಮತ್ತು ಸಿಬ್ಬಂದಿವರ್ಗ – ಚಾರ್ಟರ್ಡ್ ಸಹಕಾರಿ ಬ್ಯಾಂಕ್ ನಿಯಮಿತ, ಕೋರಮಂಗಲ, ಬೆಂಗಳೂರು ಹಾಗೂ ಕುಟುಂಬ ವರ್ಗದವರು.

11ನೇ ದಿನದ ಪುಣ್ಯ ಸ್ಮರಣೆ

ಶ್ರೀಮತಿ. ರತ್ನ ಬಾಯಿ
W/O ಎ. ಪೌಲ್ ಚಿನ್ನಪ್ಪ
ಇವರು ದಿನಾಂಕ 23.05.2021ರಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರ ದಿವ್ಯಾತ್ಮಕ್ಕೆ ಭಗವಂತನು ಚಿರಶಾಂತಿ ಕರುಣಿಸಲೆಂದು ಪ್ರಾರ್ಥಿಸುತ್ತೇವೆ.
ಇಂತಿ ದುಃಖತಪ್ತರು
ಕುಟುಂಬವರ್ಗದವರು ಮತ್ತು ಬಂಧು-ಮಿತ್ರರು
ಮೊಬೈಲ್: 90368 91132

FOR ADVERTISEMENT QUERIES
• OBITUARY
• REMEMBRANCES
Contact:
Santhosh: 9880856233
Vishal : 9845114560
Ravi : 9606912256

OBITUARY

R. RAMACHANDRA
(25-03-1952 - 30-05-2021)
Owner of Tirumala Wines & President of Wines Store Association Doddaballapur.
*Those special memories of you will always bring a smile,
If only I could have you back for just a while.
Then we could sit and talk again just like we used to do.
You always meant so very much and always will do too.
The fact that you're no longer here will always cause me pain, But you're forever in my Heart.*
Missing you a lot: Chandra, Praveen, Preethu, Sapna, Prakash, Chinnu, Ashu, Vini and Krish

ಗ್ರಾಮಾರೋಗ್ಯ; ಆಗಲಿ ಇನ್ನಷ್ಟು ಯೋಗ್ಯ



ಆಸ್ಪತ್ರೆಗಳ ನಾಡಲ್ಲಿ ಚಿಕಿತ್ಸೆಗೆ ಅಲೆದಾಟ

ದಕ್ಷಿಣ ಕನ್ನಡ: ದುರಿತ ಕಾಲದಲ್ಲಿ ಬಯಲಾದ ಆರೋಗ್ಯ ವ್ಯವಸ್ಥೆಯ ದೌರ್ಬಲ್ಯ

• ಸಂಧ್ಯಾ ಹೆಗಡೆ

ಮಂಗಳೂರು: 'ಮಗಳಿಗೆ ಪಾಸಿಟಿವ್ ಆದಾಗ ಕಾಲ್ ಮಾಡಿ, ವಿಷಯ ತಿಳಿಸಿದ್ದುಬಿಟ್ಟರೆ, ಜೊತೆಗಿದ್ದ ನಮ್ಮಿಬ್ಬರ ತಪಾಸಣೆ, ಮಗಳ ಆರೋಗ್ಯ ವಿಚಾರಣೆ ಮಾಡಲು ಯಾರೊಬ್ಬರೂ ಇತ್ತ ಮುಖ ಮಾಡಿಲ್ಲ. ಎರಡನೇ ದಿನಕ್ಕೆ ನನ್ನಲ್ಲೂ ಲಕ್ಷಣಗಳು ಕಾಣಿಸಿಕೊಂಡು, ಪರೀಕ್ಷಾ ವರದಿ ಪಾಸಿಟಿವ್ ಬಂತು. ನಾವೇ ನಿಗಾವಹಿಸಿ, ಸಂಬಂಧಿ ವೈದ್ಯರ ಸಲಹೆಯಿಂದ ಗುಣಮುಖರಾದೆವು' ಎಂದು ವಿಟಮಿನ್ ಮಾತ್ರೆ ಕೇಳಿಕೊಂಡು ಆಸ್ಪತ್ರೆಗೆ ಬಂದಿದ್ದ ಬೋಳಾರದ ವ್ಯಕ್ತಿಯೊಬ್ಬರು ಅನುಭವ ಹೇಳಿಕೊಂಡಿದ್ದು ಹೀಗೆ.

'ವ್ಯಾಕ್ಸಿನ್ ತೆಕ್ಕೊಂಡು ಎರಡು ತಿಂಗಳಾಯ್ತು. ಎರಡನೇ ಡೋಸ್‌ಗೆ ಕಾಲ್ ಬರ್ಲೇ ಇಲ್ಲ. ನಾಲ್ಕೈದು ಬಾರಿ ಆಸ್ಪತ್ರೆಗೆ ಬಂದು ಹೋದೆ. ಎಂತದ್ದೂ ಮಾಹಿತಿ ಸಿಕ್ತಿಲ್ಲ. ಎಲ್ಲಿ ವ್ಯಾಕ್ಸಿನ್ ಕೊಡ್ತಾರಂತೆ' ಎಂದು ಅಲೆದಾಡುತ್ತಿದ್ದರು 60ರ ಆಸುಪಾಸಿನ ಬಂಟ್ವಾಳದ ಮಹಿಳೆ ಅಂಜನಾ ಪ್ರಭು.

'ಮೇಲ್ದರ್ಜೆಗೇರಿದ ಉಪ್ಪಿನಂಗಡಿ ಸಮುದಾಯ ಆರೋಗ್ಯ ಕೇಂದ್ರಕ್ಕೆ ಐದು ಕೋಟಿ ರೂಪಾಯಿ ವೆಚ್ಚದ ಬೃಹತ್ ಕಟ್ಟಡವಿದೆ. ಇಲ್ಲಿ ಕಾಯಂ ವೈದ್ಯರಿಲ್ಲ, ಚಿಕಿತ್ಸಾ ಪರಿಕರಗಳೂ ಇಲ್ಲ. ರಾತ್ರಿ ಆಸ್ಪತ್ರೆಯ ಬಾಗಿಲು ಮುಚ್ಚಿರುತ್ತದೆ. ಕೋವಿಡ್ ಉಲ್ಬಣಿಸಿರುವ ಸಂದರ್ಭ ಇದು, ನಡುರಾತ್ರಿ ಆರೋಗ್ಯ ಹದಗೆಟ್ಟರೆ, ಪುತ್ತೂರು ಅಥವಾ ಮಂಗಳೂರಿಗೆ ರೋಗಿಯನ್ನು ಕರೆದೊಯ್ಯಬೇಕು' ಎಂದು ಬೇಸರಿಸಿದರು ಉಪ್ಪಿನಂಗಡಿ ಗ್ರಾಮ ಪಂಚಾಯಿತಿ ಸದಸ್ಯ ಯು.ಟಿ. ತೌಸಿಫ್.

'ನೋಡಿ, ಕೋವಿಡ್ ಕಾಲದಲ್ಲೂ ನಮ್ಮ ಪಂಜಿಕಲ್ಲು ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಒಬ್ಬ ರೋಗಿ ಕಾಣ್ತಿಲ್ಲ. ಏಳು ಗ್ರಾಮಗಳ ಸುಮಾರು 5,000 ಜನರಿಗೆ ಇದೇ ಆಸ್ಪತ್ರೆ ಆಸರೆ. ಆದರೆ, ವೈದ್ಯರ ಭೇಟಿಗೆ ಜನರು ದೂರದ ಬಂಟ್ವಾಳ ತಾಲ್ಲೂಕು ಆಸ್ಪತ್ರೆಗೆ ಹೋಗ್ತಾರೆ. ಇಲ್ಲದಿದ್ದರೆ, ಮಂಗಳೂರಿಗೇ ಹೋಗ್ತಾರೆ' ಎಂದು ಜನರ ಸುಳಿವೇ ಇಲ್ಲದ ಆಸ್ಪತ್ರೆ ತೋರಿಸಿದ ಪಂಜಿಕಲ್ಲು ಸುರೇಶ್ ಅವರು, ವೈದ್ಯರ ಬಗ್ಗೆ ಅಸಮಾಧಾನ ಹೊರಹಾಕಿದರು.

ವೈದ್ಯಕೀಯ ಕ್ಷೇತ್ರದಲ್ಲಿ ಹೆಸರುವಾಸಿಯಾಗಿರುವ ದಕ್ಷಿಣ ಕನ್ನಡ ಜಿಲ್ಲೆಯ ಸರ್ಕಾರಿ ಗ್ರಾಮೀಣ ಆರೋಗ್ಯ ಕೇಂದ್ರಗಳಿಗೆ ಭೇಟಿ ನೀಡಿದಾಗ ವ್ಯಕ್ತವಾದ ಅಭಿಪ್ರಾಯಗಳು ಇವು. ಜನರು ಪಾಡು ಇದಾದರೆ, ಆಸ್ಪತ್ರೆ ಸಿಬ್ಬಂದಿ ಅಳಲು ಇನ್ನೊಂದು ಬಗೆಯದು.

'ಲಸಿಕೆ ಬಗ್ಗೆ ವಿಚಾರಿಸಲು ಲೆಕ್ಕವಿಲ್ಲದಷ್ಟು ಕಾಲ್‌ಗಳು ಬರುತ್ತವೆ. ಅದಕ್ಕೆ ಉತ್ತರಿಸಬೇಕು. ನಾವು 500 ಡೋಸ್ ಕೇಳಿದರೆ, ನಮಗೆ ಸಿಗುವುದು 50 ಅಷ್ಟೇ. ಫಾರ್ಮಸಿಸ್ಟ್‌ಗಳು, ದ್ವಿತೀಯ ದರ್ಜೆ ಸಹಾಯಕರು ಬಹುತೇಕ ಆಸ್ಪತ್ರೆಗಳಲ್ಲಿ ಇಲ್ಲ. ಇವೆಲ್ಲವುಗಳ ಹೊಣೆ ಶುಶ್ರೂಷಕರ ಹೆಗಲ ಮೇಲೆಯೇ. 'ಇಲ್ಲ'ಗಳ ನಡುವೆ 'ಎಲ್ಲ'ವನ್ನೂ ನಿಭಾಯಿಸಿ, ನಿಜಕ್ಕೂ ನಾವು ಜರ್ಜರಿತರಾಗಿದ್ದೇವೆ. ನಮ್ಮ ಸಮಸ್ಯೆ ಯಾರಲ್ಲಿ ಹೇಳಿಕೊಳ್ಳುವುದು?' ಎಂದು ಅಳುಕುತ್ತಲೇ ಪಿಸುದನಿಯಲ್ಲಿ ಸಂಕಟವನ್ನು ಹೊರಗಿಕ್ಕಿದರು ಸಮುದಾಯ ಆರೋಗ್ಯ ಕೇಂದ್ರದ ಶುಶ್ರೂಷಕರೊಬ್ಬರು.

ಎರಡನೇ ಅಲೆ ಹಳ್ಳಿಗಳನ್ನು ವ್ಯಾಪಿಸಿದ ಮೇಲೆ ಕೆಲವು ಪಂಚಾಯಿತಿಗಳಲ್ಲಿ ಕೋವಿಡ್ ಕಾರ್ಯಪಡೆ ಮುತುವರ್ಜಿಯಲ್ಲಿ ಕಟ್ಟುನಿಟ್ಟಿನ ಹೋಂ ಐಸೊಲೇಷನ್ ನಿಯಮಗಳು ಜಾರಿಗೊಂಡಿವೆ. ಹಳ್ಳಿಗರು ಸ್ಥಳೀಯ ಆರೋಗ್ಯ ಕೇಂದ್ರಗಳಲ್ಲಿ ಗಂಟಲು ದ್ರವ ತಪಾಸಣೆ ಮಾಡಿಕೊಂಡು, ಫಿವರ್ ಕ್ಲಿನಿಕ್‌ನಲ್ಲಿ ಔಷಧ ಪಡೆದು ಮನೆಗೆ ತೆರಳುತ್ತಾರೆ. ರೋಗ ಲಕ್ಷಣ ಇದ್ದರೂ, ಕೋವಿಡ್ ಆರೈಕೆ ಕೇಂದ್ರಗಳಿಗೆ ಹೋಗಲು ಹಿಂದೇಟು ಹಾಕುತ್ತಿದ್ದಾರೆ. ಹೀಗಾಗಿ, ಅನೇಕ ಆರೈಕೆ ಕೇಂದ್ರಗಳಲ್ಲಿ ಹಾಸಿಗೆಗಳು ಖಾಲಿ ಇವೆ. ಕೋವಿಡ್ ರೋಗಿಗಳ ಆರೋಗ್ಯ ಸ್ಥಿತಿ ಬಿಗಡಾಯಿಸಿದರೆ ಮಾತ್ರ ದೂರದ ಸುಳ್ಯ, ಪುತ್ತೂರು, ಬೆಳ್ತಂಗಡಿ, ಮೂಡುಬಿದಿರೆ ತಾಲ್ಲೂಕುಗಳ ಜನರಿಗೆ ಜಿಲ್ಲಾ ವೆನ್ಲಾಕ್ ಆಸ್ಪತ್ರೆ ಅಥವಾ ಖಾಸಗಿ ಆಸ್ಪತ್ರೆಗಳೇ ಗತಿ ಎನ್ನುವಂತಾಗಿದೆ.

ಖಾಸಗಿ ಆಸ್ಪತ್ರೆಗಳ ಪ್ರಾಬಲ್ಯ ಇರುವ ಜಿಲ್ಲೆಯಲ್ಲಿ, ಕೋವಿಡ್ ಸಾಂಕ್ರಾಮಿಕ ಕಾಯಿಲೆ ವೈದ್ಯಕೀಯ ವ್ಯವಸ್ಥೆಯ ಚಿತ್ರಣವನ್ನು ಬದಲಿಸಿದೆ. ಸರ್ಕಾರಿ ಆಸ್ಪತ್ರೆಗಳೆಡೆಗೆ ಜನರು ಮುಖ ಮಾಡಿದ್ದಾರೆ. ರೋಗಿಗಳಿಗೆ ಉತ್ತಮ ಚಿಕಿತ್ಸೆ ಒದಗಿಸಲು ಸರ್ಕಾರಿ ಆಸ್ಪತ್ರೆ ವೈದ್ಯರು, ಸಿಬ್ಬಂದಿ ಪ್ರಯತ್ನಿಸುತ್ತಿದ್ದರೂ, ಗ್ರಾಮೀಣ ಆಸ್ಪತ್ರೆಗಳಲ್ಲಿರುವ ಅರೆಬರೆ ಸೌಲಭ್ಯಗಳು ಹಳ್ಳಿಗರನ್ನು ನಿರಾಶನ್ನಾಗಿಸಿವೆ. ವೆಚ್ಚಕ್ಕೆ ಬೆಚ್ಚಿ ಬೀಳುವ ಪರಿಸ್ಥಿತಿ ಇದ್ದರೂ, ಖಾಸಗಿ ಆಸ್ಪತ್ರೆಗಳ ಅನಿವಾರ್ಯ ಅವಲಂಬನೆ, ಬಡವರು, ಮಧ್ಯಮ ವರ್ಗದವರನ್ನು ಇಕ್ಕಟ್ಟಿಗೆ ಸಿಲುಕಿಸಿದೆ.

ಬಂಟ್ವಾಳ ತಾಲ್ಲೂಕು ಆಸ್ಪತ್ರೆಯಲ್ಲಿ ವೈದ್ಯರ ಭೇಟಿಗೆ ಕಾದುಕುಳಿತಿದ್ದ ಜನರು

80 ಆಸ್ಪತ್ರೆಗಳಲ್ಲಿ ಆಯುಷ್ಮಾನ್ ಭಾರತ್

ಆಯುಷ್ಮಾನ್ ಭಾರತ್ – ಆರೋಗ್ಯ ಕರ್ನಾಟಕ' ಯೋಜನೆ ಅಡಿಯಲ್ಲಿ ಕೋವಿಡ್ –19 ಮೊದಲ ಹಾಗೂ ಎರಡನೇ ಅಲೆಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ 5,564 ಮಂದಿಗೆ ಕೋವಿಡ್ ಉಚಿತ ಚಿಕಿತ್ಸೆ ಲಾಭ ಸಿಕ್ಕಿದೆ. ಈ ಯೋಜನೆ ಫಲಾನುಭವಿಗಳ ಚಿಕಿತ್ಸೆಗೆ ಸರ್ಕಾರವು ಜಿಲ್ಲೆಗೆ ₹ 32 ಕೋಟಿ ಬಿಡುಗಡೆ ಮಾಡಿದೆ.

ಜಿಲ್ಲೆಯ 80 ಖಾಸಗಿ ಆಸ್ಪತ್ರೆಗಳಲ್ಲಿ ಆಯುಷ್ಮಾನ್ ಭಾರತ್– ಆರೋಗ್ಯ ಕರ್ನಾಟಕ ಯೋಜನೆ ಜಾರಿಯಲ್ಲಿದ್ದು, ಕೋವಿಡ್ –19 ಸೋಂಕಿನಿಂದ ಬಳಲುವವರು ಉಚಿತ ಚಿಕಿತ್ಸೆ ಪಡೆಯಬಹುದು. ಈ ಆಸ್ಪತ್ರೆಗಳ ಜತೆಗೆ ಸರ್ಕಾರವು ಒಪ್ಪಂದ ಮಾಡಿಕೊಂಡಿದ್ದು, ವೆಂಟಿಲೇಟರ್ ಹಾಗೂ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ಪಡೆಯುವ ಫಲಾನುಭವಿಗಳಿಗೆ ಸೌಲಭ್ಯ ಲಭ್ಯವಿದೆ.

ಜಿಲ್ಲಾ ಕೇಂದ್ರದ ಅವಲಂಬನೆ

ಏಳು ತಾಲ್ಲೂಕುಗಳಿರುವ ಜಿಲ್ಲೆಯಲ್ಲಿ ನಾಲ್ಕು ತಾಲ್ಲೂಕು ಆಸ್ಪತ್ರೆಗಳು, 65 ಗ್ರಾಮೀಣ ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಏಳು ಸಮುದಾಯ ಆರೋಗ್ಯ ಕೇಂದ್ರಗಳು ಇವೆ. ಮೇಲ್ದರ್ಜೆಗೆ ಏರಿದ ಆರೋಗ್ಯ ಕೇಂದ್ರಗಳು ಸುಸಜ್ಜಿತ ಕಟ್ಟಡ, ತಕ್ಕಮಟ್ಟಿಗೆ ಯಂತ್ರೋಪಕರಣಗಳನ್ನು ಹೊಂದಿವೆ. ಆದರೆ, ಕಾಯಂ ತಜ್ಞ ವೈದ್ಯರು, ಪ್ರಯೋಗಾಲಯ ತಜ್ಞರು, ಫಾರ್ಮಸಿಸ್ಟ್‌ಗಳ ಕೊರತೆ ಆರೋಗ್ಯ ಕೇಂದ್ರಗಳನ್ನು ಬಹುವಾಗಿ ಕಾಡುತ್ತಿದೆ. ಕೋವಿಡ್ ಆರೈಕೆ ಕೇಂದ್ರಗಳು, ತಾಲ್ಲೂಕು ಆಸ್ಪತ್ರೆಗಳಲ್ಲಿ ಕೋವಿಡ್ ರೋಗಿಗಳಿಗೆ ಆಮ್ಲಜನಕಸಹಿತ ಹಾಸಿಗೆಗಳು ಸೀಮಿತ ಸಂಖ್ಯೆಯಲ್ಲಿವೆ. ವೆಂಟಿಲೇಟರ್ ಇರುವ ಹಾಸಿಗೆಯ ಅಗತ್ಯ ಬಂದರೆ, ಜಿಲ್ಲಾ ಕೇಂದ್ರ ಮಂಗಳೂರಿನ ವೆನ್ಲಾಕ್ ಆಸ್ಪತ್ರೆಯನ್ನೇ ಅವಲಂಬಿಸಬೇಕಾಗಿದೆ.

ದಕ್ಷಿಣ ಕನ್ನಡ ಜಿಲ್ಲಾ ಕೋವಿಡ್ ಅಂಕಿ–ಅಂಶ

76,735 ▲ ಒಟ್ಟು ಸೋಂಕಿತರು

ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು
8,492 ▼	67,325 ▲	918 ▲

ದಿನದ ಏರಿಕೆ	
ಹೊಸ ಪ್ರಕರಣ	536 ▼
ಗುಣಮುಖ	1,172 ▲
ಸಾವು	05 ▼

ಆಧಾರ: ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ಸಾಂಕ್ರಾಮಿಕ ರೋಗದ ಸಂದಿಗ್ಧ ಕಾಲದಲ್ಲಿ ಗ್ರಾಮೀಣ ಆರೋಗ್ಯ ವ್ಯವಸ್ಥೆ ಸುಧಾರಿಸಿದರೆ, ಖಾಸಗಿ ಆಸ್ಪತ್ರೆಗಳ ಅವಲಂಬನೆ ಕಡಿಮೆಯಾಗಿ, ಸರ್ಕಾರಿ ಆಸ್ಪತ್ರೆಗಳು ಜನರಿಗೆ ಸಂಜೀವಿನಿಯಾಗುತ್ತವೆ.
ಯು.ಟಿ.ತೌಸಿಫ್, ಉಪ್ಪಿನಂಗಡಿ ಗ್ರಾಮ ಪಂಚಾಯಿತಿ ಸದಸ್ಯ

ವೈದ್ಯರ ಕೊರತೆ ಇದ್ದರೂ, ಪ್ರಯಾಸದಿಂದ ಎಲ್ಲವನ್ನು ನಿರ್ವಹಣೆ ಮಾಡುತ್ತಿದ್ದೇವೆ. ಕೋವಿಡ್ ಆರಂಭವಾದ ಮೇಲೆ ಹಗಲು–ರಾತ್ರಿಯೆನ್ನದೆ ಡ್ಯೂಟಿ ಮಾಡುವುದಾಗಿದೆ.
ಡಾ. ವೇದಾವತಿ ಬಲ್ಲಾಳ, ವಿಟ್ಲ ಸಮುದಾಯ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ

ತಾಲ್ಲೂಕು ಆಸ್ಪತ್ರೆಗಳಿಗೆ ವೆಂಟಿಲೇಟರ್‌ಸಹಿತ ಹಾಸಿಗೆಗಳನ್ನು ಒದಗಿಸಿದರೆ, ಕೋವಿಡ್ ರೋಗಿಗೆ ಉಸಿರಾಟದ ಸಮಸ್ಯೆ ಬಿಗಡಾಯಿಸಿದಾಗ ತಕ್ಷಣಕ್ಕೆ ಚಿಕಿತ್ಸೆ ನೀಡಿ, ಜೀವ ರಕ್ಷಿಸಬಹುದು.
ಬೇಬಿ ಕುಂದರ್, ಬ್ಯಾಂಕ್ ನಿವೃತ್ತ ಅಧಿಕಾರಿ

ಆರೈಕೆ ಕೇಂದ್ರವೇ ದೂರ; ಆಂಬುಲೆನ್ಸ್‌ಗೂ ಪರದಾಟ

ಒಂದನೇ ಪುಟದಿಂದ

ತುರ್ತು ಸಂದರ್ಭದಲ್ಲಿ ತಾಲ್ಲೂಕು ಕೇಂದ್ರ ಇಲ್ಲವೇ ಜಿಲ್ಲಾಸ್ಪತ್ರೆಗೆ ತೆರಳಬೇಕು. ಆದರೆ, ಅಗತ್ಯವಿದ್ದಾಗ ಆಂಬುಲೆನ್ಸ್ ದುರ್ಲಭ.

'ಸೋಂಕು ತಗುಲಿದಾಗ ಮನೆಯಲ್ಲಿಯೇ ಚಿಕಿತ್ಸೆ ಪಡೆದೆ. ಮನೆಯಲ್ಲಿದ್ದ ಉಳಿದ ಮೂವರಿಗೂ ಕೋವಿಡ್ ಪಾಸಿಟಿವ್ ಬಂತು. ಆದರೆ, ಆರೈಕೆ ಕೇಂದ್ರಕ್ಕೆ ಹೋಗಬೇಕಾದರೆ 20 ಕಿ.ಮೀ ದೂರದ ಸಕಲೇಶಪುರ ತಾಲ್ಲೂಕು ಕೇಂದ್ರಕ್ಕೆ ಹೋಗಬೇಕಾದ ಪರಿಸ್ಥಿತಿ ಇದೆ' ಎನ್ನುತ್ತಾರೆ ಶುಕ್ರವಾರಸಂತೆಯ ಸಿದ್ದರಾಜು.

ಸಿದ್ದರಾಜು

'ಸಕಲೇಶಪುರ ತಾಲ್ಲೂಕು ಸಾರ್ವಜನಿಕ ಆಸ್ಪತ್ರೆಯಲ್ಲಿ, ಫಿಜಿಷಿಯನ್ ಸೇರಿದಂತೆ ತಜ್ಞ ವೈದ್ಯರ ಹುದ್ದೆಯು ಹತ್ತು ವರ್ಷಗಳಿಂದ ಖಾಲಿ ಇದೆ. ಕರ್ತವ್ಯದಲ್ಲಿರುವ ಐವರು ವೈದ್ಯರ ಪೈಕಿ ಒಬ್ಬರಿಗೆ ಕೋವಿಡ್–19 ದೃಢಪಟ್ಟಿದ್ದು, ರಜೆಯಲ್ಲಿದ್ದಾರೆ. ಗಂಭೀರ ಸ್ಥಿತಿಯಲ್ಲಿರುವ ರೋಗಿಗಳು ಜಿಲ್ಲಾಸ್ಪತ್ರೆ ತಲುಪುವಷ್ಟರಲ್ಲಿ ಮೃತಪಟ್ಟಿರುವ ಉದಾಹರಣೆಗಳು ಸಾಕಷ್ಟಿದೆ ' ಎಂದು ಯಡೇಹಳ್ಳಿಯ ಮಂಜುನಾಥ್ ಆಕ್ರೋಶ ವ್ಯಕ್ತಪಡಿಸಿದರು.

ಬಹುತೇಕ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ವೈದ್ಯರ ಕೊರತೆ ಇದ್ದು, ಸ್ಟಾಫ್ ನರ್ಸ್‌ಗಳೇ ವೈದ್ಯರ ಕೆಲಸ ಮಾಡುತ್ತಿದ್ದಾರೆ. ತುರ್ತು ಚಿಕಿತ್ಸೆಗಾಗಿ ಆಸ್ಪತ್ರೆಯಿಂದ ಆಸ್ಪತ್ರೆಗೆ ಅಲೆದಾಟ, ಮಲೆನಾಡು ಭಾಗದಲ್ಲಿ ಸೋಂಕಿತರಿಗೆ ಮನೆಗಳಲ್ಲಿಯೇ ಆರೈಕೆ, ಲಸಿಕೆಗೆ ಪರದಾಟ, ಆಂಬುಲೆನ್ಸ್ ಕೊರತೆ– ಇವು ಜಿಲ್ಲೆಯಲ್ಲಿ ಗ್ರಾಮೀಣ ಪ್ರದೇಶದ ಜನರು ಎದುರಿಸುತ್ತಿರುವ ಸಮಸ್ಯೆಗಳು.

ಇನ್ನು, ಹಕ್ಕಿಪಿಕ್ಕಿ ಸಮುದಾಯದಲ್ಲಿನ ಸೋಂಕಿತರು, ಶೆಡ್‌ನಲ್ಲಿ ಪ್ರತ್ಯೇಕ ವಾಸವಾಗಿದ್ದುಕೊಂಡು ತಮ್ಮದೇ ಆದ ಔಷಧೋಪಚಾರವನ್ನೂ ಮಾಡಿಕೊಳ್ಳುತ್ತಿದ್ದಾರೆ.

ತಗಡಿನ ಶೆಡ್‌ನಲ್ಲೇ ವಾಸ: ಬೇಲೂರು ತಾಲ್ಲೂಕಿನ ಅಂಗಡಿಹಳ್ಳಿ ಗ್ರಾಮದಲ್ಲಿ ಹಕ್ಕಿಪಿಕ್ಕಿ ಸಮುದಾಯದ ಸೋಂಕಿತರು ಊರ ಹೊರಗಿನ ಬಯಲಲ್ಲಿ ಹಾಕಿರುವ ಶೆಡ್‌ನಲ್ಲಿ ಪ್ರತ್ಯೇಕವಾಗಿ ವಾಸಿಸುತ್ತಿದ್ದಾರೆ. ಸೋಂಕು ಹರಡದಂತೆ ಗ್ರಾಮದ ಮುಖಂಡರು ಈ ನಿರ್ಧಾರ ಕೈಗೊಂಡಿದ್ದಾರೆ. ಆಸ್ಪತ್ರೆಯಿಂದ ಗುಣಮುಖರಾಗಿ ಬಂದವರಿಗೂ, ಹತ್ತು ದಿನ ಊರ ಹೊರಗೆ ಪ್ರತ್ಯೇಕ ವಾಸ. ಇಲ್ಲಿ 300ಕ್ಕೂ ಅಧಿಕ ಕುಟುಂಬಗಳು ವಾಸಿಸುತ್ತಿದ್ದು, ಗಿಡ ಮೂಲಿಕೆಗಳ ಔಷಧ ಮಾರಾಟ ಇವರ ಕಾಯಕ.

'ಸೋಂಕು ಹರಡದಂತೆ ಗ್ರಾಮದ ಹೊರಗೆ ಶೆಡ್‌ನಲ್ಲಿ ಕುಟುಂಬ ಸಮೇತ ಇರಿಸಲಾಗಿದೆ. ಜ್ವರ–ಗಂಟಲು ನೋವಿಗೆ ತುಳಸಿ, ಕಸ್ತೂರಿ, ಗಾಳಿಬೀಜ ಅರೆದು ಜೇನು ಸೇರಿಸಿ ಲೇಹ ತಯಾರಿಸಿ ಗಂಟಲಿಗೆ ಹಚ್ಚಿಕೊಳ್ಳುತ್ತೇವೆ. ಅರಿಸಿನ, ಒಣಮೆಣಸು, ಅಮೃತ ಬಳ್ಳಿ, ಕಾಡು ಜೀರಿಗೆ ಕಷಾಯ ಮಾಡಿ ಕುಡಿಯುತ್ತಿದ್ದೇವೆ. ಹಾಗಾಗಿ ಕೋವಿಡ್‌ಗೆ ನಮ್ಮೂರಲ್ಲಿ ಯಾರೂ ಸತ್ತಿಲ್ಲ' ಎನ್ನುತ್ತಾರೆ ಹಕ್ಕಿಪಿಕ್ಕಿ ಸಮುದಾಯದ ಮುಖಂಡ ಹೂ ರಾಜ್ ಮತ್ತು ಗ್ರಾಮ ಪಂಚಾಯಿತಿ ಸದಸ್ಯೆ ಖುನ್ನಿಸಾ.

ಅರಕಲಗೂಡು ತಾಲ್ಲೂಕಿನ ಕೊಣನೂರು ಸಮುದಾಯ ಆರೋಗ್ಯ ಕೇಂದ್ರವನ್ನು ಕೋವಿಡ್ ಆಸ್ಪತ್ರೆಯಾಗಿ ಪರಿವರ್ತಿಸಿದರೆ ರೋಗಿಗಳು ತಾಲ್ಲೂಕು ಹಾಗೂ ಜಿಲ್ಲಾ ಕೇಂದ್ರಕ್ಕೆ ಅಲೆಯುವುದನ್ನು ತಪ್ಪಿಸಬಹುದು ಎನ್ನುತ್ತಾರೆ ಸ್ಥಳೀಯರು.

ಜಿಲ್ಲಾಸ್ಪತ್ರೆ ಮೇಲೆ ಒತ್ತಡ

ಆಮ್ಲಜನಕ ಸೌಲಭ್ಯದ 500 ಹಾಸಿಗೆ, 100 ಸಾಮಾನ್ಯ ಹಾಗೂ ವೆಂಟಿಲೇಟರ್ ಸಹಿತ 90 ಹಾಸಿಗೆಗಳ ಸೌಲಭ್ಯ ಹೊಂದಿರುವ ಹಾಸನ ವೈದ್ಯಕೀಯ ಶಿಕ್ಷಣ ಸಂಸ್ಥೆಗಳ ಕೋವಿಡ್ ಆಸ್ಪತ್ರೆಯು, ರೋಗಿಗಳಿಂದ ಭರ್ತಿಯಾಗಿದೆ. ಸೋಂಕಿತರ ಸಂಖ್ಯೆ ಹೆಚ್ಚಿದಂತೆ ಆಸ್ಪತ್ರೆ ಮೇಲಿನ ಒತ್ತಡವೂ ಹೆಚ್ಚುತ್ತಿದೆ. ನಿತ್ಯವೂ ಸರಾಸರಿ 15 ಸಾವು ಸಂಭವಿಸುತ್ತಿವೆ. ಖಾಸಗಿ ಆಸ್ಪತ್ರೆಗಳು ಆಮ್ಲಜನಕ ಸೌಲಭ್ಯದ ಹಾಸಿಗೆ ಒದಗಿಸಿದರೂ ವೆಂಟಿಲೇಟರ್‌ಗಳ ಕೊರತೆ ಕಾಡುತ್ತಿದೆ.

ಸಕಲೇಶಪುರಕ್ಕೆ ವೈದ್ಯರೇ ಬರುತ್ತಿಲ್ಲ. ಬಂದರೂ ಹೆಚ್ಚು ದಿನ ಇರುವುದಿಲ್ಲ. ಸಿಬ್ಬಂದಿ ಕೊರತೆಯಿಂದ ತಾಲ್ಲೂಕು ಕೇಂದ್ರದಲ್ಲಿ 50 ಹಾಸಿಗೆಗಳ ಒಂದೇ ಕೋವಿಡ್ ಕೇರ್ ಸೆಂಟರ್ ತೆರೆಯಲಾಗಿದೆ
ಡಾ.ಬಿ.ಪಿ.ಹೇಮಂತ್, ಪ್ರಭಾರಿ ತಾಲ್ಲೂಕು ಆರೋಗ್ಯಾಧಿಕಾರಿ, ಸಕಲೇಶಪುರ

ಹೋಂ ಐಸೋಲೇಷನ್ ರದ್ದಾದ ಬಳಿಕ ಸೋಂಕಿತರನ್ನು ಆರೈಕೆ ಕೇಂದ್ರಕ್ಕೆ ದಾಖಲಿಸಲಾಗುತ್ತಿದೆ. ಹೀಗಾಗಿ, ಜನರು ಕೋವಿಡ್ ಪರೀಕ್ಷೆ ಮಾಡಿಸಿಕೊಳ್ಳಲು ಹಿಂದೇಟು ಹಾಕುತ್ತಿದ್ದಾರೆ
ಪ್ರಭುಗೌಡ, ಶಾಂತಿ ಗ್ರಾಮ ಪಂಚಾಯಿತಿ ಸದಸ್ಯ

ಹಾಸನ ಜಿಲ್ಲಾ ಕೋವಿಡ್ ಅಂಕಿ–ಅಂಶ

85,696 ಒಟ್ಟು ಸೋಂಕಿತರು

ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು
13,347	71,330	1019

ದಿನದ ಏರಿಕೆ	
ಹೊಸ ಪ್ರಕರಣ	1,127
ಗುಣಮುಖ	1,896
ಸಾವು	12

ಆಧಾರ: ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಒಂದೇ ಆಂಬುಲೆನ್ಸ್ ಇದ್ದು, ತುರ್ತು ಚಿಕಿತ್ಸೆಗೆ ವಾಹನವಿಲ್ಲದೇ ಸಮಸ್ಯೆಯಾಗಿದೆ
ಡಾ.ಎಚ್.ಆರ್.ತಿಮ್ಮಯ್ಯ, ತಾಲ್ಲೂಕು ಆರೋಗ್ಯಾಧಿಕಾರಿ, ಆಲೂರು

ಕೋವಿಡ್: ಅನಾಥ ಮಕ್ಕಳ ಕುರಿತು ಮಾಹಿತಿ ಕೇಳಿದ 'ಸುಪ್ರೀಂ'

ನವದೆಹಲಿ (ಪಿಟಿಐ): ಕೋವಿಡ್–19 ಸಾಂಕ್ರಾಮಿಕ ರೋಗದಿಂದಾಗಿ ಪೋಷಕರನ್ನು ಕಳೆದುಕೊಂಡಿರುವ ಮಕ್ಕಳಿಗೆ ಪರಿಹಾರ ನೀಡುವ ಕುರಿತು ಕೇಂದ್ರದ ಕಲ್ಯಾಣ ಯೋಜನೆಯನ್ನು ಗಮನಿಸಿರುವ ಸುಪ್ರೀಂ ಕೋರ್ಟ್, ಈ ಯೋಜನೆಯ ಮೇಲ್ವಿಚಾರಣೆಗಾಗಿ ರೂಪಿಸಿದ ಕಾರ್ಯವಿಧಾನದ ವಿವರಗಳನ್ನು ನೀಡುವಂತೆ ಕೇಂದ್ರ ಸರ್ಕಾರಕ್ಕೆ ಕೇಳಿದೆ.

ನ್ಯಾಯಮೂರ್ತಿಗಳಾದ ಎಲ್. ನಾಗೇಶ್ವರ ರಾವ್ ಮತ್ತು ಅನಿರುದ್ಧ ಬೋಸ್ ಅವರನ್ನೊಳಗೊಂಡ ನ್ಯಾಯಪೀಠವು ಎಲ್ಲ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಕಾರ್ಯದರ್ಶಿ ಅಥವಾ ಜಂಟಿ ಕಾರ್ಯದರ್ಶಿ ಮಟ್ಟದ ನೋಡಲ್ ಅಧಿಕಾರಿಗಳನ್ನು ನೇಮಿಸಲು ನಿರ್ದೇಶನ ನೀಡಿದೆ.

ಈ ನೋಡಲ್ ಅಧಿಕಾರಿಗಳು ಅನಾಥ ಮಕ್ಕಳು ಮತ್ತು ಅವರ ಕಲ್ಯಾಣ ಯೋಜನೆಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ನೇಮಿಸಿರುವ ಆ್ಯಮಿಕಸ್ ಕ್ಯೂರಿ ಗೌರವ್ ಅಗರ್‌ವಾಲ್ ಅವರೊಂದಿಗೆ ಸಂವಹನ ನಡೆಸಲಿದ್ದಾರೆ ಎಂದೂ ಕೋರ್ಟ್ ತಿಳಿಸಿದೆ.

ಇದಕ್ಕೆ ಸಂಬಂಧಿಸಿದಂತೆ ಮೊದಲು ತೆಲಂಗಾಣ, ತಮಿಳುನಾಡು, ಕೇರಳ, ಕರ್ನಾಟಕ, ಗುಜರಾತ್, ರಾಜಸ್ಥಾನ, ಉತ್ತರ ಪ್ರದೇಶ, ಮಹಾರಾಷ್ಟ್ರ, ಬಿಹಾರ ಮತ್ತು ಜಾರ್ಖಂಡ್ ಒಟ್ಟು ಹತ್ತು ರಾಜ್ಯಗಳ ಪ್ರಕರಣಗಳನ್ನು ಸೋಮವಾರ ಆಲಿಸುವುದಾಗಿಯೂ ನ್ಯಾಯಪೀಠವು ತಿಳಿಸಿದೆ.

ಗ್ರಾಮೀಣರಿಗೆ ಆರೋಗ್ಯ ಸೇವೆ ಮರೀಚಿಕೆ; ಕಾಡುತ್ತಿದೆ ಸಿಬ್ಬಂದಿ ಕೊರತೆ

ನಿರ್ಲಕ್ಷ್ಯದಿಂದಲೇ ಗ್ರಾಮಗಳಿಗೆ ಸೋಂಕು

• ಶಶಿಕಾಂತ ಎಸ್. ಶೆಂಬೆಳ್ಳಿ

ಹೊಸಪೇಟೆ (ವಿಜಯನಗರ): 'ನಮ್ಮ ಊರಾಗ ಕೋವಿಡ್ ಕೇಸೇ ಇರಲಿಲ್ಲ. ಹೊರಗ ಕೆಲ್ಸ ಮಾಡೋರು ಇಲ್ಲಿಗ ಬಂದು ಊರ ತುಂಬ ಸೋಂಕು ಹರಡ್ಯಾರ. ಹಂಗ ಬಂದವ್ರಿಗ ಟೆಸ್ಟ್ ಮಾಡ್ಸಿ, ಪಾಸಿಟಿವ್ ಇದ್ದವ್ರಿಗ ದವಾಖಾನಿಗೆ ಸೇರಿಸಿದ್ರ ಈ ಪರಿಸ್ಥಿತಿ ಇರ್ತಾ ಇರಲಿಲ್ಲ. ಸರ್ಕಾರದೋರು ನಿರ್ಲಕ್ಷ್ಯ ತೋರಿದ್ರಿಂದ ಎಂಟು ಜನ ಸತ್ತಾರ'

ಇದು ತುಂಗಭದ್ರಾ ಜಲಾಶಯದ ಹಿನ್ನೀರಿನಲ್ಲಿರುವ ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ತಂಬ್ರಹಳ್ಳಿ ಗ್ರಾಮದ ರಾಮಣ್ಣ ಅವರ ಮಾತು.

'ಕೆಮ್ಮು, ನೆಗಡಿ, ಜ್ವರ ಬಂದವರು ಹೋಗಿ ಟೆಸ್ಟ್ ಮಾಡ್ಸಕೊಂಡಾರ. ಆದ್ರ ಐದಾರೂ ದಿನ ಕಳ್ದ ನಂತರ ಪಾಸಿಟಿವ್ ರಿಪೋರ್ಟ್ ಕೊಡ್ತಾರ. ಅಷ್ಟೊತ್ತಿಗ ಅವರು ಊರ ತುಂಬ ಓಡಾಡಿ ಎಲ್ಲರಿಗೂ ರೋಗ ಹರಡ್ಸ್ಯಾರ. ರಿಪೋರ್ಟ್ ಬೇಗ ಕೊಟ್ಟಿದ್ರ ಊರ ಮಂದಿಗೆಲ್ಲ ಸೋಂಕು ಹಬ್ತಿರಲಿಲ್ಲ'

ಹೊಸಪೇಟೆ ತಾಲ್ಲೂಕಿನ ಹನುಮನಹಳ್ಳಿ ಗ್ರಾಮದ ಯುವಕ ಅಶೋಕ ಮಜ್ಜಿಗಿ ಅವರು ಗ್ರಾಮಕ್ಕೆ ಸೋಂಕು ವ್ಯಾಪಿಸಿಕೊಂಡ ಬಗೆಯನ್ನು ವಿಶ್ಲೇಷಿಸಿದ್ದು ಹೀಗೆ.

ಜಿಲ್ಲೆಯಲ್ಲಿ ತಂಬ್ರಹಳ್ಳಿ, ಹನುಮನಹಳ್ಳಿ ಗ್ರಾಮಗಳು ಕೊರೊನಾ ಸೋಂಕಿನಿಂದ ಅತಿ ಹೆಚ್ಚು ಬಾಧಿತವಾದ ಗ್ರಾಮಗಳು. ಕೋವಿಡ್ ಎರಡನೇ ಅಲೆ ವ್ಯಾಪಕವಾಗಿ ಹರಡುತ್ತಿರುವ ಮುನ್ಸೂಚನೆ ಸಿಕ್ಕರೂ ಆರಂಭದಲ್ಲೇ ಜಿಲ್ಲಾಡಳಿತ ಸೂಕ್ತ ಕ್ರಮ ಕೈಗೊಳ್ಳದ ಕಾರಣ ಜಿಲ್ಲೆಯ ಬಹುತೇಕ ಗ್ರಾಮಗಳಿಗೆ ಸೋಂಕು ವ್ಯಾಪಕವಾಗಿ ಹರಡಿದೆ. ತಂಬ್ರಹಳ್ಳಿ ಒಂದರಲ್ಲೇ ಎಂಟು ಜನ ಕೋವಿಡ್‌ನಿಂದ ಮರಣ ಹೊಂದಿದ್ದಾರೆ.

ಸೋಂಕಿನಿಂದ ಕೊಟ್ಟೂರು ಪಟ್ಟಣ, ಕೊಟ್ಟೂರು ತಾಲ್ಲೂಕಿನ ಅಲಬೂರು, ಕೋಗಳಿ, ಕೂಡ್ಲಿಗಿ ತಾಲ್ಲೂಕಿನ ಬಂಡೆ ಬಸಾಪುರ ತಾಂಡಾ, ಶ್ರೀಕಂಠಪುರ ತಾಂಡಾ, ಚಿಕ್ಕದೇವನಹಳ್ಳಿ ತಾಂಡಾ, ಹೊಸಪೇಟೆ ತಾಲ್ಲೂಕಿನ ಪಾಪಿನಾಯಕನಹಳ್ಳಿ, ಬೈಲುವದ್ದಿಗೇರಿ, ವೆಂಕಟಾಪುರ, ಮರಿಯಮ್ಮನಹಳ್ಳಿ, ಹೂವಿನಹಡಗಲಿಯ ಕೆ. ಅಯ್ಯನಹಳ್ಳಿ, ಶಿವಪುರ ತಾಂಡಾ, ದಾಸನಹಳ್ಳಿ, ಮೈಲಾರ, ಮಾನ್ಯರಮಾಸಲವಾಡ, ಹರಪನಹಳ್ಳಿ ತಾಲ್ಲೂಕಿನ ಅಲವಾಗಲು, ಬಾಗಲಿ, ತೆಲಗಿ, ಕೂಲಹಳ್ಳಿ, ಅರಸೀಕೆರೆ, ಉಚ್ಚಂಗಿದುರ್ಗ, ಬಂಡ್ರಿ ಗ್ರಾಮಗಳ ಜನರ ಬದುಕು ಕೊರೊನಾ ಸೋಂಕು ದುರ್ಬರಗೊಳಿಸಿದೆ.

ಲಾಕ್‌ಡೌನ್ ಆರಂಭದಲ್ಲಿ ಬಹುತೇಕ ವಲಸೆ ಕಾರ್ಮಿಕರು ಸ್ವಗ್ರಾಮಗಳಿಗೆ ಮರಳಿದರು. ಜಿಲ್ಲಾಡಳಿತ ಚೆಕ್‌ಪೋಸ್ಟ್ ನಿರ್ಮಿಸಿದರೂ ತಪಾಸಣೆಗೆ ಒಳಪಡಿಸಲಿಲ್ಲ. ಹೋಂ ಐಸೋಲೇಷನ್‌ನಲ್ಲಿರುವವರ ಮೇಲೆ ನಿಗಾ ಇಡುವ ವ್ಯವಸ್ಥೆಯೂ ಇಲ್ಲ.

ಸೋಂಕು ಹರಡುವ ತೀವ್ರತೆ ಹೆಚ್ಚಾಗುತ್ತಿದ್ದಂತೆ ಪರೀಕ್ಷಾ ವರದಿ ಬೇಗ ತರಿಸಿಕೊಂಡು ಕೋವಿಡ್ ರೋಗಿಗಳನ್ನು ಆರೈಕೆ ಕೇಂದ್ರಗಳಿಗೆ ಸ್ಥಳಾಂತರಿಸುವ ಕೆಲಸ ಆರಂಭಗೊಂಡಿತು. ಗ್ರಾಮಗಳನ್ನು ಸೀಲ್‌ಡೌನ್ ಮಾಡಲಾಯಿತು. ಈ ಹಿಂದೆ ವಾರದ ನಂತರ ಕೈಸೇರುತ್ತಿದ್ದ ಪರೀಕ್ಷಾ ವರದಿ ಈಗ ಒಂದೆರಡು ದಿನಗಳಲ್ಲಿ ಬರುತ್ತಿದೆ. ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಯಲ್ಲಿ ಮಣ್ಣು ಸುರಿದು, ಮುಳ್ಳಿನ ಬೇಲಿ ಹಾಕಿ ಗ್ರಾಮಸ್ಥರೇ ನಿರ್ಬಂಧ ವಿಧಿಸಿಕೊಂಡಿದ್ದಾರೆ.

ಮಾಸ್ಕ್‌ಬಳಕೆ ಕಡ್ಡಾಯವಾಗಿದೆ. ಕೆಲವು ದಿನ ಗುಂಪು ಗೂಡದಂತೆ ಗ್ರಾಮದ ಮುಖಂಡರು ತಿಳಿಸಿದ್ದಾರೆ. ಈಗ ಗ್ರಾಮಗಳಲ್ಲಿ ಮೌನ ಆವರಿಸಿಕೊಂಡಿದೆ. ಜನ ಬೇಕಾಬಿಟ್ಟಿಯಾಗಿ ಓಡಾಡುವುದನ್ನು ತಡೆಯುವ ಕೆಲಸ ಪೊಲೀಸರು ಮಾಡದೇ ಇರುವುದು 'ಪ್ರಜಾವಾಣಿ' ಗ್ರಾಮೀಣ ಪ್ರದೇಶಗಳಲ್ಲಿ ಸಂಚರಿಸಿದಾಗ ಗಮನಕ್ಕೆ ಬಂತು.

ಈಗಲೂ ಜಿಲ್ಲೆಯ ಬಹುತೇಕ ಆಸ್ಪತ್ರೆಗಳಲ್ಲಿ ವೈದ್ಯರು, ಸಿಬ್ಬಂದಿಯ ಕೊರತೆ ಇದೆ. ಕೆಲವೆಡೆ ಆಂಬುಲೆನ್ಸ್ ಕೂಡ ಇಲ್ಲ. ಕೆಲವು ಕಡೆ ಆಯುಷ್ ವೈದ್ಯರು ಕೆಲಸ ನಿರ್ವಹಿಸುತ್ತಿದ್ದರೆ, ಕೆಲವೆಡೆ ಸಮುದಾಯ ಆರೋಗ್ಯ ಕೇಂದ್ರದ ಕಾರ್ಯಕರ್ತರೇ ಎಲ್ಲ ನೋಡಿಕೊಳ್ಳುತ್ತಿದ್ದಾರೆ. ಕೋವಿಡೇತರ ರೋಗಿಗಳಿಗೆ ಎಂದಿನಂತೆ ಚಿಕಿತ್ಸೆ ನೀಡಲಾಗುತ್ತಿದೆ. ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಉತ್ತಮ ಚಿಕಿತ್ಸೆ ಸಿಗುವುದಿಲ್ಲ ಎಂಬ ಭಾವನೆಯಿಂದಾಗಿ ಗ್ರಾಮೀಣರು ಇತ್ತ ಬರುವುದಿಲ್ಲ. ಈಗಲೂ ಬೆಂಗಳೂರು, ಹುಬ್ಬಳ್ಳಿ, ದಾವಣಗೆರೆ, ಹೈದರಾಬಾದ್, ಮಂಗಳೂರಿಗೆ ಹೋಗಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಕೋವಿಡ್ ರೋಗಿಗಳಿಗೆ ಉತ್ತಮ ಉಪಚಾರ:

ಜಿಲ್ಲೆಯ ಬಹುತೇಕ ಕೋವಿಡ್ ಆರೈಕೆ ಕೇಂದ್ರಗಳಲ್ಲಿ ರೋಗಿಗಳಿಗೆ ಉತ್ತಮ ಉಪಚಾರ ಮಾಡಲಾಗುತ್ತಿದೆ. ಊರ ಹೊರಗಿರುವುದು ಮತ್ತು ಸಕಲ ಸೌಕರ್ಯ ಹೊಂದಿರುವುದರಿಂದ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳನ್ನೇ ಕೋವಿಡ್ ಕೇಂದ್ರಗಳಾಗಿ ಪರಿವರ್ತಿಸಲಾಗಿದೆ. ರೋಗಿಗಳಿಗೆ ಸಕಾಲಕ್ಕೆ ಉಪಾಹಾರ, ಊಟ ನೀಡಲಾಗುತ್ತಿದೆ. ಸ್ವಚ್ಛತೆಗೆ ಹೆಚ್ಚಿನ ಒತ್ತು ಕೊಡಲಾಗಿದೆ. ಬೆಳಿಗ್ಗೆ ಸರಳ ಯೋಗ ಹೇಳಿಕೊಡಲಾಗುತ್ತಿದೆ. ಜಿಲ್ಲಾಧಿಕಾರಿ, ಉಪವಿಭಾಗಾಧಿಕಾರಿ, ತಹಶೀಲ್ದಾರ್ ಆಗಾಗ ಈ ಕೇಂದ್ರಗಳಿಗೆ ಭೇಟಿ ನೀಡಿ ಪರಿಶೀಲಿಸುತ್ತಿದ್ದಾರೆ.

ಕೋವಿಡ್ ರೋಗಿಗಳು ಮೊಬೈಲ್‌ನಲ್ಲಿ ಸಿನಿಮಾ, ಸಂಗೀತ ನೋಡಿ, ಪುಸ್ತಕ ಓದಿ ದಿನ ದೂಡುತ್ತಿದ್ದಾರೆ. ರೋಗಿಗಳು ಬೇಕಾಬಿಟ್ಟಿ ಹೊರಗೆ ಓಡಾಡುತ್ತಿದ್ದಾರೆ ಎಂದು ಹೊಸಪೇಟೆ ತಾಲ್ಲೂಕಿನ ತಿಮ್ಮಲಾಪುರ ಕೋವಿಡ್ ಆರೈಕೆ ಕೇಂದ್ರದ ಮುಖ್ಯದ್ವಾರಕ್ಕೆ ಬೀಗ ಜಡಿಯಲಾಗಿದೆ.

ಸುಳಿಯದ ಜನಪ್ರತಿನಿಧಿಗಳು:

ಜನಪ್ರತಿನಿಧಿಗಳು ಗ್ರಾಮಕ್ಕೆ ಭೇಟಿ ನೀಡಿ, ಜನರಿಗೆ ಧೈರ್ಯ ತುಂಬುವ ಕೆಲಸ ಮಾಡಿಲ್ಲ. ಆಂಬುಲೆನ್ಸ್ ಸೇರಿದಂತೆ ವೈದ್ಯಕೀಯ ಸೇವೆ ಕಲ್ಪಿಸಿಕೊಡಲು ನೆರವಾಗಿಲ್ಲ ಎನ್ನುವುದು ಗ್ರಾಮಸ್ಥರ ದೂರು.

'ನಮ್ಮೂರಿನ ಎಲ್ಲರಿಗೂ ಹೆಚ್ಚು ಕಮ್ಮಿ ಸೋಂಕು ಬಂದಿದೆ. ಆದರೆ, ನಮ್ಮ ಶಾಸಕರು ಇದುವರೆಗೆ ಒಮ್ಮೆಯೂ ಗ್ರಾಮಕ್ಕೆ ಬಂದಿಲ್ಲ' ಎಂದು ಹನುಮನಹಳ್ಳಿಯ ಹುಲುಗಪ್ಪ ಆರೋಪಿಸಿದರು. ಇತರೆ ಗ್ರಾಮಸ್ಥರ ಆರೋಪವೂ ಇದೇ ಆಗಿದೆ.

ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ತಂಬ್ರಹಳ್ಳಿ ಗ್ರಾಮ ಸೀಲ್‌ಡೌನ್ ಮಾಡಲಾಗಿದ್ದು, ಗ್ರಾಮದ ರಸ್ತೆಗೆ ಅಡ್ಡಲಾಗಿ ಮರದ ದಿಮ್ಮಿ ಇಡಲಾಗಿದೆ

ಬಿತ್ತನೆಗೆ ರೈತರು ಸಿದ್ಧತೆ

ಬಹುತೇಕ ಗ್ರಾಮಗಳಿಗೆ ಕೋವಿಡ್ ಕರಿನೆರಳು ಆವರಿಸಿಕೊಂಡಿದೆ. ಇದರ ನಡುವೆಯೇ ರೈತರು ಬಿತ್ತನೆಗೆ ಅಗತ್ಯ ಸಿದ್ಧತೆ ಮಾಡಿಕೊಳ್ಳುತ್ತಿರುವುದು ಗ್ರಾಮೀಣ ಪ್ರದೇಶಗಳಲ್ಲಿ ಕಂಡು ಬಂತು.

ಈ ವರ್ಷ ಮೇ ತಿಂಗಳಲ್ಲೇ ಜಿಲ್ಲೆಯಾದ್ಯಂತ ಹದ ಮಳೆಯಾಗಿರುವುದರಿಂದ ರೈತರಲ್ಲಿ ಭರವಸೆ ಮೂಡಿದೆ. ನೇಗಿಲು ಹೊಡೆದು ಬಿತ್ತನೆಗೆ ಸಿದ್ಧರಾಗುತ್ತಿದ್ದಾರೆ. ವಾಹನವಿದ್ದವರು ರೈತ ಸಂಪರ್ಕ ಕೇಂದ್ರಗಳಿಗೆ ಹೋಗಿ ಬೀಜ, ಗೊಬ್ಬರ ತರುತ್ತಿದ್ದಾರೆ. ಉಳಿದವರಿಗೆ ಆಗುತ್ತಿಲ್ಲ. ಸರ್ಕಾರ, ರೈತರಿಗೆ ಬೀಜ, ಗೊಬ್ಬರ ಪೂರೈಸಲು ಈ ಸಲ ವಿಶೇಷ ಕ್ರಮ ಕೈಗೊಳ್ಳಬೇಕು. ಜನಜಂಗುಳಿ ಸೇರದಂತೆ ನೋಡಿಕೊಳ್ಳಬೇಕು ಎಂದು ಗ್ರಾಮಸ್ಥರು ಒತ್ತಾಯಿಸಿದ್ದಾರೆ.

ಬಳ್ಳಾರಿ–ವಿಜಯನಗರ ಕೋವಿಡ್ ಅಂಕಿ–ಅಂಶ

91,863 ಒಟ್ಟು ಸೋಂಕಿತರು

ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು
8,238	82,253	1,372

ದಿನದ ಏರಿಕೆ	
ಹೊಸ ಪ್ರಕರಣ	399
ಗುಣಮುಖ	1168
ಸಾವು	14

ಆಧಾರ: ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ಎರಡು ವಾರದಿಂದ ಲಸಿಕೆ ಹಾಕಿಸಿಕೊಳ್ಳಲು ಆಸ್ಪತ್ರೆಗೆ ಬಂದು ಬಂದು ಹೋಗುತ್ತಿದ್ದೇನೆ. ಇಂದು, ನಾಳೆ ಎಂದು ದಿನ ದೂಡುತ್ತಿದ್ದಾರೆ.
ಪರಶುರಾಮ, ಇಟ್ಟಿಗಿ ಗ್ರಾಮಸ್ಥ

ಮನೆ ಮನೆಗೆ ಹೋಗಿ ಸರ್ವೇ ಕಾರ್ಯ ನಡೆಸಲಾಗುತ್ತಿದೆ. ರೋಗ ಲಕ್ಷಣ ಕಂಡು ಬಂದರೆ ಅಂತಹವರ ಮಾಹಿತಿ ಮೇಲಧಿಕಾರಿಗೆ ಕೊಡಲಾಗುತ್ತಿದೆ.
ಮಾರೇಕಾ, ಆಶಾ ಕಾರ್ಯಕರ್ತೆ, ಮರಿಯಮ್ಮನಹಳ್ಳಿ

ಲಸಿಕೆಯ ದಾಸ್ತಾನು ಇಲ್ಲದ ಕಾರಣದಿಂದ ಸದ್ಯ ಲಸಿಕೆ ಹಾಕುತ್ತಿಲ್ಲ.
ಕರುಣಾ, ವೈದ್ಯಾಧಿಕಾರಿ, ತಿಮ್ಮಲಾಪುರ

ನಮಗೆಲ್ಲ ಉತ್ತಮ ರೀತಿಯಲ್ಲಿ ಉಪಾಹಾರ, ಊಟ ನೀಡುತ್ತಿದ್ದಾರೆ. ವೈದ್ಯರು ನಿತ್ಯ ಬಂದು ನಮ್ಮ ಆರೋಗ್ಯ ಪರೀಕ್ಷೆ ಮಾಡುತ್ತಿದ್ದಾರೆ.
ಸೈಯದ್ ಬಾಷಾ, ಕೋವಿಡ್ ರೋಗಿ, ತಿಮ್ಮಲಾಪುರ ಆರೈಕೆ ಕೇಂದ್ರ

ಲಾಕ್‌ಡೌನ್‌ನ ವಿರಾಮವೇಳೆಯಲ್ಲಿ ಮುಂಬೈನ ದಾದರ್‌ನ ಅಂಗಡಿಯೊಂದರಲ್ಲಿ ಮಂಗಳವಾರ ಮಕ್ಕಳ ಆಟಿಕೆಗಳನ್ನು ಖರೀದಿಸಿದ ಮಹಿಳೆ– ಪಿಟಿಐ ಚಿತ್ರ

ಪತ್ನಿ ಮೇಲೆ ಹಲ್ಲೆ: ಕಿರುತೆರೆ ನಟ ಕರಣ್ ಮೆಹ್ರಾ ಬಂಧನ, ಬಿಡುಗಡೆ

ಮುಂಬೈ (ಪಿಟಿಐ): ಪತ್ನಿಯನ್ನು ಥಳಿಸಿದ ಆರೋಪದ ಮೇಲೆ ಹಿಂದಿ ಕಿರುತೆರೆಯ ಜನಪ್ರಿಯ ನಟ ಕರಣ್ ಮೆಹ್ರಾ ಅವರನ್ನು ಬಂಧಿಸಿ ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿದೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ಮಂಗಳವಾರ ತಿಳಿಸಿದ್ದಾರೆ.

ಸೋಮವಾರ ರಾತ್ರಿ ಈ ಘಟನೆ ನಡೆದಿದೆ. ಮಂಗಳವಾರ ಮುಂಜಾನೆ ಅವರನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿದೆ ಎಂದು ಅಧಿಕಾರಿ ತಿಳಿಸಿದ್ದಾರೆ.

ಕಿರುತೆರೆ ನಟರಾಗಿರುವ ಪತ್ನಿ ನಿಶಾ ರಾವಲ್ ಮತ್ತು ಕರಣ್ ನಡುವೆ ಜಗಳ ನಡೆದಿದೆ. ನಂತರ ಕರಣ್ ವಿರುದ್ಧ ಪೊಲೀಸ್‌ಗೆ ದೂರು ನೀಡಿದ್ದರು ಎಂದು ಅಧಿಕಾರಿ ತಿಳಿಸಿದ್ದಾರೆ.

ಕರಣ್ ಮೆಹ್ರಾ ಅವರು ಹಿಂದಿಯ ಜನಪ್ರಿಯ ಧಾರಾವಾಹಿ 'ಯೆ ರಿಷ್ತಾ ಕ್ಯಾ ಕೆಹ್ಲತಾ ಹೈ' – ಧಾರಾವಾಹಿಯಲ್ಲಿ ನಟಿಸಿದ್ದಾರೆ.

ಕ್ಷುಲ್ಲಕ ಅರ್ಜಿಗೆ 'ಸುಪ್ರೀಂ' ಅತೃಪ್ತಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಕ್ಷುಲ್ಲಕ ವಿಚಾರಗಳ ಬಗ್ಗೆ ದೂರು ಸಲ್ಲಿಕೆಯು ಸುಪ್ರೀಂ ಕೋರ್ಟ್‌ನ ಅಸಮಾಧಾನಕ್ಕೆ ಕಾರಣವಾಗಿದೆ. ಇಂತಹ ದೂರುಗಳು ನ್ಯಾಯಾಲಯದ ಕೆಲಸಕ್ಕೆ ಅಡ್ಡಿಯಾಗುತ್ತವೆ ಮತ್ತು ರಾಷ್ಟ್ರೀಯ ಮಹತ್ವದ ವಿಚಾರಗಳನ್ನು ಕೈಗೆತ್ತಿಕೊಳ್ಳಬೇಕಾದ ನ್ಯಾಯಮೂರ್ತಿಗಳ ಸಮಯವನ್ನು ಹಾಳು ಮಾಡುತ್ತವೆ ಎಂದು ಕೋರ್ಟ್ ಹೇಳಿದೆ.

ಮಾರ್ಚ್‌ನಲ್ಲಿಯೇ ವಿಲೇವಾರಿ ಮಾಡಲಾದ ಪ್ರಕರಣವೊಂದಕ್ಕೆ ಸಂಬಂಧಿಸಿ ಸಲ್ಲಿಕೆಯಾಗಿದ್ದ ಅರ್ಜಿಯನ್ನು ಕೈಗೆತ್ತಿಕೊಂಡ ಪೀಠವು ಅಸಮಾಧಾನ ವ್ಯಕ್ತಪಡಿಸಿತು. ಅಂತಿಮ ಆದೇಶವನ್ನು ಈಗಾಗಲೇ ನೀಡಲಾಗಿದ್ದರೂ ಮತ್ತೆ ಅರ್ಜಿ ಸಲ್ಲಿಕೆಯಾಗಿದೆ ಎಂದು ನ್ಯಾಯಮೂರ್ತಿಗಳಾದ ಡಿ.ವೈ. ಚಂದ್ರಚೂಡ್ ಮತ್ತು ಎಂ.ಆರ್. ಶಾ ಅವರ ಪೀಠವು ಹೇಳಿದೆ.

'ಏನಿದು? ಸುಪ್ರೀಂ ಕೋರ್ಟ್‌ನ ಸಮಯವನ್ನು ಹೀಗೆ ಹಾಳು ಮಾಡಲಾಗುತ್ತಿದೆ' ಎಂದು ಕ್ಷುಲ್ಲಕ ವಿಚಾರವನ್ನು ಉಲ್ಲೇಖಿಸಿ ಅರ್ಜಿ ಸಲ್ಲಿಸಿದ್ದ ವಕೀಲರನ್ನು ತರಾಟೆಗೆ ತೆಗೆದುಕೊಂಡಿತು. ರಜಾ ಕಾಲದ ಪೀಠದ ಮುಂದೆ ಇರುವ ಶೇ 95ರಷ್ಟು ಪ್ರಕರಣಗಳು ಅನಗತ್ಯವಾದುದೇ ಆಗಿವೆ. ಇಂತಹ ನಡವಳಿಕೆಗೆ ಉತ್ತೇಜನ ಕೊಡಬಾರದು ಎಂದು ಪೀಠವು ಹೇಳಿದೆ.

ಅನಗತ್ಯ ವಿಚಾರಗಳನ್ನು ಗಣನೆಗೆ ತೆಗೆದುಕೊಳ್ಳಬಾರದು, ಗಂಭೀರ ವಿಚಾರಗಳಿಗೆ ಸಮಯ ನೀಡಬೇಕು ಎಂದು ಚಂದ್ರಚೂಡ್ ಹೇಳಿದ್ದಾರೆ.

ತಮ್ಮ ವಾದ ಮಂಡನೆಗೆ ಅವಕಾಶ ಕೊಡಬೇಕು ಎಂದು ವಕೀಲರು ಮತ್ತೆಯೂ ವಿನಂತಿಸಿದರು. ನ್ಯಾಯಾಲಯದ ಪಾವಿತ್ರ್ಯವನ್ನು ಗೌರವಿಸಿ ಎಂದು ಪೀಠವು ವಕೀಲರಿಗೆ ಸೂಚಿಸಿತು. ಇಂತಹ ಅರ್ಜಿಗಳ ವಿಚಾರಣೆ ನಡೆಸಿದರೆ ಸಂಪನ್ಮೂಲ ವ್ಯರ್ಥವಾಗುವುದು ಮಾತ್ರವಲ್ಲ, ನ್ಯಾಯಮೂರ್ತಿಗಳಿಗೆ ಬೇಕಾದಷ್ಟು ಸಮಯ ಇದೆ ಎಂಬ ಭಾವನೆಯೂ ಮೂಡುತ್ತದೆ ಎಂದು ಪೀಠವು ಹೇಳಿದೆ.

ಮೊಕದ್ದಮೆ ನೀತಿ ಅನುಸರಿಸಿ: ಕೋರ್ಟ್ ನಿರ್ದೇಶನ

ನವದೆಹಲಿ (ಪಿಟಿಐ): 'ಕೋರ್ಟ್ ಅಥವಾ ನ್ಯಾಯಮಂಡಳಿಯಿಂದ ಈಗಾಗಲೇ ತೀರ್ಮಾನವಾದ ವಿಷಯಗಳಿಗೆ ಸಂಬಂಧಿಸಿ ಜನರು ಮತ್ತೆ ಕೋರ್ಟ್ ಮೆಟ್ಟಿಲು ಏರುವಂತೆ ಮಾಡಬಾರದು. ರಾಷ್ಟ್ರೀಯ ಮೊಕದ್ದಮೆಗಳ ನೀತಿ (ಎನ್‌ಎಲ್‌ಪಿ) ಪಾಲಿಸಬೇಕು' ಎಂದು ದೆಹಲಿ ಹೈಕೋರ್ಟ್ ಕೇಂದ್ರ ಸರ್ಕಾರಕ್ಕೆ ಸೂಚಿಸಿದೆ.

'ವಿಷಯದಲ್ಲಿ ಸಾಮ್ಯತೆ ಇದ್ದು, ಈಗಾಗಲೇ ತೀರ್ಮಾನ ಆಗಿದ್ದರೆ, ಆದೇಶ ನಂತರದ ಅದೇ ಸ್ವರೂಪದ ಪ್ರಕರಣಗಳಿಗೂ ಅನ್ವಯವಾಗಲಿದೆ ಎಂಬ ಕೇಂದ್ರದ ರಾಷ್ಟ್ರೀಯ ಮೊಕದ್ದಮೆಗಳ ನೀತಿಯು (ಎನ್‌ಎಲ್‌ಪಿ) ಆಡಳಿತ ವ್ಯವಸ್ಥೆಯ ಗಮನದಲ್ಲಿರಬೇಕು' ಎಂದು ಕೋರ್ಟ್ ತಿಳಿಸಿದೆ.

ಒಂದೇ ವಿಷಯಕ್ಕೆ ಸಂಬಂಧಿಸಿದಂತೆ ಜನರು ಮತ್ತೆ, ಮತ್ತೆ ಕೋರ್ಟ್ ಮೆಟ್ಟಿಲೇರುವಂತೆ ಮಾಡಬಾರದು. ಪುನರಾವರ್ತನೆ ತಪ್ಪಿಸಬೇಕು ಎಂದು ಮುಖ್ಯ ನ್ಯಾಯಮೂರ್ತಿ ಡಿ.ಎನ್.ಪಟೇಲ್ ಮತ್ತು ನ್ಯಾಯಮೂರ್ತಿ ಜ್ಯೋತಿ ಸಿಂಗ್ ಅವರಿದ್ದ ಪೀಠವು ಸ್ಪಷ್ಟ ನಿರ್ದೇಶನ ನೀಡಿತು.

ಪೈಲೆಟ್‌ಗಳ ವಜಾ: ಹೈಕೋರ್ಟ್‌ನಿಂದ ರದ್ದು

ನವದೆಹಲಿ (ಪಿಟಿಐ): ಏರ್ ಇಂಡಿಯಾದ 40 ಪೈಲೆಟ್‌ಗಳನ್ನು ಕಳೆದ ಆಗಸ್ಟ್‌ನಲ್ಲಿ ಕೆಲಸದಿಂದ ವಜಾಗೊಳಿಸಿದ ನಿರ್ಧಾರವನ್ನು ದೆಹಲಿ ಹೈಕೋರ್ಟ್ ರದ್ದುಗೊಳಿಸಿದ್ದು, ಆ ಎಲ್ಲ ನೌಕರರನ್ನು ಕೆಲಸಕ್ಕೆ ಮರು ನಿಯೋಜಿಸಿಕೊಳ್ಳುವಂತೆ ನಿರ್ದೇಶನ ನೀಡಿದೆ.

ಪ್ರಕರಣದ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಜ್ಯೋತಿ ಸಿಂಗ್ ಅವರು ವಿಮಾನಯಾನ ಸಂಸ್ಥೆಗೆ ಈ ನಿರ್ದೇಶನ ನೀಡಿದ್ದಾರೆ. ಮರು ನೇಮಕ ಮಾಡಿಕೊಳ್ಳುವ ಪೈಲೆಟ್‌ಗಳಿಗೆ ಬಾಕಿ ವೇತನವನ್ನೂ ಪಾವತಿಸಬೇಕು ಎಂದು ಆದೇಶಿಸಿದ್ದಾರೆ.

ಇದೇ ವೇಳೆ, ಪೈಲೆಟ್‌ಗಳ ಕೆಲಸ ತೃಪ್ತಿದಾಯಕವಾಗಿದ್ದರೆ, ಭವಿಷ್ಯದಲ್ಲಿ ಅವರ ಒಪ್ಪಂದದ ಅವಧಿಯನ್ನು ವಿಸ್ತರಿಸುವ ವಿವೇಚನಾಧಿಕಾರ ಏರ್ ಇಂಡಿಯಾ ವಿಮಾನಯಾನ ಸಂಸ್ಥೆಗೆ ಸೇರಿದ್ದಾಗಿರುತ್ತದೆ ಎಂದು ನ್ಯಾಯಾಲಯ ಹೇಳಿದೆ. ಈ ಪ್ರಕರಣಕ್ಕೆ ಸಂಬಂಧಿಸಿದ ತೀರ್ಪಿನ ವಿವರ ಬುಧವಾರ ಲಭ್ಯವಾಗುತ್ತದೆ ಎಂದು ನ್ಯಾಯಾಲಯ ತಿಳಿಸಿದೆ.

ಫ್ರೆಂಚ್ ಓಪನ್ ಟೆನಿಸ್ ಟೂರ್ನಿ: ಆ್ಯಶ್ಲಿ ಬಾರ್ಟಿ, ರಫೆಲ್ ನಡಾಲ್ ಎರಡನೇ ಸುತ್ತಿಗೆ

ಸ್ವಿಟೊಲಿನಾಗೆ ಗೆಲುವಿನ ಸಿಹಿ

ಎಲಿನಾ ಸ್ವಿಟೊಲಿನಾ ಆಟದ ವೈಖರಿ –ರಾಯಿಟರ್ಸ್ ಚಿತ್ರ

ಪ್ಯಾರಿಸ್ (ಎಎಫ್‌ಪಿ/ಪಿಟಿಐ): ಹಿನ್ನಡೆಯಿಂದ ಚೇತರಿಸಿಕೊಂಡು ಗೆಲುವು ದಾಖಲಿಸಿದ ಎಲಿನಾ ಸ್ವಿಟೊಲಿನಾ ಅವರು ಫ್ರೆಂಚ್ ಓಪನ್ ಟೆನಿಸ್ ಟೂರ್ನಿಯಲ್ಲಿ ಎರಡನೇ ಸುತ್ತು ತಲುಪಿದರು. ಮಂಗಳವಾರ ನಡೆದ ಮೊದಲ ಸುತ್ತಿನ ಹಣಾಹಣಿಯಲ್ಲಿ ಉಕ್ರೇನ್‌ನ ಆಟಗಾರ್ತಿ 6–2, 7–5ರಿಂದ ಫ್ರಾನ್ಸ್‌ನ ಒಸಿಯಾನೆ ಬಬೆಲ್ ಅವರನ್ನು ಸೋಲಿಸಿದರು.

ಮೊದಲ ಸೆಟ್‌ನಲ್ಲಿ ಸುಲಭ ಜಯ ಸಾಧಿಸಿದ ಸ್ವಿಟೊಲಿನಾ ಅವರಿಗೆ ಎರಡನೇ ಸೆಟ್‌ನಲ್ಲಿ ಒಸಿಯಾನೆ ಪ್ರಬಲ ಪೈಪೋಟಿ ನೀಡಿದರು. ಒಂದು ಹಂತದಲ್ಲಿ ಫ್ರಾನ್ಸ್‌ನ ಯುವ ಆಟಗಾರ್ತಿ 5–2ರ ಮುನ್ನಡೆಯಲ್ಲಿದ್ದರು. ಆದರೆ ತಮ್ಮೆಲ್ಲ ಸಾಮರ್ಥ್ಯ ಪಣಕ್ಕಿಟ್ಟ ಸ್ವಿಟೊಲಿನಾ ತಿರುಗೇಟು ನೀಡಿ ಸೆಟ್ ಹಾಗೂ ಪಂದ್ಯ ಗೆಲ್ಲುವಲ್ಲಿ ಯಶಸ್ವಿಯಾದರು.

ಟೂರ್ನಿಯ ಮೂರು ಆವೃತ್ತಿಗಳಲ್ಲಿ ಕ್ವಾರ್ಟರ್‌ಫೈನಲ್ ತಲುಪಿದ್ದ ಸ್ವಿಟೊಲಿನಾ ಮುಂದಿನ ಪಂದ್ಯದಲ್ಲಿ ಅಮೆರಿಕದ ಆ್ಯನ್ ಲೀ ಅವರನ್ನು ಎದುರಿಸಲಿದ್ದಾರೆ. ಫ್ರೆಂಚ್ ಓಪನ್ ಟೂರ್ನಿಯಲ್ಲಿ ಇದೇ ಮೊದಲ ಬಾರಿ ಕಣಕ್ಕಿಳಿದಿರುವ ಲೀ ಮೊದಲ ಸುತ್ತಿನ ಪಂದ್ಯದಲ್ಲಿ 6–0, 6–1ರಿಂದ ಮಾರ್ಗರಿಟಾ ಗ್ಯಾಸ್ಪರಿನ್ ಅವರಿಗೆ ಸೋಲುಣಿಸಿದರು.

ಬಾರ್ಟಿ, ನಡಾಲ್ ಜಯಭೇರಿ: ಅಗ್ರ ಕ್ರಮಾಂಕದ ಆಟಗಾರ್ತಿ, ಆಸ್ಟ್ರೇಲಿಯಾದ ಆ್ಯಶ್ಲಿ ಬಾರ್ಟಿ ಅವರು 6-4, 3-6, 6-2ರಿಂದ ಬರ್ನಾರ್ಡಾ ಪೆರಾ ಅವರನ್ನು ಮಣಿಸಿ ಎರಡನೇ ಸುತ್ತಿಗೆ ಲಗ್ಗೆಯಿಟ್ಟರು. ಎರಡು ಬಾರಿಯ ವಿಂಬಲ್ಡನ್ ಚಾಂಪಿಯನ್ ಪೆಟ್ರಾ ಕ್ವಿಟೊವಾ ಪಾದದ ನೋವಿನ ಕಾರಣ ಟೂರ್ನಿಯಿಂದ ಹಿಂದೆ ಸರಿದರು.

ರೋಹನ್ ಬೋಪಣ್ಣ

ಪುರುಷರ ಸಿಂಗಲ್ಸ್ ಮೊದಲ ಸುತ್ತಿನಲ್ಲಿ ಸ್ಪೇನ್‌ನ ರಫೆಲ್ ನಡಾಲ್ 6-2, 6-3, 7-6ರಿಂದ ಆಸ್ಟ್ರೇಲಿಯಾದ ಅಲೆಕ್ಸಿ ಪಾಪಿರಿನ್ ಎದುರು ಗೆದ್ದರು.

ಎರಡನೇ ಸುತ್ತಿಗೆ ಬೋಪಣ್ಣ-ಸುಗೊರ್: ಭಾರತದ ರೋಹನ್ ಬೋಪಣ್ಣ ಹಾಗೂ ಕ್ರೊವೇಷ್ಯಾದ ಫ್ರಾಂಕೊ ಸುಗೊರ್ ಜೋಡಿಯು ಟೂರ್ನಿಯ ಪುರುಷರ ಡಬಲ್ಸ್ ವಿಭಾಗದಲ್ಲಿ ಮಂಗಳವಾರ ಎರಡನೇ ಸುತ್ತು ತಲುಪಿತು. ಮೊದಲ ಪಂದ್ಯದಲ್ಲಿ ಇವರಿಬ್ಬರು 6-4, 6-2ರಿಂದ ಜಾರ್ಜಿಯಾದ ನಿಕೊಲಾಜ್ ಬಾಶಿಲ್‌ಶ್ವಿಲಿ ಹಾಗೂ ಜರ್ಮನಿಯ ಆ್ಯಂಡ್ರೆ ಬೆಜೆಮನ್ ಅವರನ್ನು ಪರಾಭವಗೊಳಿಸಿದರು.

ಇತರ ಪಂದ್ಯಗಳ ಫಲಿತಾಂಶಗಳು

ಮೊದಲ ಸುತ್ತು: ಪುರುಷರು: ಲಿಥುವೇನಿಯಾದ ರಿಕಾರ್ಡಸ್ ಬೆರಂಕಿಸ್‌ಗೆ 6-4, 6-4, 2-6, 6-4ರಿಂದ ಉಗೊ ಹಂಬರ್ಟ್ ಎದುರು ಜಯ; ಆಸ್ಟ್ರೇಲಿಯಾದ ಅಲೆಕ್ಸ್ ಡಿ ಮಿನೌರ್‌ಗೆ 6-2, 6-4, 7-6ರಿಂದ ಇಟಲಿಯ ಸ್ಟೆಫಾನೊ ಟ್ರಾವೆಗ್ಲಿಯಾ ವಿರುದ್ಧ ಜಯ. ಮಹಿಳೆಯರು: ಗ್ರೀಕ್‌ನ ಮರಿಯಾ ಸಕ್ಕಾರಿಗೆ 6-4, 6-1ರಿಂದ ಉಕ್ರೇನ್‌ನ ಕ್ಯಾತರಿನಾ ಜವಾತ್ಸಕಾ ಎದುರು, ಅಮೆರಿಕದ ಜೆನಿಫರ್ ಬ್ರಾಡಿ ಅವರಿಗೆ 6-3, 6-3ರಿಂದ ಲಾಟ್ವಿಯಾದ ಅನಸ್ತೇಸಿಯಾ ಸೆವಾತ್ಸೊವಾ ಎದುರು ಗೆಲುವು.

ನವೊಮಿ ಒಸಾಕ ನಿರ್ಧಾರಕ್ಕೆ ಬೆಂಬಲ

ನವೊಮಿ ಒಸಾಕ

ಮಾನಸಿಕ ಆರೋಗ್ಯದ ಕಾರಣ ನೀಡಿ ಸೋಮವಾರ ಫ್ರೆಂಚ್ ಓಪನ್ ಟೆನಿಸ್ ಟೂರ್ನಿಯಿಂದ ಹಿಂದೆಸರಿದಿರುವ ಜಪಾನ್‌ನ ನವೊಮಿ ಒಸಾಕ ಅವರಿಗೆ ಪ್ರಮುಖ ಟೆನಿಸ್ ಪಟುಗಳು ಬೆಂಬಲ ವ್ಯಕ್ತಪಡಿಸಿದ್ದಾರೆ.

‘ನವೊಮಿ ಕುರಿತು ಮರುಕವಿದೆ. ಎಲ್ಲರೂ ಒಂದೇ ತರಹ ಇರುವುದಿಲ್ಲ. ಈ ಘಟನೆಯನ್ನು ಅವರು ಹೇಗೆ ನಿಭಾಯಿಸುತ್ತಾರೆ ಎಂಬುದನ್ನು ಅವರ ವಿವೇಚನೆಗೆ ಬಿಡಬೇಕು. ಅವರು ಸೂಕ್ತವಾದುದನ್ನೇ ಮಾಡಿದ್ದಾರೆ’ ಎಂದು ಅಮೆರಿಕದ ಸೆರೆನಾ ವಿಲಿಯಮ್ಸ್ ಹೇಳಿದ್ದಾರೆ.

‘ಖಿನ್ನತೆಯೊಂದಿಗೆ ಹೆಣಗಾಡುತ್ತಿದ್ದುದನ್ನು ಹೇಳಿಕೊಂಡಿದ್ದು ಒಸಾಕ ಅವರ ಸ್ಥೈರ್ಯವನ್ನು ತೋರಿಸುತ್ತದೆ. ಅವರಿಗೆ ಒಂದಷ್ಟು ಸಮಯ ಬೇಕಾಗಿದೆ. ಒಳ್ಳೆದಾಗಲಿ’ ಎಂದು ಬಿಲ್ಲಿ ಜೀನ್ ಕಿಂಗ್ ನುಡಿದಿದ್ದಾರೆ.

ಮಾರ್ಟಿನಾ ನವ್ರಾಟಿಲೊವಾ ಸೇರಿದಂತೆ ಹಲವು ಕ್ರೀಡಾಪಟುಗಳು ಒಸಾಕ ಅವರ ನಿರ್ಧಾರಕ್ಕೆ ಸಹಮತ ವ್ಯಕ್ತಪಡಿಸಿದ್ದಾರೆ.

ಒಲಿಂಪಿಕ್ಸ್‌ನಿಂದ ಹಿಂದೆ ಸರಿದ ಮರಿನ್


ಕರೊಲಿನಾ ಮರಿನ್–

ನವದೆಹಲಿ (ಪಿಟಿಐ): ಒಲಿಂಪಿಕ್ಸ್ ಚಾಂಪಿಯನ್, ಸ್ಪೇನ್‌ನ ಬ್ಯಾಡ್ಮಿಂಟನ್ ಆಟಗಾರ್ತಿ ಕರೊಲಿನಾ ಮರಿನ್ ಅವರು ಎಡ ಮೊಣಕಾಲಿನ ಗಾಯಕ್ಕೆ ತುತ್ತಾಗಿದ್ದು, ಟೋಕಿಯೊ ಕ್ರೀಡಾಕೂಟದಿಂದ ಹೊರಗುಳಿದಿದ್ದಾರೆ.

ಕಳೆದ ವಾರ ನಡೆದ ತರಬೇತಿ ಅವಧಿಯಲ್ಲಿ 27 ವರ್ಷದ ಮರಿನ್ ಗಾಯಗೊಂಡಿದ್ದು, ಶಸ್ತ್ರಚಿಕಿತ್ಸೆಗೆ ಒಳಗಾಗಬೇಕಿದೆ. 3 ಬಾರಿಯ ವಿಶ್ವ ಚಾಂಪಿಯನ್ ಮರಿನ್, 2019ರಲ್ಲಿ ಬಲಗಾಲಿನ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದರು.

ಭಾರತದ ಬಾಕ್ಸರ್‌ಗಳಿಗೆ ವಿದೇಶದಲ್ಲಿ ತರಬೇತಿ

ಅಮಿತ್ ಪಂಘಾಲ್–ಪಿಟಿಐ ಚಿತ್ರ

ನವದೆಹಲಿ (ಪಿಟಿಐ): ಅಮಿತ್ ಪಂಘಾಲ್ ಸೇರಿದಂತೆ ಒಲಿಂಪಿಕ್ಸ್‌ಗೆ ಅರ್ಹತೆ ಗಳಿಸಿರುವ ಭಾರತದ ಒಂಬತ್ತು ಮಂದಿ ಬಾಕ್ಸರ್‌ಗಳು ಮೂರು ವಾರಗಳ ಕಾಲ ವಿದೇಶದಲ್ಲಿ ತರಬೇತಿ ಪಡೆಯಲಿದ್ದಾರೆ. ದುಬೈನಲ್ಲಿ ಸೋಮವಾರ ಕೊನೆಗೊಂಡ ಏಷ್ಯನ್ ಚಾಂಪಿಯನ್‌ಷಿಪ್ ನಂತರ ಕೆಲವು ದಿನ ವಿಶ್ರಾಂತಿ ಪಡೆದು ಅವರು ತರಬೇತಿಗೆ ತೆರಳಲಿದ್ದಾರೆ.

‘ವಿದೇಶದಲ್ಲಿ ನಮ್ಮ ತಂಡ ತರಬೇತಿ ಪಡೆಯಲಿದೆ. ಈ ಕುರಿತು ಚರ್ಚೆಗಳು ನಡೆಯುತ್ತಿದ್ದು, ತರಬೇತಿಗೆ ಸ್ಥಳವನ್ನು ಶೀಘ್ರದಲ್ಲಿ ಅಂತಿಮಗೊಳಿಸಲಾಗುತ್ತದೆ. ಹೊಸ ಸಂಗತಿಗಳೊಂದಿಗೆ ಭಾರತಕ್ಕೆ ಮರಳಲಿದ್ದು, ಒಲಿಂಪಿಕ್ಸ್ ಆರಂಭಕ್ಕೆ ಏಳು ದಿನಗಳು ಬಾಕಿಯಿರುವಂತೆಯೇ ಟೋಕಿಯೊಗೆ ತೆರಳಲಿದ್ದೇವೆ’ ಎಂದು ಭಾರತ ಬಾಕ್ಸಿಂಗ್ ತಂಡದ ಹೈ ಪರ್ಫಾರ್ಮೆನ್ಸ್ ನಿರ್ದೇಶಕ ಸ್ಯಾಂಟಿಯಾಗೊ ನೀವಾ ತಿಳಿಸಿದ್ದಾರೆ.

ಕ್ರಿಕೆಟ್: ಕುಟುಂಬದ ಜತೆ ತೆರಳಲು ಆಟಗಾರರಿಗೆ ಅವಕಾಶ

ಮುಂಬೈ (ಪಿಟಿಐ): ಇಂಗ್ಲೆಂಡ್ ಪ್ರವಾಸಕ್ಕೆ ತೆರಳಲಿರುವ ಭಾರತದ ಪುರುಷರು, ಮಹಿಳಾ ಕ್ರಿಕೆಟ್ ತಂಡಗಳ ಆಟಗಾರರು ಮತ್ತು ಕೋಚಿಂಗ್ ಹಾಗೂ ಸಹಾಯಕ ಸಿಬ್ಬಂದಿಗೆ ಕುಟುಂಬದವರನ್ನು ಕರೆದುಕೊಂಡು ಹೋಗಲು ಬ್ರಿಟನ್ ಸರ್ಕಾರವು ಅನುಮತಿ ನೀಡಿದೆ.

ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ (ಬಿಸಿಸಿಐ) ಹಿರಿಯ ಅಧಿಕಾರಿಯೊಬ್ಬರು ಮಂಗಳವಾರ ಈ ವಿಷಯ ಬಹಿರಂಗಪಡಿಸಿದ್ದಾರೆ.

ಬಯೋಬಬಲ್‌ನಲ್ಲಿ ಒಂದಷ್ಟು ಹೊತ್ತು ಕಳೆಯಲು ಆಟಗಾರರಿಗೆ ತಮ್ಮ ಕುಟುಂಬದ ಸದಸ್ಯರನ್ನು ಕರೆದೊಯ್ಯಲು ಅವಕಾಶ ನೀಡಬೇಕೆಂದು ಬಿಸಿಸಿಐ, ಇಂಗ್ಲೆಂಡ್‌ಗೆ ಮನವಿ ಮಾಡಿಕೊಂಡಿತ್ತು.

ಕೊರೊನಾ ರೂಪಾಂತರಕ್ಕೆ ‘ಕಪ್ಪಾ’, ‘ಡೆಲ್ಟಾ’ ಹೆಸರಿಟ್ಟ ಡಬ್ಲ್ಯುಎಚ್‌ಒ

ಜಿನಿವಾ (ಪಿಟಿಐ): ಭಾರತದಲ್ಲಿ ಮೊದಲು ಗುರುತಿಸಲ್ಪಟ್ಟ ಕೋವಿಡ್‌–19ರ ಬಿ1.617.1ಮತ್ತು ಬಿ1.617.2 ರೂಪಾಂತರಗಳಿಗೆ ಗ್ರೀಕ್ ಅಕ್ಷರಗಳನ್ನು ಬಳಸಿಕೊಂಡು ಕ್ರಮವಾಗಿ 'ಕಪ್ಪಾ'(kappa)ಮತ್ತು 'ಡೆಲ್ಟಾ' ಎಂದು ಹೆಸರಿಸಿರುವುದಾಗಿ ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯುಎಚ್‌ಒ) ಘೋಷಿಸಿದೆ.

ಸಾರ್ಸ್ ಕೋವ್‌2 ಹೆಸರನ್ನು ಅನ್ನು ಬಳಸಲು ಅನುಕೂಲವಾಗಲು ಹೊಸ ಲೇಬಲ್ ಹಾಕುತ್ತಿದ್ದೇವೆ. ಇದು ಸಾರ್ವಜನಿಕ ಚರ್ಚೆಯಲ್ಲಿ ಸಹಾಯ ಮಾಡುವ ಗುರಿಯನ್ನು ಹೊಂದಿದೆ ಎಂದು ಡಬ್ಲ್ಯುಎಚ್‌ಒನ ಕೋವಿಡ್‌ -19 ವಿಷಯಗಳ ತಾಂತ್ರಿಕ ಮುಖ್ಯಸ್ಥೆ ಡಾ ಮಾರಿಯಾ ವ್ಯಾನ್ ಕೆರ್ಖೋವ್ ಸೋಮವಾರ ಟ್ವೀಟ್ ಮಾಡಿದ್ದಾರೆ.

ಭಾರತದಲ್ಲಿ ಕಂಡುಬಂದ ಕೋವಿಡ್‌–19ರ ಬಿ.1.617.1ರೂಪಾಂತರವನ್ನು 'ಕಪ್ಪಾ' ಎಂದು ಹೆಸರಿಸಿದರೆ, ಬಿ1.617.2 ರೂಪಾಂತರಕ್ಕೆ 'ಡೆಲ್ಟಾ' ಎಂದು ಕರೆಯಲಾಗಿದೆ ಎಂದು ವಿಶ್ವಸಂಸ್ಥೆಯ ಆರೋಗ್ಯ ಸಂಸ್ಥೆ ತಿಳಿಸಿದೆ.

ಬಿ .1.617 ರೂಪಾಂತರವನ್ನು ‘ಭಾರತದ ವೇರಿಯಂಟ್’ಎಂದು ಸಾಮಾಜಿಕ ಮಾಧ್ಯಮಗಳಲ್ಲಿ ಬಳಸುತ್ತಿದ್ದ ಬಗ್ಗೆ ಭಾರತ ಆಕ್ಷೇಪ ವ್ಯಕ್ತಪಡಿಸಿತ್ತು. ವಿಶ್ವ ಆರೋಗ್ಯ ಸಂಸ್ಥೆಯಿಂದ ಈ ರೂಪಾಂತರಕ್ಕೆ ‘ಭಾರತದ ರೂಪಾಂತರ’ಎಂಬ ಹೆಸರು ನೀಡಿಲ್ಲ ಎಂದು ಕೇಂದ್ರ ಆರೋಗ್ಯ ಸಚಿವಾಲಯವು ಹೇಳಿಕೆ ಬಿಡುಗಡೆ ಮಾಡಿದ ಸುಮಾರು ಮೂರು ವಾರಗಳ ನಂತರ ಡಬ್ಲ್ಯುಎಚ್‌ಒನ ಈ ನಿರ್ಧಾರ ಹೊರಬಿದ್ದಿದೆ.

ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ ಸಭೆಯಲ್ಲಿ ಬಿಸಿಸಿಐ ಮನವಿಗೆ ಸ್ಪಂದನೆ

ವಿಶ್ವಕಪ್ ಆಯೋಜನೆ: ನಿರ್ಧಾರಕ್ಕಾಗಿ ಕಾಲಾವಕಾಶ

ಸೌರವ್ ಗಂಗೂಲಿ ಮತ್ತು ಜಯ್ ಶಾ

ನವದೆಹಲಿ (ಪಿಟಿಐ): ಮುಂಬರುವ ಅಕ್ಟೋಬರ್–ನವೆಂಬರ್‌ನಲ್ಲಿ ಭಾರತದಲ್ಲಿಯೇ ಟಿ20 ವಿಶ್ವಕಪ್ ಟೂರ್ನಿ ಆಯೋಜಿಸುವ ಕುರಿತು ನಿರ್ಧಾರ ಕೈಗೊಳ್ಳಲು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಗೆ ಇದೇ 28ರವರೆಗೆ ಕಾಲಾವಕಾಶ ನೀಡಲಾಗಿದೆ.

ಮಂಗಳವಾರ ನಡೆದ ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ಸಭೆಯಲ್ಲಿ ಬಿಸಿಸಿಐ ಅಧ್ಯಕ್ಷ ಸೌರವ್ ಗಂಗೂಲಿ ಮತ್ತು ಜಯ್ ಶಾ ಅವರು ಸಲ್ಲಿಸಿದ ಮನವಿಗೆ ಉತ್ತಮ ಸ್ಪಂದನೆ ದೊರೆಯಿತು.

ಪೂರ್ವನಿಗದಿತ ವೇಳಾಪಟ್ಟಿಯ ಪ್ರಕಾರ ಭಾರತವು ಈ ವರ್ಷದ ಟಿ20 ವಿಶ್ವಕಪ್ ಟೂರ್ನಿಯನ್ನು ಆಯೋಜಿಸಬೇಕು. ಆದರೆ, ದೇಶದಲ್ಲಿ ಕೋವಿಡ್ –19 ಎರಡನೇ ಅಲೆಯ ಪ್ರಕರಣಗಳು ಹೆಚ್ಚಿವೆ. ಆದ್ದರಿಂದ ಮುಂದಿನ ದಿನಗಳಲ್ಲಿ ಪರಿಸ್ಥಿತಿ ಹೇಗಿರಲಿದೆ ಎಂಬ ಬಗ್ಗೆ ಅನಿಶ್ಚಿತತೆ ಮೂಡಿದೆ.ಒಂದೊಮ್ಮೆ ಭಾರತದಲ್ಲಿ ಸ್ಥಿತಿ ಹೀಗೆ ಮುಂದುವರಿದರೆ ಟೂರ್ನಿಯನ್ನು ತಟಸ್ಥ ತಾಣಕ್ಕೆ ಸ್ಥಳಾಂತರಿಸುವ ಸಾಧ್ಯತೆಯೂ ಇದೆ. ಈ ಕುರಿತು ನಿರ್ಧಾರ ಕೈಗೊಳ್ಳಲು ಬಿಸಿಸಿಐ ಸಮಯ ಕೇಳಿತ್ತು.

‘ಮುಂದಿನ ತಿಂಗಳು ಐಸಿಸಿಯ ಸಭೆಯಲ್ಲಿ ಬಿಸಿಸಿಐ ತನ್ನ ನಿರ್ಧಾರವನ್ನು ತಿಳಿಸಬೇಕು. ಅಲ್ಲಿಯವರೆಗೆ ದೇಶದ ಸ್ಥಿತಿ ಗತಿಯನ್ನು ಸೂಕ್ಷ್ಮವಾಗಿ ಅವಲೋಕಿಸಲಾಗುವುದು’ ಎಂದು ಬಿಸಿಸಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಒಂದೊಮ್ಮೆ ಭಾರತದಲ್ಲಿ ಆಯೋಜನೆ ಸಾಧ್ಯವಾಗದಿದ್ದರೆ ಯುನೈಟೆಡ್ ಅರಬ್ ಎಮಿರೇಟ್ಸ್ (ಯುಎಇ)ನಲ್ಲಿ ಟೂರ್ನಿ ನಡೆಯುವ ಸಾಧ್ಯತೆ ಇದೆ. ಹೋದ ತಿಂಗಳು ಭಾರತದಲ್ಲಿ ನಡೆದಿದ್ದ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಟೂರ್ನಿಯಲ್ಲಿ ಕೆಲವು ಆಟಗಾರರಿಗೆ ಕೋವಿಡ್ ಸೋಂಕು ಖಚಿತವಾಗಿತ್ತು. ಆದ್ದರಿಂದ ಟೂರ್ನಿಯನ್ನು ಅರ್ಧಕ್ಕೆ ಸ್ಥಗಿತ ಮಾಡಲಾಗಿತ್ತು. ಅದರಲ್ಲಿ ಉಳಿದಿರುವ 31 ಪಂದ್ಯಗಳನ್ನು ಸೆಪ್ಟೆಂಬರ್‌ನಲ್ಲಿ ಯುಎಇಯಲ್ಲಿ ನಡೆಸಲು ಬಿಸಿಸಿಐ ಈಗಾಗಲೇ ನಿರ್ಧರಿಸಿದೆ.

ವಿಶ್ವಕಪ್‌ಗೆ 14 ತಂಡಗಳು: ಮುಂದಿನ ಎಂಟು ವರ್ಷಗಳ ಟೂರ್ನಿಗಳ ಯೋಜನೆಯ (ಎಫ್‌ಟಿಪಿ) ಪ್ರಕಾರ ಟಿ20 ವಿಶ್ವಕಪ್ 2 ವರ್ಷಗಳಿಗೊಮ್ಮೆ ನಡೆಯಲಿದೆ. 50 ಓವರ್‌ಗಳ ವಿಶ್ವಕಪ್‌ಅನ್ನು 14 ತಂಡಗಳೊಂದಿಗೆ ಆಡಿಸಲಾಗುವುದು. 2027ರಿಂದ ಈ ನಿಯಮ ಅನ್ವಯವಾಗಲಿದೆ ಎಂದು ಐಸಿಸಿ ತಿಳಿಸಿದೆ.

ಡಬ್ಲ್ಯುಟಿಸಿ ಟೂರ್ನಿಗಳಿಗಿಲ್ಲ ಅಡೆತಡೆ

ನವದೆಹಲಿ (ಪಿಟಿಐ): ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಟೂರ್ನಿಗಳನ್ನು 2023 ರಿಂದ 2031ರ ಅವಧಿಯಲ್ಲಿ ಆಯೋಜಿಸಲು ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ನಿರ್ಧರಿಸಿದೆ.

ಮೊದಲ ಬಾರಿಗೆ 2019ರಲ್ಲಿ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ (ಡಬ್ಲ್ಯುಟಿಸಿ) ಆರಂಭವಾಯಿತು. ಆದರೆ, ಹೋದ ವರ್ಷ ಕೋವಿಡ್ –19 ಹಾವಳಿಯಿಂದಾಗಿ ಟೂರ್ನಿಯ ಕೆಲವು ಸರಣಿಗಳು ನಡೆಯಲಿಲ್ಲ. ಇನ್ನೂ ಕೆಲವು ಅಪೂರ್ಣಗೊಂಡವು. ಪಾಯಿಂಟ್ಸ್ ಲೆಕ್ಕಾಚಾರವನ್ನೂ ಬದಲಾಯಿಸಲಾಯಿತು. ಇದೇ ತಿಂಗಳು 18 ರಿಂದ 21ರವರೆಗೆ ಸೌತಾಂಪ್ಟನ್‌ನಲ್ಲಿ ಫೈನಲ್ ಪಂದ್ಯ ನಡೆಯಲಿದೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	15582
ಇಂದಿನ ಅಂತ್ಯ	15574
▼	7.95
ದಿನದ ಗರಿಷ್ಠ	15660

ವಿನಿಮಯ ದರ

$ ಡಾಲರ್	72.9
£ ಪೌಂಡ್	103.36
€ ಯುರೊ	89.17
¥ ಯೆನ್ (100ಕ್ಕೆ)	65.58

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹545
12 ಮೊಟ್ಟೆಗೆ	₹70
ಮೈಸೂರು	
100 ಮೊಟ್ಟೆಗೆ	₹547

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1410 (1420)
ಸೋಯಾ (ರಿಫೈನ್ಡ್)	₹1370 (1360)
ಸೂರ್ಯಕಾಂತಿ (ರಿಫೈನ್ಡ್)	₹1560(1560)
ಪಾಮೋಲಿನ್	₹1240 (1235)

ಪ್ರಶ್ನೋತ್ತರ

ಯು.ಪಿ.ಪುರಾಣಿಕ್
ಬ್ಯಾಂಕಿಂಗ್-ಹಣಕಾಸು ತಜ್ಞ
uppuranik@gmail.com
ಮೊ: 9448015300

ಮಂಜುಳ, ರಾಮಮೂರ್ತಿನಗರ

● **ಪ್ರಶ್ನೆ:** ನಾನು ಒಂದು ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದೇನೆ. ಈ ವರ್ಷ ನನಗೆ ನಿವೃತ್ತಿಯಾಗುತ್ತಿದ್ದು, ನಿವೃತ್ತಿಯ ನಂತರ ಸುಮಾರು ₹ 45 ಲಕ್ಷ ಬರಬಹುದು. ಸ್ವಂತ ಮನೆ ಇದೆ. ಪಿಂಚಣಿ ಇಲ್ಲ. ಬೇರಾವ ಆದಾಯವೂ ಇಲ್ಲ. ಬಡ್ಡಿಯಿಂದಲೇ ಜೀವನ ಸಾಗಿಸಬೇಕಾದ್ದರಿಂದ ಪ್ರತಿ ತಿಂಗಳೂ ಬಡ್ಡಿ ಬರುವ ಹೂಡಿಕೆ ಬಗ್ಗೆ ತಿಳಿಸಿ.

ಉತ್ತರ: ಸದ್ಯದ ಪರಿಸ್ಥಿತಿಯಲ್ಲಿ ಉತ್ತಮ ವರಮಾನ ಹಾಗೂ ಬ್ಯಾಂಕುಗಳಿಗಿಂತ ಸ್ವಲ್ಪ ಹೆಚ್ಚಿನ ಬಡ್ಡಿ ಬರುವ ಭದ್ರತೆ ಇರುವ ಠೇವಣಿಗಳೆಂದರೆ ಅಂಚೆ ಕಚೇರಿ ಹಿರಿಯ ನಾಗರಿಕರ ಠೇವಣಿ ಹಾಗೂ ಭಾರತೀಯ ಜೀವ ವಿಮಾ ನಿಗಮದ (ಎಲ್‌ಐಸಿ) ಪ್ರಧಾನ ಮಂತ್ರಿ ವಯೋ ವಂದನಾ ಯೋಜನೆ. ಎರಡೂ ಯೋಜನೆಯಲ್ಲಿ ಗರಿಷ್ಠ ₹ 15 ಲಕ್ಷ ಹಣ ಹೂಡಬಹುದು. ಅಂಚೆ ಕಚೇರಿ ಠೇವಣಿಯ ಅವಧಿ 5 ವರ್ಷ, ಎಲ್‌ಐಸಿಯ ವಯೋ ವಂದನಾ ಯೋಜನೆಯ ಅವಧಿ 10 ವರ್ಷ. ಪ್ರಸ್ತುತ ಬಡ್ಡಿದರ ಶೇಕಡ 7.4ರಷ್ಟು. ಇವೆರಡರಲ್ಲಿ ಒಟ್ಟಾರೆ ₹ 30 ಲಕ್ಷ ಇರಿಸಿದ ನಂತರ ಇನ್ನುಳಿದ ₹ 15 ಲಕ್ಷವನ್ನು ನಿಮ್ಮ ಮನೆಗೆ ಸಮೀಪದ ಬ್ಯಾಂಕ್‌ನಲ್ಲಿ 5 ವರ್ಷಗಳ ಠೇವಣಿಯಲ್ಲಿ ಇಡಿ. ಮೂರು ತಿಂಗಳಿಗೊಮ್ಮೆ ಬಡ್ಡಿ ಪಡೆಯಿರಿ. ಬ್ಯಾಂಕ್‌ಗಳಲ್ಲಿ ಠೇವಣಿ ಮೇಲೆ ಪ್ರತಿ ತಿಂಗಳೂ ಬಡ್ಡಿ ಪಡೆಯಬಹುದಾದರೂ ಹೀಗೆ ತಿಂಗಳು ತಿಂಗಳು ಬಡ್ಡಿ ಪಡೆಯುವಾಗ ನಿರ್ಧರಿಸಿದ ಬಡ್ಡಿದರದಲ್ಲಿ ಸ್ವಲ್ಪ ಕಡಿತ ಮಾಡಿ ಕೊಡುತ್ತಾರೆ. ನೀವು ವಯೋ ವಂದನಾ ಯೋಜನೆಯಲ್ಲಿ ಪ್ರತೀ ತಿಂಗಳೂ ಬಡ್ಡಿ ಪಡೆಯಬಹುದು ಹಾಗೂ ಅಂಚೆ ಕಚೇರಿ ಹಿರಿಯ ನಾಗರಿಕರ ಠೇವಣಿಯಲ್ಲಿ ಮೂರು ತಿಂಗಳಿಗೊಮ್ಮೆ ಬಡ್ಡಿ ಪಡೆಯಬಹುದು.

ಡಾ. ಕೃಷ್ಣವೇಣಿ, ಊರುಬೇಡ

● **ಪ್ರಶ್ನೆ:** ವೃತ್ತಿಯಲ್ಲಿ ನಾನು ಮತ್ತು ನನ್ನ ಪತಿ ವೈದ್ಯರು. ನಮ್ಮಿಬ್ಬರ ತಿಂಗಳ ಆದಾಯ ಸುಮಾರು ₹ 3 ಲಕ್ಷ. ನಮಗೆ ₹ 65 ಲಕ್ಷ ಗೃಹಸಾಲ ಇದೆ. ನಾವು ಇದುವರೆಗೆ ಮ್ಯೂಚುವಲ್ ಫಂಡ್‌ಗಳಲ್ಲಿ ₹ 5 ಲಕ್ಷ ತೊಡಗಿಸಿದ್ದೇವೆ. ಇದು ಸದ್ಯ ಲಾಭದಲ್ಲಿ ಇಲ್ಲ. ಪ್ರತೀ ತಿಂಗಳೂ ₹ 25 ಸಾವಿರ ಖಾಸಗಿ ಚಿಟ್ ಫಂಡ್‌ನಲ್ಲಿ ಹೂಡಿಕೆ ಮಾಡುತ್ತಿದ್ದೇನೆ. ಹೆಚ್ಚಿನ ಹಣ ತುಂಬಿ ಬೇಗ ಗೃಹಸಾಲ ತೀರಿಸಲು ನಿಮ್ಮ ಅಭಿಪ್ರಾಯ ತಿಳಿಸಿ.

ಉತ್ತರ: ಮ್ಯೂಚುವಲ್ ಫಂಡ್ ಹೂಡಿಕೆ ಷೇರುಮಾರುಕಟ್ಟೆ ಆಧರಿತ ಆದ್ದರಿಂದ ಅಲ್ಲಿ ಏರಿಳಿತ ಸಹಜ. ಲಾಭ ಬರುವ ತನಕ ಕಾಯಿರಿ. ಖಾಸಗಿ ಚಿಟ್‌ಫಂಡ್ ಹೂಡಿಕೆಯನ್ನು ನೀವು ಪ್ರಾಯಶಃ ನಿಮ್ಮ ಪರಿಚಯದವರಲ್ಲಿ ಮಾಡುತ್ತಿರಬೇಕು. ಈ ಹೂಡಿಕೆ ಎಂದಿಗೂ ಸುರಕ್ಷಿತ ಅಲ್ಲ. ತೆರಿಗೆ ಉಳಿಸಲು ನೀವಿಬ್ಬರೂ ನಿಮ್ಮ ವರಮಾನದಲ್ಲಿ ಶೇಕಡ 10ರಷ್ಟನ್ನು ಜೀವ ವಿಮೆಗೆ ಮುಡಿಪಾಗಿಡಿ ಹಾಗೂ ಇಬ್ಬರೂ ಪ್ರತ್ಯೇಕವಾಗಿ ಪಿಪಿಎಫ್ (ಸಾರ್ವಜನಿಕ ಭವಿಷ್ಯ ನಿಧಿ) ಖಾತೆ ತೆರೆದು ಗರಿಷ್ಠ ₹ 1.5 ಲಕ್ಷ ವಾರ್ಷಿಕವಾಗಿ ತುಂಬಿರಿ. ಇವೆರಡರಿಂದ ಸೆಕ್ಷನ್ 80ಸಿ ಆಧಾರದ ಮೇಲೆ ನಿಮ್ಮಿಬ್ಬರ ವಾರ್ಷಿಕ ಆದಾಯದಲ್ಲಿ ಪ್ರತ್ಯೇಕವಾಗಿ ₹ 1.5 ಲಕ್ಷ ಕಳೆದು ತೆರಿಗೆ ಸಲ್ಲಿಸಬಹುದು. ಸೆಕ್ಷನ್ 80ಸಿ ಹೊರತುಪಡಿಸಿ ಸೆಕ್ಷನ್ 80ಸಿಸಿಡಿ (1ಬಿ) ಆಧಾರದ ಮೇಲೆ ವಾರ್ಷಿಕ ಕನಿಷ್ಠ ₹ 50 ಸಾವಿರ ಎನ್‌ಪಿಎಸ್‌ನಲ್ಲಿ (ರಾಷ್ಟ್ರೀಯ ಪಿಂಚಣಿ ಯೋಜನೆ) ತೊಡಗಿಸಿ ಒಟ್ಟು ಆದಾಯದಿಂದ ಕಳೆದು ತೆರಿಗೆ ಸಲ್ಲಿಸಬಹುದು. ಉಳಿತಾಯ ಹಾಗೂ ತೆರಿಗೆ ದೃಷ್ಟಿಯಿಂದ ಈ ಹೂಡಿಕೆಗಳು ತುಂಬಾ ಅನುಕೂಲ.

ಗೃಹ ಸಾಲದ ಬಡ್ಡಿ ಸೆಕ್ಷನ್ 24 (ಬಿ) ಆಧಾರದ ಮೇಲೆ ಗರಿಷ್ಠ ₹ 2 ಲಕ್ಷವನ್ನು ಒಟ್ಟು ಆದಾಯದಿಂದ ಕಳೆದು ತೆರಿಗೆ ತುಂಬಬಹುದು. ಗೃಹ ಸಾಲಕ್ಕೆ ಹೆಚ್ಚು ಹಣ ತುಂಬುವುದು ಬೇಡ. ಆರ್ಥಿಕ ಶಿಸ್ತು ಪರಿಪಾಲಿಸಲು ಹಾಗೂ ಬೇಡವಾದ ಖರ್ಚಿಗೆ ಕಡಿವಾಣ ಹಾಕಲು ನೀವಿಬ್ಬರೂ ತಲಾ ₹ 25 ಸಾವಿರವನ್ನು 10 ವರ್ಷಗಳ ಆರ್‌.ಡಿ. ಮಾಡಿ. ಇಬ್ಬರಿಂದ ಸೇರಿಸಿ ₹ 85 ಲಕ್ಷ ಪಡೆಯುವಿರಿ. ಈ ಮೊತ್ತ ನಿಮ್ಮ ಜೀವನದ ಸಂಜೆಗೆ ನೆರವಾಗುತ್ತದೆ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ
ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ. ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-560001.
ಇ-ಮೇಲ್: businessdesk@prajavani.co.in

ತಿಂಗಳ ಅವಧಿಯಲ್ಲಿ 17 ಬಾರಿ ತೈಲ ಬೆಲೆ ಹೆಚ್ಚಳ

ನವದೆಹಲಿ (ಪಿಟಿಐ): ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯನ್ನು ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳು ಮಂಗಳವಾರ ಹೆಚ್ಚಿಸಿವೆ. ಇದರಿಂದಾಗಿ, ಮೇ ತಿಂಗಳ 4ರ ನಂತರದಲ್ಲಿ ಪೆಟ್ರೋಲ್, ಡೀಸೆಲ್ ಬೆಲೆ 17 ಬಾರಿ ಹೆಚ್ಚಳ ಕಂಡಂತಾಗಿದೆ.

ಮಂಗಳವಾರ ಪೆಟ್ರೋಲ್ ಬೆಲೆ ಲೀಟರ್‌ಗೆ 26 ಪೈಸೆ, ಡೀಸೆಲ್ ಬೆಲೆ 23 ಪೈಸೆ ಹೆಚ್ಚಳವಾಗಿದೆ. ಇದರಿಂದಾಗಿ ಬೆಂಗಳೂರಿನಲ್ಲಿ ಪೆಟ್ರೋಲ್ ಬೆಲೆಯು ₹ 97.64, ಡೀಸೆಲ್ ಬೆಲೆಯು ₹ 90.51 ಆಗಿದೆ. ದೆಹಲಿಯಲ್ಲಿ ಪೆಟ್ರೋಲ್ ಬೆಲೆ ₹ 94.49 ಹಾಗೂ ಡೀಸೆಲ್ ಬೆಲೆ ₹ 85.38 ಆಗಿದೆ.

ಮುಂಬೈನಲ್ಲಿ ಪೆಟ್ರೋಲ್ ಬೆಲೆ ಈಗ ₹ 100.72, ಡೀಸೆಲ್ ಬೆಲೆ ₹ 92.69 ಆಗಿದೆ. ಪಶ್ಚಿಮ ಬಂಗಾಳ ಸೇರಿದಂತೆ ಕೆಲವು ರಾಜ್ಯಗಳು ಹಾಗೂ ಪುದುಚೇರಿ ಕೇಂದ್ರಾಡಳಿತ ಪ್ರದೇಶದ ವಿಧಾನಸಭೆಗೆ ಚುನಾವಣೆ ಪ್ರಕ್ರಿಯೆ ಜಾರಿಯಲ್ಲಿದ್ದ ಸಂದರ್ಭದಲ್ಲಿ ತೈಲ ಮಾರಾಟ ಕಂಪನಿಗಳು ಪೆಟ್ರೋಲ್, ಡೀಸೆಲ್ ಬೆಲೆ ಹೆಚ್ಚಳ ಮಾಡಿರಲಿಲ್ಲ. ಒಂದು ತಿಂಗಳ ಅವಧಿಯಲ್ಲಿ 17 ಬಾರಿ ಆಗಿರುವ ಬೆಲೆ ಹೆಚ್ಚಳದ ಪರಿಣಾಮವಾಗಿ ಲೀಟರ್ ಪೆಟ್ರೋಲ್ ಬೆಲೆಯಲ್ಲಿ ₹ 4.09 ಹಾಗೂ ಲೀಟರ್ ಡೀಸೆಲ್ ಬೆಲೆಯಲ್ಲಿ ₹ 4.65ರಷ್ಟು ಏರಿಕೆ ಆದಂತಾಗಿದೆ.

ತಯಾರಿಕಾ ವಲಯದಲ್ಲಿ ಕುಸಿತ

ನವದೆಹಲಿ: ಕೋವಿಡ್‌–19 ಸಾಂಕ್ರಾಮಿಕದ ಎರಡನೆಯ ಅಲೆಯಿಂದಾಗಿ ದೇಶದ ಅರ್ಥ ವ್ಯವಸ್ಥೆಯ ಮೇಲೆ ಆಗಿರುವ ಪರಿಣಾಮಗಳು ಗೋಚರಿಸಲು ಆರಂಭವಾಗಿವೆ. ಐಎಚ್‌ಎಸ್ ಮರ್ಕಿಟ್ ಇಂಡಿಯಾ ಸಂಸ್ಥೆ ಬಿಡುಗಡೆ ಮಾಡಿರುವ ಪರ್ಚೇಸಿಂಗ್ ಮ್ಯಾನೇಜರ್ಸ್ ಇಂಡೆಕ್ಸ್ (ಪಿಎಂಐ) ಸೂಚ್ಯಂಕದ ಪ್ರಕಾರ ತಯಾರಿಕಾ ವಲಯದ ಉತ್ಪಾದಕತೆಯು ಮೇ ತಿಂಗಳಲ್ಲಿ 10 ತಿಂಗಳುಗಳ ಕನಿಷ್ಠ ಮಟ್ಟಕ್ಕೆ ಇಳಿದಿದೆ.

ಪಿಎಂಐ ಸೂಚ್ಯಂಕವು ಮೇ ತಿಂಗಳಿನಲ್ಲಿ 50.8ಕ್ಕೆ ಇಳಿಕೆ ಕಂಡಿದೆ. ಇದು ಏಪ್ರಿಲ್‌ನಲ್ಲಿ 55.5ರ ಮಟ್ಟದಲ್ಲಿ ಇತ್ತು. ಒಂದೇ ತಿಂಗಳ ಅವಧಿಯಲ್ಲಿ ಸೂಚ್ಯಂಕವು ಭಾರಿ ಇಳಿಕೆ ದಾಖಲಿಸಿದೆ.

ಕೊಬ್ಬರಿ ಧಾರಣೆ

ತುರುವೇಕೆರೆ	₹16300-16300

ಮುಂಬೈ ಧಾರಣೆ

ಶೇಂಗಾ

1-6-2021

ಜಾವಾ 70/80(ಹೊಸ)	10500-10100
ಜಾವಾ 80/90(ಹೊಸ)	9250-9300
ದಪ್ಪ ಮಧ್ಯಪ್ರದೇಶ(ಹೊಸ)	10400-10500
ದಪ್ಪ ಗುಜರಾತ್(ಹೊಸ)	9600-9700

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1420(1430)
ಒಂದು ವಾರದ ಡೆಲಿವರಿ	1415 (1425)
ಸೋಯಾ ಕಚ್ಚಾ	1370 (1370)
ಪಾಮ್ ವಾರದ ಡೆಲಿವರಿ	1238 (1233)
ಸೂರ್ಯಕಾಂತಿ ಎಣ್ಣೆ ಕಚ್ಚಾ	1520 (1520)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ
49,100 (48,800)
ಬೆಳ್ಳಿ ಕೆ.ಜಿ
72,500 (71,300)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ	
ಬಂಟ್ವಾಳ	
ಕೋಕ	10000-22500
ಹೊಸತು	23500-40000
ಕಾರ್ಕಳ	
ಹೊಸತು	36000-40000
ಹಳತು	46000-50000
ಪುತ್ತೂರು	
ಹೊಸತು	28000-39500
ಯಲ್ಲಾಪುರ	
ಬಿಳಿಗೋಟು	26240-30860
ಚಾಲಿ	34810-36560
ರಾಶಿ	40060-40060
ತಟ್ಟಿಬೆಟ್ಟೆ	34220-37670
ಏಲಕ್ಕಿ ಧಾರಣೆ	
ಸಕಲೇಶಪುರ	
ಕೊಳೆ	700- 800
ನಡುಗೋಲು	850-900
ರಾಶಿ	950-1000
ರಾಶಿ ಉತ್ತಮ	1000-1050
ಜರಡಿ	1150-1200
ಹೆರಕಿದ್ದು	1500-1600
ಹಸಿರು ಸಾಧಾರಣ	900-1000
ಹಸಿರು ಉತ್ತಮ	1100-1200
ಹಸಿರು ಅತಿ ಉತ್ತಮ	1400-1500
ಕಾಳು ಮೆಣಸು	400
ರೇಷ್ಮೆಗೂಡು	
ರಾಮನಗರ	
ಮಿಶ್ರ ತಳಿ (ಸಿ.ಬಿ)	281-343
ದ್ವಿತಳಿ (ಬಿ.ವಿ)	346-470

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ
ಎಪಿ	10,925	10,600	10700
ಎಸಿ	4,675	4,200	4,125
ಆರ್‌ಪಿ	5,175	5050	5,200
ಆರ್‌ಸಿ	3,125	3,100	3,065

ಬೆಳವಣಿಗೆ ಅಂದಾಜು ತಗ್ಗಿಸಿದ ಮೂಡಿಸ್

ನವದೆಹಲಿ (ಪಿಟಿಐ): ‘ಭಾರತದ ಅರ್ಥ ವ್ಯವಸ್ಥೆ ಪ್ರಸಕ್ತ ಹಣಕಾಸು ವರ್ಷದಲ್ಲಿ ಪುಟಿದೇಳಲಿದೆ. 2022ರ ಮಾರ್ಚ್ 31ಕ್ಕೆ ಕೊನೆಗೊಳ್ಳುವ ಹಣಕಾಸು ವರ್ಷದಲ್ಲಿ ದೇಶದ ಒಟ್ಟು ಆಂತರಿಕ ಉತ್ಪನ್ನದ (ಜಿಡಿಪಿ) ಬೆಳವಣಿಗೆಯು ಶೇಕಡ 9.3ರಷ್ಟು ಇರಲಿದೆ’ ಎಂದು ಮೂಡಿಸ್ ಇನ್ವೆಸ್ಟರ್ಸ್ ಸರ್ವಿಸ್ ಹೇಳಿದೆ.

ದೇಶದ ಜಿಡಿಪಿ ಬೆಳವಣಿಗೆ ಪ್ರಮಾಣ ಶೇ 13.7ರಷ್ಟು ಇರಲಿದೆ ಎಂದು ಸಂಸ್ಥೆಯು ಫೆಬ್ರುವರಿಯಲ್ಲಿ ಅಂದಾಜಿಸಿತ್ತು. ಆದರೆ, ಅಂದಾಜನ್ನು ಅದು ಈಗ ತಗ್ಗಿಸಿದೆ.

ಕೋವಿಡ್ 2ನೆಯ ಅಲೆಯ ತೀವ್ರತೆಯ ಕಾರಣದಿಂದ ದೇಶದ ಸಾಲ ಪಡೆಯುವ ಹಾಗೂ ತೀರಿಸುವ ಸಾಮರ್ಥ್ಯದ ಮೇಲೆ ಪರಿಣಾಮ ಉಂಟಾಗುವ ಸಾಧ್ಯತೆ ಹೆಚ್ಚಿದೆ ಎಂದು ಅದು ಎಚ್ಚರಿಸಿದೆ.

ಜೂನ್ ತ್ರೈಮಾಸಿಕದಲ್ಲಿ ದೇಶದ ಆರ್ಥಿಕ ಚಟುವಟಿಕೆಗಳಲ್ಲಿ ಇಳಿಕೆ ಕಂಡುಬರಲಿದೆ. ಸ್ಥಳೀಯವಾಗಿ ಜಾರಿಗೆ ಬಂದಿರುವ ನಿರ್ಬಂಧಗಳು, ಜನರ ಧೋರಣೆಯಲ್ಲಿ ಆಗಿರುವ ಬದಲಾವಣೆ ಹಾಗೂ ಸಾಂಕ್ರಾಮಿಕದ ಬಗ್ಗೆ ಜನರಲ್ಲಿ ಮೂಡಿರುವ ಭಯ ಹೀಗೆ ಆಗಲು ಕಾರಣ ಎಂದು ಬೊಟ್ಟು ಮಾಡಿದೆ.

ಜೂನ್ ತ್ರೈಮಾಸಿಕದ ನಂತರದಲ್ಲಿ ಆರ್ಥಿಕ ಚಟುವಟಿಕೆಗಳು ಚುರುಕಾಗಬಹುದು. 2021–22ರಲ್ಲಿ ಶೇ 9.3ರಷ್ಟು ಏರಿಕೆ ಹಾಗೂ 2022–23ರಲ್ಲಿ ಶೇ 7.9ರಷ್ಟು ಏರಿಕೆಯನ್ನು ದೇಶದ ಜಿಡಿಪಿ ಕಾಣಲಿದೆ ಎಂದು ಮೂಡಿಸ್ ಅಂದಾಜಿಸಿದೆ.

ಬೆಂಗಳೂರು ಈರುಳ್ಳಿ ಧಾರಣೆ

	ಕ್ವಿಂಟಲ್‌ಗೆ
ದೊಡ್ಡ	₹1500-2000
ಮಧ್ಯಮ	₹1000-1050
ಸಣ್ಣ	₹500-1000

ಎಸ್‌ಬಿಐ ಲೈಫ್ ಕರ್ನಾಟಕಕ್ಕೆ ಸಹಾಯ ಹಸ್ತವನ್ನು ಚಾಚಿದೆ

SBI Life INSURANCE With Us, You're Sure

ಆಪತ್ತಿನ ಈ ಸಮಯದಲ್ಲಿ ಎಸ್‌ಬಿಐ ಲೈಫ್ ತನ್ನ ಪಾಲಿಸಿದಾರರು/ಕ್ಲೈಮ್ ಮಾಡುವವರ ಸಲುವಾಗಿ ತೊಂದರೆ ರಹಿತ ಸೇವೆಯನ್ನು ನೀಡಲು ಸಜ್ಜಾಗಿದೆ.

ಕರ್ನಾಟಕದಲ್ಲಿ ಚಂಡಮಾರುತ ತೌಕ್ತೆ ವ್ಯಾಪಕ ಪ್ರಮಾಣದಲ್ಲಿ ವಿಧ್ವಂಸಕ ನಷ್ಟ ಹಾಗೂ ಆಪತ್ತನ್ನು ಸೃಷ್ಟಿಸಿದ್ದು, ಇದನ್ನು ಗಮನದಲ್ಲಿರಿಸಿಕೊಂಡು ಎಸ್‌ಬಿಐ ಲೈಫ್ ಇನ್‌ಶೂರೆನ್ಸ್, ಬ್ಯಾಂಕ್‌ನ ಮೂಲಕ ನೀಡಲಾಗುತ್ತಿರುವ ಪ್ರಧಾನಮಂತ್ರಿ ಜೀವನ ಜ್ಯೋತಿ ಬಿಮಾ ಯೋಜನಾ ಸ್ಕೀಮ್ (PMJJBY ಸ್ಕೀಮ್) ಇದರಲ್ಲಿ ವಿಮೆ ಮಾಡಿಸಿಕೊಂಡಿರುವ ಸದಸ್ಯರೊಂದಿಗೆ ತನ್ನ ಪಾಲಿಸಿದಾರರಿಗೆ ಕ್ಲೈಮ್‌ಗೆ ಸಂಬಂಧಿಸಿ ಅವಶ್ಯಕ ಸಹಾಯವನ್ನು ನೀಡುವ ಸಲುವಾಗಿ ವಿಶೇಷ ಉಪಾಯ ಯೋಜನೆಯನ್ನು ಹಾಕಿಗೊಂಡಿದೆ.

ಕ್ಲೈಮ್‌ಗಳ ಶೀಘ್ರ ಹಾಗೂ ತೊಂದರೆ ಮುಕ್ತ ಸೆಟ್ಲ್‌ಮೆಂಟ್‌ಗಾಗಿ ಸಮರ್ಪಿತ ಅಧಿಕಾರಿಗಳ ಒಂದು ತಂಡವನ್ನು ರಚಿಸಲಾಗಿದೆ. ಚಂಡಮಾರುತದಿಂದ ಪ್ರಭಾವಿತಗೊಂಡ ಪ್ರದೇಶದಲ್ಲಿನ ಪೀಡಿತರು ಎಸ್‌ಬಿಐ ಲೈಫ್ ಪಾಲಿಸಿಗಳಡಿಯಲ್ಲಿ ಮತ್ತು/ಅಥವಾ PMJJBY ಕ್ಲೈಮ್‌ಗಳ ಸೆಟ್ಲ್‌ಮೆಂಟ್‌ಗಾಗಿ ಯಾವುದೇ ಸಹಕಾರ ಅಥವಾ ಬೆಂಬಲಕ್ಕಾಗಿ 24x7 ಈ ಕೆಳಗಿನ ಅಧಿಕಾರಿಗಳನ್ನು ಸಂಪರ್ಕಿಸಬಹುದಾಗಿದೆ.

ಸಂಪರ್ಕ ವ್ಯಕ್ತಿ	ಮೊಬೈಲ್ ನಂ.#	ಕಛೇರಿಯ ಟೆಲಿಫೋನ್ ನಂ.#
ಅಂಗ್‌ಶುಮನ್ ಘೋಸ್	9051874333	080-25944961
ರಘು ನಾರಾಯಣ್	9900119928	080-25944999

ನೋವೆಲ್ ಕೊರೊನಾ ವೈರಸ್ (COVID-19) ಮಹಾಮಾರಿಯ ಅಪಾಯವನ್ನು ಕಡಿಮೆ ಮಾಡಲು ಹಾಗೂ ಪ್ರತ್ಯಕ್ಷ / ಪರೋಕ್ಷ ಸಾಮಾಜಿಕ ಸಂಪರ್ಕವನ್ನು ಸೀಮಿತ ಗೊಳಿಸಲು ಕ್ಲೈಮ್‌ನ ಮಾಹಿತಿಯನ್ನು ನೀಡಲು ಇ-ವಿಧಾನದ ಮೂಲಕ ಪತ್ರ ವ್ಯವಹಾರ ಮಾಡಲು ಮತ್ತು ಕ್ಲೈಮ್‌ಗೆ ಸಂಬಂಧಿಸಿ ತಿಳಿಸುವಾಗ ಹಾಗೂ ಸಂಬಂಧಿತ ದಸ್ತಾವೇಜನ್ನು ದಾಖಲಿಸುವಾಗ calamity_management@sbilife.co.in ಈ ಇಮೈಲ್‌ನ್ನು ಸಂಪರ್ಕಿಸಲು ಸರ್ವ ಪಾಲಿಸಿದಾರರು ಮತ್ತು ಕ್ಲೈಮ್ ಮಾಡುವವರನ್ನು ವಿನಂತಿಸಿಕೊಳ್ಳಲಾಗುತ್ತಿದೆ.

Toll free# 1800 267 9090 (between 9.00 a.m. to 9.00 p.m) | Email calamity_management@sbilife.co.in | Website www.sbilife.co.in

ನಕಲಿ/ಮೋಸದ ಕೊಡುಗೆಗಳಿಗೆ ಸಂಬಂಧಿಸಿದ ಫೋನ್ ಕರೆಗಳ ಕುರಿತು ಜಾಗರೂಕರಾಗಿರಿ
IRDAI ಇನ್‌ಶೂರೆನ್ಸ್ ಪಾಲಿಸಿಗಳನ್ನು ಮಾರಾಟ ಮಾಡುವುದು, ಬೋನಸ್ ಘೋಷಣೆ ಅಥವಾ ಪ್ರೀಮಿಯಮ್ ಇನ್ವೆಸ್ಟ್‌ಮೆಂಟ್ ಮಾಡುವಂತಹ ಕೆಲಸಗಳಲ್ಲಿ ತೊಡಗಿರುವುದಿಲ್ಲ ಅಂತಹ ಕರೆಗಳು ಬಂದಲ್ಲಿ ಪೊಲೀಸರಿಗೆ ದೂರು ಸಲ್ಲಿಸಬೇಕಾಗಿ ವಿನಂತಿ.

ಈ ಮೇಲೆ ತೋರಿಸಲಾದ ವ್ಯಾಪಾರಿ ಲೋಗೋ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾಕ್ಕೆ ಸೇರಿದೆ ಮತ್ತು ಲೈಸನ್ಸ್ ನಡಿಯಲ್ಲಿ ಎಸ್‌ಬಿಐ ಲೈಫ್‌ನಿಂದ ಉಪಯೋಗಿಸಲಾಗುತ್ತಿದೆ. ಎಸ್‌ಬಿಐ ಲೈಫ್ ಇನ್‌ಶೂರೆನ್ಸ್ ಕಂ.ಲಿ., ರಿಜಿಸ್ಟರ್ಡ್ ಅಂಡ್ ಕಾರ್ಪೊರೇಟ್ ಆಫೀಸ್: ನಟ್‌ರಾಜ್, ಎಮ್.ವಿ. ರೋಡ್ ಅಂಡ್ ವೆಸ್ಟರ್ನ್ ಎಕ್ಸ್‌ಪ್ರೆಸ್ ಹೈವೇ ಜಂಕ್ಷನ್, ಅಂಧೇರಿ (ಪೂರ್ವ), ಮುಂಬಯಿ-400069. IRDAI ರಿಜಿಸ್ಟರ್ಡ್ ನಂ. 111. CIN: L99999MH2000PLC129113 | ಟೋಲ್ ಫ್ರೀ ನಂ. 1800 267 9090 (ಬೆಳಿಗ್ಗೆ 9:00 ರಿಂದ ರಾತ್ರಿ 9:00ರ ವರೆಗೆ) | 56161ಕ್ಕೆ 'CELEBRATE' ಎಂದು SMS ಮಾಡಿ | ಈಮೇಲ್ : info@sbilife.co.in | ವೆಬ್‌ಸೈಟ್ : www.sbilife.co.in CyTaukKar.ver.01-05-21 ADVT KAN